ಮಾನವಿಕ ಕರ್ನಾಟಕ

ಸಂಪುಟ ೧೫ ಸಂಚಿಕೆ ೧

ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು
೧೯೮೪

ಲೇಖಕರಿಗೆ ಸೂಚನೆಗಳು

೧ ಮಾನವಿಕ ವಿಷಯಗಳಿಗೆ ಸಂಬಂಧಿಸಿದ ಸ್ವತಂತ್ರ ಅಥವಾ ಅನುವಾದಿತ ಲೇಖನಗಳನ್ನು 'ಮಾನವಿಕ ಕರ್ಣಾಟಕ' ದಲ್ಲಿ ಪ್ರಕಟಿಸಲಾಗುವುದು. ಲೇಖನ ಅನುವಾದವಾಗಿದ್ದರೆ ಮೂಲ ಲೇಖಕರ ಮತ್ತು ಲೇಖನದ ಹೆಸರುಗಳನ್ನೂ ಲೇಖನದ ಆಕರವನ್ನೂ ಸೂಚಿಸಬೇಕಲ್ಲದೆ ಮೂಲ ಲೇಖಕರ ಅಥವಾ ಪ್ರಕಾಶಕರ ಸಮ್ಮತಿಯನ್ನೂ ಲೇಖನದೊಂದಿಗೆ ಕಳುಹಿಸಬೇಕು.

೨ ಲೇಖನವನ್ನು ಕಾಗದದ ಒಂದೇ ಬದಿಯಲ್ಲಿ ಸ್ಪಷ್ಟವಾಗಿ ಬರೆದಿರಬೇಕು; ಅಥವಾ ಟೈಪು ಮಾಡಿರಬೇಕು. ಲೇಖಕರು ತಮ್ಮ ಲೇಖನದೊಂದಿಗೆ ತಮ್ಮ ಸಂಕ್ಷಿಪ್ತ ಪರಿಚಯವನ್ನು ಕಳುಹಿಸಿಕೊಡಬೇಕು.

೩ ಲೇಖನಕ್ಕೆ ಅವಶ್ಯಕವಾದ ಚಿತ್ರಗಳಿದ್ದರೆ ಅದನ್ನು ಚಿತ್ರಕಾರರಿಂದ ಇಂಡಿಯನ್ ಇಂಕಿನಲ್ಲಿ ಬರೆಸಿ ಕಳುಹಿಸಿಕೊಡಬೇಕು. ಇದು ಸಾಧ್ಯವಾಗದಿದ್ದರೆ ಯಾವುದಾದರೂ ಪ್ರಕಟಿತ ಪುಸ್ತಕದಲ್ಲಿರುವ ಚಿತ್ರಗಳನ್ನು ಸೂಚಿಸಬಹುದು; ಅವುಗಳಲ್ಲಿ ಬದಲಾವಣೆಗಳೇನಾದರೂ ಅವಶ್ಯವಿದ್ದರೆ ಅವನ್ನೂ ಸೂಚಿಸಬೇಕು.

೪ ಸ್ವೀಕೃತವಾಗದ ಲೇಖನವನ್ನು ಹಿಂದಕ್ಕೆ ಪಡೆಯಬಯಸುವವರು ಈ ಬಗ್ಗೆ ತಿಳಿಸಬೇಕಲ್ಲದೆ ಇದಕ್ಕೆ ಸಾಕಷ್ಟು ಅಂಚೆ ಚೀಟಿ ಕಳುಹಿಸಿಕೊಡಬೇಕು.

೫ ಅಚ್ಚಾದ ಲೇಖನದ ೨೫ ಪ್ರತಿಗಳನ್ನು ಅದರ ಲೇಖಕರಿಗೆ ಒದಗಿಸಲಾಗುವುದು. ಹೆಚ್ಚು ಪ್ರತಿಗಳು ಬೇಕಾಗಿದ್ದರೆ ಮೊದಲೇ ತಿಳಿಸಬೇಕು. ಅದಕ್ಕೆ ತಗಲುವ ವೆಚ್ಚವನ್ನು ಲೇಖಕರೇ ವಹಿಸಿಕೊಳ್ಳಬೇಕು.

೬ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಿಗೆ ಸಂಬಂಧಿಸಿದಂತೆ ವಾಚಕರಿಂದ ಬರುವ ವಿಚಾರ ಪ್ರಚೋದಕವಾದ ಪತ್ರಗಳಿಗೆ ಸ್ವಾಗತವುಂಟು. ಇವುಗಳನ್ನು ಪ್ರಕಟಿಸುವ, ಬಿಡುವ ಅಥವಾ ಸೂಕ್ತ ಬದಲಾವಣೆಯೊಂದಿಗೆ ಪ್ರಕಟಿಸುವ ಸ್ವಾತಂತ್ರ್ಯ ಸಂಪಾದಕರಿಗೆ ಸೇರಿದೆ.

೭ ಮಾನವಿಕ ವಿಷಯಗಳಿಗೆ ಸಂಬಂಧಿಸಿದ ಕನ್ನಡ ಅಥವಾ ಇಂಗ್ಲಿಷ್ ಪುಸ್ತಕಗಳನ್ನು ವಿಮರ್ಶೆಗಾಗಿ ಕಳುಹಿಸಬಯಸುವವರು ಅವುಗಳ ಎರಡೆರಡು ಪ್ರತಿ ಕಳುಹಿಸಿಕೊಡಬೇಕು.

೮ ಲೇಖನಗಳನ್ನೂ ವಿಮರ್ಶೆಗಾಗಿ ಪುಸ್ತಕಗಳನ್ನೂ ಕಳುಹಿಸುವವರು ಸಂಪಾದಕರು, ಮಾನವಿಕ ಕರ್ಣಾಟಕ, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು-೫೭೦ ೦೦೬ ಎಂಬ ವಿಳಾಸಕ್ಕೆ ಕಳುಹಿಸಬೇಕು.

ಮಾನವಿಕ ಕರ್ಣಾಟಕ

ಸಂಪುಟ ೧೫ ಸಂಚಿಕೆ ೧

೫೭

ನವಂಬರ್ ಸಂಚಿಕೆ

ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು
೧೯೮೪

MANAVIKA KARNATAKA, Kannada quarterly of the University of Mysore, Volume 15, Number 1, November 1984. Edited by Dr. B.K. Gururaja Rao and Dr. C.K. Renukarya

ಪ್ರಧಾನ ಸಂಪಾದಕರು

ಡಾ॥ ಎಚ್. ತಿಪ್ಪೇರುದ್ರಸ್ವಾಮಿ

ಸಂಪಾದಕರು

ಡಾ॥ ಬಿ. ಕೆ. ಗುರುರಾಜರಾವ್
ಡಾ॥ ಸಿ. ಕೆ. ರೇಣುಕಾರ್ಯ

ಪ್ರಕಾಶಕರು

ಕೆ. ಟಿ. ವೀರಪ್ಪ

ನಿರ್ದೇಶಕರು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು–೬

ಮುದ್ರಕರು

ಶ್ರೀಲಕ್ಷ್ಮೀ ಮುದ್ರಣಾಲಯ, ರವೆ ಬೀದಿ, 2 ನೇ ಕ್ರಾಸ್, ಮೈಸೂರು - 1

ವಿಷಯ ಸೂಚಿ

ಈ ಸಂಚಿಕೆಯ ಲೇಖಕರು

೧	ಎಚ್. ಎಂ. ನಾಗರಾಜರಾವ್	ಶಾಸನಶಾಸ್ತ್ರ ಸಹಾಯಕ, ಎಪಿಗ್ರಾಫಿಯ ಕರ್ನಾಟಕ ಪುನರ್ಮುದ್ರಣ ಯೋಜನೆ, ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು-೬
೨	ಬಿ. ಎಸ್. ಮಂಜುನಾಥಯ್ಯ	ಅಧ್ಯಾಪಕರು, ಶಿಕ್ಷಣ ವಿಭಾಗ, ಮಾನಸ ಗಂಗೋತ್ರಿ, ಮೈಸೂರು-೬
೩	ಹು. ಲ. ಚಂದ್ರಶೇಖರ	ನಂ. 160/1, ನಾರಾಯಣಶಾಸ್ತ್ರಿ ರಸ್ತೆ, ಕೃಷ್ಣರಾಜ ಮೊಹಲ್ಲಾ, ಮೈಸೂರು-೧
೪	ಶಿ. ರಾಜೇಂದ್ರಪ್ಪ	ತಾಂತ್ರಿಕ ಸಹಾಯಕ, ವಸ್ತುಸಂಗ್ರಹಾಲಯ ವಿಭಾಗ, ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆ, ನೆಲ್ಲಗೋವಾ
೫	ಆರ್. ರಾಮಕೃಷ್ಣ	ಸಹಾಯಕ ಸಂಪಾದಕ, ಕನ್ನಡ ವಿಶ್ವಕೋಶ, ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು-೬
೬	ಅನ್ನಪೂರ್ಣಾ ಎಂ. ನಾಯಕ್	ಅಧ್ಯಾಪಕಿ, ಮಾನವಿಕ ಶಾಸ್ತ್ರ ವಿಭಾಗ, ಮಾನಸ ಗಂಗೋತ್ರಿ, ಮೈಸೂರು-೬
೭	ಟಿ. ದಯಾನಂದ ಪಟೇಲ್	ಕ್ಯೂರೇಟರ್, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗ, ಮಾನಸ ಗಂಗೋತ್ರಿ, ಮೈಸೂರು-೬
೮	ಯಮುನಾಬಾಯಿ ಆರ್. ರಾವ್	ಶ್ರೀ, ೪೮೯, ೧೨ನೇ ಮುಖ್ಯರಸ್ತೆ, ಸರಸ್ವತಿಪುರಂ, ಮೈಸೂರು-೯
೯	ಮಾಧವರಾವ್ ಮುಧೋಳ್	(ನಿವೃತ್ತ ಪೇಟೆಯ ಜ್ಞಾನ ಮತ್ತು ಪ್ರಚಾರಾಧಿಕಾರಿಗಳು, ೧೪೭೪, ೭ನೇ ತಿರುವು ಕೃಷ್ಣಮೂರ್ತಿಪುರಂ, ಮೈಸೂರು-೪
೧೦	ಕೆ. ಯಶೋಧರ	ಅಧ್ಯಾಪಕಿ, ಶಿಕ್ಷಣ ವಿಭಾಗ, ಮಾನಸ ಗಂಗೋತ್ರಿ, ಮೈಸೂರು-೬



ಡಾ॥ ಟಿ. ವಿ. ಮಹಾಲಿಂಗಂ

ಚಿತ್ರ : ಡಾ॥ ಶ್ರೀನಿವಾಸಶಾಸ್ತ್ರಿಯವರ ಕೃಪೆಯಿಂದ

ಎಚ್. ಎಂ. ನಾಗರಾಜರಾವ್

ಡಾ॥ ಟಿ. ವಿ. ಮಹಾಲಿಂಗಂ

ಮಧ್ಯಮ ಪ್ರಮಾಣದ ಮೈಕಟ್ಟು, ಸಾಮಾನ್ಯ ಎತ್ತರ, ಗೌರವರ್ಣ ; ಕೋಟು ಪೇಟಾ ಕಚ್ಚೆಪಂಚೆಯ ಅಚ್ಚುಕಟ್ಟಿನ ಉಡುಪು—ಡಾ. ಟಿ. ವಿ. ಮಹಾಲಿಂಗಂ ಕ್ಷಣ ನೋಟಕ್ಕೆ ಕನ್ನಡದ ಖ್ಯಾತ ಕವಿ-ಸಹೃದಯಿ ದಿವಂಗತ ವೀಸೀ ಅವರ ಒಬ್ಬ ಸೋದರರೋ ಎನ್ನುವಂತೆ ಕಾಣುತ್ತಿದ್ದರು. ಇಬ್ಬರದೂ ಸರಳ ನಡೆ ; ಮೃದುವಾದ ಆದರೆ ಖಚಿತವಾದ ನುಡಿ.

ತೇರಳುಂದೂರು ಮಹಾಲಿಂಗಂ ಅವರ ಹುಟ್ಟೂರು. ಅದು ತಂಜಾವೂರು ಜಿಲ್ಲೆಯ ಮಾಯಾವರಂಗೆ ಸುಮಾರು ಹತ್ತು ಕಿ.ಮೀ. ದೂರದಲ್ಲಿರುವ ಗ್ರಾಮ ; ಕಂಬ ರಾಮಾಯಣ ಬರೆದ ಕಂಬ ಮಹಾಕವಿಯ ಸಂಬಂಧ ಹೊಂದಿದ್ದ ಪ್ರದೇಶ. ತಂಜಾವೂರಿನ ಮರಾಠ ದೊರೆ ತುಳಜಾಜಿ (1763-1787) ಈ ಗ್ರಾಮವನ್ನು ತುಳಜೇಂದ್ರಪುರವೆಂಬ ಹೆಸರಿನಿಂದ ಕೆಲವು ವೇದ ವಿದ್ವಾಂಸ ಬ್ರಾಹ್ಮಣರಿಗೆ ಸರ್ವಮಾನ್ಯವಾಗಿ ದಾನ ನೀಡಿದ. ಈ ದಾನ ಸ್ವೀಕರಿಸಿದವರಲ್ಲಿ ಮಹಾಲಿಂಗಂ ಪೂರ್ವಜರೊಬ್ಬರೂ ಸೇರಿದ್ದರು.

1907ರ ಜುಲೈ 15ರಂದು ಜನಿಸಿದ ಮಹಾಲಿಂಗಂ 1915ರಲ್ಲಿ ದಕ್ಷಿಣ ಆರ್ಕಾಟ್ ಜಿಲ್ಲೆಯ ಚಿದಂಬರಂಗೆ ಬಂದು ತಮ್ಮ ಸೋದರ ಮಾವನ ಮನೆಯಲ್ಲಿದ್ದು, ಅಲ್ಲಿನ ರಾಮಸ್ವಾಮಿ ಚೆಟ್ಟಿಯಾರ್ ಶಾಲೆಯಲ್ಲಿ ವಿದ್ಯಾಭ್ಯಾಸ ನಡೆಸಿದರು. 1924ರಲ್ಲಿ ಶ್ರೀ ಮೀನಾಕ್ಷಿ ಕಾಲೇಜನ್ನು ಸೇರಿದರು. 1929ರಲ್ಲಿ ಬಿ.ಎ. ಪದವಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ, ಇತಿಹಾಸ ವಿಷಯಕ್ಕೆ ಮೀಸಲಿದ್ದ ಸರ್ ಅಣ್ಣಾಮಲೈ ಚೆಟ್ಟಿಯಾರ್ ಪ್ರಥಮ ಬಹುಮಾನವನ್ನು ಪಡೆದರು. 1931ರಲ್ಲಿ ಎಂ.ಎ. ಪದವಿ ಪಡೆದಾಗಲೂ ಅವರಿಗೆ ಮತ್ತೊಮ್ಮೆ ಅದೇ ಬಹುಮಾನ ಬಂದಿತು.

ಮದರಾಸಿನಲ್ಲಿ ಖ್ಯಾತ ಇತಿಹಾಸ ವಿದ್ವಾಂಸ ಪ್ರೊ. ಕೆ. ಎ. ನೀಲಕಂಠಶಾಸ್ತ್ರಿಗಳ ಮಾರ್ಗದರ್ಶನದಲ್ಲಿ 1931 ರಿಂದ 1934 ರವರೆಗೆ ಸಂಶೋಧನ ವಿದ್ಯಾರ್ಥಿಯಾಗಿ ಮಹಾಲಿಂಗಂ ವಿಜಯನಗರ ಕಾಲದ ಆಡಳಿತ ಹಾಗೂ ಸಾಮಾಜಿಕ ಜೀವನ ಎಂಬ ವಿಷಯದ ಮೇಲೆ ಸಂಶೋಧನೆ ನಡೆಸಿದರು. 1934ರಿಂದ 1939ರವರೆಗೆ ಇತಿಹಾಸ

ಮತ್ತು ಇಸ್ಲಾಮಿಕ್ ಅಧ್ಯಯನ ವಿಭಾಗಗಳಲ್ಲಿ ಸಂಶೋಧನ ಸಹಾಯಕರಾಗಿ ಕೆಲಸ ಮಾಡಿದರು. 1939ರಿಂದ 1942 ರವರೆಗೆ ಅವರು ದಿವಂಗತ ವಿ. ವೆಂಕಟೇಶ್ವರ ಶಾಸ್ತ್ರಿಯವರ ಸಂಪಾದಕತ್ವದಲ್ಲಿ ಹೊರಬರುತ್ತಿದ್ದ 'ಫೆಡೆರೇಟೆಡ್ ಇಂಡಿಯಾ' ಪತ್ರಿಕೆಯ ಸಹಾಯಕ ಸಂಪಾದಕ ಹುದ್ದೆಯಲ್ಲಿದ್ದರು.

1940 ರಲ್ಲಿ ಮಹಾಲಿಂಗಂ ಅವರು ವಿಜಯನಗರ ಕಾಲದ ಆರ್ಥಿಕ ಜೀವನ ವನ್ನು ಕುರಿತ ನಿಬಂಧವನ್ನು ಮದರಾಸು ವಿಶ್ವವಿದ್ಯಾನಿಲಯಕ್ಕೆ ಒಪ್ಪಿಸಿದರು. ಶಂಕರ ಪಾರ್ವತಿ ಪುದುವಟ್ಟು ಬಹುಮಾನಕ್ಕೆ ಪಾತ್ರವಾದ ಈ ನಿಬಂಧ 1952ರಲ್ಲಿ ಪ್ರಕಟ ವಾಯಿತು. 1942ರಲ್ಲಿ ಅದೇ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ ವಿಜಯನಗರ ಕಾಲದ ಆಡಳಿತ ಹಾಗೂ ಸಾಮಾಜಿಕ ಜೀವನವನ್ನು ಕುರಿತ ಪ್ರಕಟಿತ ನಿಬಂಧಕ್ಕೆ ಡಿ.ಲಿಟ್ ಪದವಿ ಲಭಿಸಿತು.

1947 ರವರೆಗೆ ಮದುರೆಯ ಮದುರಾ ಕಾಲೇಜಿನಲ್ಲಿ, ಅನಂತರ ಕೆಲವು ವಾರ ಗಳವರೆಗಷ್ಟೇ ಪುದುಕೋಟೆಯ ಮಹಾರಾಜ ಕಾಲೇಜಿನಲ್ಲಿ ಇತಿಹಾಸದ ಉಪನ್ಯಾಸಕ ರಾಗಿ ಕೆಲಸ ಮಾಡಿದ ಮಹಾಲಿಂಗಂ ತದನಂತರ ಮದರಾಸು ವಿಶ್ವವಿದ್ಯಾನಿಲಯದ ಭಾರತೀಯ ಇತಿಹಾಸ ಮತ್ತು ಪುರಾತತ್ವ ವಿಭಾಗದಲ್ಲಿ ಪ್ರವಾಚಕರಾಗಿ ನೇಮಕ ಗೊಂಡು 1956ರವರೆಗೆ ಸೇವೆ ಸಲ್ಲಿಸಿದರು. ಈ ಅವಧಿಯಲ್ಲಿ ಅವರು ಶಂಕರ ಪಾರ್ವತಿ (1951) ಮತ್ತು ಸರ್ ಸುಬ್ರಹ್ಮಣ್ಯ ಅಯ್ಯರ್ (1954) ದತ್ತಿ ಉಪನ್ಯಾಸಗಳನ್ನು ನೀಡಿದರು. ಅವರ 'ಸೌತ್ ಇಂಡಿಯನ್ ಪಾಲಿಟಿ' ಎಂಬ ಗ್ರಂಥ 1955ರಲ್ಲಿ ಪ್ರಕಟ ವಾಯಿತು. ಈ ಕಾಲದಲ್ಲಿಯೇ ಮೆಕೆಂಜಿ ಸಂಗ್ರಹದಲ್ಲಿನ ಐತಿಹಾಸಿಕ ಹಸ್ತಪ್ರತಿಗಳ ಸಾರಾಂಶಗಳನ್ನು ಸಂಪಾದಿಸುವ ಹೊಣೆಯನ್ನೂ ಅವರು ವಹಿಸಿಕೊಂಡಿದ್ದರು; ಈ ಸಾರಾಂಶಗಳನ್ನು ಎರಡು ಸಂಪುಟಗಳಲ್ಲಿ (1972 ಮತ್ತು 1976ರಲ್ಲಿ) ಮದರಾಸು ವಿಶ್ವವಿದ್ಯಾನಿಲಯ ಪ್ರಕಟಿಸಿದೆ.

1955ರಲ್ಲಿ ಮದರಾಸು ವಿಶ್ವವಿದ್ಯಾನಿಲಯ ಮಹಾಲಿಂಗಂ ಅವರನ್ನು ಶಾಸನ ಶಾಸ್ತ್ರ, ಉತ್ಖನನ ಮುಂತಾದ ಪುರಾತತ್ವ ಕ್ಷೇತ್ರಗಳಲ್ಲಿ ಪ್ರಾಯೋಗಿಕ ತರಬೇತಿ ಪಡೆ ಯಲು ಭಾರತೀಯ ಪುರಾತತ್ವ ಸರ್ವೇಕ್ಷಣಕ್ಕೆ ನಿಯೋಜಿಸಿತು. ಉದಕಮಂಡಲದ ಪ್ರಧಾನಶಾಸನತಜ್ಞರ ಕಛೇರಿಯಲ್ಲಿದ್ದ ಸಹಸ್ರಾರು ಶಾಸನ ಪಡಿಯಚ್ಚುಗಳನ್ನು ಮತ್ತು ಅನೇಕ ಶಾಸನಗಳನ್ನು ಮೂಲಸ್ಥವಾಗಿಯೇ (in situ) ನೋಡಿ ಅಧ್ಯಯನ ಮಾಡುವ ಅವಕಾಶ ಅವರಿಗೆ ದೊರೆಯಿತು. ನಾಗ್ದಾ, ಉಜ್ಜಯಿನಿ, ನಾಗಾರ್ಜುನಕೊಂಡ ಮೊದ ಲಾದ ನಿವೇಶನಗಳಲ್ಲಿ ನಡೆದ ಉತ್ಖನನಗಳಲ್ಲಿ ಪಾಲ್ಗೊಂಡ ಅನುಭವದಿಂದ ಉತ್ಖನನ ತಂತ್ರ ವಿಧಾನ ಸೂಕ್ಷ್ಮಗಳನ್ನು ಅರಿಯಲು ಸಾಧ್ಯವಾಯಿತು. ಮಹಾಲಿಂಗಂ ಅವರು ಸಂಪಾದಿಸಿದ ಶಾಸನಗಳು 'ಎಪಿಗ್ರಾಫಿಯ ಇಂಡಿಕ' ಸಂಪುಟಗಳಲ್ಲೂ, ಸಿದ್ಧಪಡಿಸಿದ ಶಾಸನ ಸಾರಾಂಶಗಳು 'ಸೌತ್ ಇಂಡಿಯನ್ ಇನ್‌ಸ್ಕ್ರಿಪ್ಷನ್ಸ್', ಸಂಪುಟ XVII ರಲ್ಲೂ ಬೆಳಕು ಕಂಡವು.

ಮದರಾಸು ವಿಶ್ವವಿದ್ಯಾನಿಲಯಕ್ಕೆ ಹಿಂದಿರುಗಿ ಬಂದ ಮಹಾಲಿಂಗಂ ಭಾರತೀಯ ಇತಿಹಾಸ ಮತ್ತು ಪುರಾತತ್ವ ವಿಭಾಗದಲ್ಲಿ ಪ್ರಾಧ್ಯಾಪಕರಾಗಿ ನೇಮಕಗೊಂಡರು. 1958ರಲ್ಲಿ ಈ ವಿಭಾಗ ಕವಲೊಡೆದು ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗ ಆರಂಭವಾಯಿತು. ಪ್ರೊ. ಮಹಾಲಿಂಗಂ ಈ ವಿಭಾಗದ ಪ್ರಾಧ್ಯಾಪಕ ಮತ್ತು ಮುಖ್ಯಸ್ಥರಾದರು. ಈ ವಿಭಾಗದ ಬೆಳವಣಿಗೆಗೆ ಚಾಲನೆ-ಪೋಷಣೆ ನೀಡಿದರು. ಎಂ.ಎ. ಪಠ್ಯದಲ್ಲಿ ಭೂಗರ್ಭಶಾಸ್ತ್ರ, ಭೂಗೋಳ, ಪ್ರಾಣಿಶಾಸ್ತ್ರ, ಮಾನವಶಾಸ್ತ್ರ ವಸ್ತು ಸಂಗ್ರಹಾಲಯದ ತಂತ್ರ ವಿಧಾನ ಇತ್ಯಾದಿ ವಿಷಯಗಳನ್ನೂ ಸೂಕ್ತರೀತಿಯಲ್ಲಿ ಅಳವಡಿಸಿದರು. 1960ರಲ್ಲಿ ಈ ವಿಷಯದಲ್ಲಿ ಎಂ. ಎ. ಆರಂಭವಾಯಿತು. 1971ರಲ್ಲಿ ನಿವೃತ್ತರಾಗುವವರೆಗೂ ಪ್ರೊ. ಮಹಾಲಿಂಗಂ ಈ ವಿಭಾಗದಲ್ಲಿ ಸೇವೆ ಸಲ್ಲಿಸಿದರು.

ಪ್ರಾಧ್ಯಾಪಕರಾಗಿದ್ದ ಸೇವಾವಧಿಯಲ್ಲಿ ಪ್ರೊ. ಮಹಾಲಿಂಗಂ ತಿರುಕ್ಕಾಂಪುಲಿಯೂರು, ಅಲಗರೈ, ಉಱೈಯೂರು ಹಾಗೂ ಕಾಂಚೀಪುರಗಳಲ್ಲಿ ಉತ್ಖನನ ನಡೆಸಿದರು ; ಕಾವೇರಿ ಮತ್ತು ಪಾಲಾರ್ ನದಿಗಳ ಪಾತ್ರ ಪ್ರದೇಶದಲ್ಲಿ ಅನೇಕ ನಿವೇಶನಗಳನ್ನು ಪರಿಶೋಧಿಸಿದರು ; ಪಾಟ್ನಾ, ಅಣ್ಣಾಮಲೈ, ಧಾರವಾಡ ಮುಂತಾದ ಸ್ಥಳಗಳಲ್ಲಿ ವಿಶೇಷೋಪನ್ಯಾಸಗಳನ್ನು ನೀಡಿದರು ; ಎರಡು ಏಕವಿಷಯ ಪ್ರಬಂಧಗಳು (ಮಾನೊಗ್ರಾಫ್), ಮೂರು ಗ್ರಂಥಗಳು, ಒಂದು ಉತ್ಖನನ ವರದಿ ಹಾಗೂ ಹಲವಾರು ಸಂಶೋಧನ ಲೇಖನಗಳನ್ನು ಪ್ರಕಟಿಸಿದರು.

ಪ್ರೊ. ಮಹಾಲಿಂಗಂ ತಮ್ಮ ವೃತ್ತಿಯಿಂದ ನಿವೃತ್ತಿ ಹೊಂದಿದ ಅನಂತರ ಪೂರ್ಣ ಪ್ರಮಾಣದಲ್ಲಿ ಸಂಶೋಧನ ನಿರತರಾದರು. ನವದೆಹಲಿಯ ಭಾರತೀಯ ಇತಿಹಾಸ ಸಂಶೋಧನ ಮಂಡಲಿಗೆ ಪಲ್ಲವ ಶಾಸನ ಸಂಪುಟವೊಂದನ್ನು ಸುದೀರ್ಘ ಪೀಠಿಕೆಯೊಡನೆ ಸಿದ್ಧಪಡಿಸಿ ಈ ಮೊದಲೇ ಕೊಟ್ಟಿದ್ದರು. ಈಗ ವಿಜಯನಗರ ಶಾಸನಗಳ ಯಾದಿಯ ಯೋಜನೆಯೊಂದನ್ನು ವಹಿಸಿಕೊಂಡು, ಡಾ. ಬಾ. ರಾ. ಗೋಪಾಲರೊಡನೆ ಸೇರಿ, ಐದು ಸಂಪುಟಗಳಲ್ಲಿ ವಿಜಯನಗರ ಶಾಸನಗಳ ಸಾರಾಂಶವನ್ನು ಸಂಕಲಿಸಿ, ಸಂಗ್ರಹಿಸಿ ಅದೇ ಮಂಡಲಿಗೆ ಒಪ್ಪಿಸಿದರು. ಹಾಗೆಯೇ ಕ್ರಿ.ಶ. 1300 ರವರೆಗಿನ ತಮಿಳುನಾಡು ಮತ್ತು ಕೇರಳ ರಾಜ್ಯಗಳ ಶಾಸನಗಳ ಪಟ್ಟಿಯನ್ನು ಸಿದ್ಧಪಡಿಸುವ ಯೋಜನೆಯನ್ನು ಕೈಗೆತ್ತಿಕೊಂಡಿದ್ದರು. ಹತ್ತು ಸಂಪುಟಗಳ ಈ ಯೋಜನೆ ಪೂರ್ಣಗೊಳ್ಳಲಿಲ್ಲ ; ಆದರೂ ಅವರು ಏಳು ಸಂಪುಟಗಳನ್ನು ಸಿದ್ಧಪಡಿಸಿಕೊಟ್ಟಿದ್ದರು.

ಪ್ರೊ. ಮಹಾಲಿಂಗಂ ಅನೇಕ ಸಮ್ಮೇಳನ ಗೋಷ್ಠಿಗಳ ಅಧ್ಯಕ್ಷತೆ ವಹಿಸಿದ್ದರು. ಜಯಪುರದಲ್ಲಿ ಸೇರಿದ ಭಾರತೀಯ ಇತಿಹಾಸ ಸಮ್ಮೇಳನದ (1951) ಮಧ್ಯಯುಗೀನ ಇತಿಹಾಸ ಗೋಷ್ಠಿಯ ಅಧ್ಯಕ್ಷತೆ ; ಅಹಮದಾಬಾದಿನಲ್ಲಿ ಜರುಗಿದ ಅಖಿಲ ಭಾರತ ಪೌರ್ವಾತ್ಯ ಸಮ್ಮೇಳನದ (1953) ದ್ರಾವಿಡ ಭಾಷೆಗಳು ಮತ್ತು ಸಂಸ್ಕೃತಿ ಗೋಷ್ಠಿಯ ಅಧ್ಯಕ್ಷತೆ ; ಗೌಹಾತಿಯಲ್ಲಿ ನಡೆದ ಅದೇ ಸಮ್ಮೇಳನದ (1965) ಇತಿಹಾಸಗೋಷ್ಠಿಯ ಅಧ್ಯಕ್ಷತೆ ; ನಾಗಪುರದಲ್ಲಿ ಸೇರಿದ ಅಖಿಲ ಭಾರತ ನಾಣ್ಯ ಶಾಸ್ತ್ರೀಯ ಸಮ್ಮೇಳನದ

(1970) ಅಧ್ಯಕ್ಷತೆ ; ಬೊಂಬಾಯಿಯಲ್ಲಿ ಸೇರಿದ ಭಾರತೀಯ ಪುರಾತತ್ವ ಪರಿಷತ್ತಿನ ಐದನೆಯ ವಾರ್ಷಿಕ ಸಮ್ಮೇಳನದ (1972) ಅಧ್ಯಕ್ಷತೆ ; ರಾಮಚಂದ್ರಪುರದಲ್ಲಿ ಜರುಗಿದ ಆಂಧ್ರಪ್ರದೇಶ ಇತಿಹಾಸ ಸಮ್ಮೇಳನದ (1976) ಮಧ್ಯಯುಗೀನ ಇತಿಹಾಸ ಗೋಷ್ಠಿಯ ಅಧ್ಯಕ್ಷತೆ ; ಉಡುಪಿಯಲ್ಲಿ ಸೇರಿದ ಮೂರನೆಯ ಪುರಾಭಿಲೇಖ ಸಮ್ಮೇಳನದ ಅಧ್ಯಕ್ಷತೆ ; ತಿರುವನಂತಪುರದಲ್ಲಿ ನಡೆದ ದಕ್ಷಿಣ ಭಾರತೀಯ ಇತಿಹಾಸ ಅಧಿವೇಶನದ (1981) ಅಧ್ಯಕ್ಷತೆ ; ಇತ್ಯಾದಿ.

1973 ರಿಂದ ಅನಂತರ ದಕ್ಷಿಣ ಭಾರತದ ಪುರಾತತ್ವ ಪರಿಷತ್ತಿನ ಅಧ್ಯಕ್ಷರಾಗಿದ್ದ ಪ್ರೊ. ಮಹಾಲಿಂಗಂ 1978ರಲ್ಲಿ ಮತ್ತು 1979–80ರಲ್ಲಿ ಅಲಹಾಬಾದ್ ವಿಶ್ವವಿದ್ಯಾನಿಲಯದಲ್ಲಿ ಸಂದರ್ಶಕ ಪ್ರಾಧ್ಯಾಪಕರಾಗಿದ್ದರು. 1969ರಲ್ಲಿ ಭಾರತ ಸರ್ಕಾರ ಅವರಿಗೆ ಪದ್ಮಶ್ರೀ ಪ್ರಶಸ್ತಿಯನ್ನಿತ್ತು ಗೌರವಿಸಿತು. 1980ರಲ್ಲಿ ಭಾರತೀಯ ಪುರಾಭಿಲೇಖ ಪರಿಷತ್ತು ಅವರಿಗೆ ತಾಮ್ರಪತ್ರವನ್ನು ನೀಡಿ ಸನ್ಮಾನಿಸಿತು.

ಭಾರತೀಯ ಇತಿಹಾಸ ವಿಶೇಷವಾಗಿ ದಕ್ಷಿಣ ಭಾರತೀಯ ಇತಿಹಾಸ ಮತ್ತು ಸಂಸ್ಕೃತಿಗಳಿಗೆ ಸಂಬಂಧಿಸಿದಂತೆ ಪ್ರೊ. ಮಹಾಲಿಂಗಂ ಮಹಾ ವಿದ್ವಾಂಸರಲ್ಲೊಬ್ಬರೆಂದು ಪರಿಗಣಿಸಲ್ಪಟ್ಟಿದ್ದಾರೆ. ತಮ್ಮ ಕೃತಿರಚನೆಗೆ ಮೊದಲು ಅವರು ಸಂಗ್ರಹಿಸುವ ಮಾಹಿತಿಗಳ ಪ್ರಮಾಣ, ಅವುಗಳನ್ನು ವರ್ಗೀಕರಿಸಿ ಸೂಕ್ಷ್ಮವಾಗಿ ವಿಶ್ಲೇಷಿಸುವ ವಿಧಾನ ಅನುಕರಣಾರ್ಹ. ವಿಜಯನಗರದ ಬಗ್ಗೆ ಅವರ ಕೃತಿಯೊಂದು ಪ್ರಕಟವಾದಾಗ ವಿಮರ್ಶಕನೊಬ್ಬ ಬರೆದ ಮಾತುಗಳಿವು : “ಅಧಿಕೃತ, ಪರಿಪೂರ್ಣ, ವಿಶ್ಲೇಷಣಾತ್ಮಕ ಹಾಗೂ ಗಂಭೀರ.” ಅವರ “ಸೌತ್ ಇಂಡಿಯನ್ ಪಾಲಿಟಿ” ಎಂಬ ಗ್ರಂಥ ದಕ್ಷಿಣ ಭಾರತದಲ್ಲಿ ವಿಜಯನಗರ ಕಾಲದವರೆಗಿನ ಆಡಳಿತದ ಸಂಘ ಸಂಸ್ಥೆಗಳ ಬೆಳವಣಿಗೆಯನ್ನು ವಿಶದವಾಗಿ ಮತ್ತು ವ್ಯವಸ್ಥಿತ ರೀತಿಯಲ್ಲಿ ಪರಿಚಯಿಸುತ್ತದೆ. ದಕ್ಷಿಣ ಭಾರತದ ಆಡಳಿತ ಇತಿಹಾಸದ ಅಧ್ಯಯನದಲ್ಲಿ ಆಸಕ್ತರಾದವರಿಗೆ ಇದು ಏಕಮಾತ್ರ ಆಕರ ಗ್ರಂಥವಾಗಿದೆ. ಅವರ ‘ಕಾಂಚೀಪುರಂ ಇನ್ ಅರ್ಲಿ ಸೌತ್ ಇಂಡಿಯನ್ ಹಿಸ್ಟರಿ’ ಎನ್ನುವ ಕೃತಿ ಪಲ್ಲವ ಇತಿಹಾಸವನ್ನು ಸಾದ್ಯಂತವಾಗಿ ಸೊಗಸಾಗಿ ನಿರೂಪಿಸುತ್ತದೆ. ಪೂರ್ವಪಲ್ಲವರ ವಂಶಾವಳಿ, ಉತ್ತರ ಪಲ್ಲವರೊಡನೆ ಅವರ ಸಂಬಂಧ ಮುಂತಾದ ಕ್ಲಿಷ್ಟತರ ಸಮಸ್ಯೆಗಳನ್ನು ಬಿಡಿಸುವ ಪ್ರಯತ್ನ ಈ ಕೃತಿಯಲ್ಲಿ ಕಂಡುಬರುತ್ತದೆ. ಅವರು ರೂಪಿಸಿದ ವಂಶಾವಳಿ ತದನಂತರದಲ್ಲಿ ಲಭ್ಯವಾದ ಸಾಕ್ಷ್ಯಾಧಾರಗಳಿಂದ ಸಮರ್ಥಿತವಾಗಿರುವುದು ಗಮನಾರ್ಹ ; ಅವರ ವಿಶ್ಲೇಷಣ ಸಾಮರ್ಥ್ಯವನ್ನು ಇದು ಬಿಂಬಿಸುತ್ತದೆ. ತಮ್ಮ ‘ಅರ್ಲಿ ಸೌತ್ ಇಂಡಿಯನ್ ಪೇಲಿಯೋಗ್ರಫಿ’ ಎಂಬ ಗ್ರಂಥದಲ್ಲಿ ಪ್ರೊ. ಮಹಾಲಿಂಗಂ ಅವರು ತಮಿಳು ಲಿಪಿಯ ಉಗಮ ಮತ್ತು ನಾಲ್ಕನೆಯ ಶತಮಾನದವರೆಗೆ ಅದರ ವಿಕಾಸವನ್ನು ಗುರುತಿಸಿದ್ದಾರೆ.

ಚೋಳ ವಾಸ್ತು ರಚನೆಗಳನ್ನು ಕುರಿತು ಅಧ್ಯಯನ ಮಾಡುವವರಿಗೆಲ್ಲ ಕುಂಭಕೋಣದ ನಾಗೇಶ್ವರಸ್ವಾಮಿ ದೇವಾಲಯದ ನಿರ್ಮಾಣ ಕಾಲ ಒಂದು

ಒಗಟಾಗಿ ಉಳಿದಿತ್ತು ; ಇವರ ಬಗ್ಗೆ ಅಧ್ಯಯನ ಮಾಡಿದ ಒಬ್ಬೊಬ್ಬ ವಿದ್ವಾಂಸನ ಅಭಿಪ್ರಾಯವೂ ಒಂದೊಂದು ಬಗೆಯದಾಗಿತ್ತು. ಪ್ರೊ. ಮಹಾಲಿಂಗಂ ಅವರ ಅಭಿಪ್ರಾಯ ಚೋಳ ವಾಸ್ತು ರಚನೆಗಳನ್ನು ಸರ್ವೇಕ್ಷಣ ಮಾಡಿ, ಚೋಳ ಶೈಲಿಯ ಬಗ್ಗೆ ಬರೆದ ಮಹಾ ವಿದ್ವಾಂಸ ಡಗ್ಲಾಸ್ ಬ್ಯಾರೆಟ್‌ರಂಥವರ ಒಪ್ಪಿಗೆ–ಮನ್ನಣೆಗೆ ಪಾತ್ರವಾಯಿತೆಂದರೆ ಅವರ ಕಾರ್ಯದ ಹಿರಿಮೆ ಮನದಟ್ಟಾದೀತು. ದಕ್ಷಿಣ ಭಾರತೀಯ ಕಲಾ ಇತಿಹಾಸಕ್ಕೆ 'ದಿ ನಾಗೇಶ್ವರಸ್ವಾಮಿ ಟೆಂಪಲ್' ಹಾಗೂ 'ದಿ ಸೌತ್ ಇಂಡಿಯನ್ ಟೆಂಪಲ್ ಕಾಂಪ್ಲೆಕ್ಸ್' ಅವರ ಪ್ರಧಾನ ಕೊಡುಗೆಗಳಾಗಿವೆ.

ಪ್ರೊ. ಮಹಾಲಿಂಗಂ ಅವರ 'ರಿಪೋರ್ಟ್ ಆನ್ ದಿ ಎಕ್ಸ್‌ಕವೇಷನ್ ಇನ್ ದಿ ಲೋಯರ್ ಕಾವೇರಿ ವ್ಯಾಲಿ' ತಮಿಳುನಾಡಿನಲ್ಲಿ ನಡೆಸಲಾದ ಉತ್ಖನನಗಳ ಬಗೆಗಿನ ಪ್ರಪ್ರಥಮ ಮತ್ತು ವಿವರವಾದ ಪ್ರಕಟಣೆಯಾಗಿದೆ. ಇದು ತಿರುಕ್ಕಾಂಪುಲಿಯೂರು ಮತ್ತು ಅಲಗರೈ ನಿವೇಶನಗಳಲ್ಲಿ ನಡೆದ ಉತ್ಖನನಗಳ ವರದಿ. ಈ ವರದಿಯ ಎರಡನೆ ಭಾಗ ಪ್ರಕಟಣೆ ಕಾಯುತ್ತಿದೆ.

ಪ್ರೊ. ಮಹಾಲಿಂಗಂ ಅವರ ಪ್ರಕಟಣೆಗಳಲ್ಲಿ 22 ಗ್ರಂಥಗಳು, 120 ಸಂಶೋಧನ ಲೇಖನಗಳು, 150 ಜನಪ್ರಿಯ ಲೇಖನಗಳು ಹಾಗೂ ಕೃತಿ ವಿಮರ್ಶೆಗಳು ಸೇರಿವೆ. ದಕ್ಷಿಣ ಭಾರತೀಯ ಶಿಲ್ಪಗಳು ಮತ್ತು ಮೂರ್ತಿಶಾಸ್ತ್ರ ಹಾಗೂ ದಕ್ಷಿಣ ಭಾರತೀಯ ಇತಿಹಾಸ ಮತ್ತು ಸಂಸ್ಕೃತಿಯ ಅಧ್ಯಯನಗಳು ಮೊದಲಾದ ವಿಷಯಗಳ ಬಗೆಗಿನ ಅವರ ಕೃತಿಗಳು ಬೆಳಕು ಕಾಣಬೇಕಾಗಿವೆ. ಹಾಗೆಯೇ ಡಾ|| ಬಿ. ಕೆ. ಗುರುರಾಜರಾವ್ ಅವರೊಡನೆ ಸೇರಿ ಜಂಟಿಯಾಗಿ ರಚಿಸಿದ 'ಅರ್ಲಿ ಹಿಸ್ಟರಿ ಅಂಡ್ ಕಲ್ಚರ್ ಆಫ್ ಸೌತ್ ಏಷ್ಯಾ' ಮುದ್ರಣ ಕಾಣಬೇಕಾಗಿದೆ. ದಕ್ಷಿಣ ಭಾರತದ ಸಾಮಾಜಿಕ ಮತ್ತು ಸಾಂಸ್ಕೃತಿಕ ಅಧ್ಯಯನದ ಆಕರಗಳನ್ನು ಕುರಿತು ಮತ್ತು ಕ್ರಿ.ಶ. 1530ರಿಂದ 1800ರ ವರೆಗಿನ ತಮಿಳುನಾಡಿನ ಇತಿಹಾಸವನ್ನು ಕುರಿತು ಅವರು ಕೆಲಸ ಮಾಡಿದ್ದಾರೆ.

ಹಲವಾರು ಸಂಶೋಧನ ವಿದ್ಯಾರ್ಥಿಗಳಿಗೆ ಮಾರ್ಗದರ್ಶಕರಾಗಿದ್ದ ಪ್ರೊ. ಮಹಾಲಿಂಗಂ ಅನೇಕ ಸಂಘ ಸಂಸ್ಥೆಗಳ ಸಲಹಾ ಸಮಿತಿಯ ಸದಸ್ಯರಾಗಿದ್ದರು. 1983ರ ಮಾರ್ಚ್ 6ರಂದು ಅವರು ಮದರಾಸಿನಲ್ಲಿ ನಿಧನರಾದರು. ಅವರ ಅಭಿನಂದನ ಗ್ರಂಥವಾಗಿ ಬರಬೇಕಾಗಿದ್ದ 'ಸೌತ್ ಇಂಡಿಯನ್ ಸ್ಟಡೀಸ್' ಸಂಸ್ಮರಣ ಗ್ರಂಥವಾಗಿ ಅಸತಿ ಕಾಲದಲ್ಲಿಯೇ ಹೊರಬರಲಿದೆ ; ಈ ಬೃಹತ್ ಗ್ರಂಥದ ಸಂಪಾದಕರು ಡಾ|| ಹಾ. ಮಾ. ನಾಯಕರು ಹಾಗೂ ಡಾ|| ಬಾ. ರಾ. ಗೋಪಾಲ.

ಪ್ರೊ. ಮಹಾಲಿಂಗಂ ಅವರ ಕೆಲವು ಪ್ರಮುಖ ಕೃತಿಗಳಿವು :

(1) Administration and Social Life under Vijayanagar, Pt. I–II
(2) Early South Indian Palaeography
(3) Kancipuram in early south Indian history
(4) South Indian Polity
(5) Studies in the South Indian temple complex

o O o

ಬಿ. ಎಸ್. ಮಂಜುನಾಥಯ್ಯ

ಶಿಕ್ಷಣದಲ್ಲಿ ಅಭಿಪ್ರೇರಣೆ

ಶಿಕ್ಷಣದಲ್ಲಿ ಅಭಿಪ್ರೇರಣೆಯ ಪ್ರಾಮುಖ್ಯತೆ :

ಪ್ರೇರಣೆ ಶೈಕ್ಷಣಿಕ ಮನೋವಿಜ್ಞಾನದ ಚರ್ಚೆಗಳಲ್ಲಿ ನಾವು ಆಗಾಗ್ಗೆ ಎದುರಿಸುವ ಒಂದು ಮುಖ್ಯ ಪರಿಕಲ್ಪನೆ. ಅಧ್ಯಾಪಕರು ವಿದ್ಯಾರ್ಥಿಗಳ ಕಲಿಕೆಯ ಅಭಿಪ್ರೇರಣೆಯನ್ನು ಉಳಿಸಿಕೊಳ್ಳುವುದರ ಬಗ್ಗೆ ಮಾತನಾಡುವುದನ್ನು ಕೇಳಿದ್ದೇವೆ. ಅನೇಕ ಅಧ್ಯಾಪಕರು ವಿದ್ಯಾರ್ಥಿಗಳಲ್ಲಿ ಕಲಿಯಲು ಅಭಿಪ್ರೇರಣೆಯಿಲ್ಲ ಎಂದೂ ದೂರುವುದನ್ನು ಕೇಳಿದ್ದೇವೆ. ಶೈಕ್ಷಣಿಕ ಮನೋವಿಜ್ಞಾನಿಗಳು ತರಗತಿಯಲ್ಲಿ ಬಳಸಬಹುದಾದ ಅನೇಕ ಅಭಿಪ್ರೇರಣಾ ತಂತ್ರಗಳನ್ನು ವಿವರಿಸಿದ್ದಾರೆ. ಅಭಿಪ್ರೇರಣೆ ಎಂದರೇನು ? ವಿದ್ಯಾರ್ಥಿಗಳು ಕಲಿಯುವುದರಲ್ಲಿ ಮತ್ತು ಶಾಲಾ ಸಾಧನೆಯನ್ನು ಗಳಿಸುವುದರಲ್ಲಿ ಕೆಲಸ ಮಾಡುವಾಗ ತೋರಿಸುವ ಶಕ್ತಿಯ ಮಟ್ಟವನ್ನು ನಾವು ಅಭಿಪ್ರೇರಣೆ ಎಂದು ಕರೆಯಬಹುದು. ಅಭಿಪ್ರೇರಿತನಾದ ವಿದ್ಯಾರ್ಥಿ ಹೆಚ್ಚಿನ ಶಕ್ತಿಯಮಟ್ಟದಲ್ಲಿ ಕಾರ್ಯಪ್ರವೃತ್ತನಾಗುತ್ತಾನೆ. ಕಲಿಯುವುದರಲ್ಲಿ ಸಾಮರ್ಥ್ಯಗಳೇ ಅಲ್ಲದೇ (ಬುದ್ಧಿಶಕ್ತಿ, ಸೃಜನಶೀಲತೆ, ಅಭಿಸಾಮರ್ಥ್ಯ ಇತ್ಯಾದಿ) ವಿದ್ಯಾರ್ಥಿಯು ಯಾವ ಮಟ್ಟದಲ್ಲಿ ಕೆಲಸ ಮಾಡುತ್ತಾನೆ, ಕಲಿಯುವ ಕಾರ್ಯವನ್ನು ಯಾವ ರೀತಿಯ ಮಾನಸಿಕ ಸಿದ್ಧತೆಯೊಡನೆ ಪ್ರಾರಂಭಿಸುತ್ತಾನೆ ಎನ್ನುವ ಅಂಶಗಳೂ ಮುಖ್ಯವೆನಿಸುತ್ತವೆ. ಒಂದೇ ಮಟ್ಟದ ಬೌದ್ಧಿಕ ಸಾಮರ್ಥ್ಯವಿರುವ ಇಬ್ಬರು ವಿದ್ಯಾರ್ಥಿಗಳ ಸಾಧನೆಯ ಮಟ್ಟದಲ್ಲಿ ವ್ಯತ್ಯಾಸ ಉಂಟಾಗಬಹುದು. ಈ ರೀತಿಯ ವ್ಯತ್ಯಾಸಗಳನ್ನು ಅವರಿಬ್ಬರಲ್ಲೂ ಅಭಿಪ್ರೇರಣೆಯಲ್ಲಿ ಇರುವ ವ್ಯತ್ಯಾಸದ ಮೂಲಕ ವಿವರಿಸಬೇಕಾಗುತ್ತದೆ. ಅನೇಕ ವೇಳೆ ಶಾಲೆಗಳಲ್ಲಿ ಸಾಮರ್ಥ್ಯವಿರುವ ವಿದ್ಯಾರ್ಥಿಗಳು ಅವರ ಸಾಮರ್ಥ್ಯಕ್ಕೆ ಅನುಗುಣವಾದ ಸಾಧನೆಯನ್ನು ತೋರಿಸದಿರುವುದನ್ನು ಕಾಣುತ್ತೇವೆ. ಇಂತಹ ವಿದ್ಯಾರ್ಥಿಗಳನ್ನು ನಿಮ್ನ ಸಾಧಕರು ಎಂದು ಕರೆಯುತ್ತೇವೆ. ಇಂತಹ ವಿದ್ಯಾರ್ಥಿಗಳನ್ನು ಸೂಕ್ತ ಪ್ರೋತ್ಸಾಹ ನೀಡುವುದರ ಮೂಲಕ ತಮ್ಮ ಸಾಮರ್ಥ್ಯಗಳನ್ನು ಪೂರ್ಣವಾಗಿ ಉಪಯೋಗಿಸುವಂತೆ ಮಾಡಬಹುದು. ಇದು ಅಭಿಪ್ರೇರಣೆಗೆ ಸಂಬಂಧಪಟ್ಟದಾಗಿದೆ. ಶಾಲೆಯಲ್ಲಿ ಒಂದೇ ಸಮನೆ ಕಮ್ಮಿ ಅಂಕಗಳನ್ನು

ಗಳಿಸುತ್ತಿದ್ದ ಅನೇಕ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಿ, ಮೆಚ್ಚುಗೆಯ ನುಡಿಗಳಿಂದ ಅವರಲ್ಲಿ ಸ್ಫೂರ್ತಿಯನ್ನು ತುಂಬಿ ಅವರ ಸಾಧನಾ ಮಟ್ಟವನ್ನು ಹೆಚ್ಚಿಸಿಕೊಳ್ಳುವಂತೆ ಮಾಡಬಹುದೆಂದು ಅನೇಕ ವೇಳೆ ಅಧ್ಯಾಪಕರ ಅನುಭವದ ಅಂಶವಾಗಿದೆ. ಅನುಭವದ ಈ ರೀತಿಯ ಕ್ರಮಗಳು ಅಭಿಪ್ರೇರಣೆ ಎನಿಸಿಕೊಳ್ಳುತ್ತವೆ.

ಮನುಷ್ಯರು ಮನುಷ್ಯರಂತೆ ವರ್ತಿಸುವಂತೆ ಮಾಡುವ ಸ್ಫೂರ್ತಿಯ ಸೆಲೆ ಯಾವುದು ಎನ್ನುವುದು ಮನೋವಿಜ್ಞಾನಿಗಳು ಎದುರಿಸುತ್ತಿರುವ ಒಂದು ಪುರಾತನ ಸಮಸ್ಯೆಯಾಗಿದೆ. ಕ್ರಿಯೆಯ ಮೂಲ ಸ್ರೋತಗಳು ಅಥವಾ ಪ್ರೇರಣೆಗಳಿಲ್ಲದಿದ್ದಲ್ಲಿ ಮನುಷ್ಯನ ವರ್ತನೆಯಲ್ಲಿ ನಾವು ಕಾಣುತ್ತಿರುವ ವೈವಿಧ್ಯತೆ ಮತ್ತು ವರ್ತನೆಯನ್ನು ನಿಯಂತ್ರಿಸಬಹುದಾದ ಗುಣಗಳೂ ಇರುತ್ತಿರಲಿಲ್ಲ. ಪ್ರೇರಣೆಗಳು ನಮ್ಮ ವರ್ತನೆಗೆ ಬೇಕಾದ ಹೆಚ್ಚಿನ ಶಕ್ತಿಯನ್ನು ಒದಗಿಸುತ್ತವೆ.

ಆದ್ದರಿಂದ ಅಭಿಪ್ರೇರಣೆಯ ಅಧ್ಯಯನ ಅಧ್ಯಾಪಕರಿಗೆ ಆವಶ್ಯಕವೆನಿಸುತ್ತದೆ. ಅಭಿಪ್ರೇರಣೆಯ ಬಗೆಗಿನ ಜ್ಞಾನವು ಅಧ್ಯಾಪಕರು ಅಭಿಪ್ರೇರಣೆಯ ಗತಿಶೀಲತೆಯನ್ನು ಅರ್ಥಮಾಡಿಕೊಳ್ಳಲು, ಕಲಿಕೆಯನ್ನು ಪ್ರಭಾವಗೊಳಿಸುವ ವಿವಿಧ ರೀತಿಯ ಅಭಿಪ್ರೇರಣಾ ಅಂಶಗಳನ್ನು ತಿಳಿದುಕೊಳ್ಳಲು ಹಾಗೂ ಈ ಅಂಶಗಳನ್ನು ತರಗತಿಯಲ್ಲಿ ಕಲಿಕೆಯನ್ನು ಉತ್ತಮಗೊಳಿಸಲು ಹೇಗೆ ಉಪಯೋಗಿಸಬಹುದು ಎಂಬುದನ್ನು ಕಲಿತು ಕೊಳ್ಳಲು ಸಹಾಯ ಮಾಡುತ್ತದೆ.

ಅಭಿಪ್ರೇರಣೆಯ ಅರ್ಥ :

'ಅಭಿಪ್ರೇರಣೆ' ಎನ್ನುವ ಪದಕ್ಕೆ ಆಂಗ್ಲಭಾಷೆಯಲ್ಲಿ 'ಮೋಟಿವೇಷನ್' ಎನ್ನುತ್ತಾರೆ. ಈ ಆಂಗ್ಲಪದ ಲ್ಯಾಟಿನ್ ಭಾಷೆಯ 'ಮೂವಿ' ಎಂಬ ಪದದಿಂದ ಬಂದಿದೆ. ಈ ಪದಕ್ಕೆ 'ಚಲಿಸುವಂತೆ ಮಾಡು' ಚೇತನಗೊಳಿಸು ಎನ್ನುವ ಅರ್ಥವಿದೆ. ಈ ಅರ್ಥದಲ್ಲಿ ಪ್ರೇರಣೆ ಜೀವಿಗಳನ್ನು ಚಟುವಟಿಕೆಗೆ ತಳ್ಳುವ ಒಂದು ಶಕ್ತಿಯಾಗಿದೆ ಎನ್ನಬಹುದು. ಆದ್ದರಿಂದ ಅಭಿಪ್ರೇರಣೆಯು ಜೀವಿಯನ್ನು ಕ್ರಿಯಾಶೀಲವಾಗುವಂತೆ ಮಾಡುವ ಒಂದು ಸ್ಥಿತಿ ಎನ್ನಬಹುದು. ವ್ಯಕ್ತಿಯನ್ನು ಶಕ್ತಿಶೀಲನನ್ನಾಗಿಸುವ ಮತ್ತು ಅವನ ಚಟುವಟಿಕೆಗಳನ್ನು ನಿರ್ದೇಶಿಸುವ ಪ್ರಕ್ರಿಯೆಗೆ ಅಭಿಪ್ರೇರಣೆ ಎನ್ನಬಹುದು. "ಕೆಲವು ವೇಳೆ ಅಭಿಪ್ರೇರಣೆಯನ್ನು ಸ್ವಯಂಚಾಲಿತ ಯಂತ್ರಕ್ಕೂ ಮತ್ತು ಅದನ್ನು ನಿಯಂತ್ರಿಸುವ ಚಕ್ರಕ್ಕೂ ಹೋಲಿಸುತ್ತಾರೆ. ಶಕ್ತಿ ಮತ್ತು ನಿರ್ದೇಶನ — ಇವು ಅಭಿಪ್ರೇರಣೆ ಪರಿಕಲ್ಪನೆಯ ಕೇಂದ್ರ ಬಿಂದುಗಳಾಗಿವೆ". (ಗ್ರೇಜ್ ಮತ್ತು ಬರ್ಲಿನರ್ ಪುಟ 275).

ಅಭಿಪ್ರೇರಣೆ ಪರಿಕಲ್ಪನೆ ಒಂದು ನಿರ್ದಿಷ್ಟವಾದ ಪರಿಭಾಷೆಯನ್ನು ಕೊಡುವುದೂ ಮತ್ತು ಮನುಷ್ಯರನ್ನು ಯಾವುದು ಅಭಿಪ್ರೇರಿತಗೊಳಿಸುತ್ತದೆ ಎನ್ನುವುದರ ಬಗ್ಗೆ ಒಂದು ಖಚಿತವಾದ ಉತ್ತರವನ್ನು ನೀಡುವುದೂ ಕಷ್ಟವೆನಿಸಿದರೂ, ಅಭಿಪ್ರೇರಿತ ವರ್ತನೆಯ

ಲಕ್ಷಣಗಳೇನು ಎನ್ನುವುದರ ಬಗ್ಗೆ ಮನೋವಿಜ್ಞಾನಿಗಳು ಬಹುಮಟ್ಟಿಗೆ ಏಕಾಭಿಪ್ರಾಯವುಳ್ಳವರಾಗಿದ್ದಾರೆ. ಅಭಿಪ್ರೇರಿತನಾದ ವ್ಯಕ್ತಿ ಹೆಚ್ಚಿಗೆ ಶಕ್ತಿಯ ಪೂರೈಕೆಯನ್ನು ಪಡೆಯುತ್ತಾನೆ. ಅಭಿಪ್ರೇರಿತ ಸ್ಥಿತಿಯಲ್ಲಿ ಕೆಲಸ ಮಾಡುವ ವ್ಯಕ್ತಿ ಆ ಕಾರ್ಯವನ್ನು ಸಾಕಷ್ಟು ಕಾಲದವರೆಗೆ ಸತತವಾಗಿ ಮುಂದುವರಿಸಿಕೊಂಡು ಹೋಗಲು ಸಮರ್ಥನಾಗುತ್ತಾನೆ. ಅಭಿಪ್ರೇರಿತನಾದ ವ್ಯಕ್ತಿ ಗುರಿಯನ್ನು ತಲುಪಲು ಅನೇಕ ರೀತಿಯ ಪ್ರಯತ್ನಗಳನ್ನು ಕೈಗೊಳ್ಳುತ್ತಾನೆ. ವ್ಯಕ್ತಿ ಅಭಿಪ್ರೇರಿತನಾದಾಗ ಅವನ ಕಾರ್ಯಕ್ಷಮತೆಯ (ನಿಷ್ಪಾದನೆ, ಪರ್ಫಾರ್ಮೆನ್ಸ್) ಮಟ್ಟ ಹೆಚ್ಚುತ್ತದೆ.

ಶಿಕ್ಷಣಕ್ಕೆ ಅನ್ವಯಿಸಿದಂತೆ ಅಭಿಪ್ರೇರಣೆ ಈ ಕೆಳಕಂಡ ಅರ್ಥಗಳನ್ನು ಸೂಚಿಸುತ್ತವೆ. "ಅಭಿಪ್ರೇರಣಾ ಪ್ರಕ್ರಿಯೆಯು (ಅ) ವಿದ್ಯಾರ್ಥಿಗಳನ್ನು ಹೊಸ ಹೊಸ ಅನುಭವಗಳನ್ನು ಪಡೆಯಲು ಪ್ರೇರೇಪಿಸಿ, ತನ್ಮೂಲಕ ಕಲಿಕೆಯುಂಟಾಗುವಂತೆ ಮಾಡುತ್ತದೆ. (ಆ) ವಿದ್ಯಾರ್ಥಿಗಳನ್ನು ಶಕ್ತಿಶೀಲರನ್ನಾಗಿಸಿ ಮತ್ತು ಕ್ರಿಯಾಶೀಲರನ್ನಾಗಿಸಿ, ಅವರನ್ನು ಸಾಕಷ್ಟು ಜಾಗೃತ ಸ್ಥಿತಿಯಲ್ಲಿಡುತ್ತದೆ. (ಇ) ವಿದ್ಯಾರ್ಥಿಗಳು ಒಂದೇ ದಿಶೆಯಲ್ಲಿ ತಮ್ಮ ಗಮನ (ಅವಧಾನ)ವನ್ನು ಕೇಂದ್ರೀಕರಿಸುವಂತೆ ಮಾಡುತ್ತದೆ. (ಯುಶೋನ್ ಮತ್ತು ಪೈನ್‌ಸ್ಟೈನ್‌ರಿಂದ ಉದ್ಧೃತ—ಪುಟ 295)

ಅಭಿಪ್ರೇರಣೆಗೆ ಸಂಬಂಧಿಸಿದ ಕೆಲವು ಪರಿಕಲ್ಪನೆಗಳು :

ಅಗತ್ಯತೆಗಳು :

ಜೈವಿಕವಾಗಿ ಹೇಳುವುದಾದರೆ ಜೀವಿಯಲ್ಲಿ ಉಂಟಾಗುವ ಯಾವುದೇ ರೀತಿಯ ಕೊರತೆಯನ್ನು ಅಗತ್ಯತೆ ಎನ್ನುತ್ತಾರೆ. ಜೀವಿಗೆ ಆವಶ್ಯಕವಾಗಿ ಬೇಕಾದ ಆಹಾರ, ನೀರು, ಶಾಖ, ಆಮ್ಲಜನಕ ಮುಂತಾದ ವಸ್ತುಗಳಿಂದ ಜೀವಿಯು ವಂಚಿತಗೊಳಿಸಲ್ಪಟ್ಟಾಗ ಕೊರತೆಯುಂಟಾಗುತ್ತದೆ. ಆಗ ಜೀವಿಗೆ ಆಯಾ ವಸ್ತುಗಳ ಅಗತ್ಯತೆವುಂಟಾಗುತ್ತದೆ. ಈ ಅಗತ್ಯತೆಗಳಿಂದ ಜೀವಿಯು ವಂಚಿತವಾದಾಗ ಅದರ ಶರೀರ ವ್ಯವಸ್ಥೆಯ ಸಮತೋಲನ ಕ್ಷೋಭೆಗೊಳಗಾಗುತ್ತದೆ. ಜೀವಿಯ ಈ ಸಮತೋಲನ ಸ್ಥಿತಿಗೆ ಹೋಮಿಯೋಸ್ಟಾಸಿಸ್ ಎನ್ನುತ್ತಾರೆ. ಜೀವಿ ಈ ರೀತಿ ಕ್ಷೋಭೆಗೊಳಗಾದಾಗ ಉದ್ವೇಗಗೊಳ್ಳುತ್ತದೆ ಮತ್ತು ಕ್ರಿಯಾಶೀಲವಾಗಲು ಅಭಿಪ್ರೇರಿತವಾಗುತ್ತದೆ. ಜೀವಿಯ ಅಗತ್ಯತೆ ತೃಪ್ತಿಯಾಗಿ, ಅದರ ಸಮತೋಲನ ಸ್ಥಿತಿ ಪುನಃ ಉಂಟಾದಾಗ ಜೀವಿಯ ಚಟುವಟಿಕೆಯು ನಿಲ್ಲುತ್ತದೆ. ಮನುಷ್ಯರಲ್ಲಿ ಹಸಿವು, ನೀರಡಿಕೆ ಮುಂತಾದ ಶಾರೀರಿಕ ಅಗತ್ಯತೆಗಳಲ್ಲದೆ ಅನೇಕ ಮಾನಸಿಕ ಅಗತ್ಯತೆಗಳು ಉಂಟಾಗುತ್ತವೆ. ಪ್ರೀತಿ ವಾತ್ಸಲ್ಯಗಳ ಅಗತ್ಯತೆ, ಸಂಗ್ರಹ ಪ್ರವೃತ್ತಿ, ಸಹಕಾರ, ಸಾಧಿಸಬೇಕೆನ್ನುವ ಪ್ರವೃತ್ತಿ ಮುಂತಾದುವು ಮಾನಸಿಕ ಅಗತ್ಯತೆಗಳಿಗೆ ಉದಾಹರಣೆಗಳಾಗಿವೆ. ಇವುಗಳಿಗೆ ವೈಯಕ್ತಿಕ-ಸಾಮಾಜಿಕ ಅಗತ್ಯತೆಗಳು ಎಂದೂ ಹೇಳುತ್ತಾರೆ. ಇವುಗಳಿಗೆ ಹಸಿವು ನೀರಡಿಕೆಯಿರುವಂತೆ ಯಾವುದೇ ರೀತಿಯ ಜೈವಿಕ ಆಧಾರಗಳಿರುವುದಿಲ್ಲ. ಇವುಗಳು ಕೇವಲ ಕಾರ್ಯಾತ್ಮಕವಾದುವುಗಳು. ಇವು

ಮಾನವ ಸಾಮಾಜಿಕ ಹಾಗೂ ಭೌತಿಕ ಪರಿಸರದೊಂದಿಗೆ ಅನಿವಾರ್ಯವಾದ ಸಂಬಂಧಗಳನ್ನು ಹೊಂದಿರುವುದರಿಂದ ಉಂಟಾಗುತ್ತವೆ. ಸಾಮಾಜಿಕ, ಸಾಂಸ್ಕೃತಿಕ ಹಾಗೂ ವೈಯಕ್ತಿಕ ಅನುಭವಗಳಿಂದಾಗಿ ಈ ಮಾನಸಿಕ ಅಗತ್ಯತೆಗಳು ಉಂಟಾಗುತ್ತವೆ. ಜೈವಿಕ ಮತ್ತು ಮಾನಸಿಕ ಅಗತ್ಯತೆಗಳು ಮಾನವನನ್ನು ಅಭಿಪ್ರೇರಿತಗೊಳಿಸುತ್ತವೆ. ಕೊರತೆಯುಂಟಾದಾಗ ಜೀವಿಯು ವರ್ತನೆಗೆ ಅಭಿಪ್ರೇರಿತಗೊಳ್ಳುತ್ತದೆ.

ಚೋದನೆಗಳು :

ಶಾರೀರಿಕ ಅಗತ್ಯತೆಗಳಿಂದ ಜೀವಿಯನ್ನು ವಂಚಿಸುವುದು, ಜೀವಿಯನ್ನು ಕ್ರಿಯಾಶೀಲಗೊಳ್ಳಲು ತಳ್ಳುತ್ತವೆ. ಜೀವಿಯ ಸಮತೋಲಿತ ಸ್ಥಿತಿಯಲ್ಲಿ ಉಂಟಾಗುವ ಯಾವುದೇ ರೀತಿಯ ಕ್ಷೋಭೆಯು ಜೀವಿಯನ್ನು ಚಟುವಟಿಕೆಗೊಳ್ಳಲು ತಳ್ಳುತ್ತದೆ. ಹೀಗೆ ಜೀವಿಯು ಕ್ರಿಯಾಶೀಲಗೊಳ್ಳಲು ತಳ್ಳಲ್ಪಟ್ಟಾಗ ಅದರಲ್ಲಿ ಚೋದನ ಸ್ಥಿತಿ ಉಂಟಾಗಿದೆ ಎಂದು ಹೇಳುತ್ತೇವೆ. ಯಾವುದೇ ರೀತಿಯ ಅಗತ್ಯತೆಗಳ ವಂಚನೆಯು ಚೋದನೆ ಎನಿಸಿಕೊಳ್ಳುತ್ತದೆ. ಹಸಿವು, ನೀರಡಿಕೆ, ಲೈಂಗಿಕ ತೃಷೆ, ಮಾತೃತ್ವ – ಇವು ಮುಖ್ಯ ಚೋದನೆಗಳಾಗಿವೆ. ಹಲ್ ಎನ್ನುವ ಮನೋವಿಜ್ಞಾನಿ ಕಲಿಕೆಯು ಜೀವಿಯ ಚೋದನೆಯನ್ನು ಪ್ರತಿಪುಷ್ಟಿಯ ಮೂಲಕ ಶಮನಗೊಳಿಸುವುದರಿಂದ ಉಂಟಾಗುತ್ತದೆ ಎಂದು ವಾದಿಸಿದ್ದಾನೆ. ಈ ಚೋದನೆಗಳು ಜೀವಿಯ ಉಳಿವಿಗೆ ಅವಶ್ಯವಾದುವುಗಳಾಗಿರುವುದರಿಂದ ಇವನ್ನು ಪ್ರಾಥಮಿಕ ಚೋದನೆಗಳೆಂದು ಹೇಳುತ್ತಾರೆ. ಚೋದನೆಗಳು ಜೀವಿಯು ಅಭಿಪ್ರೇರಿತಗೊಳ್ಳುವಂತೆ ಮಾಡುತ್ತವೆ.

ಅಭಿಪ್ರೇರಕಗಳು :

ಚೋದನೆಗಳಿಗೂ, ಅಭಿಪ್ರೇರಕಗಳಿಗೂ ಅರ್ಥ ವ್ಯತ್ಯಾಸವಿದೆ. ಈ ಅರ್ಥ ವ್ಯತ್ಯಾಸ ಪ್ರಾಣಿಗಳಿಗೆ ಸಂಬಂಧಿಸಿದಂತೆ ಅವಶ್ಯಕವೆನಿಸದಿದ್ದರೂ, ಮನುಷ್ಯರಿಗೆ ಸಂಬಂಧಿಸಿದಂತೆ ಅವಶ್ಯಕವೆನಿಸುತ್ತದೆ. ಚೋದನೆಯೊಂದು ಧ್ಯೇಯಗನ್ಯವಾದಾಗ (ಗುರಿಯೆಡೆಗೆ ಹೋದಾಗ) ಅದು ಅಭಿಪ್ರೇರಕವೆನಿಸಿಕೊಳ್ಳುತ್ತದೆ. ಉದಾಹರಣೆಗೆ ಆರು ತಿಂಗಳ ಮಗುವಿಗೆ ಹಸಿವಾದಾಗ ಅದು ಅಳತೊಡಗುತ್ತದೆ. ಅದರಲ್ಲಿ, ಚೋದನ ಸ್ಥಿತಿಯುಂಟಾಗಿರುವುದರಿಂದ ಅದು ಚಟುವಟಿಕೆಗೊಳ್ಳುತ್ತದೆ. ಆದರೆ ಅದರ ವರ್ತನೆ ಯಾವುದೇ ನಿರ್ದಿಷ್ಟ ಗುರಿಯತ್ತ ಮುಂದುವರಿಯುವುದಿಲ್ಲ. ಆದರೆ ಹತ್ತು ವರ್ಷದ ಹುಡುಗನಲ್ಲಿ ಹಸಿವಿನ ಚೋದನೆ ಸ್ಥಿತಿಯುಂಟಾದಾಗ ಅವನಲ್ಲಿ ಚಟುವಟಿಕೆ ತಲೆದೋರುವುದಲ್ಲದೆ ಅವನ ವರ್ತನೆ ನಿರ್ದಿಷ್ಟ ಗುರಿಯತ್ತ (ತಾಯಿಯನ್ನು ಕೇಳುವುದು, ಆಹಾರವನ್ನು ಹುಡುಕುವುದು, ತಿನ್ನಲು ಪ್ರಾರಂಭಿಸುವುದೂ) ಸಾಗುತ್ತದೆ. ಆದ್ದರಿಂದ ಅವನಲ್ಲಿ ಹಸಿವಿನ ಅಭಿಪ್ರೇರಕ ಎನ್ನುವ ಪದ ಜೈವಿಕ ಚೋದನೆಗಳಿಗೂ ಮತ್ತು ಮನುಷ್ಯನಲ್ಲಿ ಉಂಟಾಗುವ ಅನೇಕ ರೀತಿಯ ಆರ್ಜಿತ ಪ್ರತಿಕ್ರಿಯೆಯ ಪ್ರವೃತ್ತಿಗಳಿಗೂ ಅನ್ವಯಿಸುತ್ತದೆ.

ಸಂವೇಗಗಳು :

'ಸಂವೇಗವು' ಜೀವಿಯು ಸಮಗ್ರವಾಗಿ ಅಥವಾ ಪೂರ್ಣವಾಗಿ ಉತ್ತೇಜಿತಗೊಂಡ ಸ್ಥಿತಿಯನ್ನು ಸೂಚಿಸುತ್ತದೆ. ಸಂವೇಗ ಶಬ್ದದ ಪರ್ಯಾಯ ಶಬ್ದವಾದ ಆಂಗ್ಲಭಾಷೆಯ "ಎಮೋಷನ್" ಎನ್ನುವ ಪದ ಮತ್ತು ಅಭಿಪ್ರೇರಣೆಯ ಆಂಗ್ಲ ಪರ್ಯಾಯ ಪದವಾದ 'ಮೋಟೀವ್' ಎನ್ನುವ ಪದ ಈ ಎರಡು ಲ್ಯಾಟಿನ್ ಭಾಷೆಯ "ಮೂವಿರ್" ಅಂದರೆ ತಳ್ಳಲ್ಪಡು, "ಕ್ರಿಯಾಶೀಲಗೊಳ್ಳು" ಎನ್ನುವ ಪದದಿಂದ ಉತ್ಪತ್ತಿಯಾಗಿದೆ. ಆದ್ದರಿಂದ ಸಂವೇಗಗಳಿಗೂ, ಅಭಿಪ್ರೇರಣೆಗಳಿಗೂ ಪರಸ್ಪರ ಸಂಬಂಧವಿದೆ. ಆದ್ದರಿಂದ ಸಂವೇಗ ಸ್ಥಿತಿಯನ್ನೂ ಸಹ ಅಭಿಪ್ರೇರಿತ ಸ್ಥಿತಿಯೆಂದು ಪರಿಗಣಿಸಬಹುದು. ಕೆಲವು ಅಂಶಗಳಲ್ಲಿ ಸಂವೇಗಗಳು ಅಭಿಪ್ರೇರಣೆಯ ಕಾರ್ಯಗಳನ್ನೇ ಕೈಗೊಳ್ಳುತ್ತವೆ. ವ್ಯಕ್ತಿ ಸಂವೇಗ ಸ್ಥಿತಿಯಲ್ಲಿರುವಾಗ ಅವನ ವರ್ತನೆಗೆ ಹೆಚ್ಚಿನ ಶಕ್ತಿ ದೊರೆಯುತ್ತದೆ. ಸಂವೇಗ ಸ್ಥಿತಿಯು ವ್ಯಕ್ತಿಯ ವರ್ತನೆಯು ನಿರ್ದಿಷ್ಟ ಗುರಿಯತ್ತ ಹೋಗುವಂತೆ ಮಾಡುತ್ತದೆ. ಸಂವೇಗಗಳು ವ್ಯಕ್ತಿಯ ಸಂತುಲಿತ (ಸಮತೋಲನ) ಸ್ಥಿತಿಯನ್ನು ಗೊಂದಲಕ್ಕೀಡುಮಾಡುತ್ತವೆ. ಹೀಗೆ ಸಂವೇಗಗಳು ಅಭಿಪ್ರೇರಣೆಯಲ್ಲಿ ಪಾತ್ರ ವಹಿಸುತ್ತವೆ.

ಪ್ರೋತ್ಸಾಹಕಗಳು :

ವಸ್ತುಗಳಲ್ಲಿ ಜೀವಿಯನ್ನು ತಮ್ಮೆಡೆಗೆ ಆಕರ್ಷಿಸುವ ಅಥವಾ ವಿಕರ್ಷಿಸುವ (ದೂರ ತಳ್ಳುವ) ಗುಣಗಳಿರುತ್ತವೆ. ಈ ಗುಣಗಳಿಗೆ ಪ್ರೋತ್ಸಾಹಕ ಎನ್ನುತ್ತಾರೆ. ಜೀವಿಯನ್ನು ತಮ್ಮೆಡೆಗೆ ಸೆಳೆಯುವ ವಸ್ತುಗಳನ್ನು ಧನಾತ್ಮಕ ಪ್ರೋತ್ಸಾಹಕಗಳೆಂತಲೂ, ಜೀವಿಯನ್ನು ತಮ್ಮಿಂದ ದೂರತಳ್ಳುವ ವಸ್ತುಗಳಿಗೆ ಋಣಾತ್ಮಕ ಪ್ರೋತ್ಸಾಹಕವೆಂತಲೂ ಕರೆಯುತ್ತಾರೆ. ಉದಾಹರಣೆಗೆ, ಹಸಿವಿನಿಂದಿರುವ ಜೀವಿಗೆ ಆಹಾರ, ಧನಾತ್ಮಕ ಪ್ರೋತ್ಸಾಹಕವಾಗುತ್ತದೆ. ನೀರಡಿಕೆಯಿಂದಿರುವ ಜೀವಿಗೆ ನೀರು ಧನಾತ್ಮಕ ಪ್ರೋತ್ಸಾಹಕವೆನಿಸುತ್ತದೆ. ಆಹಾರ, ನೀರು ಮುಂತಾದವುಗಳಲ್ಲಿ ಧನಾತ್ಮಕ ಪ್ರೋತ್ಸಾಹಕ ಗುಣವಿರುತ್ತದೆ. ವೇದನೆಯನ್ನುಂಟುಮಾಡುವ ವಸ್ತುಗಳು, ವಿದ್ಯುತ್ ಷಾಕ್ ಮುಂತಾದವುಗಳಲ್ಲಿ ಋಣಾತ್ಮಕ ಪ್ರೋತ್ಸಾಹಕ ಗುಣವಿರುತ್ತದೆ. ಕೆಲವು ವೇಳೆ ವಸ್ತುಗಳ ಪ್ರೋತ್ಸಾಹಕ ಗುಣ ಆರೋಪಿತವಾದುದಾಗಿರಬಹುದು. ವ್ಯಕ್ತಿಯ ಅನುಭವದ ಆಧಾರದ ಮೇಲೆ ವಸ್ತುಗಳಲ್ಲಿರುವ ಪ್ರೋತ್ಸಾಹಕ ಗುಣ ಬದಲಾಯಿಸುತ್ತದೆ. ಆದುದರಿಂದ ಒಬ್ಬ ವ್ಯಕ್ತಿ ಧನಾತ್ಮಕ ಪ್ರೋತ್ಸಾಹಕವಾಗಿ ಬದಲಾಯಿಸಬಹುದು. ಇದು ಕಲಿಕೆ ಮತ್ತು ಇತರ ಅನುಭವಗಳ ಫಲ. ಉದಾಹರಣೆಗೆ ಮಾಂಸಹಾರ. ಮಾಂಸಹಾರಿಗೆ ಧನಾತ್ಮಕ ಪ್ರೋತ್ಸಾಹಕವಾಗಿಯೂ, ಸಸ್ಯಾಹಾರಿಗೆ ಋಣಾತ್ಮಕ ಪ್ರೋತ್ಸಾಹಕವಾಗಿಯೂ ಪರಿಣಮಿಸುತ್ತದೆ. ಜೀವಿಯನ್ನು ಅಭಿಪ್ರೇರಿತಗೊಳಿಸುವಾಗ ಸೂಕ್ತವಾದ ಪ್ರೋತ್ಸಾಹಕವಿರಬೇಕಾಗುತ್ತದೆ. ಪ್ರೋತ್ಸಾಹಕ ಗುಣಗಳು ಅಭಿಪ್ರೇರಣೆಯನ್ನು ಪ್ರಭಾವಗೊಳಿಸುತ್ತದೆ. ಆದುದರಿಂದ ಅಭಿಪ್ರೇರಣೆಯನ್ನು ಚರ್ಚಿಸುವಾಗ ಅಭಿಪ್ರೇರಣೆಯ ಪ್ರೋತ್ಸಾಹಕ ಪರಿಸ್ಥಿತಿಗಳನ್ನು ಕುರಿತು ಚರ್ಚಿಸುವುದು ಸೂಕ್ತವೆನಿಸುತ್ತದೆ.

ಅಭಿವೃತ್ತಿಗಳು (ಮನೋಭಾವಗಳು) :

ವ್ಯಕ್ತಿಯು ಒಂದು ವಸ್ತು, ವಿಚಾರ, ಸಂಸ್ಥೆ ಅಥವಾ ವ್ಯಕ್ತಿಯ ಕಡೆಗೆ ನಿರ್ದಿಷ್ಟ ದಿಶೆಯಲ್ಲಿ ವರ್ತಿಸುವಂತೆ ಮಾಡುವ ಮಾನಸಿಕ ಸಿದ್ಧತೆಗೆ ಅಭಿವೃತ್ತಿಯೆನ್ನುತ್ತಾರೆ. ಅಭಿವೃತ್ತಿಗಳು ಧನಾತ್ಮಕವಾಗಿರಬಹುದು ಅಥವಾ ಋಣಾತ್ಮಕವಾಗಿರಬಹುದು. ವ್ಯಕ್ತಿಯು ಧನಾತ್ಮಕ ಅಭಿವೃತ್ತಿಯನ್ನು ಹೊಂದಿದ್ದರೆ ಆ ವಿಚಾರದ ಬಗ್ಗೆ ಅಪೇಕ್ಷಣೀಯ ವರ್ತನೆಯನ್ನು ತೋರಿಸುತ್ತಾನೆ. ಋಣಾತ್ಮಕವಾದ ಅಭಿವೃತ್ತಿಯನ್ನು ಹೊಂದಿದ್ದರೆ ವಿಚಾರದ ಬಗ್ಗೆ ಅನಪೇಕ್ಷಣೀಯವಾದ ವರ್ತನೆಯನ್ನು ತೋರಿಸುತ್ತಾನೆ. ಅವನು ಆ ವಸ್ತು ಅಥವಾ ವಿಚಾರದಿಂದ ದೂರ ಹೋಗುತ್ತಾನೆ, ಟೀಕಿಸುತ್ತಾನೆ. ಈ ಅಭಿವೃತ್ತಿಗಳು ಜೀವನಣಿಗೆಯ ಅವಧಿಯಲ್ಲಿ ಕಲಿಕೆಯಿಂದಾಗಿ ಉಂಟಾಗುತ್ತದೆ. ಇವು ವರ್ತನೆಯ ಮೇಲೆ ಪ್ರಭಾವ ಬೀರುವುದರಿಂದ, ವ್ಯಕ್ತಿಯ ಅಭಿಪ್ರೇರಣೆಯಲ್ಲಿಯೂ ಪ್ರಭಾವ ಬೀರುತ್ತವೆ. ಉದಾಹರಣೆಗೆ, ಒಂದು ವಿಷಯದ ಬಗ್ಗೆ (ಗಣಿತದ ಬಗ್ಗೆ) ಧನಾತ್ಮಕ ಅಭಿವೃತ್ತಿಯನ್ನು ಹೊಂದಿರುವ ವಿದ್ಯಾರ್ಥಿಗಳನ್ನು ಗಣಿತದ ಕಲಿಕೆಗೆ ಅಭಿಪ್ರೇರಿತಗೊಳಿಸುವುದು ಸುಲಭ ಸಾಧ್ಯವಾಗುತ್ತದೆ. ಅಂತೆಯೇ ಋಣಾತ್ಮಕ ಅಭಿವೃತ್ತಿಯನ್ನು ಹೊಂದಿದ್ದರೆ ಇದು ಸಾಧ್ಯವಾಗುವುದಿಲ್ಲ. ಹೀಗೆ ವ್ಯಕ್ತಿಯು ಹೊಂದಿರುವ ಅಭಿವೃತ್ತಿಗಳೂ ಸಹ ಅಭಿಪ್ರೇರಣೆಯ ಮೇಲೆ ಸಾಕಷ್ಟು ಪ್ರಭಾವ ಬೀರುತ್ತವೆ.

ಅಭಿರುಚಿ (ಆಸಕ್ತಿ) ಗಳು :

ವಸ್ತು, ವಿಚಾರ ಅಥವಾ ವ್ಯಕ್ತಿಯೊಬ್ಬನ ಬಗೆಗೆ ವ್ಯಕ್ತಿ ಹೊಂದಿರುವ ಅಪೇಕ್ಷಣೀಯ ಅಭಿವೃತ್ತಿ (ಮನೋಭಾವ) ಯೇ ಅಭಿರುಚಿಯೆನಿಸುತ್ತದೆ. ಅಭಿರುಚಿಯು ಅಭಿವೃತ್ತಿಯ ವಸ್ತುವಿಗೆ ಸಂಬಂಧಪಟ್ಟ ಚಟುವಟಿಕೆಗಳನ್ನು ಮನಃಪೂರ್ವಕವಾಗಿ ಕೈಗೊಳ್ಳಲು ವ್ಯಕ್ತಿಯನ್ನು ಸಿದ್ಧಗೊಳಿಸುತ್ತದೆ. ಉದಾಹರಣೆಗೆ, ಹೂವುಗಳಲ್ಲಿ ಅಭಿರುಚಿಯಿರುವ ವಿದ್ಯಾರ್ಥಿಯು ಹೂವುಗಳ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಪಡೆಯಲು ಉತ್ಸುಕತೆ ತೋರುತ್ತಾನೆ. ಪುಷ್ಪಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಚೆನ್ನಾಗಿ ನೆನಪಿನಲ್ಲಿಟ್ಟುಕೊಳ್ಳುತ್ತಾನೆ. ವಿಧವಿಧವಾದ ಹೂಗಳನ್ನು ಸಂಗ್ರಹಿಸಬಹುದು. ಹೂಗಳ ಬಗ್ಗೆ ಹೆಚ್ಚಿನ ಸಂವೇದನೆಯನ್ನು ಬೆಳೆಯಿಸಿಕೊಳ್ಳುತ್ತಾನೆ. ವಿದ್ಯಾರ್ಥಿಗಳನ್ನು ಅವರ ಅಭಿರುಚಿಯಿರುವ ವಿಷಯಗಳ ಬಗ್ಗೆ ಕಲಿಯಲು ಸುಲಭವಾಗಿ ಪ್ರೇರೇಪಿಸಬಹುದು.

ಮೌಲ್ಯಗಳು :

"ವ್ಯಕ್ತಿಯೊಬ್ಬನು ತನ್ನ ಜೀವನದಲ್ಲಿ ಮುಖ್ಯವೆಂದುಕೊಂಡಿರುವ ಧ್ಯೇಯಗಳ ಅಥವಾ ಗುರಿಗಳ ಗುಂಪಿಗೆ ಸಂಬಂಧಿಸಿದಂತೆ ವ್ಯಕ್ತಿ ತಳೆದಿರುವ ನಿಲುವೇ ಮೌಲ್ಯವೆನಿಸುತ್ತದೆ". ಸ್ಪ್ರಾಂಗ್ಲರ್ ಎಂಬುವನು ಮಾನವನ ಜೀವನದಲ್ಲಿ ಮುಖ್ಯವೆನಿಸಿರುವ ಆರು

ವಿಧದ ಮೌಲ್ಯಗಳನ್ನು ಗುರ್ತಿಸಿದ್ದಾನೆ. ಅವೆಂದರೆ—ಸೈದ್ಧಾಂತಿಕ ಮೌಲ್ಯ, ಆರ್ಥಿಕ ಮೌಲ್ಯ, ಸೌಂದರ್ಯ ಮೌಲ್ಯ, ರಾಜಕೀಯ ಮೌಲ್ಯ, ಸಾಮಾಜಿಕ ಮೌಲ್ಯ ಮತ್ತು ಧಾರ್ಮಿಕ ಮೌಲ್ಯ. ಮೌಲ್ಯಗಳು ವರ್ತನೆಯ ಮೇಲೆ ಪ್ರಭಾವ ಬೀರುತ್ತವೆಯಾದುದರಿಂದ, ವಿದ್ಯಾರ್ಥಿಗಳನ್ನು ಅಭಿಪ್ರೇರಿತಗೊಳಿಸುವಾಗ ಅವರ ಮೌಲ್ಯಗಳನ್ನು ಸಹ ಗಮನಕ್ಕೆ ತಂದುಕೊಳ್ಳಬೇಕಾಗುತ್ತದೆ.

ಆಕಾಂಕ್ಷೆಗಳು :

ವ್ಯಕ್ತಿಯು ನಿರ್ದಿಷ್ಟ ಮಟ್ಟದ ಸಾಧನೆಯನ್ನು ಮಾಡಬೇಕೆನ್ನುವ ಬಯಕೆಯು ಆಕಾಂಕ್ಷೆಯಾಗಿರುತ್ತದೆ. ಆಕಾಂಕ್ಷೆಯ ಮಟ್ಟ ವ್ಯಕ್ತಿಯಿಂದ ವ್ಯಕ್ತಿಗೆ ಬೇರೆ ಬೇರೆಯಾಗಿರುವಂತೆಯೇ, ಒಬ್ಬನೇ ವ್ಯಕ್ತಿಯಲ್ಲಿ ಬೇರೆ ಬೇರೆ ಸಮಯಗಳಲ್ಲಿ ಬೇರೆ ಬೇರೆಯಾಗಿರುತ್ತವೆ. ಆಕಾಂಕ್ಷೆಯ ಮಟ್ಟ ವ್ಯಕ್ತಿಯ ಸಾಧನೆಯ ಮಟ್ಟವನ್ನು ಪ್ರಭಾವಿತಗೊಳಿಸುತ್ತದೆ. ಆದ್ದರಿಂದ, ಅಭಿಪ್ರೇರಣೆಗೊಳಿಸುವಲ್ಲಿ ವಿದ್ಯಾರ್ಥಿಗಳ ಆಕಾಂಕ್ಷೆಯ ಮಟ್ಟವನ್ನು ಪರಿಗಣಿಸಬೇಕಾಗುತ್ತದೆ.

ಅಭಿಪ್ರೇರಣೆಗಳ ವರ್ಗೀಕರಣ :

ಅಭಿಪ್ರೇರಣೆಗಳನ್ನು ಅನೇಕ ರೀತಿಯಲ್ಲಿ ವರ್ಗೀಕರಿಸಬಹುದು. ಅವುಗಳನ್ನು ಪ್ರಾಥಮಿಕ ಮತ್ತು ಆನುಷಂಗಿಕ ಅಭಿಪ್ರೇರಣೆಗಳೆಂದು ವಿಭಾಗಿಸಬಹುದು. ಹಸಿವು, ನೀರಡಿಕೆ, ಗಾಳಿಯ ಅಗತ್ಯತೆ, ದೇಹದಿಂದ ಕಲ್ಮಷಗಳನ್ನು ಹೊರಹಾಕುವ ಅವಶ್ಯಕತೆ ಮತ್ತು ಲೈಂಗಿಕ ಪ್ರೇರಣೆ ಇವು ಜೀವಿಯ ಉಳಿವಿಗೆ ಅವಶ್ಯಕವಾದುವುಗಳಾದುದರಿಂದ ಅವು ಪ್ರಾಥಮಿಕ ಅಭಿಪ್ರೇರಣೆಗಳೆನಿಸುತ್ತವೆ. ಆನುಷಂಗಿಕ ಅಭಿಪ್ರೇರಣೆಗಳು ಜೀವಿಯ ಉಳಿವಿಗೆ ಬೇಕಾದವುಗಳಾಗಿರುವುದಿಲ್ಲ ಮತ್ತು ಅವು ಕಲಿಕೆಯಿಂದ ಉಂಟಾಗುತ್ತವೆ. ಸಾಧನಾ ಪ್ರೇರಣೆ, ಸಂಗ್ರಹ ಪ್ರವೃತ್ತಿ, ಅಧಿಕಾರ ಪ್ರವೃತ್ತಿ ಮುಂತಾದವುಗಳು ಆನುಷಂಗಿಕ ಅಭಿಪ್ರೇರಣೆಗಳೆನಿಸುತ್ತವೆ. ಅಭಿಪ್ರೇರಣೆಗಳನ್ನು ಜೈವಿಕ ಮತ್ತು ಸಾಮಾಜಿಕ ಅಭಿಪ್ರೇರಣೆಗಳೆಂದು ವರ್ಗೀಕರಿಸಬಹುದು. ಪ್ರಾಥಮಿಕ ಪ್ರೇರಣೆಗಳಿಗೆ ಜೈವಿಕ ಆಧಾರವಿರುವುದರಿಂದ ಅವು ಜೈವಿಕ ಪ್ರೇರಣೆಗಳಾಗಿವೆ. ಆನುಷಂಗಿಕ ಅಭಿಪ್ರೇರಣೆಗಳು ಮಾನವನ ಸಾಮಾಜಿಕ ಅಸ್ತಿತ್ವದಿಂದ ಉಂಟಾಗುವುದರಿಂದ ಅವು ಸಾಮಾಜಿಕ ಅಭಿಪ್ರೇರಣೆಗಳೆನಿಸುತ್ತವೆ. ಅಭಿಪ್ರೇರಣೆ ಆಂತರಿಕವಾಗಿರಬಹುದು ಅಥವಾ ಬಾಹ್ಯವಾಗಿರಬಹುದು. ಅಭಿಪ್ರೇರಣೆಯು ಸನ್ನಿವೇಶದಲ್ಲಿ ಇರುವ ಪ್ರೋತ್ಸಾಹಕ ಪರಿಸ್ಥಿತಿಗಳು ಗುರಿಯ ಸಾಧನೆಗೆ ಕಾರ್ಯಾತ್ಮಕವಾಗಿ (ನೇರವಾಗಿ) ಸಂಬಂಧ ಹೊಂದಿದ್ದರೆ ಅದು ಆಂತರಿಕ ಅಭಿಪ್ರೇರಣೆಯೆನ್ನಿಸಿಕೊಳ್ಳುತ್ತದೆ. ಉದಾಹರಣೆಗೆ, ಆಹಾರವನ್ನು ತಿನ್ನುವುದು, ಪದವಿಯೊಂದನ್ನು ಪಡೆಯುವುದು, ಸಮಸ್ಯೆಯೊಂದನ್ನು ಪರಿಹರಿಸುವುದು ಇತ್ಯಾದಿ ಪ್ರೋತ್ಸಾಹಕ ಪರಿಸ್ಥಿತಿಗಳಿಗೂ, ಗುರಿಯ ಪ್ರಾಪ್ತಿಗೂ ನಡುವೆ ಇರುವ ಸಂಬಂಧವು

ಕೃತ್ರಿಮವಾಗಿದ್ದರೆ ಅಥವಾ ನಿಷ್ಪ್ರಮಾಣ ಸ್ವರೂಪದ್ದಾಗಿದ್ದರೆ ಅಂಥ ಅಭಿಪ್ರೇರಣೆಯು ಬಾಹ್ಯ ಪ್ರೇರಣೆಯೆನ್ನಿಸುತ್ತದೆ. ಉದಾಹರಣೆಗೆ, ಬಹುಮಾನ ಪಡೆಯಲು ಕೆಲಸ ಮಾಡುವುದು, ಪರೀಕ್ಷೆಯಲ್ಲಿ ಶ್ರೇಣಿ (ದರ್ಜೆ) ಪಡೆಯುವುದು, ಅಲ್ಪ ಬಹುಮಾನ ಪಡೆಯಲು ಯತ್ನಿಸುವುದು, ಇತ್ಯಾದಿ ಆಂತರಿಕ ಅಭಿಪ್ರೇರಣೆಯು ವ್ಯಕ್ತಿಯ ಅಂತರ್ಯದಿಂದ ಹೊರಹೊಮ್ಮುತ್ತದೆ. ಬಾಹ್ಯ ಅಭಿಪ್ರೇರಣೆ ವ್ಯಕ್ತಿಯ ಹೊರ ಪ್ರಪಂಚದಲ್ಲಿರುವ ಪರಿಸ್ಥಿತಿಗಳಿಂದ ಉಂಟಾಗುತ್ತದೆ. ಜೈವಿಕ ಮತ್ತು ವ್ಯಕ್ತಿತ್ವ ನಿರ್ಧಾರಕಗಳು ಆಂತರಿಕ ಅಭಿಪ್ರೇರಣೆಗಳಿಗೆ ಕಾರಣವಾಗುತ್ತವೆ. ಬಾಹ್ಯ ಅಭಿಪ್ರೇರಣೆಗೆ ಪರಿಸರದ ನಿರ್ಧಾರಕಾಂಶಗಳು ಕಾರಣವಾಗುತ್ತವೆ. ಆಂತರಿಕ ಅಭಿಪ್ರೇರಣೆ ಬಾಹ್ಯ ಅಭಿಪ್ರೇರಣೆಗಿಂತ ಹೆಚ್ಚು ಪ್ರಭಾವಯುತವಾಗಿರುತ್ತದೆ. ಮನೋವಿಶ್ಲೇಷಣಾವಾದಿಗಳು ಮತ್ತೊಂದು ಬಗೆಯ ಅಭಿಪ್ರೇರಣೆಯನ್ನು ಗುರ್ತಿಸಿದ್ದಾರೆ. ಅಚೇತನಾತ್ಮಕ ಅಭಿಪ್ರೇರಣೆಗಳು ವರ್ತನೆಯನ್ನು ಪ್ರಭಾವಗೊಳಿಸುತ್ತವೆ ಎಂದು ಅವರು ತೋರಿಸಿದ್ದಾರೆ. ದಮನ ಮಾಡಿದ ಬಯಕೆಗಳು, ಮರೆತುಹೋದ ನೆನಪುಗಳು ಅಚೇತನ ಮಟ್ಟಕ್ಕೆ ತಳ್ಳಲ್ಪಟ್ಟು ಅಲ್ಲಿ ಪ್ರಬಲವಾದ ಅಚೇತನಾತ್ಮಕ ಅಭಿಪ್ರೇರಣೆಗಳಾಗಿ ವರ್ತನೆಯನ್ನು ಪ್ರಭಾವಗೊಳಿಸುತ್ತವೆ.

ಅಭಿಪ್ರೇರಣೆಯ ವಿಧಗಳು :

ಮಾನವನಲ್ಲಿ ಎಷ್ಟು ವಿಧದ ಅಭಿಪ್ರೇರಣೆಗಳಿವೆ ? ಈ ಪ್ರಶ್ನೆಯನ್ನು ಉತ್ತರಿಸಲು ಮಾನವ ಅಭಿಪ್ರೇರಣೆಗೆ ಅನೇಕ ರೀತಿಯ ವಿವರಣೆಗಳನ್ನು ಮನೋವಿಜ್ಞಾನಿಗಳು ನೀಡಿದ್ದಾರೆ. ಇಂಥ ಕೆಲವು ಸಿದ್ಧಾಂತಗಳನ್ನು ಮುಂದಿನ ಪುಟಗಳಲ್ಲಿ ವಿವರಿಸಲಾಗಿದೆ. ಕೆಲವು ಲೇಖಕರು ಮಾನವನ ಅಭಿಪ್ರೇರಣೆಯನ್ನು ವ್ಯಾಪಕವಾದ ಒಂದೇ ಒಂದು ಅಭಿಪ್ರೇರಣೆಯ ಮೂಲಕ ವಿವರಿಸಲು ಪ್ರಯತ್ನಿಸಿದ್ದಾರೆ. ಸಿಗ್ಮಂಡ್ ಫ್ರಾಯ್ಡ್ 'ಲಿಬಿಡೋ' ಅಭಿಪ್ರೇರಣೆಯ ಮೂಲಕ ಮಾನವತಾವಾದಿ ಮನೋವಿಜ್ಞಾನಿಗಳು 'ಆತ್ಮ ಸಾಕ್ಷಾತ್ಕಾರ'ದ ಏಕ ಅಭಿಪ್ರೇರಣೆಯ ಮೂಲಕ ಮಾನವ ಅಭಿಪ್ರೇರಣೆಯನ್ನು ಯತ್ನಿಸಿರುವುದು, ಹಿಂದೂ ದಾರ್ಶನಿಕರು ಜೀವನದ ಅಂತಿಮ ಗುರಿಯಾದ 'ಮೋಕ್ಷ'ದ ಪರಿಕಲ್ಪನೆ – ಇವು ಅಭಿಪ್ರೇರಣೆಯ ಏಕ-ಅಭಿಪ್ರೇರಣಾ ಪರಿಕಲ್ಪನೆಗೆ ಉದಾಹರಣೆಗಳಾಗಿವೆ.

ಮತ್ತೆ ಕೆಲವರು ಮಾನವ ಅಭಿಪ್ರೇರಣೆಯನ್ನು ಎರಡು ಮೂಲ ಅಭಿಪ್ರೇರಣೆಗಳ ಮೂಲಕ ವಿವರಿಸಿದ್ದಾರೆ. ಫ್ರಾಯ್ಡನ 'ಈರೋಸ್' (ಜೀವಲಾಲಸೆ) ಮತ್ತು 'ಥೆನ್‌ಟೋಸ್' (ಮೃತ್ಯುಲಾಲಸೆ)ಯ ಪರಿಕಲ್ಪನೆಗಳು, ಧೈವವಾದಿಗಳ ಒಳಿತು (ದೇವ) ಮತ್ತು ಕೆಡುಕು(ಸೈತಾನ)ಗಳ ಪರಿಕಲ್ಪನೆಗಳು. ಜೆನ್ ಬೌದ್ಧಪಂಥದಲ್ಲಿನ 'ಯಿನ್' ಮತ್ತು 'ಯಾಂಗ್'ನ ಪರಿಕಲ್ಪನೆಗಳು, ಪಾಪ - ಪುಣ್ಯದ ಪರಿಕಲ್ಪನೆಗಳು ಮಾನವ ಅಭಿಪ್ರೇರಣೆಯ ದ್ವಿ-ಅಭಿಪ್ರೇರಣಾ ಪರಿಕಲ್ಪನೆಗೆ ಉದಾಹರಣೆಗಳಾಗಿವೆ.

ಇತರರು ಮಾನವ ಅಭಿಪ್ರೇರಣೆಯನ್ನು ಅನೇಕ ಅಭಿಪ್ರೇರಣೆಗಳ ಮೂಲಕ ವಿವರಿಸಿದ್ದಾರೆ. ಮುರ್ರೆ ಮಾನವನಲ್ಲಿ 28 ಅಭಿಪ್ರೇರಣೆಗಳ ಒಂದು ಶ್ರೇಣಿಯನ್ನೇ ಮಂಡಿಸಿದ್ದಾನೆ. ಹಿಂದೂ ಧರ್ಮದ ನಾಲ್ಕು ಪುರುಷಾರ್ಥಗಳ ಪರಿಕಲ್ಪನೆಯು ಮಾನವ ಅಭಿಪ್ರೇರಣೆಯ ಬಹು - ಅಭಿಪ್ರೇರಣಾ ಪರಿಕಲ್ಪನೆಯ ಮತ್ತೊಂದು ಉದಾಹರಣೆಯಾಗಿದೆ.

ಅಂತಿಮವಾಗಿ ಮಾನವನಲ್ಲಿ ಇಂತಿಷ್ಟೇ ಅಭಿಪ್ರೇರಣೆಗಳಿವೆಯೆಂದು ಹೇಳಿ ಅವುಗಳ ಪಟ್ಟಿ ಮಾಡುವುದು ಸಾಧ್ಯವಿಲ್ಲ. ಏಕೆಂದರೆ ಬೇರೆ ಬೇರೆ ಲೇಖಕರು ಬೇರೆ ಬೇರೆ ರೀತಿಯಲ್ಲಿ ಅಭಿಪ್ರೇರಣೆಗಳನ್ನು ಪಟ್ಟಿ ಮಾಡಿದ್ದಾರೆ. ಕೆಲವು ವೇಳೆ ಒಂದೇ ಅಭಿಪ್ರೇರಣೆಯನ್ನು ಬೇರೆ ಬೇರೆ ಹೆಸರುಗಳಿಂದ ಕರೆದಿರುವುದೂ ಉಂಟು. ಆದಾಗ್ಯೂ ಈ ಮುಂದೆ ಕಾಣಿಸಿದವುಗಳು ಮಾನವನಲ್ಲಿಯ ಮುಖ್ಯ ಅಭಿಪ್ರೇರಣೆಗಳೆನಿಸಿವೆ.

1. ಜೈವಿಕ ಆಗತ್ಯಗಳು— ಹಸಿವು (ಕ್ಷುತ್), ನೀರಡಿಕೆ (ಪಿಪಾಸಾ), ಲೈಂಗಿಕ ತೃಷೆ, ನಿದ್ರಾ, ಪ್ರಾಣವಾಯುವಿನ ಅವಶ್ಯಕತೆ, ಶರೀರದಿಂದ ಕಲ್ಮಷಗಳನ್ನು ಹೊರ ಹಾಕಬೇಕಾದ ಅವಶ್ಯಕತೆ.

2. ಸಾಮಾಜಿಕ ಅಭಿಪ್ರೇರಣೆಗಳು— ಸಮೂಹ ಜೀವನ ಲಾಲಸೆ, ಸಂಗ್ರಹ ಪ್ರವೃತ್ತಿ, ಆಕ್ರಮಣ ಪ್ರವೃತ್ತಿ, ಸ್ಪರ್ಧಾ ಪ್ರವೃತ್ತಿ, ಸಹಕಾರ, ಸಾಧನಾ ಅಭಿಪ್ರೇರಣೆ, ಸಾಮಾಜಿಕ ಪ್ರತಿಷ್ಠೆ.

3. ಸಂವೇಗಾತ್ಮಕ ಅಗತ್ಯತೆಗಳು— ಪ್ರೀತಿ, ಕೋಪ ಇತ್ಯಾದಿ ಸಂವೇಗಗಳನ್ನು ಅನುಭವಿಸಬೇಕಾದ ಮತ್ತು ಅಭಿವ್ಯಕ್ತಿಗೊಳಿಸಬೇಕಾದ ಅವಶ್ಯಕತೆ, ದಕ್ಷತೆಯನ್ನು ಗಳಿಸುವ ಅವಶ್ಯಕತೆ ಆತ್ಮಗೌರವ, ಕುತೂಹಲ.

4. ವ್ಯಕ್ತಿ ತನ್ನ ಬಗೆಗೆ ಮತ್ತು ಪರಿಸರದ ಬಗೆಗೆ ಏನನ್ನು ಯೋಚಿಸುತ್ತಾನೆ ಎಂಬುದನ್ನು ಅವಲಂಬಿಸಿರುವ ಸಂಜ್ಞಾನಾತ್ಮಕ ಅಗತ್ಯತೆಗಳು—ಉದಾಹರಣೆಗೆ—ಪರಿಕಲ್ಪನಾ ಅಸಂದಿಗ್ಧತೆಯನ್ನು ಪರಿಹರಿಸಿಕೊಳ್ಳಬೇಕಾದ ಅವಶ್ಯಕತೆ, ಸಂಜ್ಞಾನಾತ್ಮಕ ಅಸಮಂಜಸತೆಯನ್ನು ಪರಿಹರಿಸಿಕೊಳ್ಳಬೇಕಾದ ಅವಶ್ಯಕತೆ, ಆತ್ಮ-ಸಾಕ್ಷಾತ್ಕಾರ, ಸಾಧನೆಯ ನಿರೀಕ್ಷೆ.

5. ಅಚೇತನಾತ್ಮಕ ಅಭಿಪ್ರೇರಣೆಗಳು — "ದಮನಗೊಳಿಸಿದ (ದಮಿತ) ಆಕಾಂಕ್ಷೆ (ಆಸೆ) ಗಳು, ಅತೃಪ್ತ ಕಾಮನೆಗಳು, ಪ್ರಾಚೀನ ಆಕೃತಿಕಲ್ಪಗಳು (ಯೂಂಗನ ಪರಿಕಲ್ಪನೆ), ಜನ್ಮಾಘಾತ ಇತ್ಯಾದಿ.

ಮಾನವ ಅಭಿಪ್ರೇರಣೆಯನ್ನು ಪ್ರಭಾವಗೊಳಿಸುವ ಕಾರಕಾಂಶಗಳು :

ಮಾನವನ ಅಭಿಪ್ರೇರಣೆಯ ಮಟ್ಟವನ್ನು ಮತ್ತು ವಿನ್ಯಾಸವನ್ನು ಅನೇಕ ಅಂಶಗಳು ನಿರ್ಧರಿಸುತ್ತವೆ. ಅನೇಕ ಜೈವಿಕ ಅಂಶಗಳು ಅಭಿಪ್ರೇರಣೆಯಲ್ಲಿ ಮುಖ್ಯವೆನಿಸುತ್ತವೆ. ಥೇಲಮಸ್ ಹೈಪೋಥೆಲಾಮಸ್, ಮೇಲ್ಮಿದುಳು (ಸೆರೆಬ್ರಮ್) ಮುಂತಾದ ಮಿದುಳಿನ ಭಾಗಗಳು, ಮತ್ತು ಅನೇಕ ಅಂತಃಸ್ರಾವ ಗ್ರಂಥಿಗಳು ಜೈವಿಕ ಅಗತ್ಯತೆಗಳನ್ನು

ಪ್ರಭಾವಗೊಳಿಸುತ್ತವೆ. ಸಂಸ್ಕೃತಿ ಅದಕ್ಕೆ ಸೇರಿದ ಸದಸ್ಯರ ಅಭಿಪ್ರೇರಣಾ ವಿನ್ಯಾಸವನ್ನು ಪ್ರಭಾವಗೊಳಿಸುತ್ತದೆ. ಸಾಂಸ್ಕೃ ವಿನ್ಯಾಸವು ಸಮೂಹದಿಂದ ಸಮೂಹಕ್ಕೆ ಬದಲಾಗುವುದರಿಂದ ಅಭಿಪ್ರೇರಣಾ ವಿನ್ಯಾಸವೂ ಸಹ ಬದಲಾವಣೆ ಹೊಂದುತ್ತದೆ. ಕುಟುಂಬ ಮಕ್ಕಳ ಅಭಿಪ್ರೇರಣಾ ಮಟ್ಟವನ್ನು ಪ್ರಭಾವಗೊಳಿಸುವ ಒಂದು ಪ್ರಬಲ ಅಂಶ. ಪೋಷಕರ (ತಂದೆ-ತಾಯಿ) ಮನೋಭಾವಗಳು, ನಿರೀಕ್ಷೆಗಳು ಮತ್ತು ಪ್ರೋತ್ಸಾಹ ಮಕ್ಕಳ ಅಭಿಪ್ರೇರಣೆಯನ್ನು ನಿರ್ಧರಿಸುತ್ತದೆ. ಪರಿಸರವನ್ನು ನಿಯಂತ್ರಿಸುವುದು (ಬಹುಮಾನ, ದಂಡನೆ ಮುಂತಾದ ಪ್ರೋತ್ಸಾಹಕರಣೆಯನ್ನು ವ್ಯವಸ್ಥೆ ಮಾಡುವುದು) ವ್ಯಕ್ತಿಗಳನ್ನು ಅಭಿಪ್ರೇರಿತಗೊಳಿಸುವ ಶಕ್ತಿಯುತ ಮಾರ್ಗವಾಗಿದೆ. ಅಭಿಪ್ರೇರಣೆಯ ಮೇಲೆ ವ್ಯಕ್ತಿಯ ಅಭಿರುಚಿಗಳು, ಮನೋಭಾವಗಳು, ಆಕಾಂಕ್ಷೆಗಳು ಮತ್ತು ಮೌಲ್ಯಗಳು ಬೀರುವಂತಹ ಪ್ರಭಾವವನ್ನು ಈ ಮೊದಲೇ ಸೂಚ್ಯವಾಗಿ ವಿವರಿಸಲಾಗಿದೆ. ಸಾಮಾಜಿಕ ಸ್ಥಾನಮಾನ, ಸಾಮಾಜಿಕ ಆರ್ಥಿಕ ಮಟ್ಟ ಮುಂತಾದ ಅನೇಕ ಸಾಮಾಜಿಕ ಅಂಶಗಳೂ ಸಹ ವ್ಯಕ್ತಿಗಳ ಅಭಿಪ್ರೇರಣಾ ಮಟ್ಟವನ್ನು ಪ್ರಭಾವಗೊಳಿಸುತ್ತವೆ.

ಅಭಿಪ್ರೇರಣೆಯ ಮನೋವಿಶ್ಲೇಷಣಾತ್ಮಕ ದೃಷ್ಟಿಕೋನ :

ಮನೋವಿಜ್ಞಾನದಲ್ಲಿ ಮನೋವಿಶ್ಲೇಷಣೆ ಎನ್ನುವ ಪದವನ್ನು ಮೂರು ಅರ್ಥಗಳಲ್ಲಿ ಬಳಸುತ್ತಾರೆ. ಇದು ಸಿಗ್ಮಂಡ್ ಫ್ರಾಯ್ಡ್‌ನಿಂದ ಪ್ರತಿಪಾದಿತವಾಗಿದೆ. ವಿಚಾರ ಪಂಥವನ್ನು ಸೂಚಿಸುತ್ತದೆ. ಈ ವಿಚಾರ ಪಂಥಕ್ಕೆ ಅಭಿಜಾತ್ಯ ಮನೋವಿಶ್ಲೇಷಣಾ ಪಂಥವೆಂದೂ ಹೇಳುತ್ತಾರೆ. ಎರಡನೆಯದಾಗಿ ಮನೋವಿಶ್ಲೇಷಣೆ ಎನ್ನುವ ಪದ ನಂತರದ ಫ್ರಾಯ್ಡಿಯನ್ನರ (ಯೂಂಗ್ ಮತ್ತು ಆ್ಯಡ್ಲೇರನ), ಮತ್ತು ನವ ಫ್ರಾಯ್ಡಿಯನ್ನರ (ಕಾರೆನ್ ಹಾರ್ನಿ, ಒಟ್ಟೊ ರ್‍ಯಾಂಕ್ ಕಾರ್ಲ್ ಅಬ್ರಹಾಂ, ಸಲ್ಲಿವಾನ್ ಮತ್ತು ಎರಿಕ್ ಫ್ರಾಮ್) ದೃಷ್ಟಿಕೋನಗಳನ್ನು ಸೂಚಿಸುತ್ತದೆ. ಮೂರನೆಯದಾಗಿ ಈ ಪದ ಅಪ್ರಜ್ಞೆ ಮನಸ್ಸಿನ ಗತಿಶೀಲತೆಯನ್ನು ಅರ್ಥ ಮಾಡಿಕೊಳ್ಳಲು ಸಿಗ್ಮಂಡ್ ಫ್ರಾಯ್ಡನು ರೂಪಿಸಿದ ತಂತ್ರವನ್ನೂ ಸೂಚಿಸುತ್ತದೆ.

ವಿಯೆನ್ನಾ ನಗರದಲ್ಲಿ ವೈದ್ಯನಾಗಿ ಕಾರ್ಯ ನಿರ್ವಹಿಸುತ್ತಿದ್ದ ಸಿಗ್ಮಂಡ್ ಫ್ರಾಯ್ಡ್ ತನ್ನ ದೀರ್ಘಕಾಲಿಕ ಅನುಭವದ ಆಧಾರದ ಮೇಲೆ 1885ರಲ್ಲಿ ತನ್ನ ಮನೋವಿಶ್ಲೇಷಣಾ ಸಿದ್ಧಾಂತವನ್ನು ರೂಪಿಸಿದನು. ಮನೋವಿಕಲ್ಪಗಳನ್ನು ಗುಣಪಡಿಸುವುದರಲ್ಲಿ ಆಗಿನ ಕಾಲದಲ್ಲಿ ಪ್ರಸಿದ್ಧಿ ಪಡೆದಿದ್ದ ಷಾರ್ಕೋವಿನಿಂದ ಫ್ರಾಯ್ಡ್ ಬಹಳಷ್ಟು ಪ್ರಭಾವಿತನಾಗಿದ್ದ. ಫ್ರಾಯ್ಡ್ ತಾನು ಪಡೆದ ಹೊಸ ಹೊಸ ಅನುಭವಗಳ ಬೆಳಕಿನಲ್ಲಿ ತನ್ನ ಸಿದ್ಧಾಂತವನ್ನು ಅನೇಕ ಸಾರಿ ಪರಿಷ್ಕಾರಗೊಳಿಸಿದನು.

ಯೂಂಗ್ ಮತ್ತು ಆ್ಯಡ್ಲೇರ್ ಪ್ರಾರಂಭದಲ್ಲಿ ಫ್ರಾಯ್ಡ್‌ನ ಶಿಷ್ಯರಾಗಿದ್ದರು. ಆದರೆ ಕಾಲಕ್ರಮೇಣ ಅವರು ಫ್ರಾಯ್ಡ್‌ನು ಪ್ರತಿಪಾದಿಸುವ ಕೆಲವು ಅಂಶಗಳನ್ನು

ಉದಾಹರಣೆಗೆ ನರಸ್ವಾಪೀ ಮಾನಸಿಕ ತೊಂದರೆಗಳನ್ನು ವಿವರಿಸುವುದರಲ್ಲಿ ಫ್ರಾಯ್ಡ್ ಲೈಂಗಿಕತೆಗೆ ಕೊಡುತ್ತಿದ್ದ ಪ್ರಾಮುಖ್ಯ, ಕನಸುಗಳನ್ನು ವ್ಯಾಖ್ಯಾನಿಸುವ ರೀತಿ– ಒಪ್ಪಿಕೊಳ್ಳದೇ ಹೋದುದರಿಂದ ಫ್ರಾಯ್ಡ್‌ನಿಂದ ಬೇರ್ಪಟ್ಟು ತಮ್ಮದೇ ಆದ ಸಿದ್ಧಾಂತಗಳನ್ನು ರೂಪಿಸಿಕೊಂಡರು. ಯೂಂಗ್ ತನ್ನ ಸಿದ್ಧಾಂತವನ್ನು ವಿಶ್ಲೇಷಣಾತ್ಮಕ ಮನೋವಿಜ್ಞಾನವೆಂದೂ, ಆ್ಯಡ್ಲೇರ್ ತನ್ನ ಸಿದ್ಧಾಂತವನ್ನು ವ್ಯಕ್ತಿ ಮನೋವಿಜ್ಞಾನವೆಂದೂ ಹೆಸರಿಸಿಕೊಂಡರು.

ಅನಂತರದ ಹಂತದಲ್ಲಿ ಕೆಲವು ಮನೋವಿಜ್ಞಾನಿಗಳ ಒಂದು ಸಮೂಹವು ಸ್ಥೂಲವಾಗಿ ಫ್ರಾಯ್ಡ್‌ನು ಪ್ರತಿಪಾದಿಸಿದ ಸಿದ್ಧಾಂತವನ್ನು ಒಪ್ಪಿಕೊಂಡರೂ, ಆ ಸಮೂಹಕ್ಕೆ ಸೇರಿದ ಮನೋವಿಜ್ಞಾನಿಗಳು ಮಾನವ ಅಭಿಪ್ರೇರಣೆಯ ಗತಿಶೀಲವನ್ನು ವಿವರಿಸುವಲ್ಲಿ ಬೇರೆ ಬೇರೆ ದೃಷ್ಟಿಕೋನವನ್ನು ತಳೆದರು. ಇವರನ್ನು ಸಮಗ್ರವಾಗಿ ನವ - ಫ್ರಾಯ್ಡ್‌ಯನ್ನರು ಎಂದು ಕರೆಯಲಾಗಿದೆ.

ಈ ಎಲ್ಲಾ ಮನೋವಿಶ್ಲೇಷಣ ವಾದಿಗಳು ಮಾನವ ಅಭಿಪ್ರೇರಣೆಗೆ ನೀಡಿರುವ ವಿವರಣೆಯನ್ನು ಈ ಮುಂದೆ ಸಂಕ್ಷಿಪ್ತವಾಗಿ ಕೊಡಲಾಗಿದೆ.

ಸಿಗ್ಮಂಡ್ ಫ್ರಾಯ್ಡ್ :

ಫ್ರಾಯ್ಡ್ ಜೀವವಿಕಾಸದ ಫಲಿತವಾಗಿ ಉಂಟಾದ ಹುಟ್ಟುಗುಣಗಳು ಮಾನವ ಅಭಿಪ್ರೇರಣೆಗೆ ಮೂಲಸ್ರೋತಗಳೆಂದು ಪರಿಗಣಿಸುತ್ತಾನೆ. ಅವನು ಈ ರೀತಿಯ ಹುಟ್ಟುಗುಣಗಳ ನಿರ್ದಿಷ್ಟ ಪಟ್ಟಿ (ಯಾದಿ) ಯನ್ನು ಕೊಡದಿದ್ದರು ಸಹ, ಅವುಗಳನ್ನು ಎರಡು ಗುಂಪುಗಳಾಗಿ ವರ್ಗೀಕರಿಸಬಹುದು ಎಂದು ಹೇಳುತ್ತಾನೆ. ಒಂದು ಗುಂಪಿನ ಜನ್ಮಜಾತ ಗುಣಗಳನ್ನು 'ಈರೋಸ್' ಎಂದು ಕರೆದಿದ್ದಾನೆ. ಇದು ರಚನಾತ್ಮಕ ಸ್ವರೂಪವುಳ್ಳದ್ದಾಗಿದೆ. ಇದು ಜೀವನ ರೂಪನೆಗೆ ಅವಶ್ಯಕವೆನಿಸುವ ಎಲ್ಲಾ ಬಗೆಯ ಚಟುವಟಿಕೆಗಳನ್ನೂ, ಸಂವೇದನೆಗಳನ್ನೂ ನಿರ್ವಹಿಸುತ್ತದೆ. ಇದು ಜೀವಿಸಿರುವುದಕ್ಕೆ ಪ್ರಚೋದನೆಯನ್ನು ನೀಡುತ್ತದೆ. ಇದು ಪ್ರೀತಿ, ವಾತ್ಸಲ್ಯ ಆತ್ಮಪ್ರತ್ಯಯದ ವಿಕಾಸ ಮತ್ತು ಸಂರಕ್ಷಣಾ ಚಟುವಟಿಕೆಗಳ ಮೂಲಕ ವ್ಯಕ್ತಗೊಳ್ಳುತ್ತದೆ. ಎರಡನೇ ಗುಂಪಿನ ಹುಟ್ಟುಗುಣಗಳನ್ನು ಫ್ರಾಯ್ಡ್ 'ಥೆನ್‌ಟೋಸ್' ಎಂದು ಕರೆದಿದ್ದಾನೆ. ಇದು ವಿನಾಶಕಾರಿ ಸ್ವಭಾವವುಳ್ಳದ್ದು ಆಗಿದೆ ಎಂದು ಕರೆದಿದ್ದಾನೆ. ಇದು ಮೃತ್ಯು ಪ್ರೇರಣೆ(ಲಾಲಸೆ)ಯಾಗಿದೆ. ಇದು ಆಕ್ರಮಣ, ಬೇರೆಯವರನ್ನು ಕೊಲ್ಲುವುದು ಅಥವಾ ಆತ್ಮಹತ್ಯ ಮಾಡಿಕೊಳ್ಳುವುದು ಮುಂತಾದ ವಿನಾಶಕಾರಿ ಚಟುವಟಿಕೆಗಳ ಮೂಲಕ ವ್ಯಕ್ತವಾಗುತ್ತದೆ. ಈ ಎರಡು ರೀತಿಯ ಹುಟ್ಟುಗುಣಗಳ ಮೂಲಕ ವ್ಯಕ್ತವಾಗುವ ಶಕ್ತಿಯನ್ನು ಫ್ರಾಯ್ಡ್ ಲಿಬಿಡೋ ಅಥವಾ ಮಾನಸಿಕ ಶಕ್ತಿ ಎಂದು ಕರೆದಿದ್ದಾನೆ. ಫ್ರಾಯ್ಡ್‌ನ ಪ್ರಕಾರ ಜೀವನದ ಎಲ್ಲಾ ಶಾರೀರಿಕ ಚಟುವಟಿಕೆಗಳನ್ನು ನಡೆಯಿಸುವ ಶಕ್ತಿಯೇ ಎಲ್ಲಾ ಬಗೆಯ ಮಾನಸಿಕ ಚಟುವಟಿಕೆಗಳನ್ನೂ (ಮನೋ

ವ್ಯಾಪಾರ) ನಡೆಯಿಸುತ್ತದೆ. ಲಿಬಿಡೋ ಈರೋಡ್ (ಜೀಜಿಲವಿಕ್ಷೆಯಾಗಿ, ಜೀವನ ಲಾಲಸೆಯಾಗಿ) ವ್ಯಕ್ತವಾದಾಗ ವ್ಯಕ್ತಿ ರಚನಾತ್ಮಕ ಚಟುವಟಿಕೆಗಳಲ್ಲಿ ತೊಡಗುತ್ತಾನೆ.

ಹುಟ್ಟುಗುಣಗಳಿಂದ ಉಂಟಾಗುವ ಲಿಬಿಡೋ ಶಕ್ತಿಯು ಅವಶ್ಯಕತೆಗಳನ್ನು ತೃಪ್ತಿಗೊಳಿಸುವುದೇ ವ್ಯಕ್ತಿತ್ವದ ಗತಿಶೀಲತೆಯಾಗಿ ಪರಿಸರ ಲಿಬಿಡೋವಿನ ಅವಶ್ಯಕತೆಗಳನ್ನು ತೃಪ್ತಿಗೊಳಿಸಲು ಸಮರ್ಥವಾಗಿದೆ. ಅದೇ ಸಮಯದಲ್ಲಿ ಪರಿಸರದಲ್ಲಿ ಅನೇಕ ಅಪಾಯದ ಸಂಭಾವನೆಗಳೂ ಮಿತಿಗಳೂ, ಅಸುರಕ್ಷತೆಯೂ ಮತ್ತು ಸಾಮಾಜಿಕ ಅಡೆತಡೆಗಳು ಇರುತ್ತವೆ. ಲಿಬಿಡೋವಿನ ಅವಶ್ಯಕತೆಗಳು ತೃಪ್ತಿಗೊಳಿಸಲ್ಪಟ್ಟಾಗ ಸುಖಕರ ಸಂವೇದನೆಗಳಿಂದ ಕೂಡಿದ ಕೆಲವು ಮಾನಸಿಕ ಬದಲಾವಣೆಗಳು ಉಂಟಾಗುತ್ತವೆ. ಇವುಗಳೇ ಸಂತೋಷ, ಉತ್ಸಾಹ ಮತ್ತು ಪ್ರೀತಿಯ ಸಂವೇಗಗಳಾಗುತ್ತವೆ. ಲಿಬಿಡೋವಿನ ಅಭಿವ್ಯಕ್ತಿ ತಡೆಯಲ್ಪಟ್ಟ, ನಿರಾಕರಿಸಲ್ಪಟ್ಟಾಗ ದುಃಖಕರ ಸಂವೇದನೆಗಳಿಂದ ಕೂಡಿದ ಕೆಲವು ಮಾನಸಿಕ ಬದಲಾವಣೆಗಳು ಉಂಟಾಗುತ್ತವೆ. ಇವುಗಳನ್ನೇ ಭಯ, ಕೋಪ, ಅಸೂಯೆ, ಮತ್ತು ಆತಂಕ ಮುಂತಾದ ಅಸುಖಕರ ಸಂವೇಗಗಳೆಂದೂ ಹೇಳುತ್ತಾರೆ. ಹೀಗೆ ಸಂವೇಗಗಳು ಲಿಬಿಡೋ ಪ್ರವಹಿಸುವ ದಿಕ್ಕನ್ನು ಅವಲಂಬಿಸಿರುತ್ತವೆ.

ಲಿಬಿಡೋ ಮತ್ತು ಬಾಹ್ಯ ಪರಿಸರದ ಸತತವಾದ ಘರ್ಷಣೆಯ ಪರಿಣಾಮವಾಗಿ ವ್ಯಕ್ತಿತ್ವ ವಿಕಾಸವಾಗತೊಡಗುತ್ತದೆ. ವ್ಯಕ್ತಿತ್ವದಲ್ಲಿನ ಜೈವಿಕವಾದ ಹಾಗೂ ಎಲ್ಲಾ ಬಗೆಯ ಜನ್ಮಜಾತವಾದ ಹುಟ್ಟುಗುಣಗಳನ್ನು ಒಳಗೊಂಡಿರುವ ಭಾಗಕ್ಕೆ 'ಇದ್' ಎಂದು ಹೆಸರು. ಇದರ ಸ್ವಭಾವ ಯಾವಾಗಲೂ ನೇರಮಾರ್ಗದಿಂದ ಸುಖವನ್ನು ಪಡೆಯುವುದಾಗಿದೆ. ಇದು ಸುಖಾಪೇಕ್ಷೆಯ ನಿಯಮದ ಮೇಲೆ ಕೆಲಸ ಮಾಡುತ್ತದೆ. ಆದರೆ ಹೊರಗಣ ಪ್ರಪಂಚದ ಅಡೆತಡೆಗಳು, ನಿರ್ಬಂಧಗಳು ಇದ್‌ನ ಅಪೇಕ್ಷೆಗಳಿಗೆ ಅಡ್ಡಿಬರುವುದರಿಂದ ವ್ಯಕ್ತಿತ್ವದಲ್ಲಿ ಮತ್ತೊಂದು ಪದರ ತಲೆದೋರುತ್ತದೆ. ಇದನ್ನು ಫ್ರಾಯ್ಡ್ ಅಹಂ (ನಾನು ಎನ್ನುವ ತತ್ವ) ಎಂದು ಕರೆದಿದ್ದಾನೆ. ಅಹಂ ವಾಸ್ತವಿಕತೆಯ ನಿಯಮದ ಮೇಲೆ ಕೆಲಸ ಮಾಡುತ್ತದೆ. ಅಂದರೆ ಇದ್ ತನ್ನ ಅಪೇಕ್ಷೆಗಳನ್ನು ತೃಪ್ತಿಗೊಳಿಸಿಕೊಳ್ಳಲು ಬಯಸುವುದಕ್ಕೆ ಮೊದಲು ಅಹಂ ಹೊರಗಣ ಪರಿಸರದ ವಾಸ್ತವಿಕ ಪರಿಸ್ಥಿತಿಗಳನ್ನು ಗಣನೆಗೆ ತಂದುಕೊಳ್ಳುತ್ತದೆ. ಹೀಗೆ ಅಹಂ ಇದ್‌ಗೆ ಒಂದು ಹತೋಟಿಯಾಗುತ್ತದೆ. ಅಹಂ ಹೊರಗಿನ ಬಹುಮಾನ, ದಂಡನೆಗಳ ದೃಷ್ಟಿಯಿಂದ (ಸಮಾಜದ 'ಬೇಕು–ಬೇಡ'ಗಳ ದೃಷ್ಟಿಯಿಂದ) ಕೆಲಸ ಮಾಡುತ್ತದೆ. ಒಳಿತು–ಕೆಡುಕಿನ ಸರಿಯಾದ ಪರಿಕಲ್ಪನೆ ಅಹಂಗೆ ಇನ್ನೂ ಬಂದಿರುವುದಿಲ್ಲ. ಕ್ರಮೇಣ ಅಹಂ ವಿಕಾಸವಾಗತೊಡಗಿದಂತೆ, ಅಹಂ ಹೊರಪ್ರಪಂಚದಲ್ಲಿರುವ ಬಾಹ್ಯ ಪ್ರಾಧಿಕಾರಗಳನ್ನು (ಪೋಷಕರು, ಅಧ್ಯಾಪಕರು ಮತ್ತು ಇತರ ಅಧಿಕಾರವಿರುವವರು) ಅಂತರೀಕರಣಗೊಳಿಸಿಕೊಳ್ಳುತ್ತದೆ. ಅಂದರೆ ವ್ಯಕ್ತಿ ತನ್ನಲ್ಲಿಯೇ ಒಂದು ವಿವೇಕವನ್ನು ಬೆಳೆಸಿಕೊಳ್ಳುತ್ತಾನೆ. ಹೀಗಾದಾಗ ವ್ಯಕ್ತಿತ್ವದ ಮತ್ತೊಂದು ಪದರು ಕಾಣಿಸಿಕೊಳ್ಳುತ್ತದೆ. ಇದನ್ನು ಫ್ರಾಯ್ಡ್ ಸೂಪರ್–ಈಗೋ ಅಥವಾ ವಿವೇಕವೆಂದು ಕರೆದಿದ್ದಾನೆ. ಇದು ಮನುಷ್ಯನ ಅಂತರೀಕರಣಗೊಂಡ

ನೈತಿಕ ಪ್ರಜ್ಞೆಯಾಗಿರುತ್ತದೆ. ಇದು ವಿಧ್ಯಾತ್ಮಕ ನಿಯಮದ ಮೇಲೆ ("ನೀನು ಇದನ್ನು ಮಾಡಬೇಕು ಅಥವಾ ಮಾಡಬೇಕೂಡದು" ಇತ್ಯಾದಿ) ಕೆಲಸ ಮಾಡುತ್ತದೆ. ಅಹಂ ನಂತೆ ವಿವೇಕ ಯಾವ ಸಂದರ್ಭದಲ್ಲಿಯೂ ಹೊಂದಾಣಿಕೆ ಮಾಡಿಕೊಳ್ಳುವುದಿಲ್ಲ. ನೈತಿಕ ಪ್ರಜ್ಞೆ ಯಾವ ವಿವೇಕ ಇದ್ ಮತ್ತು ಅಹಂ–ಎರಡನ್ನೂ ಹತೋಟಿಯಲ್ಲಿಡಲು ಯತ್ನಿಸುತ್ತದೆ. ಆದರೆ ವ್ಯಕ್ತಿತ್ವದ ಸಮತೋಲನದ ತತ್ವವಾಗಿ ಕೆಲಸ ಮಾಡುವುದೇ ಅಹಂ. ಇದು ಇದ್‌ನ ಜೈವಿಕ ಬಯಕೆಗಳನ್ನು ತೃಪ್ತಿಪಡಿಸಬೇಕು ಮತ್ತು ಅದೇ ರೀತಿ ವಿವೇಕದ ನೈತಿಕ ವರ್ತನೆಯ ಆಜ್ಞೆಗಳಿಗೂ ತಲೆಬಾಗಿ, ಈ ಎರಡರ ನಡುವೆ ಸಾಮರಸ್ಯ ಸ್ಥಾಪಿಸುವ ಕೆಲಸ ಮಾಡಬೇಕಾಗುತ್ತದೆ.

ವ್ಯಕ್ತಿತ್ವದಲ್ಲಿ ಮೂರು ಸ್ತರಗಳನ್ನು ಗುರ್ತಿಸಿದಂತೆ ಫ್ರಾಯ್ಡ್ ಮನೋಲೋಕದಲ್ಲೂ (ಇದನ್ನು 'ಸೈಕಿ' ಎಂದು ಕರೆದಿದ್ದಾನೆ) ಮೂರು ಪದರಗಳನ್ನು ಗುರ್ತಿಸಿದ್ದಾನೆ. ಪ್ರಸ್ತುತ ನಡೆಯುತ್ತಿರುವ ಘಟನೆಗಳ ಅರಿವನ್ನು ಹೊಂದಿರುವ ಮತ್ತು ಸುಲಭವಾಗಿ ನೆನಪು ಮಾಡಿಕೊಳ್ಳಲು ಸಾಧ್ಯವಾಗುವ ಅನುಭವಗಳನ್ನು ಹೊಂದಿರುವ ಮನಸ್ಸಿನ ಅತ್ಯಲ್ಪ ಭಾಗಕ್ಕೆ ಚೇತನ ಮನಸ್ಸು ಎಂದು ಹೆಸರು. ಇದರ ಕೆಳಭಾಗದಲ್ಲಿರುವ ವಿಶಾಲವಾಗಿರುವ, ಅಗಾಧವಾಗಿರುವ ಮನಸ್ಸಿಗೆ ಅಪಚೇತನ ಮನಸ್ಸು ಎಂದು ಹೆಸರು. ಇದರಲ್ಲಿ ಮಾನವನ ಜನ್ಮಜಾತ ಪ್ರವೃತ್ತಿಗಳು, ವಿಕಾಸದ ಪರಿಣಾಮವಾಗಿ ಬಂದಿರುವ ಮೃಗೀಯ ಸ್ವಭಾವ, ಹುಟ್ಟುಗುಣಗಳು (ಪರಾಮರ್ಶಿತ ಪ್ರತಿಕ್ರಿಯೆ ಅಥವಾ ರಿಫ್ಲೆಕ್ಸ್‌ಗಳು), ಮರೆತುಹೋದ ನೆನಪುಗಳು, ಅತೃಪ್ತ ಕಾಮನೆಗಳು ಇವೆಲ್ಲಾ ಅಡಕವಾಗಿವೆ. ಫ್ರಾಯ್ಡ್ ಅವಚೇತನ ಮನಸ್ಸನ್ನು ಸಮುದ್ರದಲ್ಲಿ ತನ್ನ ಬಹುಭಾಗವನ್ನು ನೀರಿನಲ್ಲಿ ಮುಳುಗಿಸಿ, ಮೇಲ್ಭಾಗದಲ್ಲಿ ಸ್ವಲ್ಪಭಾಗ ಮಾತ್ರ ಗೋಚರಿಸುವಂತೆ ಮಾಡುವ ಹಿಮ ಖಂಡದ ಮುಳುಗಿರುವ, ಅಗೋಚರ ಭಾಗಕ್ಕೆ ಹೋಲಿಸಿದ್ದಾನೆ. ಅವಚೇತನದಲ್ಲಿರುವ ಸಾಮಗ್ರಿ ಚೇತನ ಮನಸ್ಸಿಗೆ ಸುಲಭವಾಗಿ ದೊರಕುವುದಿಲ್ಲ. ಚೇತನ ಮನಸ್ಸಿಗೂ ಅವಚೇತನ ಮನಸ್ಸಿಗೂ ನಡುವೆ ಅರ್ಧಚೇತನ (ಪೂರ್ವಚೇತನ) ಮನಸ್ಸೆಂಬ ಸ್ವಲ್ಪ ಅಂಶವಿದೆ. ಈ ಭಾಗದಲ್ಲಿ ಫ್ರಾಯ್ಡ್ 'ಸೆನ್ಸಾರ್' ಎಂದು ಕರೆದಿರುವ ಒಂದು ನಿಯಂತ್ರಣವಿದೆ. ಇದು ಅವಚೇತನದ ಪ್ರೇರಣೆಗಳು ಸುಲಭವಾಗಿ ಚೇತನ ಮನಸ್ಸಿಗೆ ಲಗ್ಗೆ ಹಾಕುವುದನ್ನು ನಿಯಂತ್ರಿಸುವ ಕಾರ್ಯ ಕೈಗೊಳ್ಳುತ್ತದೆ.

ಇದ್, ಅಹಂ ಮತ್ತು ವಿವೇಕ ಇವುಗಳ ನಡುವಣ ಘರ್ಷಣೆಗಳ ಪರಿಣಾಮವಾಗಿ ವ್ಯಕ್ತಿತ್ವದ ವಿಕಾಸ, ಭಗ್ನ ಮನೋರಥಗಳು, ದ್ವಂದ್ವಗಳು ಉಂಟಾಗುತ್ತವೆ. ಇದ್ ತನ್ನ ಕಾಮನೆಗಳನ್ನು ನೇರವಾದ ಮಾರ್ಗದಲ್ಲಿ ತೃಪ್ತಿಪಡಿಸಲು ಪ್ರಯತ್ನಿಸಿದಲ್ಲಿ, ಹೊರಗಿನ ವಾಸ್ತವಿಕ ಪರಿಸ್ಥಿತಿಗಳೊಡನೆ ಘರ್ಷಣೆಯುಂಟಾಗಿ ಇದ್‌ನ ಪ್ರಯತ್ನ ನಿಷ್ಫಲಗೊಳ್ಳುತ್ತದೆ. ಇದರಿಂದಾಗಿ ಮಾನಸಿಕ ವ್ಯವಸ್ಥೆಯಲ್ಲಿ ತುಡಿತ ಉಂಟಾಗುತದೆ. ಇದರ ದುಃಖದಾಯಕ ಪರಿಣಾಮ ಭಾಗಶಃ ಚೇತನ ಅವಸ್ಥೆಯಲ್ಲಿರುವ ಅಹಂನ ಮೇಲೆ ಬಿದ್ದಾಗ ಅದಕ್ಕೆ ಆಘಾತ ಉಂಟಾಗುತ್ತದೆ. ಆಗ ಅದು ತನ್ನನ್ನು ಈ ಆಘಾತದಿಂದ

ರಕ್ಷಿಸಿಕೊಳ್ಳಲು ಪ್ರಯತ್ನಿಸುತ್ತದೆ. ಆದಕ್ಕಾಗಿ ಅಹಂ ಇದ್‌ನ ಅಪೇಕ್ಷೆಗಳನ್ನು ಪರೋಕ್ಷ ವಾಗಿಯಾದರೂ ಸ್ವಲ್ಪಮಟ್ಟಿಗಾದರೂ ತೋರಿಕೆಗಾದರೂ ಹೊರ ಪ್ರಪಂಚದಲ್ಲಿನ (ಸಮಾಜದಲ್ಲಿನ) ನಿಯಮಗಳೊಂದಿಗೆ ಘರ್ಷಣೆ ಉಂಟಾಗುವ ರೀತಿಯಲ್ಲಿ ತೃಪ್ತಿಗೊಳ್ಳುವಂತೆ ಮೊದಲು ಕೆಲವು ಮಾನಸಿಕ ತಂತ್ರಗಳನ್ನು ರೂಪಿಸಿಕೊಳ್ಳುತ್ತದೆ. ಅಹಂನ ಈ ರಕ್ಷಣೆಗಳಿಗೆ ಮನೋತಂತ್ರಗಳು ಅಥವಾ ಅಹಂ ರಕ್ಷಣೆ ತಂತ್ರಗಳು ಎಂದು ಹೆಸರು. ಫ್ರಾಯ್ಡ್ ಇಂತಹ ಅನೇಕ ತಂತ್ರಗಳನ್ನು ಗುರ್ತಿಸಿ ವಿವರಿಸಿದ್ದಾನೆ. ಹಗಲುಗನಸು ಕಾಣುವಿಕೆ, ಕನಸು, ಆಕ್ರಮಣ, ಪ್ರತಿಕ್ರಮಣ (ಹಿಮ್ಮರಳುವಿಕೆ), ಪ್ರಕ್ಷೇಪಣೆ, ದಮನ, ಅವರೋಧ, ಕ್ಷತಿಪೂರ್ತಿ, ಪ್ರಾಯಶ್ಚಿತ್ತ, ಸ್ಥಾನಾಂತರಣ ಇವು ರಕ್ಷಣಾತಂತ್ರದ ಕೆಲವು ಉದಾಹರಣೆಗಳಾಗಿವೆ.

ಬಹುತೇಕ ಲೈಂಗಿಕ ಸ್ವರೂಪದ್ದಾಗಿರುವ ಲಿಬಿಡೋವಿನ ತೃಪ್ತಿ ಶರೀರದಲ್ಲಿರುವ ವಿವಿಧ ಲೈಂಗಿಕ ಕ್ಷೇತ್ರಗಳ ಮೂಲಕ ವಿಕಾಸದ ವಿವಿಧ ಹಂತಗಳಲ್ಲಿ ಆಗುತ್ತದೆ. ಈ ಮನೋ-ಲೈಂಗಿಕ ವಿಕಾಸದಲ್ಲಿ ಫ್ರಾಯ್ಡ್ ಅನೇಕ ಹಂತಗಳನ್ನು ಗುರ್ತಿಸಿದ್ದಾನೆ. ಹುಟ್ಟಿನಿಂದ ಒಂದು ವರ್ಷದವರೆಗೆ ಮಗು ಚೀಪುವುದು, ಹೀರುವುದು ಮುಂತಾದ ಕ್ರಿಯೆಗಳ ಮೂಲಕ ಬಾಯಿಯ ಮೂಲಕ ಲಿಬಿಡೋವಿನ ತೃಪ್ತಿಯಾಗುತ್ತದೆ. ಇದಕ್ಕೆ ಮುಖಹಂತ ಎಂದು ಹೆಸರು. ಒಂದು ವರ್ಷದಿಂದ 2 ಅಥವಾ 3 ವರ್ಷದವರೆಗೆ ಮಗು ಮೂತ್ರ ವಿಸರ್ಜನೆ, ಮಲವಿಸರ್ಜನೆಯ ಕ್ರಿಯೆಯಲ್ಲಿ ಒಂದು ರೀತಿಯ ಆನಂದವನ್ನು ಅನುಭವಿಸುತ್ತದೆ. ಇದಕ್ಕೆ ಗುದಹಂತ ಎಂದು ಹೆಸರು. ಮೂರನೇ ವರ್ಷದ ನಂತರ 5 ವರ್ಷದವರೆಗೆ ಮಗು ತನ್ನ ಜನನೇಂದ್ರಿಯಗಳನ್ನೇ ಕ್ರೀಡಿಸುವುದರ ಮೂಲಕ ಆನಂದವನ್ನು ಅನುಭವಿಸುತ್ತದೆ. ಇದಕ್ಕೆ ಲಿಂಗಹಂತ (ಲಿಂಗದ ಆಂಗ್ಲ ಪರ್ಯಾಯ ಪದ 'ಫ್ಯಾಲಸ್' ಸ್ತ್ರೀ-ಪುರುಷ ಜನನೇಂದ್ರಿಯಗಳನ್ನು ಸೂಚಿಸುತ್ತದೆ). ಈ ಹಂತದಲ್ಲಿ ಹುಡುಗಿ, ಮಾನಸಿಕವಾಗಿ, ತಂದೆಯ ಕಡೆಗೆ ಆಕರ್ಷಿತಳಾಗುತ್ತಾಳೆ ಮತ್ತು ಹುಡುಗ, ಮಾನಸಿಕವಾಗಿ ತಾಯಿಯ ಕಡೆಗೆ ಆಕರ್ಷಿತನಾಗುತ್ತಾನೆ. ಪರಿಣಾಮವಾಗಿ ಹುಡುಗಿ ತಾಯಿಯ ಬಗ್ಗೆಯೂ, ಹುಡುಗ ತಂದೆಯ ಬಗ್ಗೆಯೂ ದ್ವೇಷಭಾವನೆಯನ್ನು ತಾಳಬಹುದು. ಫ್ರಾಯ್ಡ್ ಈ ಹುಡುಗ ಹುಡುಗಿಯರಲ್ಲಿನ ಈ ಮನೋಗ್ರಂಥಿಗಳನ್ನು ಕ್ರಮವಾಗಿ ಈಡಿಪಸ್ ಮನೋಗ್ರಂಥಿ ಮತ್ತು ಎಲೆಕ್ಟ್ರಾ ಮನೋಗ್ರಂಥಿ ಎಂದು ಕರೆದಿದ್ದಾನೆ. ಈ ಮನೋಗ್ರಂಥಿಗಳು ಅವಚೇತನ ಮಟ್ಟದಲ್ಲಿ ಉಂಟಾಗುವುದರಿಂದ ವ್ಯಕ್ತಿಗೆ ಇದರ ಅರಿವು ಇರಲು ಸಾಧ್ಯವಾಗುವುದಿಲ್ಲ. ಈ ಮನೋಗ್ರಂಥಿಗಳನ್ನು ಸಕಾಲದಲ್ಲಿ ಸೂಕ್ತರೀತಿಯಲ್ಲಿ ಪರಿಹರಿಸದಿದ್ದಲ್ಲಿ ಅನೇಕ ರೀತಿಯ ವರ್ತನೆ ಸಮಸ್ಯೆಗಳು ಉಂಟಾಗುವ ಸಾಧ್ಯತೆಗಳಿವೆ. ಈ ಹಂತದ ನಂತರ 5 ರಿಂದ 12 ವರ್ಷದವರೆಗೆ ಲಿಬಿಡೋ ಸುಪ್ತಾವಸ್ಥೆಯಲ್ಲಿರುತ್ತದೆ. ಯಾವುದೇ ರೀತಿಯ ಬಾಹ್ಯವರ್ತನೆಯ ಮೂಲಕ ಇದು ವ್ಯಕ್ತವಾಗುವುದಿಲ್ಲ. ಈ ಹಂತಕ್ಕೆ ಸುಪ್ತತೆಯ ಹಂತ ಎಂದು ಹೆಸರು. ಈ ಹಂತದಲ್ಲಿ ಹುಡುಗ ಹುಡುಗಿಯರು ಸಾಮಾನ್ಯವಾಗಿ ಲೈಂಗಿಕ ವಿಷಯಗಳಲ್ಲಿ ಆಸಕ್ತಿ

ಯಿಲ್ಲವರಾಗಿರುತ್ತಾರೆ. 12ನೇ ವರ್ಷದ ನಂತರ ಲಿಬಿಡೋ ಪುನಃ ಜನನೇಂದ್ರಿಯಗಳ ಮೂಲಕ ತನ್ನ ಕಾಮನೆಗಳ ತೃಪ್ತಿ ಪಡೆಯತೊಡಗುತ್ತದೆ. ಈ ಅಂತಿಮ ಹಂತಕ್ಕೆ ಲೈಂಗಿಕ ಹಂತ ಎಂದು ಹೆಸರು. ಈ ಹಂತದಲ್ಲಿ ವ್ಯಕ್ತಿ ಪ್ರತಿಲಿಂಗಿಯೆಡೆಗೆ (ಹುಡುಗ ಹುಡುಗಿಯ ಕಡೆಗೆ, ಹುಡುಗಿ ಹುಡುಗನ ಕಡೆ) ಆಕರ್ಷಿತರಾಗುತ್ತಾರೆ. ಸಹಜ ರೀತಿಯ ಸ್ತ್ರೀ-ಪುರುಷ ಸಮಾಗಮದ ಮೂಲಕ ಲೈಂಗಿಕ ತೃಪ್ತಿ ಉಂಟಾಗುತ್ತದೆ. ಈ ರೀತಿಯ ಸಹಜ ಲೈಂಗಿಕ ಅಭಿವ್ಯಕ್ತಿಯನ್ನು ವ್ಯಕ್ತಿ ಕಂಡುಕೊಳ್ಳುತ್ತಾನೆ. ಲೈಂಗಿಕ ಗ್ರಂಥಿಗಳು ಪಕ್ವಗೊಂಡು ತಮ್ಮ ಚಟುವಟಿಕೆಯಿಂದ ಈ ರೀತಿಯ ವರ್ತನೆ ಸಾಧ್ಯವಾಗುವಂತೆ ಮಾಡುತ್ತವೆ. ಆರೋಗ್ಯವಂತನಾದ ವ್ಯಕ್ತಿ ವಿಕಾಸವಾದಂತೆ ಈ ಮನೋಲೈಂಗಿಕ ಹಂತಗಳನ್ನು ಕ್ರಮವಾಗಿ ಸಾಧಿಸುತ್ತಾ ಮುಂದುವರಿಯಬೇಕು. ಹಾಗಾಗದೆ, ಒಂದು ಹಂತದಿಂದ ಮುಂದಿನ ಹಂತಕ್ಕೆ ಹೋಗುವುದರಲ್ಲಿ ವಿಫಲತೆಯುಂಟಾದರೆ ವ್ಯಕ್ತಿ, ಮಾನಸಿಕವಾಗಿ, ಹಿಂದಿನ ವಿಕಾಸ ಹಂತದಲ್ಲಿಯೇ ಸ್ಥಿರೀಕೃತಗೊಳ್ಳುತ್ತಾನೆ. ಹಾಗಾದಾಗ ಅವನ ವ್ಯಕ್ತಿತ್ವದಲ್ಲಿ ನಿರ್ದಿಷ್ಟ ಲಕ್ಷಣಗಳು ತಲೆದೋರುತ್ತವೆಯೆಂದೂ, ವ್ಯಕ್ತಿಗಳನ್ನು ಮುಖೀಯ, ಗುದೀಯ, ಲಿಂಗೀಯ ಇತ್ಯಾದಿ ವ್ಯಕ್ತಿಗಳೆಂದು ವಿಭಾಗ ಮಾಡಬಹುದೆಂದೂ ಫ್ರಾಯ್ಡ್ ಹೇಳುತ್ತಾನೆ.

ಇದ್ದ ಕಾಮನೆಗಳನ್ನು ತೃಪ್ತಿಪಡಿಸಲು ಲಿಬಿಡೋ ಶಕ್ತಿಯ ಪ್ರವಾಹದಲ್ಲಿ ತಡೆಯುಂಟಾದಾಗ ಈ ರೀತಿ ತಡೆಹಿಡಿಯಲ್ಪಟ್ಟ ಲಿಬಿಡೋ ಶಕ್ತಿಯು ಅವಚೇತನ ಮನಸ್ಸಿನಲ್ಲಿ ದಮಿತ ಶಕ್ತಿಯಾಗಿ ಉಳಿದುಕೊಳ್ಳುತ್ತದೆ. ಸಂವೇಗಾತ್ಮಕವಾದ ಈ ಮಾನಸಿಕ ಶಕ್ತಿ ಪರೋಕ್ಷ ರೀತಿಯಲ್ಲಿ ಬಾಹ್ಯ ವರ್ತನೆಯ ರೂಪದಲ್ಲಿ ವ್ಯಕ್ತವಾಗಿ (ಮನೋರೋಗ ಲಕ್ಷಣಗಳಾಗಿ) ಅಸಾಮಾನ್ಯ ವರ್ತನೆಗೆ ಅಥವಾ ಮನೋವಿಕಲ್ಪಕ್ಕೆ ಹಾದಿಯಾಗುತ್ತದೆ. ಹೀಗೆ ಫ್ರಾಯ್ಡ್ ತಡೆಹಿಡಿಯಲ್ಪಟ್ಟ ಲಿಬಿಡೋವಿನ ಶಕ್ತಿಯೇ ಎಲ್ಲಾ ರೀತಿಯ ಮನೋವಿಕಲ್ಪಾತ್ಮಕ ವರ್ತನೆಗಳಿಗೆ (ಅಸಮಯೋಚಿತ ವರ್ತನೆಗಳಿಗೆ) ಮೂಲಕಾರಕವೆಂದು ಪರಿಗಣಿಸುತ್ತಾನೆ. ದಮನ ಮಾಡಿದ ಲೈಂಗಿಕ ಆಕಾಂಕ್ಷೆಗಳು, ಅತೃಪ್ತ ಆಸೆಗಳು, ಪರಾಜಯಗಳು ಮತ್ತು ನಿರಾಶೆಗಳು ದಮನ ಮಾಡಲ್ಪಟ್ಟು ಅವಚೇತನದ ಆಳದಲ್ಲಿ ಸೇರಿ ಹೋಗುತ್ತವೆ. ಈ ಹುಟ್ಟುಗುಣಗಳು ಮತ್ತು ನೆನಪುಗಳು ಸಂವೇಗಾತ್ಮಕ ಅನುಭವಗಳಿಂದ ಕೂಡಿರುವುದರಿಂದ, ಇವು ಮಾನವನ ವರ್ತನೆಯ ಸತ್ವಯುತ ಅಭಿಪ್ರೇರಣೆಯ ಸ್ರೋತವಾಗುತ್ತವೆ. ಫ್ರಾಯ್ಡ್ ಮಾನವ ಕುಲದ ಎಲ್ಲಾ ರೀತಿಯ ಸಾಧನೆಗಳನ್ನೂ ಈ ಅವಚೇತನಾತ್ಮಕವಾದ, ದಮನಗೊಳಿಸಲ್ಪಟ್ಟ ಹುಟ್ಟುಗುಣಗಳು, ಯೋಚನೆಗಳು ಮತ್ತು ಸಂವೇಗಗಳ ಮೂಲಕವೇ ವಿವರಿಸಲು ಪ್ರಯತ್ನಿಸಿದ್ದಾನೆ.

ಕಾರ್ಲ್‌ಯಂಗ್ :

ಫ್ರಾಯ್ಡ್‌ನ ಶಿಷ್ಯನಾಗಿದ್ದು ನಂತರ ಅವನಿಂದ ಬೇರ್ಪಟ್ಟು ತನ್ನದೇ ಆದ ಪ್ರತ್ಯೇಕ ಮನೋವಿಶ್ಲೇಷಣಾತ್ಮಕ ಸಿದ್ಧಾಂತವನ್ನು ಪ್ರತಿಪಾದಿಸಿದ ಕಾರ್ಲ್ ಗಸ್ಟಾಫ್

ಯೂಂಗನೂ ಸಹ ಲಿಬಿಡೋವನ್ನು ಮಾನವ ಅಭಿಪ್ರೇರಣೆಯ ಮೂಲಸ್ರೋತವೆಂದು ಪರಿಗಣಿಸಿದ್ದಾನೆ. ಆದರೆ ಇವನ ಪ್ರಕಾರ ಲಿಬಿಡೋ ಲೈಂಗಿಕ ಸ್ವರೂಪದ್ದಲ್ಲ. ಇದು ಒಂದು ರೀತಿಯ ಜೀವಶಕ್ತಿಯೆಂದು ಅವನು ತಿಳಿಯುತ್ತಾನೆ. ಇವನು ಲೈಂಗಿಕ ವಿಕಾಸದಲ್ಲಿ ಮೂರು ಹಂತಗಳನ್ನು ಗುರ್ತಿಸುತ್ತಾನೆ. (1) 3 ವರ್ಷದಿಂದ 5 ವರ್ಷದವರೆಗೆ ಪೂರ್ವ-ಲೈಂಗಿಕ ಹಂತ. ಈ ಹಂತ ವಿಕಾಸದಲ್ಲಿನ ಬೆಳವಣಿಗೆ ಮತ್ತು ಪೋಷಕಾಂಶಗಳಿಗೆ ಸಂಬಂಧಿಸಿದೆ. (2) ಪೂರ್ವ-ಕಿಶೋರಾವಸ್ಥೆಯ ಹಂತ. ಈ ಹಂತದಲ್ಲಿ ನಿಜವಾದ ಲೈಂಗಿಕತೆ ಪ್ರಾರಂಭವಾಗುತ್ತದೆ. (3) ಲೈಂಗಿಕ ಪರಿಪಕ್ವತೆಯ ಹಂತವೇ ಮೂರನೇ ಹಾಗೂ ಅಂತಿಮ ಹಂತ.

ಅಭಿಪ್ರೇರಣೆಯ ಶಕ್ತಿ ನಿಜವಾಗಿ ಬರುವುದು ಅಚೇತನ ಮನಸ್ಸಿನಲ್ಲಿರುವ ಮನೋಗ್ರಂಥಿಗಳಿಂದ. ಯೂಂಗ್ ಅವಚೇತನ ಮನಸ್ಸಿನಲ್ಲಿ ಎರಡು ಪದರುಗಳನ್ನು ಗುರ್ತಿಸಿದ್ದಾನೆ. (1) ವೈಯಕ್ತಿಕ ಅವಚೇತನ-ಇದರಲ್ಲಿ ದಮನಗೊಳಿಸಲ್ಪಟ್ಟ ವ್ಯಕ್ತಿಗತವಾದ ಅನುಭವಗಳು, ಮರೆಯಲ್ಪಟ್ಟ, ತಿರಸ್ಕೃತಗೊಳಿಸಲ್ಪಟ್ಟ ಅನುಭವಗಳು ಇರುತ್ತವೆ. ವೈಯಕ್ತಿಕ ಅವಚೇತನದಲ್ಲಿರುವ ಅನುಭವಗಳನ್ನು ಸುಲಭವಾಗಿ ಪುನಃ ನೆನಪಿಗೆ ತಂದುಕೊಳ್ಳಬಹುದು. (2) ಸಮಷ್ಟಿ ಅಥವಾ ಸಮುಚ್ಚಯ ಅವಚೇತನ-ಇದರಲ್ಲಿ ವ್ಯಕ್ತಿಯ ಹಿಂದಿನ ಪೀಳಿಗೆಗಳ, ಮಾನವ ವಂಶದ ಮತ್ತು ಮಾನವ ಪ್ರಾಗಾವಸ್ಥೆಯಲ್ಲಿದ್ದಾಗಿನ ಅನುಭವಗಳೆಲ್ಲವೂ ಅಡಕವಾಗಿವೆ. ಮಾನವನ ವರ್ತನೆಗೆ ಅಭಿಪ್ರೇರಣಾ ಶಕ್ತಿಯನ್ನು ಒದಗಿಸುವ ಮುಖ್ಯವಾದ ಮನೋಗ್ರಂಥಿಗಳು ಸಮಷ್ಟಿ ಅವಚೇತನದಲ್ಲಿ ನಿಹಿತವಾಗಿವೆ. ಈ ಮಟ್ಟದ ಮನಸ್ಸಿನಲ್ಲಿರುವ ಸಾಮಗ್ರಿಗಳನ್ನು ಚೇತನಾವಸ್ಥೆಯ (ಪ್ರಜ್ಞಾವಸ್ಥೆ) ಮಟ್ಟಕ್ಕೆ ಪಡೆಯುವುದು ಸುಲಭ ಸಾಧ್ಯವಾದ ಕಾರ್ಯವಲ್ಲ. ಸಮಷ್ಟಿ ಅವಚೇತನದಲ್ಲಿ ಇರುವ ಮನೋಗ್ರಂಥಿಗಳಲ್ಲಿ ಮುಖ್ಯವಾದುವೆಂದರೆ—

(1) ಪ್ರಾಚೀನ ಕಲ್ಪಗಳು (ಆರ್ಕಟೈಪುಗಳು) — ಪ್ರಾಗೈತಿಹಾಸಿಕವಾದ, ಸಾರ್ವಜನೀಯವಾದ ವಿಚಾರಗಳು ಮತ್ತು ಬಿಂಬಗಳು—ಉದಾಹರಣೆಗೆ-ಭೂಮಾತೆ, ಸರ್ಪಶಕ್ತಿ, ಸರ್ಪರಕ್ಷಣಾ, ಪ್ರಾಕೃತಿಕ ಘಟನೆಗಳಾದ ಭೂಕಂಪ, ಸೂರ್ಯೋದಯ, ಸೂರ್ಯಾಸ್ತ ಇತ್ಯಾದಿ ಶಕ್ತಿದ್ಯೋತಕವಾದ ಅಶ್ವ, ಗೂಳಿ ಇತ್ಯಾದಿ ಬಿಂಬಗಳು, ಸೃಷ್ಟಿ ಸೂಚಕವಾದ ಕ್ರಿಯೆಯ ಬಿಂಬಗಳು ಇತ್ಯಾದಿ.

(2) ಅನಿಮಾ ಅಥವಾ ಪುಂಸ್ತ್ರೀತ್ವ—ಪ್ರತಿ ಪುರುಷನಲ್ಲಿಯೂ ನಿಹಿತವಾಗಿರುವ ಸ್ತ್ರೀತ್ವದ ಪ್ರಾಚೀನ ಕಲ್ಪ.

(3) ಅನಿಮಸ್ ಅಥವಾ ಸ್ತ್ರೀಪುಂಸ್ತ್ವ—ಪ್ರತಿ ಸ್ತ್ರೀಯಲ್ಲಿಯೂ ನಿಹಿತವಾಗಿರುವ ಪುರುಷತ್ವದ ಪ್ರಾಚೀನ ಕಲ್ಪ.

(4) ಮೃಗಛಾಯಾ—ಮಾನವನು ಜೀವವಿಕಾಸದಿಂದಾಗಿ ಕೆಳವರ್ಗದ ಪ್ರಾಣಿಗಳಿಂದ ಪಡೆದಿರುವ ಪಾಶವೀ ಸ್ವಭಾವದ ಪ್ರಾಚೀನ ಕಲ್ಪ.

ಈ ಎಲ್ಲ ಪ್ರಾಚೀನಕಲ್ಪಗಳು ಕನಸುಗಳ ರೂಪದಲ್ಲಿಯಾಗಲೀ ಅಥವಾ ನರ

ಸ್ತಾಸೀ ಮನಸ್ತಾಸೀ ರೋಗ ಲಕ್ಷಣಗಳ ರೂಪದಲ್ಲಿಯಾಗಲೀ ಚೇತನಾವಸ್ಥೆಯ ಮಟ್ಟದಲ್ಲಿ ಅಭಿವ್ಯಕ್ತಗೊಳ್ಳಲು ಚಡಪಡಿಸುತ್ತಿರುತ್ತವೆ. ಆದ್ದರಿಂದ ಯಾಂಗನ ಪ್ರಕಾರ ಮನೋವಿಕಲ್ಪಾತ್ಮಕ ವರ್ತನೆಯ ಕಾರಣಗಳನ್ನು ಸಮಷ್ಟಿ ಅವಚೇತನದಲ್ಲಿರುವ ಈ ಪ್ರಾಚೀನಕಲ್ಪಗಳಲ್ಲಿ ಹುಡುಕಬೇಕಾಗುತ್ತದೆ.

ಲಿಬಿಡೋವಿನ ಶಕ್ತಿಯನ್ನು (ಸತ್ವವನ್ನು) ಸಾಮಾನ್ಯವಾಗಿ ಹೊರಗಿನ ಪ್ರಪಂಚದ ದಿಶೆಯಲ್ಲಾಗಲೀ ಅಥವಾ ಅಹಂವಿನ್ಯನ (ತನ್ನತನದ) ದಿಶೆಯಲ್ಲಾಗಲೀ ಹರಿಯುವಂತೆ (ಪ್ರವಹಿಸುವಂತೆ) ಮಾಡಲು ಸಾಧ್ಯತೆಗಳಿವೆ. ಲಿಬಿಡೋ ಸತ್ವ ಹೊರಪ್ರಪಂಚದ ದಿಶೆಯಲ್ಲಿ ಪ್ರವಹಿಸಿದರೆ ವ್ಯಕ್ತಿ ಬಹಿರ್ಮುಖತೆಯ ಸಾಮಾನ್ಯ ರೀತಿಯ ಮನೋಭಾವವನ್ನು ಬೆಳಸಿಕೊಳ್ಳುತ್ತಾನೆ. ಸಾಮಾಜಿಕತೆ, ಮುಕ್ತವೃತ್ತಿ, ಭೌತಿಕ ಚಟುವಟಿಕೆಗಳಲ್ಲಿ ಆಸಕ್ತಿ ಇವು ಬಹಿರ್ಮುಖತೆಯ ಕೆಲವು ಮುಖ್ಯ ಲಕ್ಷಣಗಳು. ಲಿಬಿಡೋ ಸತ್ವ ಆಂತರಿಕವಾಗಿ ಅಹಂವಿನ್ಯನ ದಿಶೆಯಲ್ಲಿ ಪ್ರವಹಿತವಾದರೆ ವ್ಯಕ್ತಿ ಅಂತರ್ಮುಖತೆಯ ಸಾಮಾನ್ಯ ಮನೋಭಾವವನ್ನು ಬೆಳಸಿಕೊಳ್ಳುತ್ತಾನೆ. ಹಿಂಜರಿಕೆಯ ಪ್ರವೃತ್ತಿ, ಯೋಚನಾಪರತೆ, ಆಂತರಾವಲೋಕನಯುಕ್ತವಾದ ಚಟುವಟಿಕೆಗಳಲ್ಲಿ ಆಸಕ್ತಿ, ಏಕಾಂತ ಪ್ರಿಯತೆ ಇವು ಅಂತರ್ಮುಖತೆಯ ಕೆಲವು ಮುಖ್ಯ ಲಕ್ಷಣಗಳು.

ಆಲ್‌ಫ್ರೆಡ್ ಆ್ಯಡ್ಲೇರ್ :

ಮೂಲತಃ ಮನೋವಿಶ್ಲೇಷಣವಾದಿಯಾದ ಆ್ಯಡ್ಲೇರ್ ಮಾನವ ಅಭಿಪ್ರೇರಣೆಯ ಬಗೆಗೆ ಅಮೂಲಾಗ್ರವಾದ ಬೇರೊಂದು ನಿಲುವನ್ನು ತಳೆದನು. ಆತನು ಮಾನವನಲ್ಲಿ ಅವಚೇತನ ಮನಸ್ಸಿನ ಇರುವಿಕೆಯನ್ನು ಒಪ್ಪಿಕೊಂಡರು ಸಹ, ಅದಕ್ಕೆ ಅಭಿಪ್ರೇರಣೆಯನ್ನುಂಟುಮಾಡುವ ಸಾಮರ್ಥ್ಯವಿದೆಯೆಂಬುದನ್ನು ಒಪ್ಪುವುದಿಲ್ಲ. ಅವನ ಪ್ರಕಾರ, ಅವಚೇತನ ಮನಸ್ಸು ಮನುಷ್ಯನಿಗೆ ಉಪಯೋಗಕ್ಕೆ ಬಾರದ ಮರೆಯಲ್ಪಟ್ಟ ಅನುಭವಗಳಿಂದ ತುಂಬಿದೆ. ಆದರೆ ಈ ಅನುಭವಗಳು ಸಂವೇಗಾತ್ಮಕ ಸತ್ವದಿಂದ ಕೂಡಿರುವುದಿಲ್ಲವಾದ್ದರಿಂದ ಅವುಗಳು ವರ್ತನೆಯ ಮೇಲೆ ಯಾವುದೇ ರೀತಿಯ ಪ್ರಭಾವವನ್ನು ಬೀರಲಾರವು.

ಆ್ಯಡ್ಲೇರ್ ಎರಡು ತತ್ವಗಳ ಮೂಲಕ ಮಾನವ ಅಭಿಪ್ರೇರಣೆಯನ್ನು ವಿವರಿಸಲು ಯತ್ನಿಸುತ್ತಾನೆ. ಈ ಎರಡು ಮನೋತತ್ವಗಳೇ ಕೀಳರಿಮೆಯ ತತ್ವ ಮತ್ತು ಮೇಲರಿಮೆಯ ತತ್ವ. ಮಾನವ ದೀರ್ಘಕಾಲ ಶೈಶವಾವಸ್ಥೆಯಲ್ಲಿ ಪರಾವಲಂಬಿಯಾಗಿರಬೇಕಾದ ವಾಸ್ತವಿಕತೆಯೇ ಮಾನವನ ಮನಸ್ಸಿನಲ್ಲಿ ತಾನು ನಿಸ್ಸಹಾಯಕ ಅಸಮರ್ಥ ಎನ್ನುವ ಕೀಳರಿಮೆ ಮೂಡುವಂತೆ ಮಾಡುತ್ತದೆ. ಇದರಿಂದಾಗಿ ಶಿಶುವಿನ ಮನಸ್ಸಿನಲ್ಲಿ ಮಹತ್ತಾದುದು, ಅಧಿಕಾರದಿಂದ ಕೂಡಿದ ವ್ಯಕ್ತಿಗಳು (ತಂದೆ-ತಾಯಿ, ಇತರೆ ಮನುಷ್ಯರು), ಮತ್ತು ದರ್ಪದಿಂದ ಕೂಡಿದ ವ್ಯಕ್ತಿಗಳ ಮೇಲರಿಮೆಯನ್ನು ಸೂಚಿಸುತ್ತಾರೆ. ಶಿಶು ವಿಕಾಸ ಹೊಂದಿದಂತೆಲ್ಲಾ ಅದರಲ್ಲಿ ಕೀಳರಿಮೆಯ ಭಾವನೆ ಬೆಳೆಯುತ್ತಾ

ಹೋಗುತ್ತದೆ. ಏಕೆಂದರೆ ಪ್ರಾರಂಭಿಕ ದಿನಗಳಲ್ಲಿ ಅದು ಜೈವಿಕವಾಗಿ ತನ್ನ ಇರುವಿಕೆಗೆ ಪೋಷಕರನ್ನು ಅವಲಂಬಿಸಬೇಕಾಗುತ್ತದೆ. ಕ್ರಮೇಣ ಸಮಾಜದ ನಿರ್ಬಂಧಗಳಿಗೆ ಅನುಗುಣವಾಗಿ ವರ್ತಿಸಬೇಕಾಗುತ್ತದೆ. ಮುಂದುವರಿದು, ಕೀಳರಿಮೆಯ ಭಾವನೆಯು ಮಗುವಿನಲ್ಲಿ ಮಾನಸಿಕ ತುಡಿತದ ಸ್ಥಿತಿಯನ್ನು ಉಂಟುಮಾಡುತ್ತದೆ. ಆದ್ದರಿಂದ ಶಿಶು ತನ್ನ ಅಸಮರ್ಥತೆಯ ಭಾವನೆಯನ್ನು ಕ್ಷತಿಪೂರ್ತಿಗೊಳಿಸಿಕೊಂಡು ಮೇಲರಿಮೆಯನ್ನು ಸಾಧಿಸಲು ಪ್ರಯತ್ನಿಸತೊಡಗುತ್ತದೆ. ಈ ರೀತಿಯ ಪ್ರಯತ್ನದಲ್ಲಿ ಪ್ರತಿಯೊಬ್ಬ ವ್ಯಕ್ತಿಯೂ ತನ್ನದೇ ಆದ ಜೀವನಶೈಲಿಯನ್ನು ಅಥವಾ ತನ್ನದೇ ಆದ ವಿಶಿಷ್ಟ ವರ್ತನ ವಿನ್ಯಾಸವನ್ನು ರೂಪಿಸಿಕೊಳ್ಳತೊಡಗುತ್ತಾನೆ. ಈ ಜೀವಿತ ಶೈಲಿ ಅವನ ಕೀಳರಿಮೆಯ ಭಾವನೆಯನ್ನು ಅತಿಕ್ರಮಿಸಿ, ಮೇಲರಿಮೆಯ ಭಾವನೆಯನ್ನು ಮೂಡಿಸಿಕೊಳ್ಳಲು ಸಹಾಯಕವಾಗುತ್ತದೆ.

ಹೀಗೆ ಕ್ಷತಿಪೂರ್ತಿ ಮಾಡಿಕೊಳ್ಳುವಿಕೆ (ಕಂಪನ್ಸೇಷನ್) ಆ್ಯಡ್ಲೇರ್‌ನ ಮನೋವಿಜ್ಞಾನದ ಕೇಂದ್ರ ಪರಿಕಲ್ಪನೆಯಾಗುತ್ತದೆ. ಕ್ಷತಿಪೂರ್ತಿ ಅನೇಕ ರೂಪಗಳಲ್ಲಿ ಆಗಬಹುದು. ತನ್ನಲ್ಲಿರುವ ಅಂಗಹೀನತೆಯ ಕ್ಷತಿಪೂರ್ತಿಯನ್ನು ಬೇರೊಂದು ರೀತಿಯ ಸಾಧನೆಯಿಂದ ಕ್ಷತಿಪೂರ್ತಿಮಾಡಿಕೊಳ್ಳಬಹುದು. ಉದಾಹರಣೆಗೆ ಕುರುಡನೊಬ್ಬ ಪ್ರಯತ್ನಪಟ್ಟು ಸಂಗೀತಗಾರನಾಗಬಹುದು. ಮಾನಸಿಕ ರೀತಿಯಲ್ಲೂ ಕ್ಷತಿಪೂರ್ತಿ ಮಾಡಿಕೊಳ್ಳಲು ಸಾಧ್ಯವಿದೆ. ಉದಾಹರಣೆಗೆ ಶೈಕ್ಷಣಿಕ ಸಾಧನೆಯಲ್ಲಿ ಹಿಂದೆ ಬೀಳುವ ವಿದ್ಯಾರ್ಥಿ ಕ್ರೀಡೆಗಳಲ್ಲಿಯಾಗಲೀ, ಲಲಿತ ಕಲೆಗಳಲ್ಲಿಯಾಗಲೀ ಹೆಚ್ಚಿನ ಯಶಸ್ಸನ್ನು ಗಳಿಸಬಹುದು. ಜಯಪ್ರದವಾದ ರೀತಿಯಲ್ಲಿ ಕ್ಷತಿಪೂರ್ತಿಯುಂಟಾದರೆ ವ್ಯಕ್ತಿ ಜಯಗಳಿಸುತ್ತಾನೆ ಮತ್ತು ಈ ರೀತಿಯ ಕ್ಷತಿಪೂರ್ತಿ ಅವನ ದಿನನಿತ್ಯದ ಸಮಾಯೋಜನೆಯಲ್ಲಿ ಅಡ್ಡಿಯನ್ನುಂಟುಮಾಡುವುದಿಲ್ಲ. ಅತಿಕ್ಷತಿಪೂರ್ತಿಯಲ್ಲಿ ವ್ಯಕ್ತಿಯ ಪ್ರಯತ್ನ ಹೊರನೋಟಕ್ಕೆ ಗೋಚರವಾಗುವುದೇ ಅಲ್ಲದೇ ಬೇರೆ ಬೇರೆ ಪ್ರಮಾಣದ ಅಸಮಾಯೋಜನೆಗೆ ಎಡೆಕೊಡಬಹುದು. ಉದಾಹರಣೆಗೆ ಸಮಾಜದಲ್ಲಿ ತೀವ್ರ ನಿರಾಶೆಗೊಳಗಾದ ವ್ಯಕ್ತಿ ಡಕಾಯಿತನಾಗುವುದರ ಮೂಲಕ ಸಮಾಜಘಾತುಕನಾದ ವ್ಯಕ್ತಿಯಾಗಿ ಪರಿಣಮಿಸಬಹುದು. ಉಪೇಕ್ಷಿತನಾದ ವ್ಯಕ್ತಿಯೊಬ್ಬ ಅಪರಾಧಿಯಾಗಬಹುದು. ಕೆಲವು ವೇಳೆ, ಕೀಳರಿಮೆಯ ಭಾವನೆಯನ್ನು ಸಾಮಾಜಿಕವಾಗಿ ಅಪೇಕ್ಷಿತವಾದ ಆತ್ಮತ್ಯಾಗ (ಪುರಂದರದಾಸ. ತುಲಸಿದಾಸ, ಮುಂತಾದವರಂತೆ), ಪರೋಪಕಾರ, ಅರ್ಪಣೆ, ದೇಶಪ್ರೇಮ, ಧೈರ್ಯ, ಸಾಹಸ ಇತ್ಯಾದಿ ಗುಣಗಳನ್ನು ಬೆಳೆಸಿಕೊಳ್ಳುವುದರ ಮೂಲಕ ಕ್ಷತಿಪೂರ್ತಿಮಾಡಿಕೊಳ್ಳಬಹುದು. ಅತಿಕ್ಷತಿಪೂರ್ತಿಯ ಪ್ರಯತ್ನ ಸಾಮಾಜಿಕವಾಗಿ ಪ್ರತಿಕೂಲ ಪರಿಣಾಮವನ್ನುಂಟುಮಾಡಿದರೆ ಮತ್ತು ದಿನನಿತ್ಯದ ಸಮಾಯೋಜನೆಯಲ್ಲಿ ತೀವ್ರತರವಾಗಿ ಅಡ್ಡಿಯನ್ನುಂಟುಮಾಡಿದರೆ, ಆಗ ಅದನ್ನು ಮಾನಸಿಕ ರೋಗ ಸ್ಥಿತಿಯೆಂದು ತಿಳಿಯಬೇಕಾಗುತ್ತದೆ. ವ್ಯಕ್ತಿ ಜಯಪ್ರದವಾಗಿ ಕ್ಷತಿಪೂರ್ತಿ ಮಾಡಿಕೊಳ್ಳಲು ವಿಫಲನಾದರೆ ಆಗ ಅವನು ಮಾನಸಿಕ ಅಥವಾ ದೈಹಿಕ ರೋಗ (ಕೆಲವು ರೋಗ ಲಕ್ಷಣ

ಗಳನ್ನು ಬೆಳೆಸಿಕೊಳ್ಳುತ್ತಾನೆ)ವ ಆಸರೆಯನ್ನು, ಜೇರುವವರ ಗಮನವನ್ನು ತನ್ನೆಡೆಗೆ ಸೆಳೆಯಲು, ಪಡೆಯುತ್ತಾನೆ. ಪ್ರತಿಯೊಂದು ನರಸ್ತಾಪೀ (ನ್ಯೂರೋಸಿಸ್) ಲಕ್ಷಣವೂ ವ್ಯಕ್ತಿ ತನ್ನಲ್ಲಿರುವ ಕೀಳರಿಮೆಯ ಭಾವನೆಯಿಂದ ತನ್ನನ್ನು ಮುಕ್ತನನ್ನಾಗಿಸಿಕೊಂಡು, ಮೇಲರಿಮೆಯ ಭಾವನೆಯನ್ನು ಸಾಧಿಸುವ ಪ್ರಯತ್ನವೆಂದೇ ತಿಳಿಯಬೇಕು ಎಂದು ಆ್ಯಡ್ಲೇರ್ ಹೇಳುತ್ತಾನೆ.

ಮಾನವ ಜೀವಿತದ ಗುರಿ ಮೇಲರಿಮೆಯ ಭಾವನೆಯನ್ನು ಸಾಧಿಸುವುದು, ಆತ್ಮ ಗೌರವವನ್ನು ವೃದ್ಧಿಪಡಿಸಿಕೊಳ್ಳುವುದು, ಸಮಾಯೋಜನೆಗೆ ಅನುಕೂಲಕಾರವಾದ ಜೀವಿತ ಶೈಲಿಯೊಂದನ್ನು ರೂಪಿಸಿಕೊಳ್ಳಲು ಪ್ರಯತ್ನಿಸುವುದೇ ಆಗಿದೆ. ಈ ಪ್ರಯತ್ನ ಅನೇಕ ರೂಪಗಳನ್ನು ತಳೆಯುತ್ತದೆ. ಇದು ಸಾಮಾಜಿಕ ಗೌರವವನ್ನು ಗಳಿಸುವುದಾಗಿರಬಹುದು ಅಥವಾ ದೇಶಪ್ರೇಮದಂಥ ಸ್ಪಷ್ಟವಾದ ಆದರ್ಶವನ್ನು ಸಾಧಿಸುವುದಾಗಿರಬಹುದು.

ನವ-ಫ್ರಾಯ್ಡಿಯನರು :

ಫ್ರಾಯ್ಡ್‌ನ ಅನೇಕ ಹಿಂಬಾಲಕರು ಫ್ರಾಯ್ಡ್‌ನ ಮನೋವಿಶ್ಲೇಷಣಾ ಸಿದ್ಧಾಂತದ ಕೆಲವು ಮೂಲತತ್ವಗಳನ್ನು ಒಪ್ಪಿಕೊಂಡರೂ ತಮ್ಮದೇ ಆದ ರೀತಿಯಲ್ಲಿ ಮಾನವ ಅಭಿಪ್ರೇರಣೆಯನ್ನು ವಿವರಿಸಲು ಪ್ರಯತ್ನಿಸಿದರು. ಇವರುಗಳು ಅವಚೇತನ ಮನಸ್ಸಿನ ಅಸ್ತಿತ್ವವನ್ನು ಮತ್ತು ವರ್ತನೆಯ ಮೇಲೆ ಪ್ರಭಾವ ಬೀರುವ ಅದರ ಸಾಮರ್ಥ್ಯವನ್ನು ಒಪ್ಪಿಕೊಳ್ಳುತ್ತಾರೆ. ಆದರೆ ಮಾನವ ಅಭಿಪ್ರೇರಣೆಯ ಮೂಲ ಸ್ರೋತವಾವುದೆಂಬುದರ ಬಗ್ಗೆ ಭಿನ್ನಾಭಿಪ್ರಾಯವುಳ್ಳವರಾಗಿರುತ್ತಾರೆ.

ಒಟ್ಟೋ ರ್‍ಯಾಂಕ್ :

ಇವನು ಮಾನವನಲ್ಲುಂಟಾಗುವ ಜನ್ಮ-ಆಘಾತ (ಹುಟ್ಟಿನ ಸಮಯದಲ್ಲಿ ಉಂಟಾಗುವ ತೀವ್ರತರವಾದ ಸಂವೇಗಾತ್ಮಕ ಅನುಭವ) ವನ್ನು ಅಭಿಪ್ರೇರಣೆಯ ಮೂಲಸ್ರೋತವೆಂದು ಹೇಳುತ್ತಾನೆ. ಜನ್ಮ ಸಮಯದ ಆಘಾತ ಮತ್ತು ಶಿಶು ಆಗಾಗ್ಗೆ ಅನುಭವಿಸುವ ತಾಯಿಯಿಂದ ಅಗಲುವಿಕೆಯ ಆತಂಕ ಈ ಎರಡೂ ಶಿಶುವಿನ ವ್ಯಕ್ತಿ ವಿಕಾಸದ ನಿರ್ಧಾರಕ ಅಂಶಗಳಾಗುತ್ತವೆ. ಕಾರೆನ್ ಹಾರ್ನಿ ಎಂಬಾಕೆಯು ಸಮಾಜಶಾಸ್ತ್ರೀಯ ಉಪಕ್ರಮದ ಮೂಲಕ ಅಭಿಪ್ರೇರಣೆಯನ್ನು ವಿವರಿಸುತ್ತಾಳೆ. ಮಾನವ ಮೂಲತಃ ರಚನಾತ್ಮಕ ಸ್ವಭಾವವನ್ನು ಹೊಂದಿರುತ್ತಾನೆಂದು ಈಕೆ ತಿಳಿಯುತ್ತಾಳೆ. ಈ ರಚನಾತ್ಮಕ ಪ್ರವೃತ್ತಿ ಸಾಮಾಜಿಕ ಸಂಬಂಧಗಳನ್ನು ರೂಪಿಸಿಕೊಳ್ಳುವ ದಿಶೆಯಲ್ಲಿ ವ್ಯಕ್ತವಾಗುತ್ತದೆ. ಇದು ಮೂರು ರೀತಿಯ ಸಾಮಾಜಿಕ ಸಂಬಂಧಗಳಿಗೆ ಕಾರಣವಾಗಬಹುದು. ವ್ಯಕ್ತಿಯ ಆಂತರಿಕ ಅಭಿಪ್ರೇರಣಾ ಶಕ್ತಿಯು ವ್ಯಕ್ತಿಯನ್ನು ಇತರ ಜನಗಳ ಕಡೆಗೆ ಚಲಿಸುವಂತೆ ಪ್ರೇರೇಪಿಸಬಹುದು. ಆಗ ವ್ಯಕ್ತಿ ಇತರರ ಸಂಗ, ಪ್ರೀತಿ, ವಿಶ್ವಾಸಗಳನ್ನು ಬಯ

ಸುತ್ತಾನೆ. ಎರಡನೆಯದಾಗಿ ವ್ಯಕ್ತಿ ಇತರ ವ್ಯಕ್ತಿಗಳಿಂದ ದೂರ ಸರಿಯುವ ಪ್ರವೃತ್ತಿಯನ್ನು ಬೆಳಸಿಕೊಳ್ಳಬಹುದು. ಆಗ ವ್ಯಕ್ತಿ ಹಿಂಜರಿಕೆಯ ಪ್ರವೃತ್ತಿ, ಸಾಮಾಜಿಕ ಸಂಬಂಧಗಳ ಬಗ್ಗೆ ಅನಾಸಕ್ತಿ, ಏಕಾಂತ ಪ್ರಿಯತೆಗಳನ್ನು ಬೆಳಸಿಕೊಳ್ಳಬಹುದು. ಮೂರನೆಯದಾಗಿ, ವ್ಯಕ್ತಿ ಇತರರ ವಿರುದ್ಧ ಹೋಗುವ ಪ್ರವೃತ್ತಿಯನ್ನು ಬೆಳಸಿಕೊಳ್ಳಬಹುದು. ಹಾಗಾದಾಗ ಅವನು ಆಕ್ರಮಣ ಪ್ರವೃತ್ತಿ, ಇತರರ ಬಗ್ಗೆ ದ್ವೇಷ ಭಾವನೆ ಮತ್ತು ವಿನಾಶಕಾರಿ ಪ್ರವೃತ್ತಿಯನ್ನು ಬೆಳಸಿಕೊಳ್ಳುತ್ತಾನೆ.

ಎರಿಕ್ ಫ್ರಾಮನು :

ಮನೋವಿಶ್ಲೇಷಣೆಗೆ ಸಮಾಜಶಾಸ್ತ್ರೀಯ ಉಪಕ್ರಮವನ್ನು ಪ್ರತಿಪಾದಿಸಿದ ಮನೋವಿಜ್ಞಾನಿಗಳಲ್ಲಿ ಮೊದಲಿಗ. ಇವನು ತನ್ನ ದೃಷ್ಟಿಕೋನಗಳನ್ನು ತನ್ನ ಪ್ರಸಿದ್ಧ ಗ್ರಂಥವಾದ 'ಸ್ವಾತಂತ್ರ್ಯದಿಂದ ಪಲಾಯನ'ದಲ್ಲಿ ಬಹು ಚೆನ್ನಾಗಿ ವ್ಯಕ್ತಪಡಿಸಿದ್ದಾನೆ. ಮಾನವನಲ್ಲಿ ಮೂಡುವ ಏಕಾಕಿತನದ ಭಾವನೆಯೋ, ಅನಾಥಪರತೆಯ ಭಾವನೆಯೋ ಮನುಷ್ಯನಲ್ಲಿರುವ ಮುಖ್ಯ ಅಭಿಪ್ರೇರಣೆಯೆಂದು ಇವನು ತಿಳಿಸುತ್ತಾನೆ. ಆಧುನಿಕ ನಾಗರಿಕತೆಯಿಂದಾಗಿ ಈಗ ಮಾನವನಿಗೆ ಎರಡೇ ಮಾರ್ಗಗಳು ಉಳಿದಿವೆ. ಅವನು ಇತರ ಜನರೊಂದಿಗೆ ಪ್ರೀತಿ ವಿಶ್ವಾಸಗಳ ಮೂಲಕ ಸೇರಿಕೊಳ್ಳಬೇಕು. ಇಲ್ಲವೇ ನಿರಂಕುಶಾಧಿಕಾರಕ್ಕೆ ಶರಣು ಹೋಗಬೇಕು. ಏಕಾಕಿತನದ ಭಾವನೆಯಿಂದ ಮುಕ್ತನಾಗಲು ಮಾನವ ಸಂಬಂಧತೆಯ ಆವಶ್ಯಕತೆ, ತಾದಾತ್ಮ್ಯತೆಯ ಆವಶ್ಯಕತೆ, ಒಂದು ಸಂದರ್ಭ ಈ ಚೌಕಟ್ಟಿನ ಆವಶ್ಯಕತೆ ಮೂಲಸ್ಥಿರತೆಯ ಆವಶ್ಯಕತೆ ಮುಂತಾದ ಕೆಲವು ಆವಶ್ಯಕತೆಗಳನ್ನು ಪೂರ್ಣಗೊಳಿಸಿಕೊಳ್ಳಬೇಕು. ಹ್ಯಾರಿ ಸಲ್ಲಿವಾನ್ ಎಂಬುವನು ಮನೋಚಿಕಿತ್ಸಕನಾಗಿದ್ದುಕೊಂಡು, ಫ್ರಾಯ್ಡ್‌ನಿಂದ ಪ್ರತಿಪಾದಿತವಾದ ಮನೋವಿಶ್ಲೇಷಣೆ ಮಾನವ ಶಾಸ್ತ್ರ ಮತ್ತು ಸಮಾಜಶಾಸ್ತ್ರಗಳನ್ನು ಸೇರಿಸಲು ಪ್ರಯತ್ನಿಸಿದನು. "ಅಂತರ ವ್ಯಕ್ತ್ಯಾತ್ಮಕ ಸಂಬಂಧಗಳು ವ್ಯಕ್ತಿತ್ವದ ಬೆಳವಣಿಗೆ ಮತ್ತು ಪರಿಪಕ್ವನವನ್ನು ಅಭಿವೃದ್ಧಿಗೊಳಿಸುವ ಒಂದು ಪ್ರಮುಖ ಅಂಶವಾಗಿದೆ. ಸಾಕಷ್ಟು ದೀರ್ಘಕಾಲ ಉಳಿಯುವ ಅಂತರ ವ್ಯಕ್ತ್ಯಾತ್ಮಕ ಪರಿಸ್ಥಿತಿಗಳ ವಿನ್ಯಾಸವೇ ವ್ಯಕ್ತಿತ್ವ" ಎಂದು ಸಲ್ಲಿವಾನ್ ಅಭಿಪ್ರಾಯಪಡುತ್ತಾನೆ.

ಮನೋವಿಶ್ಲೇಷಣವಾದಿಗಳು ಕೇವಲ ಒಂದು ಅಭಿಪ್ರೇರಣಾ ಶಕ್ತಿಯ ಮೂಲಕವೇ ಮಾನವನ ಅಭಿಪ್ರೇರಣೆಯನ್ನು ವಿವರಿಸಲು ಪ್ರಯತ್ನಿಸಿದ್ದಾರೆ ಎಂಬುದನ್ನು ಗಮನದಲ್ಲಿಡಬೇಕು. ಕೆಲವರು ಜನ್ಮಜಾತವಾದ ಆಂತರಿಕ ಅಭಿಪ್ರೇರಣಾ ಪ್ರವೃತ್ತಿಗಳಿಗೆ ಪ್ರಾಮುಖ್ಯತೆಯನ್ನು ನೀಡಿದ್ದರೆ, ಮತ್ತೆ ಕೆಲವರು ಸಾಮಾಜಿಕ-ಸಾಂಸ್ಕೃತಿಕ ಅಭಿಪ್ರೇರಣಾಂಶಗಳಿಗೆ ಮಹತ್ವ ನೀಡಿದ್ದಾರೆ.

ಮನೋವಿಶ್ಲೇಷಣವಾದಿಗಳ ಅಭಿಪ್ರೇರಣಾ ಸಿದ್ಧಾಂತಗಳಲ್ಲಿ ಸ್ವಲ್ಪಮಟ್ಟಿನ ಸತ್ಯಾಂಶವಿದೆ ಎನ್ನಲು ಅಡ್ಡಿಯಿಲ್ಲ. ಆದರೆ ಮಾನವನ ಸಂಕೀರ್ಣವರ್ತನೆಗಳೆಲ್ಲವೂ

ಯಾವುದೇ ಒಂದು ರೀತಿಯ ಅಭಿಪ್ರೇರಣೆಯಿಂದ ಪ್ರೇರಿತವಾಗುತ್ತದೆ. ಎನ್ನುವ ನಿಲುವ ಸಮಂಜಸವೆನಿಸುವುದಿಲ್ಲ. ಏಕೆಂದರೆ ಮಾನವನ ವರ್ತನೆಗೆ ಅನೇಕ ರೀತಿಯ ಪ್ರೇರಣೆಗಳಿರುತ್ತವೆ. ಮಾನವನನ್ನು ಪ್ರಾಣಿಯ ಮಟ್ಟದಿಂದ ಮೇಲಕ್ಕೆ ಏರುವಂತೆ ಮಾಡಿ ಅವನಲ್ಲಿ ಮಾನವೀಯ ವರ್ತನೆಯನ್ನು ಪ್ರೇರೇಪಿಸುವ ಉನ್ನತ ಮಟ್ಟದ ಅಭಿಪ್ರೇರಣೆಗಳು ಅನೇಕವಿವೆ.

ಎರಿಕ್‌ಸನ್ನನ ಮನೋ ಸಾಮಾಜಿಕ ವಿಕಾಸದ ಹಂತಗಳು :

ಎರಿಕ್ ಎರಿಕ್‌ಸನ್ (1963) ಮೂಲತಃ ಓರ್ವ ಮನೋವಿಶ್ಲೇಷಣವಾದಿ. ಅವನು ಫ್ರಾಯ್ಡನ ಅನೇಕ ಮನೋವಿಶ್ಲೇಷಣಾತ್ಮಕ ಪರಿಕಲ್ಪನೆಗಳನ್ನು ಒಪ್ಪಿಕೊಳ್ಳುತ್ತಾನೆ. ಮಾನವ ಶಿಶು ವರ್ತನೆಯನ್ನು ಅಭಿಪ್ರೇರಿಸುವ ಅನೇಕ ಜನ್ಮಜಾತ ಪ್ರವೃತ್ತಿಗಳನ್ನು ಹುಟ್ಟಿನಿಂದ ಪಡೆದುಕೊಂಡಿರುತ್ತದೆ. ಈ ಜನ್ಮಜಾತ ಪ್ರವೃತ್ತಿಗಳು ರೂಪಿನಲ್ಲಿರುವ ಮುಖ್ಯ ಮನೋಸತ್ವವು ಸಾಮಾಜಿಕ ಪ್ರತಿಕ್ರಿಯೆಗಳ ರೂಪದಲ್ಲಿ ಅಭಿವ್ಯಕ್ತಗೊಳ್ಳುತ್ತವೆ. ಸಿಗ್ಮಂಡ್ ಫ್ರಾಯ್ಡ್ ವ್ಯಕ್ತಿತ್ವ ವಿಕಾಸದಲ್ಲಿ ಲೈಂಗಿಕತೆಯ ಮುಖಕ್ಕೆ ಮಹತ್ವನೀಡಿ, ಅನೇಕ ಮನೋಲೈಂಗಿಕ ಹಂತಗಳನ್ನು ವಿವರಿಸಿದ್ದರೆ, ಎರಿಕ್‌ಸನ್ ವ್ಯಕ್ತಿತ್ವ ವಿಕಾಸದ ಸಾಮಾಜಿಕ ಮುಖಕ್ಕೆ ಮಹತ್ವನೀಡಿ, ವ್ಯಕ್ತಿತ್ವ ವಿಕಾಸದ ಅನೇಕ ಮನೋ-ಸಾಮಾಜಿಕ ಹಂತಗಳನ್ನು ವಿವರಿಸಿದ್ದಾನೆ.

ಶಿಶು ಸಾಮಾಜಿಕ ಸಂದರ್ಭದಲ್ಲಿ ವಿಕಾಸಗೊಂಡಂತೆಲ್ಲಾ, ಅದರ ಜನ್ಮಜಾತ ಪ್ರವೃತ್ತಿಗಳಿಗೂ ಸಾಮಾಜಿಕ ಅಂಶಗಳಿಗೂ ನಡುವೆ ಘರ್ಷಣೆ ಉಂಟಾಗುತ್ತದೆ. ಈ ರೀತಿಯ ಘರ್ಷಣೆಯ ಪರಿಣಾಮವಾಗಿ ವಿರುದ್ಧ ರೀತಿಯ ಪ್ರವೃತ್ತಿಗಳನ್ನುಂಟುಮಾಡುವ ಸಂದಿಗ್ಧ ಪರಿಸ್ಥಿತಿಗಳು ಉಂಟಾಗುತ್ತವೆ. ಈ ರೀತಿಯ ಅನೇಕ ಸಂದಿಗ್ಧ ಪರಿಸ್ಥಿತಿಗಳು ಜೀವನದುದ್ದಕ್ಕೂ ಉಂಟಾಗುತ್ತವೆ. ಪ್ರತಿಯೊಂದು ಸಂದಿಗ್ಧತೆಯೂ ಒಂದೊಂದು ವರ್ತನೆ ಪ್ರಧಾನ-ವಿಷಯದ ಮೇಲೆ ಕೇಂದ್ರಿತವಾಗಿರುತ್ತದೆ. ಎರಿಕ್‌ಸನ್ ಜೀವನ ಪರ್ಯಂತ ಉಂಟಾಗಬಹುದಾದ ಇಂಥ ಎಂಟು ದ್ವಂದ್ವಗಳನ್ನು ಗುರ್ತಿಸಿದ್ದಾನೆ. ಈ ಎಂಟು ದ್ವಂದ್ವಗಳ ಅಥವಾ ಸಂದಿಗ್ಧ ಪರಿಸ್ಥಿತಿಗಳ ಮೂಲಕ ಹಾಯ್ದು ಹೋಗಿ ವ್ಯಕ್ತಿತ್ವ ವಿಕಾಸಹೊಂದಬೇಕಾಗುತ್ತದೆ. ಪ್ರತಿಯೊಂದು ದ್ವಂದ್ವವನ್ನೂ ಒಂದಲ್ಲ ಒಂದುರೀತಿಯಲ್ಲಿ ಅನಿವಾರ್ಯವಾಗಿ ಪರಿಹರಿಸಿಕೊಳ್ಳಲೇ ಬೇಕಾಗುತ್ತದೆ. ಪ್ರತಿಯೊಂದು ದ್ವಂದ್ವವನ್ನೂ ಅಪೇಕ್ಷಿತ ದಿಶೆಯಲ್ಲಾಗಲೀ ಅನಪೇಕ್ಷಿತ ದಿಶೆಯಲ್ಲಾಗಲೀ ಪರಿಹರಿಸಿಕೊಳ್ಳುವ ಸಾಧ್ಯತೆಯಿದೆ. ದ್ವಂದ್ವವು ಅಪೇಕ್ಷಿತ ರೀತಿಯಲ್ಲಿ ಪರಿಹಾರಗೊಂಡರೆ, ಅದರಿಂದ ವ್ಯಕ್ತಿಯ ವ್ಯಕ್ತಿತ್ವ ವಿಕಾಸದಲ್ಲಿ ಮತ್ತು ಸಮಾಯೋಜನೆಯಲ್ಲಿ ಸಹಾಯ ಉಂಟಾಗುತ್ತದೆ. ದ್ವಂದ್ವವು ಅನಪೇಕ್ಷಿತ ರೀತಿಯಲ್ಲಿ ಪರಿಹಾರಗೊಂಡರೆ, ಇದರಿಂದ ಅನೇಕ ಸಮಸ್ಯೆಗಳುಂಟಾಗುತ್ತವೆ. ಪ್ರತಿಯೊಂದು ಶಿಶುವೂ ಈ ದ್ವಂದ್ವಗಳನ್ನು ಅಪೇಕ್ಷಿತ ದಿಶೆಯಲ್ಲಿ ಪರಿಹರಿಸಿಕೊಳ್ಳುವಂತೆ ಸಹಾಯ ನೀಡುವುದು ಸಮಾಜದ ಮತ್ತು ಮುಖ್ಯವಾಗಿ ಕುಟುಂಬ

ಹಾಗೂ ಶಾಲೆಯ ಕರ್ತವ್ಯವಾಗಿದೆ. ಪ್ರತಿಯೊಂದು ದ್ವಂದ್ವವೂ ಮಹತ್ವಪೂರ್ಣವಾದ ಸಾಮಾಜಿಕ ಸಂಬಂಧವೊಂದರ ಮೇಲೆ ಕೇಂದ್ರೀಕೃತವಾಗಿರುತ್ತದೆ. ಮಗುವಿಗೆ ಈ ಸಾಮಾಜಿಕ ಬದನ್ನು ಅನುಸರಿಸಿಕೊಂಡ ದ್ವಂದ್ವದ ಪರಿಹಾರವುಂಟಾಗುತ್ತದೆ. ದ್ವಂದ್ವ ಅಪೇಕ್ಷಿತ ರೀತಿಯಲ್ಲಿ ಪರಿಹರಿಸಲ್ಪಟ್ಟರೆ ಕೆಲವು ವರ್ತನ ವಿನ್ಯಾಸಗಳು ವಿಕಾಸಗೊಳ್ಳುತ್ತವೆ. ಇವು ಸಮಾಯೋಜನೆಗೆ ಅನುಕೂಲವಾಗಿರುತ್ತವೆ. ದ್ವಂದ್ವ ಅನಪೇಕ್ಷಿತ ದಿಕ್ಕಿನಲ್ಲಿ ಪರಿಹರಿಸಲ್ಪಟ್ಟರೆ ಇನ್ನು ಕೆಲವು ವರ್ತನ ವಿನ್ಯಾಸಗಳು ವಿಕಾಸಗೊಳ್ಳುತ್ತವೆ. ಇವು ಸಮಾಯೋಜನೆಗೆ ಪ್ರತಿಕೂಲಕರವಾಗಿರುತ್ತವೆ. ವ್ಯಕ್ತಿಯ ಹಾಗೂ ಸಮಾಜದ ಹಿತದೃಷ್ಟಿಯಿಂದ ಈ ದ್ವಂದ್ವಗಳ ಪರಿಹಾರ ಅಪೇಕ್ಷಿತ ದಿಕ್ಕಿನಲ್ಲಿ ಉಂಟಾಗುವಂತೆ ನೋಡಿಕೊಳ್ಳಬೇಕು. ಎರಿಕ್‌ಸನ್ ಈ ಎಂಟು ದ್ವಂದ್ವಗಳು ಅಪೇಕ್ಷಿತ ಮತ್ತು ಅನಪೇಕ್ಷಿತ ದಿಶೆಗಳಲ್ಲಿ ಪರಿಹಾರಗೊಂಡಾಗ ಉಂಟಾಗುವ ಪರಿಣಾಮಗಳನ್ನು ವಿವರಿಸಿದ್ದಾನೆ. ಈ ಕೆಳಗಿನ ತಾಲಿಕೆಯು ಎರಿಕ್‌ಸನ್‌ನ ಮನೋಸಾಮಾಜಿಕ ವಿಕಾಸದ ಎಂಟು ಹಂತಗಳ ಸಾರಾಂಶವನ್ನು ಒಳಗೊಂಡಿದೆ (ಪಕ್ಕದ ಪುಟವನ್ನು ನೋಡಿ).

1 ಮೂಲಭೂತ ನಂಬುಗೆ–ಅಪನಂಬುಗೆ :

ಇದು ಜನ್ಮತಾಳಿದ ಮಾನವ ಶಿಶು ಎದುರಿಸಬೇಕಾದ ಮೊದಲ ದ್ವಂದ್ವ. ಶೈಶವಾವಸ್ಥೆಯಲ್ಲಿ ಶಿಶು ಜೈವಿಕವಾಗಿ ಮತ್ತು ಮಾನಸಿಕವಾಗಿ ತಾಯಿಯನ್ನೇ ಅವಲಂಬಿಸಿರುತ್ತದೆ. ಈ ಅವಧಿಯಲ್ಲಿ ಹಸಿವು, ನೀರಡಿಕೆ ಮುಂತಾದ ಜೈವಿಕ ಬೇಡಿಕೆಗಳನ್ನು ಮತ್ತು ತಾಯಿಯ ಬಿಸಿಯಪ್ಪುಗೆ, ಪ್ರೀತಿ, ವಾತ್ಸಲ್ಯಗಳಾದ ಮಾನಸಿಕ ಬೇಡಿಕೆಗಳೆಲ್ಲವೂ ತಾಯಿಯಿಂದಾಗಲೀ ಅಥವಾ ತಾಯಿಯ ಸ್ಥಾನದಲ್ಲಿರುವ ವ್ಯಕ್ತಿಯಿಂದಾಗಲೀ ಸರಿಯಾಗಿ ತೃಪ್ತಿಗೊಳಿಸಲ್ಪಟ್ಟರೆ ಮಗು ಮೂಲಭೂತ ನಂಬುಗೆಯ ಭಾವನೆಯನ್ನು ಬೆಳಸಿಕೊಳ್ಳುತ್ತದೆ. ಈ ಮೂಲಭೂತ ನಂಬುಗೆ ಮುಂದುವರೆದು ಮುಂದೆ ಪಾರಸ್ಪರಿಕ ನಂಬುಗೆಯ ಆಧಾರದ ಮೇಲೆ ಸಾಮಾಜಿಕ ಸಂಬಂಧಗಳನ್ನು ರೂಪಿಸಿಕೊಳ್ಳಲು ಆಧಾರವಾಗುತ್ತದೆ. ಶೈಶವಾವಸ್ಥೆಯಲ್ಲಿ ಈ ಬೇಡಿಕೆಗಳ ತೃಪ್ತಿ ಸರಿಯಾದ ರೀತಿಯಲ್ಲಿ ಆಗದೆ ಹೋದರೆ ಮಗುವಿನಲ್ಲಿ ಮೂಲಭೂತ ಅಪನಂಬುಗೆಯ ಭಾವನೆ ಬೆಳೆಯುತ್ತದೆ. ಇದು ಮುಂದುವರೆದು ಸಾಮಾಜಿಕ ಸಂಬಂಧಗಳ ಮೇಲೆ ಪ್ರಭಾವ ಬೀರುತ್ತದೆ. ಶಿಶುವಿನ ಬೇಡಿಕೆಗಳು ತೃಪ್ತಿಯಾಗದಿರುವುದಕ್ಕೆ ಅನೇಕ ಕಾರಣಗಳಿವೆ. ತಾಯಿಯಿಂದ ಮಗುವಿನ ತಿರಸ್ಕಾರ, ಮಾತೃತ್ವ–ವಂಚನೆ (ತಾಯಿಯ ಅಗಲುವಿಕೆ ಅಥವಾ ತಾಯಿಯ ಸಾವು), ತಾಯಿಯ ಗೈರುಹಾಜರಿ—ಇವು ಈ ರೀತಿಯ ಕೆಲವು ಕಾರಣಗಳು. ಈ ದ್ವಂದ್ವದ ಪರಿಹಾರದ ದಿಶೆ ಶೈಶವಾವಸ್ಥೆಯಲ್ಲಿ ಶಿಶುವಿಗೆ ದೊರೆಯುವ ಮಾತೃ ಸಂರಕ್ಷಣೆಯ ಸ್ವರೂಪವನ್ನು ಅವಲಂಬಿಸಿದೆ. ಶಿಶುವಿನಲ್ಲಿ ಮೂಲಭೂತ ನಂಬುಗೆಯು ಬೆಳೆಯುವಂತೆ ಮಾಡಬೇಕಾಗಿದ್ದರೂ ಸ್ವಲ್ಪಮಟ್ಟಿಗೆ ಅಪನಂಬುಗೆಯೂ ಉಂಟಾಗುವಂತೆ ಮಾಡಬೇಕಾಗುತ್ತದೆ. ಏಕೆಂದರೆ ಶಿಶುವನ್ನು ಅತಿಯಾಗಿ ಹಚ್ಚಿಕೊಂಡರೆ ಅದು ಬೆಳೆದ ನಂತರ ಎಲ್ಲರನ್ನೂ ಅತಿ

ಮನೋಸಾಮಾಜಿಕ ದ್ವಂದ್ವ	ವಯಸ್ಸು	ಮಹತ್ವಪೂರ್ಣ ಸಾಮಾಜಿಕ ಸಂಬಂಧಗಳು	ಅಪೇಕ್ಷಿತ ವರ್ತನ ವಿನ್ಯಾಸಗಳು	ಅಪೇಕ್ಷಿತ ಫಲಿತಾಂಶಗಳು
ನಂಬುಗೆ–ಅಪನಂಬುಗೆ	ಜನ್ಮದಿಂದ 1 ವರ್ಷ	ತಾಯಿ ಅಥವಾ ತಾಯಿ ಸ್ಥಾನದಲ್ಲಿರುವ ವ್ಯಕ್ತಿ	ಪಡೆಯುವುದು ಪ್ರತಿಯಾಗಿ ನೀಡುವುದು	ಉತ್ಸಾಹ ಪ್ರೀತಿ ಭರವಸೆ ಬಾಂಧವ್ಯ
ಸ್ವಾಯತ್ತತೆ ನಾಚಿಕೆ ಸಂಶಯ	2 ವರ್ಷ	ತಂದೆ ತಾಯಿ ಪೋಷಕರು	ಅಂಟಿಕೊಳ್ಳುವಿಕೆ ದೂರ ಸರಿಯುವಿಕೆ	ಸ್ವನಿಯಂತ್ರಣ ಆತ್ಮಶಕ್ತಿ ಆತ್ಮವಿಶ್ವಾಸ
ಕಾರ್ಯೋತ್ಸಾಹ ಗ್ಲಾನಿ (ಅಪರಾಧ ಪ್ರಜ್ಞೆ)	3 ವರ್ಷದಿಂದ 5 ವರ್ಷ	ಕುಟುಂಬ	ಕೆಲಸ ಮಾಡುವುದು ಆಟವಾಡುವುದು	ಉದ್ದೇಶ ಪ್ರಜ್ಞೆ ಗುರಿಸಾಧನೆ
ಪರಿಶ್ರಮ ಕೀಳರಿಮೆ	6ನೇ ವರ್ಷದಿಂದ ಪೂರ್ವ ತಾರುಣ್ಯ	ನೆರೆಹೊರೆ ಶಾಲೆ	ಸ್ಪರ್ಧಿಸುವಿಕೆ ಸಹಕಾರ ನೀಡುವಿಕೆ	ಕಾರ್ಯವಿಧಾನ ದಕ್ಷತೆ
ತಾದಾತ್ಮ್ಯತೆ ಮತ್ತು ತಿರಸ್ಕಾರ ತಾದಾತ್ಮ್ಯತಾ ಹೀನತೆ ಮತ್ತು ಪಾತ್ರ ಗೊಂದಲ	ಕಿಶೋರಾವಸ್ಥೆ (ತಾರುಣ್ಯಾವಸ್ಥೆ)	ಸಖ ಸಮೂಹ ಹೊರಸಮೂಹಗಳು ನಾಯಕತ್ವದ ಮಾದರಿಗಳು	ತನ್ನತನ, ಆತ್ಮ ನಿರ್ಭರತೆ ಇತರರೊಂದಿಗೆ ಹಂಚಿಕೊಳ್ಳುವಿಕೆ	ಭಕ್ತಿಭಾವನೆ ಪ್ರಾಮಾಣಿಕತೆ
ಆತ್ಮೀಯತೆ ಮತ್ತು ಏಕತೆ–ಏಕಾಂತತೆ	ಪೂರ್ವ ವಯಸ್ಕಾವಸ್ಥೆ	ಸ್ನೇಹದಲ್ಲಿ ಸಹಭಾಗಿತ್ವ ಲೈಂಗಿಕ ಸಹಕಾರ್ಯ	ತ್ಯಾಗ ಮಾಡುವುದು ಮತ್ತೊಬ್ಬರಲ್ಲಿ ತನ್ನನ್ನು ಕಾಣುವುದು	ಸಹಯೋಗತ್ವ ಪ್ರೀತಿ

ಮನೋಸಾಮಾಜಿಕ ದ್ವಂದ್ವ	ವಯಸ್ಸು	ಮಹತ್ವಪೂರ್ಣ ಸಾಮಾಜಿಕ ಸಂಬಂಧಗಳು	ಅಪೇಕ್ಷಿತ ವರ್ತನ ವಿನ್ಯಾಸಗಳು	ಅಪೇಕ್ಷಿತ ಫಲಿತಾಂಶಗಳು
ಉತ್ಪಾದಕತೆ–ಸ್ಥಗಿತತೆ	ವಯಸ್ಕಾವಸ್ಥೆ ಮತ್ತು ಮಧ್ಯಮಾವಸ್ಥೆ	ಶ್ರಮದ ಹಂಚಿಕೆ ಕೌಟುಂಬಿಕ ಸಂಬಂಧಗಳು	ಸೃಷ್ಟಿಸುವುದು ಉತ್ಪಾದಿಸುವುದು ಸಂರಕ್ಷಿಸುವುದು	ಉತ್ಪಾದಿಸುವುದು, ಸಂರಕ್ಷಣೆ, ಭೌತಿಕ ಮತ್ತು ಮಾನಸಿಕ ಸಾಧನೆಗಳು
ಸಮಗ್ರತೆ ನೈರಾಶ್ಯಭಾವನೆ	ಉತ್ತರವಯಸ್ಕಾವಸ್ಥೆ	ಮಾನವಕುಲ ತನ್ನ ಕುಲ	ತೃಪ್ತನಾಗಿರುವುದು ತನ್ನವುಟ್ಟಿಗೆ ತಾನಿರುವುದು	ತ್ಯಾಗ, ವಿವೇಚನೆ, ಅಸಂಲಗ್ನತೆ, ಅಲಿಪ್ತತೆ, ಮಾನಸಿಕ ಸ್ಥೈರ್ಯ

(ಮೂಲ :

ಹಿಲ್‌ಗರ್ಡ್ ಅಟ್ಕಿನಾಸನ್ ಆರ್. ಸಿ. ಮತ್ತು ಅಟ್ಕಿನ್ ಸನ್ ಆರ್. ಎಲ್.—ಇಂಟ್ರೊಡಕ್ಷನ್ ಟು ಇ ಆರ್ ಸೈಕಾಲಜಿ, ಆಕ್ಸ್‌ಫರ್ಡ್ ಮತ್ತು ಐ. ಬಿ. ಎಚ್. ಪಬ್ಲಿಕೇಷನ್ಸ್ ಕಂ., ಮುಂಬಯಿ, ಪುಟ, 79)

ಯಾಗಿ ನಂಬಿ ಮೋಸಕ್ಕೊಳಗಾಗಬಹುದು. ಈ ಹಂತದಲ್ಲಿ ಶಿಶು ಅಹಂ-ತಾದಾತ್ಮ್ಯತೆಯನ್ನು ಬೆಳೆಸಿಕೊಳ್ಳುತ್ತದೆ. ಈ ದ್ವಂದ್ವವು ತಾಯಿ-ಮಗುವಿನ ಸಂಬಂಧದ ಮೇಲೆ ಕೇಂದ್ರೀಕೃತವಾಗಿರುತ್ತದೆ.

2 ಸ್ವಾಯತ್ತತೆ–ನಾಚಿಕೆ ಮತ್ತು ಸಂಶಯ :

ಇದು ಮನೋ ಸಾಮಾಜಿಕ ವಿಕಾಸದ ಎರಡನೇ ಹಂತ. ಇದು ಶಿಸುವಿನ ಎರಡನೇ ವರ್ಷದಲ್ಲಿ ಉಂಟಾಗುತ್ತದೆ. ಈ ಹಂತದಲ್ಲಿ ಶಿಶು ಸ್ವಾಯತ್ತತೆಯ (ಸ್ವಾತಂತ್ರತೆಯ) ಭಾವನೆ ಮತ್ತು ನಾಚಿಕೆ, ಸಂಶಯ ಹಾಗೂ ವಿಫಲತೆಯ ಭಾವನೆಗಳ ನಡುವಣ ದ್ವಂದ್ವವನ್ನು ಪರಿಹರಿಸಿಕೊಳ್ಳಬೇಕಾಗುತ್ತದೆ.

ಎರಡನೇ ವರ್ಷದ ಹೊತ್ತಿಗೆ ಶಿಶು ಕ್ರಮೇಣ ತಾಯಿಯಿಂದ ಸ್ವತಂತ್ರವಾಗ ತೊಡಗಿರುತ್ತದೆ. ಹಾಲು ಕುಡಿಯುವುದನ್ನು ಬಿಟ್ಟಿರುತ್ತದೆ. ನಡೆದಾಡುವುದನ್ನು, ಪದಾರ್ಥಗಳನ್ನು ಹಿಡಿದಾಡುವುದನ್ನು, ಘನ ಆಹಾರ ಪದಾರ್ಥಗಳನ್ನು ಸೇವಿಸು ವುದನ್ನು ಮತ್ತು ಪರಿಸರವನ್ನು ಪ್ರಾರಂಭಿಸಿರುತ್ತದೆ. ಅದು ಸಂಪೂರ್ಣವಾಗಿ ತಾಯಿಯನ್ನು ಅವಲಂಬಿಸಿರುವುದಿಲ್ಲ. ಈ ಅವಧಿ ಚಟುವಟಿಕೆಯಿಂದ ಕೂಡಿರು ತ್ತದೆ. ಶಿಶು ಸ್ವನಿಯಂತ್ರಣವನ್ನು, ಆತ್ಮನಿರ್ಭರತೆಯನ್ನೂ (ಆತ್ಮವಿಶ್ವಾಸವನ್ನೂ), ಪ್ರಸಾಧನ ಅಭ್ಯಾಸಗಳು (ಮಲಮೂತ್ರ ವಿಸರ್ಜನ ಅಭ್ಯಾಸಗಳು) ಊಟ ತಿಂಡಿಯ ಅಭ್ಯಾಸಗಳು ಇತ್ಯಾದಿಗಳ ಮೂಲಕ ಬೆಳಸಿಕೊಳ್ಳಲು ಇಚ್ಛಿಸುತ್ತದೆ. ಈ ಕೆಲಸಗಳಲ್ಲಿ ಶಿಶು ಜಯಗಳಿಸಿದರೆ ಅದರಲ್ಲಿ ಸ್ವಾಯತ್ತತೆಯ ಅಥವಾ ಸ್ವಾತಂತ್ರತೆಯ ಭಾವನೆ ಮೂಡುತ್ತದೆ. ಪದೇ ಪದೇ ವಿಫಲತೆಯುಂಟಾದರೆ ಅಥವಾ ನಿರುತ್ಸಾಹ ತಾಳಿದರೆ ಸ್ವಲ್ಪ ಮಟ್ಟಿಗೆ ಶಿಶುವಿನಲ್ಲಿ ನಾಚಿಕೆಯ ಸಂಶಯದ ಭಾವನೆ ಉಂಟಾಗುತ್ತದೆ. ಶಿಶುವಿನ ಅಭಿ ವ್ಯಕ್ತಿಗಳನ್ನು (ಅನಿಸಿಕೆಗಳನ್ನು) ದಮನ ಮಾಡಿದರೆ ಅಥವಾ ಚಟುವಟಿಕೆಯ ಅವಕಾಶ ಗಳಿಂದ ಅದನ್ನು ವಂಚಿತಗೊಳಿಸಿದರೆ ಶಿಶು ಸಂಶಯದ ಮತ್ತು ವಿಫಲತೆಯ ಭಾವನೆ ಯನ್ನು ಬೆಳಸಿಕೊಳ್ಳುತ್ತದೆ. ಈ ದ್ವಂದ್ವವನ್ನು ಅಪೇಕ್ಷಿತ ದಿಶೆಯಲ್ಲಿ ಪರಿಹರಿಸಿದರೆ, ಶಿಶು ಸ್ವ-ನಿಯಂತ್ರಣವನ್ನು ಮತ್ತು ಆತ್ಮಶಕ್ತಿಯನ್ನು ಬೆಳಸಿಕೊಳ್ಳುತ್ತದೆ. ಈ ದ್ವಂದ್ವ ವನ್ನು ಅನಪೇಕ್ಷಿತ ದಿಶೆಯಲ್ಲಿ ಪರಿಹರಿಸಿದರೆ ನಾಚಿಕೆಯ ಪ್ರಕೃತಿ ಸಂಶಯ ಪ್ರಕೃತಿ ಉಂಟಾಗುತ್ತದೆ. ಈ ಅವಧಿಯಲ್ಲಿ ಶಿಶು ಮತ್ತು ತಂದೆ ತಾಯಿಯ ನಡುವಣ ಸಂಬಂಧ ಅತ್ಯಂತ ಮುಖ್ಯವಾದ ಅಂಶವಾಗಿರುತ್ತದೆ. ತಂದೆ ತಾಯಿ ಮಗುವಿಗೆ ಉತ್ಸಾಹವನ್ನೂ, ಪ್ರೋತ್ಸಾಹವನ್ನೂ ನೀಡಬೇಕು. ಶಿಶು ತನ್ನನ್ನು ತಾನು ಹತೋಟಿಯಲ್ಲಿಟ್ಟುಕೊಳ್ಳಲು ಮಾಡುವ ಪ್ರಯತ್ನಗಳನ್ನು ಪ್ರೋತ್ಸಾಹಿಸಬೇಕು. ಸಾಧ್ಯವಾದಷ್ಟು ಮಟ್ಟಿಗೆ ತೀವ್ರ ವಾಗಿ ಟೀಕಿಸುವುದನ್ನು ಕಠಿಣವಾದ ತರಬೇತಿ ಕೊಡುವುದನ್ನೂ ಕಠಿಣವಾಗಿ ದಂಡಿಸುವು ದನ್ನೂ ಮಾಡಬಾರದು.

3. ಕಾರ್ಯೋತ್ಸಾಹ ಗ್ಲಾನಿ (ಅಪರಾಧ ಪ್ರಜ್ಞೆ) :

ಈ ಮೂರನೆ ಹಂತವನ್ನು ಎರಡನೇ ಹಂತದ ವಿಸ್ತೃತ ಅವಧಿ ಎಂದು ಹೇಳಬಹುದು. ಈ ಹಂತ ಮೂರನೇ ವರ್ಷದಿಂದ ಐದನೇ ವರ್ಷದವರೆಗೆ ವಿಸ್ತ ರಿಸುತ್ತದೆ. ಈ ಅವಧಿಯಲ್ಲಿ ಮತ್ತಷ್ಟ ಚಟುವಟಿಕೆಯಿಂದ ಕೂಡಿರುತ್ತದೆ. ಎಲ್ಲಾ ಕೆಲಸಗಳನ್ನೂ ಮಾಡಬೇಕೆನ್ನುವ ಕಾರ್ಯೋತ್ಸಾಹ ಪ್ರವೃತ್ತಿ ಮಗುವಿನಲ್ಲಿ ಉಂಟಾಗುತ್ತದೆ. ಈ ವಯಸ್ಸಿನ ಮಕ್ಕಳು ವಯಸ್ಕರು ಮಾಡುವ ಕೆಲಸಗಳನ್ನೆಲ್ಲಾ ತಾವು ಮಾಡಬೇಕೆನ್ನುವ ಉತ್ಸಾಹದಿಂದ ಕೂಡಿರುತ್ತಾರೆ. ಈ ರೀತಿಯ ಮಕ್ಕಳು ಉತ್ಸಾಹ ತೋರಿಸಿದಾಗಲೆಲ್ಲಾ ಮಗುವಿಗೆ ಪದೇ ಪದೇ ಯಶಸ್ಸು ದೊರಕುತ್ತಿದ್ದರೆ, ಅದರಲ್ಲಿ ಕಾರ್ಯೋತ್ಸಾಹದ ಭಾವನೆ ಮುಂದುವರಿಯುತ್ತದೆ. ಇದಕ್ಕೆ ಪ್ರತಿಯಾಗಿ

ಮಗು ಪದೇ ಪದೇ ವಿಫಲಗೊಳ್ಳುತ್ತಾ ಹೋದರೆ ಮತ್ತು ನಿರಾಶೆಯನ್ನು ಪಡೆಯುತ್ತಾ ಹೋದರೆ ಒಂದು ರೀತಿಯ ಗ್ಲಾನಿ (ಅಪರಾಧಿ ಮನೋಭಾವ)ಯ ಭಾವನೆ ಉಂಟಾಗುತ್ತದೆ. ಈ ಭಾವನೆ ಜೀವನಪರ್ಯಂತ ಮುಂದುವರಿಯಬಹುದು. ಆದುದರಿಂದ ತಂದೆ ತಾಯಿ ಈ ವಯಸ್ಸಿನ ಮಕ್ಕಳು ಸಣ್ಣ ಪುಟ್ಟ ಕೆಲಸಗಳನ್ನು ಮಾಡಿ ಯಶಸ್ಸು ಪಡೆಯುವ ಅವಕಾಶಗಳನ್ನು ಉಂಟು ಮಾಡಬೇಕಾಗುತ್ತದೆ. ಈ ದ್ವಂದ್ವವನ್ನು ಅಪೇಕ್ಷಿತ ದಿಕ್ಕಿನಲ್ಲಿ ಪರಿಹರಿಸಿಕೊಳ್ಳುವಂತೆ ಮಾಡಿದರೆ ಮಗುವಿನಲ್ಲಿ ಕಾರ್ಯೋತ್ಸಾಹ, ಬಿಚ್ಚು ಮನಸ್ಸು, ಧೈರ್ಯ ಮತ್ತು ಅಪಾಯವನ್ನು ಎದುರಿಸುವ ಮನೋಭಾವನೆ ಮತ್ತು ಸಾಹಸ ಪ್ರವೃತ್ತಿ ಉಂಟಾಗುತ್ತದೆ. ಅನಪೇಕ್ಷಿತ ದಿಕ್ಕಿನಲ್ಲಿ ಈ ದ್ವಂದ್ವ ಪರಿಹಾರಗೊಂಡಾಗ ಕಾರ್ಯೋತ್ಸಾಹ ಹೀನತೆ, ಗ್ಲಾನಿಯ ಮನೋಭಾವ, ಹಿಂಜರಿಕೆಯ ಪ್ರವೃತ್ತಿ, ಅಧೈರ್ಯ ಪ್ರವೃತ್ತಿ ಮುಂತಾದ ಗುಣಗಳು ಉಂಟಾಗುತ್ತವೆ. ಈ ಹಂತದಲ್ಲಿ ಮಗು ಬೇರೆ ಮಕ್ಕಳೊಡನೆ ಸಹಕರಿಸಿ ಕೆಲಸಗಳನ್ನು ಕೈಗೊಳ್ಳುವ ರಚನಾತ್ಮಕ ಕಾರ್ಯಗಳನ್ನು ಯೋಜಿಸುವ ಮತ್ತು ಮಾಡುವ ಉದ್ದೇಶದಿಂದ ಬೇರೆ ಮಕ್ಕಳೊಡನೆ ಸೇರುವ ಉತ್ಸಾಹವನ್ನು ತೋರಿಸುತ್ತದೆ. ಉಪಾಧ್ಯಾಯರಿಂದ ಸಹಾಯವನ್ನು ಪಡೆಯಲು ಇಷ್ಟಪಡುವುದಲ್ಲದೆ, ಅನುಕರಣ ಯೋಗ್ಯವಾದ ವರ್ತನೆಗಳನ್ನು ಅನುಕರಿಸಲು ಇಷ್ಟಪಡುತ್ತದೆ. ಕೌಟುಂಬಿಕ ಸಾಮಾಜಿಕ ಸಂಬಂಧಗಳ ರೀತಿ ಮತ್ತು ನರ್ಸರಿ ಮತ್ತು ಕಿಂಡರ್‌ಗಾರ್ಟನ್‌ನ ಸುಟ್ಟನಲ್ಲಿ ಅಧ್ಯಾಪಕರ ವರ್ತನೆಯ ರೀತಿಯನ್ನು ಅವಲಂಬಿಸಿ ಈ ದ್ವಂದ್ವ ಅಪೇಕ್ಷಿತ ದಿಕ್ಕಿನಲ್ಲಿ ಪರಿಹಾರಗೊಳ್ಳಲು ಶಿಶುವಿಗೆ ಸಹಾಯ ದೊರೆಯುತ್ತದೆ. ಈ ಹಂತದಿಂದ ಮುಂದಕ್ಕೆ ಮನೋ ಸಾಮಾಜಿಕ ದ್ವಂದ್ವಗಳ ಪರಿಹಾರದಲ್ಲಿ ಶಾಲೆಯ, ಅದರಲ್ಲಿಯೂ ಅಧ್ಯಾಪಕನ ಪಾತ್ರ ಮಹತ್ವಪೂರ್ಣವೆನಿಸುತ್ತದೆ.

4 ಪರಿಶ್ರಮ–ಕೀಳರಿಮೆ :

ಈ ನಾಲ್ಕನೇ ಹಂತವು ಮಗುವಿನ ಆರನೇ ವರ್ಷದಿಂದ ಪೂರ್ವ ತಾರುಣ್ಯ ಅವಸ್ಥೆಯವರೆಗೂ ಮುಂದುವರಿಯುತ್ತದೆ. ಎರಿಕ್‌ಸನ್ ಈ ಹಂತವನ್ನು "ಸುಪ್ತಾವಸ್ಥೆ"ಯೆಂದೂ, "ಪೂರ್ವ ತಾರುಣ್ಯಾವಸ್ಥೆಯ ಅಲ್ಲೋಲ ಕಲ್ಲೋಲತೆಗೆ ಮುಂಚಿತ ತಾತ್ಕಾಲಿಕ ಶಾಂತತೆಯ ಅವಧಿ" ಎಂದು ಪರಿಗಣಿಸಿದ್ದಾನೆ. ಈ ಹಂತದಲ್ಲಿ ಶಿಶುವು "ವಸ್ತುಗಳನ್ನು ಸೃಷ್ಟಿಸಿ ಕಾರ್ಯಗಳನ್ನು ಪೂರ್ತಿಮಾಡಿ ಮೆಚ್ಚುಗೆಯನ್ನು ಗಳಿಸಲು ಇಷ್ಟಪಡುತ್ತದೆ. ಇವಕ್ಕಾಗಿ ಕಠಿಣ ಪರಿಶ್ರಮ ಪಡುವುದಕ್ಕೆ ಸಿದ್ಧವಾಗುತ್ತದೆ." ಮಗು ಕಾರ್ಯಸಾಧನೆ ಮಾಡಲು, ಕಾರ್ಯದಕ್ಷತೆಯನ್ನು ಸಾಧಿಸಲು ಮತ್ತು ಆತ್ಮ ವಿಶ್ವಾಸವನ್ನು ಬೆಳೆಸಿಕೊಳ್ಳಲು ಬಯಸುತ್ತದೆ. ಇವಕ್ಕೆ ಪ್ರತಿಯಾಗಿ ಮಗು ತಾನು ಸೋತಾಗೆಲ್ಲಾ ಕೀಳರಿಮೆಯ ಭಾವನೆಯನ್ನು ಅನುಭವಿಸುತ್ತದೆ ಮತ್ತು ತಾನು ಅಸಮರ್ಥನೆಂದು ತಿಳಿಯತೊಡಗುತ್ತವೆ ಮತ್ತು ಕೆಲವು ವೇಳೆ ಸೋಲು ಅನಿವಾರ್ಯವಾಗುತ್ತದೆ. ಈ ದ್ವಂದ್ವ ಅಪೇಕ್ಷಿತವಾದ ರೀತಿಯಲ್ಲಿ ಪರಿಹಾರಗೊಂಡರೆ ಮಗುವಿನಲ್ಲಿ ಕಾರ್ಯದಕ್ಷತೆ ಮತ್ತು ಸಹಕಾರ

ಮನೋಭಾವನೆ ಉಂಟಾಗುತ್ತದೆ. ಅನಪೇಕ್ಷಿತ ದಿಶೆಯಲ್ಲಿ ಪರಿಹಾರಗೊಂಡರೆ, ಮಗುವಿನಲ್ಲಿ ಕಾರ್ಯೋತ್ಸಾಹಹೀನತೆ ಮತ್ತು ಕೀಳರಿಮೆಯ ಭಾವನೆ ಉಂಟಾಗುತ್ತದೆ. ಈ ಹಂತದಲ್ಲಿ ನೆರೆಹೊರೆ ಮತ್ತು ಶಾಲೆ ಪ್ರಧಾನ ಪಾತ್ರ ವಹಿಸುತ್ತವೆ. ಈ ವಯಸ್ಸಿನ ಮಕ್ಕಳು ಪದೇ ಪದೇ ಯಶಸ್ವಿಗಳಾಗಬಯಸುವುದರಿಂದ ಶಾಲೆಯಲ್ಲಿ ಪ್ರತಿಯೊಂದು ಮಗುವು ಪದೇ ಪದೇ ಯಶಸ್ವಿಯಾಗುವಂತೆ ಅಧ್ಯಾಪಕರು ನೋಡಿಕೊಳ್ಳಬೇಕು. ಅಂದರೆ ಪ್ರತಿ ಮಗುವಿಗೂ ಅದರ ಸಾಮರ್ಥ್ಯಕ್ಕೆ ಅನುಗುಣವಾದ ಕೆಲಸವನ್ನು ಕೊಡಬೇಕು. ಪ್ರಾರಂಭದಲ್ಲಿ ಸುಲಭವಾದ ಕೆಲಸಗಳನ್ನು ಕೊಡುವುದರಿಂದ ಮಗು ಯಶಸ್ವಿಯಾಗಲು ಸಹಾಯವಾಗುತ್ತದೆ. ಅದರಲ್ಲಿಯೂ ಅಂಗವಿಕಲತೆ ಇರುವ ಅಸಮರ್ಥ ವಿದ್ಯಾರ್ಥಿಗಳ ಬಗ್ಗೆ ಹೆಚ್ಚಿನ ಆಸ್ಥೆ ವಹಿಸಬೇಕಾಗುತ್ತದೆ.

5 ತಾದಾತ್ಮ್ಯತೆ, ತಾದಾತ್ಮ್ಯತಾ ಹೀನತೆ ಮತ್ತು ಪಾತ್ರಗೊಂದಲ :

ಈ ಹಂತ ತಾರುಣ್ಯಾವಸ್ಥೆಯ ಅವಧಿಯಲ್ಲಿ ಬರುತ್ತದೆ. ಈ ಹಂತದಲ್ಲಿ ಸಹ ಸಮೂಹಗಳು, ಇತರ ಸಾಮಾಜಿಕ ಗುಂಪುಗಳು ಮತ್ತು ನಾಯಕತ್ವದ ಮಾದರಿಗಳು ಹೆಚ್ಚಿನ ಪಾತ್ರವನ್ನು ವಹಿಸುತ್ತದೆ. ಈ ಹಂತದಲ್ಲಿ ತರುಣರು ತಮ್ಮ ಪಾತ್ರಗಳನ್ನು ಸರಿಯಾಗಿ ಗುರ್ತಿಸಿಕೊಂಡು, ವಯಸ್ಕಾವಸ್ಥೆಯಲ್ಲಿ ತಾವು ವಹಿಸಬೇಕಾದ ಪಾತ್ರಗಳಿಗೆ ತಮ್ಮನ್ನು ತಾವು ಸಿದ್ಧಗೊಳಿಸಿಕೊಳ್ಳುತ್ತಾರೆ. ಪಾತ್ರಗಳನ್ನು ಗುರ್ತಿಸುವಿಕೆಯು ತರುಣರು ಸೇರುವ ಸಖಸಮೂಹ ಮತ್ತು ಇತರ ಸಾಮಾಜಿಕ ಸಮೂಹಗಳಿಂದ ಮತ್ತು ಅವರು ಆದರ್ಶಪ್ರಾಯರು ಎಂದು ಸ್ವೀಕರಿಸಿರುವ ನಾಯಕರ ಪ್ರಭಾವದಿಂದ ಆಗುತ್ತದೆ. ಈ ವಯಸ್ಸಿನಲ್ಲಿ ಪೋಷಕರ ಪ್ರಾಧಿಕಾರವನ್ನು ಮತ್ತು ಸಮಾಜದಲ್ಲಿ ಇತರ ಪ್ರಾಧಿಕಾರವುಳ್ಳವರನ್ನು ತಿರಸ್ಕರಿಸುವ ಮತ್ತು ಉಪೇಕ್ಷಿಸುವ ಮನೋಭಾವನೆಯನ್ನು ಹೊಂದಿರುತ್ತಾರೆ. ಆದರೆ ಸಖಸಮೂಹಗಳ ಮತ್ತು ಇತರ ಗುಂಪುಗಳ ಬಗ್ಗೆ ವಿಧೇಯತೆಯ ಮನೋಭಾವವುಳ್ಳವರಾಗಿರುತ್ತಾರೆ. ತಮ್ಮ ಸ್ನೇಹಿತರ ದೃಷ್ಟಿಯಿಂದ ತಾವು ಹೇಗೆ ಕಾಣಿಸಿಕೊಳ್ಳುತ್ತೇವೆಂಬುದರ ಬಗ್ಗೆ ಹೆಚ್ಚಿನ ಮಹತ್ವ ನೀಡುತ್ತಾರೆ. ಯಾವುದಾದರೂ ಒಂದು ಗುಂಪು ಅಥವಾ ಧ್ಯೇಯದೊಂದಿಗೆ ತಾದಾತ್ಮ್ಯತೆಯನ್ನು ಉಂಟು ಮಾಡಿಕೊಳ್ಳದಿದ್ದಲ್ಲಿ ಸಮಾಜದಲ್ಲಿ ತಮ್ಮ ಪಾತ್ರವೇನೆಂಬುದರ ಬಗ್ಗೆ ಅನಿಶ್ಚಯತೆ ಯುಂಟಾಗಿ, ಪಾತ್ರಗೊಂದಲವನ್ನು ಅನುಭವಿಸುವ ತರುಣರು ಸಮಾಜದಲ್ಲಿ ಸಮಸ್ಯೆಯನ್ನುಂಟುಮಾಡುತ್ತಾರೆ. ಆದುದರಿಂದ ಶಾಲೆಗಳಲ್ಲಿ ರಚನಾತ್ಮಕ ಚಟುವಟಿಕೆಗಳಿಗೆ ಬೇಕಾದ ಗುಂಪುಗಳನ್ನು ಕಟ್ಟಿಕೊಳ್ಳಲು ಅವಕಾಶಗಳನ್ನು ಕಲ್ಪಿಸಬೇಕು. ವಿವಿಧ ರೀತಿಯ ಸಾಮಾಜಿಕ ಮತ್ತು ದಾರ್ಶನಿಕ ವಿಚಾರ ಪಂಥಗಳು, ಧಾರ್ಮಿಕ ಸಮೂಹಗಳು ಮತ್ತು ಶಾಲಾಧ್ಯೇಯಗಳು ತರುಣರು ತಮ್ಮ ಪಾತ್ರಗಳೊಂದಿಗೆ ಸರಿಯಾಗಿ ತಾದಾತ್ಮ್ಯತೆಯನ್ನುಂಟುಮಾಡಿಕೊಳ್ಳಲು ಸಹಾಯ ನೀಡುತ್ತವೆ.

6 ಆತ್ಮೀಯತೆ, ಏಕಾಂತತೆ :

ಈ ದ್ವಂದ್ವ ಪ್ರಾರಂಭಿಕ ವಯಸ್ಕಾವಸ್ಥೆ ಅಥವಾ ಉತ್ತರ ತಾರುಣ್ಯಾವಸ್ಥೆಯಲ್ಲಿ ಉಂಟಾಗುತ್ತದೆ. ಈ ಹಂತದಲ್ಲಿ ವ್ಯಕ್ತಿಗೆ ತನ್ನ ಸುಖದುಃಖ ಭಾವನೆಗಳನ್ನು ಹಂಚಿಕೊಳ್ಳುವಂಥ ವ್ಯಕ್ತಿ ಅಥವಾ ವ್ಯಕ್ತಿಗಳೊಡನೆ ಆತ್ಮೀಯ ಸಂಬಂಧವನ್ನು ಸ್ಥಾಪಿಸಿಕೊಳ್ಳಬೇಕಾದ ಅವಶ್ಯಕತೆ ಉಂಟಾಗುತ್ತದೆ. ತನ್ನ ಅನುಭವಗಳನ್ನು ಹಂಚಿಕೊಳ್ಳಲು ಮಾನಸಿಕವಾಗಿ ಹತ್ತಿರಕ್ಕೆ ಬರುವಂಥವರನ್ನು ವ್ಯಕ್ತಿ ಬಯಸುತ್ತಾನೆ. ಗಂಡ ಹೆಂಡಿರ ನಡುವಣ ಸಂಬಂಧವು ಈ ರೀತಿಯ ಆತ್ಮೀಯ ಸಾಮಾಜಿಕ ಸಂಬಂಧಕ್ಕೆ ಒಳ್ಳೆಯ ಉದಾಹರಣೆ, ಆತ್ಮೀಯ ಮಿತ್ರರ ನಡುವಣ ಸಂಬಂಧವೂ ಇದೇ ರೀತಿಯದು. ಈ ರೀತಿಯ ಆತ್ಮೀಯ ಸಂಬಂಧ ಸ್ಥಾಪಿತವಾದರೆ ತನ್ನ ಸಹ ಭಾಗಿಗೋಸ್ಕರವಾಗಿ ಏನನ್ನಾದರೂ ತ್ಯಾಗ ಮಾಡಲು ಮತ್ತು ಅವನೊಡನೆ — ಅವಳೊಡನೆ ತಾದಾತ್ಮ್ಯವನ್ನು ಸ್ಥಾಪಿಸಿಕೊಳ್ಳಲು ವ್ಯಕ್ತಿ ಸಿದ್ಧನಾಗುತ್ತಾನೆ. ಪ್ರೇಮಿಗಾಗಿ, ಸ್ನೇಹಿತನಿಗಾಗಿ ಅಥವಾ ಇನ್ನಾವುದೇ ರೀತಿಯ ಸಂಬಂಧಿಗಾಗಿ ಪ್ರೀತಿ ತೋರಿಸುವುದು, ತನ್ನನ್ನು ತಾನು ಸಮರ್ಪಿಸಿಕೊಳ್ಳುವುದು ಹಾಗೂ ತ್ಯಾಗ ಮಾಡುವುದು ಆತ್ಮೀಯ ಸಾಮಾಜಿಕ ಸಂಬಂಧವನ್ನು ಬೆಳೆಸಿಕೊಳ್ಳಲು ವಿಫಲನಾದರೆ, ಅವನು ರಹಸ್ಯವಾದಿಯೂ, ಏಕಾಕಿಯೂ ಆಗುವುದಲ್ಲದೆ ಒಂದು ರೀತಿಯ ಅನಾಥ ಪ್ರಜ್ಞೆಯ ಮನೋಭಾವನೆಯನ್ನು ಬೆಳೆಸಿಕೊಳ್ಳುತ್ತಾನೆ. ಅವನು ವಿಶ್ವನಿಂದನೆ (ಸರ್ವನಿಂದನೆ)ಯ ಭಾವನೆಯನ್ನು ತಾಳಬಹುದು. ಆರೋಗ್ಯಕರವಾದ ಪ್ರತಿಲಿಂಗಿಯ ಸಂಬಂಧಗಳು, ಸ್ನೇಹ ಸಂಬಂಧಗಳು ಮತ್ತು ವೈವಾಹಿಕ ಸಂಬಂಧಗಳು (ಸರಿಯಾದ ರೀತಿಯಲ್ಲಿ ಏರ್ಪಡಿಸಿದ ಅಥವಾ ಪ್ರೀತಿಯಿಂದ ಉಂಟಾದ) ಆತ್ಮೀಯತೆಯನ್ನು ಸಾಧಿಸಲು ನೆರವಾಗುತ್ತದೆ. ಅರ್ಥಮಾಡಿಕೊಳ್ಳಬಲ್ಲ ತಂದೆ-ತಾಯಿ, ಅಧ್ಯಾಪಕರು, ಉಪಬೋಧಕರು ಮತ್ತು ಧಾರ್ಮಿಕ ಮುಖಂಡರು ತರುಣರು ಈ ದ್ವಂದ್ವವನ್ನು ಅಪೇಕ್ಷಿತ ದಿಶೆಯಲ್ಲಿ ಪರಿಹರಿಸಿಕೊಳ್ಳಲು ನೆರವು ನೀಡಬಲ್ಲರು.

7 ಉತ್ಪಾದಕತೆ, ಸ್ಥಗಿತತೆ :

ಈ ಹಂತ ಪ್ರಾರಂಭಿಕ ವಯಸ್ಕಾವಸ್ಥೆಯಿಂದ (20ವರ್ಷ) ಮಧ್ಯ ವಯಸ್ಕಾವಸ್ಥೆ (50ವರ್ಷ)ಯವರೆಗು ವಿಸ್ತರಿಸುತ್ತದೆ. ಈ ಹಂತದಲ್ಲಿ ವ್ಯಕ್ತಿ ಉತ್ಪಾದಕ ಅಥವಾ ಸೌಜನ್ಯಶೀಲನಾಗುತ್ತಾನೆ ಇಲ್ಲವೆ ನಿಷ್ಕ್ರಿಯನಾಗುತ್ತಾನೆ. ಎರಿಕ್‌ಸನ್ ಉತ್ಪಾದಕತೆಯಲ್ಲಿ ಸೃಜನಾತ್ಮಕತೆಯನ್ನು ಸೇರಿಸುತ್ತಾನೆ. ಉತ್ಪಾದಕತೆ ಬೌದ್ಧಿಕ ಸಾಧನೆಯಾಗಿರಬಹುದು ಅಥವಾ ಸಾಮಾಜಿಕ ಹಾಗೂ ಉಪಯೋಗಕರವಾದ ಯಾವುದೇ ರೀತಿಯ ಬೌದ್ಧಿಕ ಸಾಧನೆಯಾಗಿರಬಹುದು. ಉತ್ಪಾದಕತೆ ಕುಟುಂಬವನ್ನು ಸ್ಥಾಪಿಸುವುದು, ಅದನ್ನು ಸಂರಕ್ಷಿಸಿ, ಮಾರ್ಗದರ್ಶನ ನೀಡುವುದನ್ನು ಒಳಗೊಳ್ಳುತ್ತದೆ. ಬಹಳ

ಮಂದಿ ಈ ಮಟ್ಟದಲ್ಲಿ ಕಾರ್ಯತತ್ಪರರಾದರೂ, ಕೆಲವರು ಸೀಮಿತ ಸ್ವಾರ್ಥತೆಯ ಮಟ್ಟದಿಂದ ಮೇಲೇರಿ ಉನ್ನತ ಉದ್ದೇಶಗಳಿಗೆ ತಮ್ಮನ್ನು ಅರ್ಪಿಸಿಕೊಂಡು ಸಮಾಜಕ್ಕೆ ತನ್ನ ಕೊಡುಗೆಯನ್ನು ನೀಡುತ್ತಾರೆ. ಈ ರೀತಿಯ ಸೃಷ್ಟ್ಯಾತ್ಮಕ ಪ್ರೇರಣೆಯಿಲ್ಲದಿದ್ದಲ್ಲಿ ವ್ಯಕ್ತಿ ಉತ್ಪಾದಕ (ಸೃಷ್ಟ್ಯಾತ್ಮಕ) ದೃಷ್ಟಿಯಿಂದ ನಿಷ್ಕ್ರಿಯವಾಗಿ ಬಿಡುತ್ತಾನೆ. ಸಮಾಜಕ್ಕೆ ತನ್ನ ಕೊಡುಗೆಯನ್ನು ನಿಲ್ಲಿಸಿಬಿಡುತ್ತಾನೆ. ಮತ್ತು ಉದಾಸೀನ ಭಾವದಿಂದ ತನ್ನ ಕೆಲಸಗಳನ್ನು ಮಾಡಿಕೊಂಡು ಹೋಗತೊಡಗುತ್ತಾನೆ. ಆದುದರಿಂದ ವ್ಯಕ್ತಿಗಳು ಈ ವಯಸ್ಸಿನಲ್ಲಿಯೂ ಸಕ್ರಿಯತೆಯಿಂದ ಇರಲು ಏನಾದರೊಂದು ಉತ್ತಮ ಉದ್ದೇಶವನ್ನು ಆಯ್ದುಕೊಳ್ಳಬೇಕಾಗುತ್ತದೆ. ಉತ್ಪಾದಕತೆಯ ಮನೋಭಾವವು ಪ್ರಯೋಜನಾತ್ಮಕ ಕಾರ್ಯಗಳಿಗೂ ಮತ್ತು ಸಂರಕ್ಷಣಾತ್ಮಕ ಚಟುವಟಿಕೆಗಳಿಗೂ ಉತ್ಸಾಹವನ್ನೂ ನೀಡುತ್ತದೆ. ಸ್ಥಗಿತತೆಯ ಮನೋಭಾವವು ಏಕತಾನತೆ, ಉತ್ಸಾಹಹೀನತೆ ಮತ್ತು ಕಾರ್ಯದಲ್ಲಿ ತಲ್ಲೀನತೆಯಿಲ್ಲದಿರುವಿಕೆಯನ್ನು ಉಂಟುಮಾಡುತ್ತದೆ. ಎರಿಕ್‌ಸನ್ನನ ಪ್ರಕಾರ ಬಹುಮಂದಿ ಈ ವಯೋಮಾನದಲ್ಲಿ ಸೃಷ್ಟ್ಯಾತ್ಮಕವಾಗಿ ಸ್ಥಗಿತಗೊಳ್ಳುತ್ತಾರೆ. ಕೆಲವೇ ಮಂದಿ ಉತ್ಪಾದಕತೆಯನ್ನು ಮುಂದುವರಿಸಿಕೊಂಡು, ಜೀವನದ ಬಗ್ಗೆ ಉತ್ಸಾಹವನ್ನು ಉಳಿಸಿಕೊಳ್ಳುತ್ತಾರೆ.

8 ಸಮಗ್ರತೆ–ನೈರಾಶ್ಯಭಾವನೆ :

ಎರಿಕ್‌ಸನ್ನನ ಪ್ರಕಾರ ಇದು ಮನೋಸಾಮಾಜಿಕ ವಿಕಾಸದ ಅಂತಿಮ ಹಂತವಾಗುತ್ತದೆ. ಜೀವನದ ಅಂತ್ಯ ಭಾಗದಲ್ಲಿ, ಮೃತ್ಯು ಸನ್ನಿಹಿತವಾಗುವುದಕ್ಕೆ ಮೊದಲು ಪ್ರತಿಯೊಬ್ಬ ವ್ಯಕ್ತಿಯೂ ಈ ದ್ವಂದ್ವವನ್ನು ಎದುರಿಸಿ, ಪರಿಹರಿಸಲೇಬೇಕಾಗುತ್ತದೆ. ಈ ಹಂತದಲ್ಲಿ ವ್ಯಕ್ತಿಯು ಸಾಫಲ್ಯತೆಯ ಭಾವನೆಯನ್ನೂ, ಸಮಗ್ರತೆಯ ಭಾವನೆಯನ್ನೂ ಬೆಳೆಸಿಕೊಳ್ಳಬೇಕು. ತನ್ನ ಜೀವನ್ನು ಪ್ರಯೋಜನಕರವಾದ ರೀತಿಯಲ್ಲಿ ಕಳೆದಿದ್ದೇನೆ ಎನ್ನುವ ತೃಪ್ತಿಯ ಭಾವನೆಯನ್ನು ಹೊಂದಬೇಕು. ಇದರ ಜೊತೆಗೇ ನಿವೃತ್ತಿ ಜೀವನಕ್ಕೆ ಸಿದ್ಧನಾಗಬೇಕು. ಕ್ರಮೇಣ ಕುಂದುತ್ತಿರುವ ತನ್ನ ದೈಹಿಕ ಸಾಮರ್ಥ್ಯವನ್ನೂ ಅನಿವಾರ್ಯವಾಗಿ ಉಂಟಾಗಬೇಕಾದ ಮೃತ್ಯುವನ್ನೂ ಆದಷ್ಟು ಗೆಲ್ಲಲು ಪ್ರಯತ್ನಿಸಬೇಕು. ಇವೆಲ್ಲವೂ ಜೀವನದ ಬಗ್ಗೆ ಸಮಗ್ರತೆಯ ದೃಷ್ಟಿಕೋನವನ್ನು ಬೆಳೆಸಿಕೊಂಡರೆ ಮಾತ್ರ ಸಾಧ್ಯವಾಗುತ್ತದೆ. ಈ ಸಮಗ್ರತೆಯನ್ನು ಸಾಧಿಸಲು ವ್ಯಕ್ತಿ ವಿಫಲಗೊಂಡರೆ ಜೀವನದಲ್ಲಿ ನಿರಾಶೆಯ ಮನೋಭಾವನೆಯನ್ನು ತಾಳುತ್ತಾನೆ. ಜೀವನದ ಉದ್ದೇಶದ ಬಗ್ಗೆ, ಅದರ ಸಾರ್ಥಕತೆಯ ಬಗ್ಗೆ ಅಧಿಕವಾಗಿ ಆತಂಕ ಸ್ಥಿತಿಯನ್ನು ಅನುಭವಿಸತೊಡಗಿ ವೃದ್ಧಾಪ್ಯದಲ್ಲಿ ಸರಿಯಾಗಿ ಸಮಾಯೋಜನೆ ಮಾಡಿಕೊಳ್ಳಲು ವಿಫಲನಾಗಿ ಇತರರಿಗೆ ಸಮಸ್ಯೆಗಳನ್ನು ಉಂಟುಮಾಡುತ್ತಾನೆ. ನಿಜವಾದ ಅರ್ಥದಲ್ಲಿ ಜ್ಞಾನಾರ್ಜನೆ ಮಾಡಿಕೊಂಡವರು, ಆಧ್ಯಾತ್ಮ ನಿಲುವನ್ನು ತಳೆದ

ವರು, ತ್ಯಾಗ, ವೈರಾಗ್ಯ ಮುಂತಾದ ಉತ್ತಮ ರೀತಿಯ ಮಾರ್ಗದರ್ಶನ ಪಡೆದವರು ಈ ದ್ವಂದ್ವವನ್ನು ಅಪೇಕ್ಷಿತ ದಿಶೆಯಲ್ಲಿ ಪರಿಹರಿಸಿಕೊಳ್ಳಲು ಶಕ್ತರಾಗುತ್ತಾರೆ.

ಮನೋ ಸಾಮಾಜಿಕ ವಿಕಾಸದ ಈ ಎಂಟು ಹಂತಗಳು ವ್ಯಕ್ತಿಯ ಜೀವಿತಾವಧಿಯ ಅನಿವಾರ್ಯ, ಅಪಹಾರಿಕಾರ್ಯ ಮುಖಗಳಾಗಿವೆ. ಹಿಂದಿನ ಹಂತ ಮುಂದಿನ ಹಂತಕ್ಕೆ ವ್ಯಕ್ತಿಯನ್ನು ಸಿದ್ಧಗೊಳಿಸುತ್ತದೆ. ಯಾವುದೇ ಹಂತದಲ್ಲಿನ ಯಶಸ್ಸು ಹಿಂದಿನ ಹಂತದಲ್ಲಿನ ಯಶಸ್ಸನ್ನು ಅವಲಂಬಿಸಿರುತ್ತದೆ. ಎರಿಕ್‌ಸನ್ನನ ಪ್ರಕಾರ ಈ ದ್ವಂದ್ವಗಳು ಪರಿಹಾರಗೊಳ್ಳುವ ವಿಧಾನವು ವ್ಯಕ್ತಿಯ ವ್ಯಕ್ತಿತ್ವ ವಿಕಾಸದ ಮೇಲೆ ತೀವ್ರತರವಾದ ಪ್ರಭಾವವನ್ನು ಬೀರುತ್ತದೆ. ಹಂತಗಳು 1, 2 ಮತ್ತು 3ರಲ್ಲಿ ತಂದೆ-ತಾಯಿಯ ಪ್ರಭಾವ ಮಹತ್ವದ್ದಾಗಿದೆ. ತಂದೆ ತಾಯಿ ಈ ಹಂತಗಳಲ್ಲಿನ ದ್ವಂದ್ವಗಳನ್ನು ಅಪೇಕ್ಷಿತ ರೀತಿಯಲ್ಲಿ ಪರಿಹರಿಸಲು ಮಗುವಿಗೆ ಸಹಾಯ ನೀಡಬೇಕಾಗುತ್ತದೆ ಹಂತಗಳು 4, 5, ಮತ್ತು 6ರಲ್ಲಿ ಅಧ್ಯಾಪಕರು ಮಗುವಿಗೆ, ನಂತರ (ತರುಣ)ರಿಗೆ ಬಹಳಮಟ್ಟಿಗೆ ಸಹಾಯ ನೀಡಬಲ್ಲರು. ಹಂತಗಳು 7 ಮತ್ತು 8 ರಲ್ಲಿ ವ್ಯಕ್ತಿ ತಾನೇ ಏಕಾಕಿಯಾಗಿ ತನ್ನ ದ್ವಂದ್ವಗಳನ್ನು ಪರಿಹರಿಸಿಕೊಳ್ಳಲು ಪ್ರಯತ್ನಿಸಬೇಕು. ಹಿರಿಯರು, ಧಾರ್ಮಿಕ ಮುಖಂಡರು ಗುರುಗಳು ಸ್ವಲ್ಪಮಟ್ಟಿಗೆ ಸಹಾಯ ನೀಡಬಲ್ಲರು.

ಎರಿಕ್‌ಸನ್ನನ ಮನೋ-ಸಾಮಾಜಿಕ ಹಂತಗಳಲ್ಲಿ ಮತ್ತು ಭಾರತೀಯ ಸನಾತನ ಧರ್ಮದಲ್ಲಿ ಪ್ರತಿಪಾದಿತವಾಗಿರುವ ಆಶ್ರಮ ಧರ್ಮಗಳಲ್ಲಿ ನಿಕಟ ಸಾಮ್ಯವಿರುವುದನ್ನು ಗಮನಿಸಬಹುದು. ಹಂತಗಳು, 1, 2, 3, 4, ಮತ್ತು 5ನ್ನು ಬ್ರಹ್ಮಚರ್ಯ ಆಶ್ರಮಕ್ಕೆ ಹೋಲಿಸಬಹುದು. ಹಂತಗಳು 6 ಮತ್ತು 7ನ್ನು ಗೃಹಸ್ಥಾಶ್ರಮಕ್ಕೆ ಹೋಲಿಸಬಹುದು. ಕಡೆಯ ಹಂತವಾದ 8 ನೇ ಹಂತವನ್ನು ಭಾರತೀಯ ಪದ್ಧತಿಯಲ್ಲಿ ಎರಡು ವಿಭಾಗ ಮಾಡಲಾಗಿದೆ. ವಾನಪ್ರಸ್ಥಾಶ್ರಮ ಒಂದು ಸಿದ್ಧತೆಯ ಅವಧಿ ಮತ್ತು ಸಂನ್ಯಾಸ ಆಶ್ರಮ-ಪರಿಪೂರ್ಣತೆಯನ್ನು ಅಥವಾ ಜೀವನದ ಅತ್ಯುನ್ನತ ಗುರಿಯಾದ ಮೋಕ್ಷವನ್ನು ಪಡೆಯಲು ಪ್ರಯತ್ನಿಸುವ ಹಂತ. ಈ ನಾಲ್ಕು ಹಂತಗಳನ್ನೂ, ಜೀವನದ ಅವಶ್ಯಕತೆಗಳನ್ನೂ ವಿವೇಚನಾತ್ಮಕವಾಗಿ ತೃಪ್ತಿಗೊಳಿಸಿಕೊಂಡು, ಜೀವನದ ಪರಮೋದ್ದೇಶವಾದ ಮೋಕ್ಷವನ್ನು ಪಡೆಯಲು ಪ್ರಯತ್ನಿಸುವ ನಿರಂತರ ಹೋರಾಟವೆಂದು ಪರಿಗಣಿಸಿದ್ದಾರೆ. ಜೀವನದ ಅವಶ್ಯಕತೆಗಳನ್ನು ಅವುಗಳ ಪ್ರಾಮುಖ್ಯತೆಯ ಪ್ರಕಾರ ಧರ್ಮ, ಅರ್ಥ, ಕಾಮ, ಮತ್ತು ಮೋಕ್ಷಗಳೆಂಬ ನಾಲ್ಕು ಪುರುಷಾರ್ಥಗಳ ಅಡಕವಾಗಿಸಿದ್ದಾರೆ. ಈ ನಾಲ್ಕು ಆಶ್ರಮಗಳಲ್ಲಿ ವ್ಯಕ್ತಿಯ ಕರ್ತವ್ಯಗಳನ್ನೂ ಮತ್ತು ಜವಾಬ್ದಾರಿಗಳನ್ನೂ ಹಿಂದೂ ಧರ್ಮಶಾಸ್ತ್ರಗಳಲ್ಲಿ ವಿವರಿಸಲಾಗಿದೆ.

ಅಭಿಪ್ರೇರಣೆಯ ಮಾನವತಾವಾದಿ ದೃಷ್ಟಿಕೋನ :

ಸ್ವಯಂ-ಪ್ರೇರಣೆಯನ್ನು ಪಡೆಯಬಲ್ಲ, ಜೀವನೋದ್ದೇಶಗಳನ್ನು ರೂಪಿಸಿಗೊಂಡು ಅವುಗಳನ್ನು ತಲುಪಲು ಪ್ರಯತ್ನಿಸುವಂಥ ಮಾನವನಲ್ಲಿರುವ ಮುಖ್ಯ ವ್ಯಕ್ತಿತ್ವ

ಲಕ್ಷಣಗಳನ್ನು ಮುಖ್ಯವಾದುವೆಂದು ಪ್ರತಿಪಾದಿಸುವ ಮನೋವಿಜ್ಞಾನಿಗಳು ಮತ್ತು ಶಿಕ್ಷಣವೇತ್ತರು ಮಾನವತಾದಿ ಮನೋವಿಜ್ಞಾನಿಗಳೆಂದು ಕರೆಸಿಕೊಳ್ಳುತ್ತಾರೆ. ಮಾನವರು ತಮ್ಮ ವರ್ತನೆಯನ್ನು ತಾವೇ ನಿರ್ಧರಿಸಿಕೊಳ್ಳಬಲ್ಲರು ಎನ್ನುವುದು ಮಾನವತಾವಾದಿಗಳ ದೃಷ್ಟಿಕೋನವಾಗಿದೆ. ಮಾನವನು ಸಂಪೂರ್ಣವಾಗಿ ಆಂತರಿಕ ಜೈವಿಕ ಚೋದನೆಗಳಿಂದಾಗಲೀ ಅಥವಾ ಪರಿಸರದಲ್ಲಿರುವ ಶಕ್ತಿಗಳಿಂದಾಗಲೀ ನಿಯಂತ್ರಿತನಾಗಿಲ್ಲ; ತನ್ನತನದ ಅರಿವು, ತಾನಿರುವಂತೆ ಮತ್ತು ತಾನು ಹೇಗೆ ಇರಬಯಸುತ್ತಾನೆಂಬುದರ ಕಲ್ಪನೆಯನ್ನು ಅರ್ಥಮಾಡಿಕೊಳ್ಳುವುದೇ ವಿಕಾಸದ ಕೀಲಿ ಕೈಯಾಗಿದೆ. ವ್ಯಕ್ತಿತ್ವದ ವಿಕಾಸದ ದಿಶೆಯನ್ನು ಪೋಷಕರಿಗೆ ಅಥವಾ ಅಧ್ಯಾಪಕರಿಗೆ ಕೊಡದೆ, ಸ್ವತಃ ವ್ಯಕ್ತಿಗೆ ಕೊಟ್ಟಿರುವುದರಿಂದ ಈ ಸಿದ್ಧಾಂತವು ಅಪೂರ್ವವಾದುದಾಗುತ್ತದೆ.

ಮಾನವತಾವಾದಿ ಮನೋವಿಜ್ಞಾನವು ಶೈಕ್ಷಣಿಕ ಪದ್ಧತಿಯನ್ನು ಬಹುಮಟ್ಟಿಗೆ ಪ್ರಭಾವಗೊಳಿಸಿದೆ. ಕಾರ್ಲ್ ರೋಜರ್ಸ್, ಕಿರ್ಕೆಗಡ್ ಕುರ್ಟ್, ಗೋಲ್ಡ್‌ಸ್ಟೈನ್ ಮತ್ತು ಅಬ್ರಹಾಂ ಮಾಸ್ಲೊ, ಇವರುಗಳು ಮಾನವತಾವಾದಿ ದೃಷ್ಟಿಕೋನದ ಮುಖ್ಯ ಪ್ರತಿಪಾದಕರಾಗಿದ್ದಾರೆ. ಫ್ರಾಯ್ಡ್‌ನಿಂದ ವರ್ಣಿಸಲ್ಪಟ್ಟ ಅವಚೇತನಾತ್ಮಕ ಪ್ರೇರಣೆಗಳಿಂದಲೂ, ಮತ್ತು ಹುಟ್ಟುಗುಣಗಳಿಂದಲೂ ನಿಯಂತ್ರಿಸಲ್ಪಡುವ ಮಾನವನ ಅಸಹಾಯಕ ಚಿತ್ರಕ್ಕೆ ಬದಲಾಗಿ ಮಾಸ್ಲೋ ಆಶಾವಾದದಿಂದ ಪ್ರೇರಿತನಾದ ಮನುಷ್ಯನ ಚಿತ್ರವನ್ನು ಕೊಟ್ಟಿದ್ದಾನೆ. ಅವನು ಜೀವನದ ಗುರಿಗಳು ಮತ್ತು ಉದ್ದೇಶ್ಯಗಳಿಗೆ ಮಹತ್ವ ನೀಡಿ ಅವುಗಳು ಮಾನವನ ವರ್ತನೆಯನ್ನು ಅಭಿಪ್ರೇರಿತಗೊಳಿಸುವ ಶಕ್ತಿಗಳೆಂದು ಹೇಳಿದ್ದಾನೆ. ಮಾಸ್ಲೋವಿನ ಅಭಿಪ್ರೇರಣ ಸಿದ್ಧಾಂತವು ತಾತ್ಕಾಲಿಕವಾದ ಜೈವಿಕ ಆವಶ್ಯಕತೆಗಳು ಮತ್ತು ಪರಿಸರಣೀಯ ನಿರ್ಧಾರಕಗಳನ್ನು ಮೀರಿ ಹೋಗಿ ಮೇಲ್ಮಟ್ಟದ ಅಭಿಪ್ರೇರಣೆಯನ್ನು ಪ್ರತಿಪಾದಿಸುವುದರಿಂದ ಅವನ ಸಿದ್ಧಾಂತವನ್ನು ಪರ—ಅಭಿಪ್ರೇರಣ ಸಿದ್ಧಾಂತ ಎಂದು ಕರೆಯಲಾಗಿದೆ. ಮಾನವನು ಭೂತ ಮತ್ತು ವರ್ತಮಾನಗಳಿಂದ ಪ್ರಭಾವಿತನಾದಂತೆಯೇ ಭವಿಷ್ಯದಿಂದಲೂ ಪ್ರಭಾವಿತಗೊಳ್ಳುತ್ತಾನೆ ಎಂದು ಅವನು ತಿಳಿಯುತ್ತಾನೆ. ಭೂತ ಮತ್ತು ವರ್ತಮಾನಗಳು ನಮ್ಮಲ್ಲಿರುವಂತೆ ಭವಿಷ್ಯಕಾಲವೂ ನಮ್ಮಲ್ಲಿ ನಿಹಿತವಾಗಿರುತ್ತದೆ. ಮಾಸ್ಲೋ ಆರೋಗ್ಯವಂತರಾದ ಮತ್ತು ಸಮಯೋಚಿತರಾದ ಮಾನವರ ಬಗ್ಗೆ ಮೂಲಭೂತವಾಗಿ ಆಸಕ್ತಿ ತಳೆದಿದ್ದಾನೆ. ವಾಸ್ತವಾಂಶವೆಂದರೆ, ಅವನ ಸಿದ್ಧಾಂತವು ಸರಿಯಾದ ರೀತಿಯಲ್ಲಿ ಕಾರ್ಯಾತ್ಮಕವಾಗಿರುವ ಸಮಯೋಚಿತವಾದ ವ್ಯಕ್ತಿಗಳ ಅವಲೋಕನಗಳ ಮತ್ತು ಅಧ್ಯಯನಗಳ ಆಧಾರದ ಮೇಲೆ ನಿಂತಿದೆ.

ಮಾನವರಲ್ಲಿ ಕೇವಲ ಒಂದೇ ಒಂದು ಸಾರ್ವಭೌಮಿಕವಾದ ಅಭಿಪ್ರೇರಣೆ ಇದೆಯೆಂದು ಮಾಸ್ಲೋ ವಾದಿಸಿದ್ದಾನೆ. ಈ ಅಭಿಪ್ರೇರಣೆಯನ್ನು ಅವನು ಆತ್ಮ ಸಾಕ್ಷಾತ್ಕಾರ ಎಂದು ಕರೆದಿದ್ದಾನೆ. ಇದು ವ್ಯಕ್ತಿಯಲ್ಲಿರುವ ತನ್ನನ್ನು ತಾನು ಅರಿತುಕೊಳ್ಳಬೇಕೆನ್ನುವ ಮತ್ತು ತನ್ನಲ್ಲಿರುವ ಅಂತಃಸತ್ವಗಳನ್ನು ಅರಿತುಕೊಂಡು ಅವುಗಳನ್ನು ಪರಮಾವಧಿಯಾಗಿ ಅಭಿವ್ಯಕ್ತಿಗೊಳಿಸಬೇಕೆನ್ನುವ ಆವಶ್ಯಕತೆಯನ್ನು ಸೂಚಿಸುತ್ತದೆ.

(ಮಾಸ್ಲೋವಿನ ಪರಿಕಲ್ಪನೆಯಾದ ಆತ್ಮ ಸಾಕ್ಷಾತ್ಕಾರವನ್ನು, ಭಾರತದ ವೇದಾಂತದಲ್ಲಿ ಪ್ರತಿಪಾದಿಸಿರುವ ಆತ್ಮ ಸಾಕ್ಷಾತ್ಕಾರದ ಅಥವಾ ದೇವ ಸಾಕ್ಷಾತ್ಕಾರದ ಪರಿಕಲ್ಪನೆಯೊಡನೆ ಹೋಲಿಸಿನೋಡುವುದು ಕುತೂಹಲಕಾರಿಯಾದ ವಿಷಯವಾಗಿರುತ್ತದೆ.) ಮಾಸ್ಲೋ, ಅಬ್ರಹಾಂ ಲಿಂಕನ್, ಜಫರ್‌ಸನ್, ವಾಲ್ಟ್ ವಿಟ್ಮನ್, ಥೋರಿಯೋ, ಎಲಿಯನೂರ್ ಲೂಸ್‌ವಂಟ್, ಅಲ್ಬರ್ಟ್ ಐನ್‌ಸ್ಟೀನ, ಶ್ವೀತ್ಸರ್ ಮುಂತಾದ ಆಯ್ಕೆ ಮಾಡಲ್ಪಟ್ಟ ಕೆಲವು ಪ್ರಸಿದ್ಧ ವ್ಯಕ್ತಿಗಳ ವ್ಯಕ್ತಿತ್ವವನ್ನು ಅಧ್ಯಯನ ಮಾಡಿದನು. ಈ ವ್ಯಕ್ತಿಗಳು ಆತ್ಮ ಸಾಕ್ಷಾತ್ಕಾರ ಮಾಡಿಕೊಂಡ ವ್ಯಕ್ತಿಗಳು ಈ ಕೆಳಗಿನ ಹದಿಮೂರು ವ್ಯಕ್ತಿತ್ವ ಲಕ್ಷಣಗಳನ್ನು ಹೊಂದಿರಬೇಕೆಂದು ಅವನು ಪರಿಗಣಿಸುತ್ತಾನೆ. 1) ಹೆಚ್ಚಿನ ಮಟ್ಟದ ವಾಸ್ತವಿಕತೆಯ ಅರಿವು 2) ಹೆಚ್ಚಿನ ಮಟ್ಟದ ಆತ್ಮ ಸ್ವೀಕೃತಿ ಮತ್ತು ಇತರ ಹಾಗೂ ಪರಿಸರವನ್ನು ಒಪ್ಪಿಕೊಳ್ಳುವ ಮನೋಭಾವ 3) ಹೆಚ್ಚಿನ ಮಟ್ಟದ ಸಹಜ ಸ್ಫೂರ್ತಿ 4) ಸಮಸ್ಯೆಯ ಮೇಲೆ ಹೆಚ್ಚಿನ ಗಮನವನ್ನು ಕೇಂದ್ರಿಕರಿಸುವ ಸಾಮರ್ಥ್ಯ 5) ಹೆಚ್ಚಿನ ಮಟ್ಟದ ಅನಾಸಕ್ತಿ ಮನೋಭಾವ ಮತ್ತು ಏಕಾಂತ ಪ್ರಿಯತೆ 6) ಹೆಚ್ಚಿನ ಮಟ್ಟದ ಸ್ವಾಯತ್ತತೆ ಮತ್ತು ಸಂಸ್ಕೃತೀಕರಣವನ್ನು ಎದುರಿಸುವಿಕೆ 7) ಏನನ್ನಾದರೂ ತುಂಬು ಹೃದಯದಿಂದ ಪ್ರಶಂಸಿಸುವ ಹೆಚ್ಚಿನ ಮಟ್ಟದ ಹೊಸತನ ಮತ್ತು ಸಂವೇಗಾತ್ಮಕ ಪ್ರತಿಕ್ರಿಯೆಯ ಸಮೃದ್ಧಿ 8) ಅನುಭಾವಗಳು (ಸಂತೋಷದ ಅನುಭಾವ ಆನಂದಾತಿರೇಕದ ಸ್ಥಿತಿಗಳು, ಸೌಜನಾತ್ಮಕ ಕ್ಷಣಗಳು ಮತ್ತು ವ್ಯಕ್ತಿ ತನ್ನತನದ ಅಲ್ಪತನದಿಂದ ಮೇಲೇರಿ ಅಗೋಚರ ಚೇತನದೊಡನೆ ಒಂದಾಗುವ ಕ್ಷಣಗಳು, ತಾತ್ಕಾಲಿಕ ಸಮಾಧಿಸ್ಥಿತಿ) ಹೆಚ್ಚಿನ ಆವೃತ್ತಿ 9) ಮಾನವ ಕುಲದೊಡನೆ ಹೆಚ್ಚಿನ ಮಟ್ಟದ ತಾದಾತ್ಮ್ಯತೆ 10) ಸುಧಾರಿಸಿದ ತಾದಾತ್ಮ್ಯಾತ್ಮಕ ಸಂಬಂಧಗಳು 11) ಪ್ರಜಾಸತ್ತಾತ್ಮಕ ವ್ಯಕ್ತಿತ್ವ ಸಂರಚನೆ 12) ಹೆಚ್ಚಿನ ಮಟ್ಟದ ಸೃಜನ ಶೀಲತೆ 13) ಮತ್ತು ಮೌಲ್ಯವ್ಯವಸ್ಥೆಯಲ್ಲಿ ಪರಿವರ್ತನೆ (ಮಾಸ್ಲೋವಿನ ಈ ಪಟ್ಟಿಯನ್ನು ಭಗವದ್ಗೀತೆಯ ಎರಡನೆಯ ಅಧ್ಯಾಯದಲ್ಲಿ ವರ್ಣಿತವಾಗಿರುವ ಸ್ಥಿತಪ್ರಜ್ಞನ ಅಂದರೆ ಸಮತೋಲಿತನ ಪ್ರಜ್ಞೆಯುಳ್ಳ ವ್ಯಕ್ತಿಯ ಲಕ್ಷಣಗಳೊಂದಿಗೆ ಹೋಲಿಸಿನೋಡಿ)

ಮಾನವರು ಇತರ ಅವಶ್ಯಕತೆಗಳನ್ನು ಹೊಂದಿರುತ್ತಾರೆಂಬುದನ್ನು ಮಾಸ್ಲೋ ಗುರ್ತಿಸಿದ್ದಾನೆ. ವ್ಯಕ್ತಿಯು ಆತ್ಮ ಸಾಕ್ಷಾತ್ಕಾರದ ಗುರಿಯನ್ನು ತಲುಪಬೇಕಾದರೆ ತೃಪ್ತಿಪಡಿಸಿಕೊಳ್ಳಬೇಕಾದ ಎಲ್ಲಾ ಅವಶ್ಯಕತೆಗಳನ್ನು ಶ್ರೇಣಿ ಬದ್ಧಗೊಳಿಸಿದ್ದಾನೆ. ಇದೇ ಕ್ರಮವಲ್ಲಿ ಅವಶ್ಯಕತೆಗಳನ್ನು ತೃಪ್ತಿಪಡಿಸಿಕೊಳ್ಳಬೇಕಾಗುತ್ತದೆ. ಈ ಕೆಳಗಿನ ತಾಲಿಕೆಯು ಮಾಸ್ಲೋ ರೂಪಿಸಿದ ಅಭಿಪ್ರೇರಣೆಗಳ ಶ್ರೇಣಿಬದ್ಧ ರಚನೆಯನ್ನು ತೋರಿಸುತ್ತದೆ.

ಅಭಿಪ್ರೇರಣೆಗಳ (ಆವಶ್ಯಕತೆಗಳ) ಶ್ರೇಣಿಕ್ರಮ :

ಆತ್ಮ ಸಾಕ್ಷಾತ್ಕಾರ

ಸೌಂದರ್ಯಸಾಧನೆಯ ಆವಶ್ಯಕತೆಗಳು	ಸೌಂದರ್ಯ ಸಾಧನೆಯ ಆವಶ್ಯಕತೆಗಳು	ಬಿ – ಅಭಿಪ್ರೇರಣೆಗಳು ಅಂದರೆ
ಸಾಧನಾತ್ಮಕ ಹಾಗೂ ಬೌದ್ಧಿಕ ಆವಶ್ಯಕತೆಗಳು	ಅರ್ಥ ಮಾಡಿಕೊಳ್ಳ ಬೇಕಾದ (ಗ್ರಹಿಕೆಯ) ಆವಶ್ಯಕತೆ ಜ್ಞಾನಾರ್ಜನ ಆವಶ್ಯಕತೆ	ಸಂಭವನ ಮತ್ತು ವಿಕಾಸದ ಅಭಿಪ್ರೇರಣಗಳು
ಸಂಲಗ್ನತೆ ಹಾಗೂ ಸಾಮಾಜಿಕ ಆವಶ್ಯಕತೆ ಗಳು	ಗೌರವಾರ್ಜನದ ಆವಶ್ಯಕತೆ ಸಾಂಘಿಕತೆಯ ಆವಶ್ಯಕತೆ	ಡಿ–ಅಭಿಪ್ರೇರಣೆಗಳು ಅಂದರೆ
ಭೌತಿಕ, ಮಾನಸಿಕ ಹಾಗೂ ಸಂಘಟನಾತ್ಮಕ ಆವಶ್ಯಕತೆಗಳು	ಸುರಕ್ಷತೆಯ ಆವಶ್ಯಕತೆ ಗಳು ಅಸ್ತಿತ್ವ (ಉಳಿವಿನ) ಆವಶ್ಯಕತೆಗಳು	ನ್ಯೂನತೆಯ ಅಥವಾ ಜೀವ ಧಾರಣೆಯ ಆವಶ್ಯಕತೆಗಳು

ಮೂಲ : — ಗೇಜ್ ಎಲ್. ಎಲ್. ಮತ್ತು ಬರ್ಲಿನರ್ ಡಿ.ಸಿ. — ಎಜುಕೇಷನಲ್ ಸೈಕಾಲಜಿ, ರ್‍ಯಾಂಡ ಮಕನಾಲಿ ಕಾಲೆಜ್ ಪಬ್ಲಿಷಿಂಗ್ ಕಂಪನಿ, ಷಿಕಾಗೋ, 1975 ಪುಟ 286.

ಮಾಸ್ಲೋ ಮಾನವನ ಎಲ್ಲಾ ಆವಶ್ಯಕತೆಗಳನ್ನು (ಅಭಿಪ್ರೇರಣೆಗಳನ್ನು) ಎರಡು ಗುಂಪುಗಳಾಗಿ ವಿಂಗಡಿಸಿದ್ದಾನೆ. ಒಂದು ಗುಂಪನ್ನು ಡಿ–ಅಭಿಪ್ರೇರಣೆಗಳು ಅಥವಾ ನ್ಯೂನತೆಯ ಅಭಿಪ್ರೇರಣೆಗಳು ಅಥವಾ ಜೀವಾಧಾರದ ಅಭಿಪ್ರೇರಣೆಗಳು ಎಂದು ಕರೆದಿದ್ದಾನೆ. ಇವುಗಳನ್ನು ಪುನಃ ಭೌತಿಕ ಮತ್ತು ಶಾರೀರಿಕ ಪ್ರೇರಣೆಗಳೆಂದೂ ಎರಡು ಗುಂಪುಗಳಾಗಿ ವಿಂಗಡಿಸಿದ್ದಾನೆ. ಅವುಗಳಲ್ಲಿ ಮೊದಲನೆಯದು, ಹಸಿವು, ನೀರಡಿಕೆ, ಲೈಂಗಿಕ ತೃಷೆ, ಪ್ರಾಣವಾಯುವಿನ ಆವಶ್ಯಕತೆ ಮತ್ತು ನಿದ್ರೆ–ಇವುಗಳನ್ನು ಒಳಗೊಂಡಿವೆ. ಇವಲ್ಲದೆ ಸಂಸಾರವನ್ನು ಹೂಡುವ, ಸಂಸಾರವನ್ನು ರಕ್ಷಿಸುವ, ಬೆಳೆಸುವ ಚಟುವಟಿಕೆಗಳನ್ನೊಳಗೊಂಡ ಜೀವಧಾರಣೆಯ ಆವಶ್ಯಕತೆಗಳೂ ಈ ಗುಂಪಿನಲ್ಲಿ ಸೇರಿವೆ. ಎರಡನೇ ಗುಂಪು ಸಂಲಗ್ನತೆಯ ಮತ್ತು ಸಾಮಾಜಿಕ ಆವಶ್ಯಕತೆಗಳು. ಇವುಗಳಲ್ಲಿ ಸಮೂಹ ಜೀವನದ ಆವಶ್ಯಕತೆ, ಸಾಮಾಜಿಕ ಸಂಬಂಧಗಳು, ಪ್ರೀತಿ, ವಾತ್ಸಲ್ಯ, ಗೌರವಾರ್ಜನೆಯ ಆವಶ್ಯಕತೆಗಳಾದ ಸಾಮಾಜಿಕ ಸ್ಥಾನಮಾನ ಸಾಧನೆ ಯಶಸ್ಸು ಗಳಿಸುವಿಕೆ— ಇವು ಸೇರಿವೆ. ಈ ಆವಶ್ಯಕತೆಗಳು ಮಾನವನಲ್ಲಿ ನ್ಯೂನತೆಗಳು ಉಂಟಾದಾಗ ಉಂಟಾಗುತ್ತವೆ. ಈ ಆವಶ್ಯಕತೆಗಳು ಜೀವಿಯ ಉಳಿವಿಗೆ ಮತ್ತು ಜೀವನವನ್ನು ನಡೆಸಿಕೊಂಡು ಹೋಗಲು ಬೇಕಾಗುತ್ತವೆ. ಇವುಗಳನ್ನು ತೃಪ್ತಿಪಡಿಸದೇ ಇದ್ದರೆ ಅಥವಾ

ಉಪೇಕ್ಷಿಸಿದರೆ ಅವು ಇನ್ನೂ ಪ್ರಬಲಗೊಳ್ಳುತ್ತವೆ. ಇವುಗಳು ಪರಿಸರದಲ್ಲಿನ ಶಕ್ತಿಗಳಿಂದ ತೃಪ್ತಿಗೊಳ್ಳಲ್ಪಡುತ್ತವೆ. ಅಥವಾ ತಡೆಹಿಡಿಯಲ್ಪಡುತ್ತವೆ. ನ್ಯೂನತೆಯ ಅಭಿಪ್ರೇರಣೆಗಳು ಆತ್ಮ ಸಾಕ್ಷಾತ್ಕಾರದ ಗುರಿಯತ್ತ ಸಾಗಲು ಮೊದಲ ಮೆಟ್ಟಿಲುಗಳಾಗಿರುವುದರಿಂದ ಮುಖ್ಯವೆನಿಸುತ್ತದೆ. ಆದುದರಿಂದ ಅವುಗಳನ್ನು ತೃಪ್ತಿಪಡಿಸಿಕೊಳ್ಳಬೇಕು. ಆದರೆ ಅವುಗಳೇ ಜೀವನದ ಪರಮೋದ್ದೇಶಗಳೆಂದು ತಿಳಿಯಬಾರದು. ಏಕೆಂದರೆ ಇವು ಆತ್ಮ ಸಾಕ್ಷಾತ್ಕಾರದ ಕಡೆಗೆ ಮುಂದುವರಿಯಲು ಸಾಧನಗಳಾಗಿವೆ.

ಎರಡನೇ ಗುಂಪಿನ ಅಭಿಪ್ರೇರಣೆಗಳನ್ನು ಬಿ—ಅಭಿಪ್ರೇರಣೆಗಳು ಅಥವಾ ಸಂಭವನ ಹಾಗೂ ವಿಕಾಸದ ಅಭಿಪ್ರೇರಣೆಗಳು ಎಂದು ಕರೆಯಲಾಗಿದೆ. ಇವು ವ್ಯಕ್ತಿಯ ಅಂತರ್ಯದಿಂದ ಹುಟ್ಟುತ್ತವೆ ಮತ್ತು ಜೀವನದುದ್ದಕ್ಕೂ ಮುಂದುವರಿಯುತ್ತವೆ. ಇವು ವ್ಯಕ್ತಿಯಲ್ಲೇ ಇರುವ ಪರಿವರ್ತ್ಯಗಳಿಂದ ನಿರ್ಧಾರಿತವಾಗುತ್ತವೆಯೇ ಹೊರತು, ಪರಿಸರದಲ್ಲಿನ ಪರಿವರ್ತ್ಯಗಳಿಂದಲ್ಲ. ಇವು ವ್ಯಕ್ತಿಗೆ ಆತ್ಮ-ಸಾಕ್ಷಾತ್ಕಾರದ ಗುರಿಯನ್ನು ಸಾಧಿಸಲು ಸಹಾಯ ನೀಡುತ್ತವೆ. ಇವುಗಳನ್ನು ತೃಪ್ತಿಪಡಿಸಿದಷ್ಟು ಇವು ಪ್ರಬಲವಾಗುತ್ತವೆ. ವ್ಯಕ್ತಿತ್ವ ವಿಕಾಸಕ್ಕೆ ಈ ಅಭಿಪ್ರೇರಣೆಗಳು ಅತ್ಯಾವಶ್ಯಕವಾದುವು. ಆದುದರಿಂದಲೇ ಇವುಗಳನ್ನು ಸಂಭವನೆ (ವ್ಯಕ್ತಿತ್ವ ವಿಕಾಸದ) ಅಭಿಪ್ರೇರಣೆಗಳೆಂದು ಹೆಸರಿಸಲಾಗಿದೆ. ಇವುಗಳನ್ನು ಪುನಃ ಎರಡು ಉಪವಿಭಾಗಗಳಾಗಿ ವಿಂಗಡಿಸಲಾಗಿದೆ. ಸಾಧನೆ ಹಾಗೂ ಬೌದ್ಧಿಕ ಆವಶ್ಯಕತೆಗಳು. ಇವುಗಳಲ್ಲಿ ಜ್ಞಾನಾರ್ಜನೆಯ ಆವಶ್ಯಕತೆ (ಮಾಹಿತಿಯನ್ನು ತಿಳಿಯುವುದು, ಕೌಶಲ್ಯಗಳನ್ನು ಬೆಳೆಸಿಕೊಳ್ಳುವುದು, ವ್ಯಕ್ತಿಗಳ ವಸ್ತುಗಳ ಪರಿಕಲ್ಪನೆಗಳ ಮತ್ತು ಸಂಕೇತಗಳ ಬಗ್ಗೆ ತಿಳಿದುಕೊಳ್ಳುವುದು) ಮತ್ತು ಗ್ರಹಿಕೆಯ ಆವಶ್ಯಕತೆ (ಸಂಬಂಧಗಳ ಅರಿವು, ವ್ಯವಸ್ಥೆ, ಹಾಗೂ ಪ್ರಕ್ರಿಯೆಗಳನ್ನು ಅರ್ಥಮಾಡಿಕೊಳ್ಳುವುದು) ಸೇರಿವೆ. 2) ಸೌಂದರ್ಯಾಸ್ವಾದನೆಯ ಆವಶ್ಯಕತೆಗಳು, ಅಂದರೆ ಸೌಂದರ್ಯ ಪ್ರಶಂಸೆ, ಜೀವನದ ಎಲ್ಲಾ ಅಂಶಗಳಲ್ಲಿಯೂ ಸಮತೋಲನ ಹಾಗೂ ವ್ಯವಸ್ಥಿತ ರೀತಿಯನ್ನು ಅರಿಸುವುದು. ಎಲ್ಲರನ್ನೂ ಪ್ರೀತಿಸುವುದೂ ಇತ್ಯಾದಿ. ಈ ಅಭಿಪ್ರೇರಣೆಗಳನ್ನು ಮಾಸ್ಲೋ ಉನ್ನತ ಮಟ್ಟದ ಅಭಿಪ್ರೇರಣೆಗಳೆಂದು ಪರಿಗಣಿಸಿ, ಇವುಗಳನ್ನು ಸರಿಯಾದ ರೀತಿಯಲ್ಲಿ ತೃಪ್ತಿಪಡಿಸಲು ಎಲ್ಲರೂ ಪ್ರಯತ್ನಿಸಬೇಕೆಂದು ಸೂಚಿಸುತ್ತಾನೆ.

ಮಾಸ್ಲೋವಿನ ಅಭಿಪ್ರೇರಣಾ ಸಿದ್ಧಾಂತದಲ್ಲಿ ಅಧ್ಯಾಪಕರಿಗೆ ಇರುವ ನಿಹಿತಾರ್ಥಗಳೇನು ? ಈ ಸಿದ್ಧಾಂತ ಮಾನವ ಜೀವನದ ಉಳಿವಿಗೆ ಬೇಕಾದ ಯಾವ ಆವಶ್ಯಕತೆಯನ್ನೂ ಉಪೇಕ್ಷಿಸುವುದಿಲ್ಲ. ಮಾನವನ ಎಲ್ಲಾ ಮುಖ್ಯ ಆವಶ್ಯಕತೆಗಳನ್ನು ಶ್ರೇಣಿಬದ್ಧಗೊಳಿಸಿರುವುದು ಪ್ರತಿಯೊಂದು ಆವಶ್ಯಕತೆಯ ಪಾತ್ರವೂ ಮಾನವನ ಜೀವನದಲ್ಲಿದೆ ಎನ್ನುವುದನ್ನು ಸೂಚಿಸುವುದಾಗಿದೆ. ವ್ಯಕ್ತಿಯ ಜೀವನದಲ್ಲಿ ಸಮತೋಲಿತ ಸ್ಥಿತಿ ಏರ್ಪಡುವವರೆಗೆ ಪ್ರತಿಯೊಂದು ಆವಶ್ಯಕತೆಯನ್ನು ತೃಪ್ತಿಪಡಿಸಬೇಕಾಗುತ್ತದೆ. ವಿದ್ಯಾರ್ಥಿಗಳನ್ನು ಉನ್ನತ ಮಟ್ಟದ ಪ್ರೇರಣೆಗಳ ಮಟ್ಟಕ್ಕೆ ಕೊಂಡೊಯ್ಯುವ ಮುನ್ನ

ಅವರ ಮಾನಸಿಕ ಹಾಗೂ ಸುರಕ್ಷತೆಯ ಅವಶ್ಯಕತೆಗಳನ್ನು ತೃಪ್ತಿಪಡಿಸಬೇಕು. ಮಕ್ಕಳು ಹಸಿವಿನಿಂದಿದ್ದರೆ, ಅಸುರಕ್ಷತೆಯ ಭಾವನೆಯನ್ನು ಹೊಂದಿದ್ದರೆ ಸರಿಯಾಗಿ ಕಲಿಯುವವರಾರು ?

ವಿದ್ಯಾರ್ಥಿಗಳ ಮೂಲಭೂತ ಶಾರೀರಿಕ ಬೇಡಿಕೆಗಳು ಸಾಧ್ಯವಾದಷ್ಟು ಮಟ್ಟಿಗೆ ತೃಪ್ತಿಗೊಳ್ಳುವಂತೆ ಶಾಲೆಗಳು ನೋಡಿಕೊಳ್ಳಬೇಕಾಗುತ್ತದೆ. ಅಧ್ಯಾಪಕರು ತರಗತಿಗಳಲ್ಲಿ ಸುರಕ್ಷತೆಯ ವಾತಾವರಣ ಮೂಡುವಂತೆ ನೋಡಿಕೊಳ್ಳಬೇಕು. ಸಾಮಾಜಿಕ ಅವಶ್ಯಕತೆಗಳು ಬಹುಶಃ ಮುಖ್ಯ. ಕಲಿಕೆಯನ್ನು ಸುಗಮಗೊಳಿಸಲು ಅಧ್ಯಾಪಕರು ಎಲ್ಲ ಬಗೆಯ ಸಾಮಾಜಿಕ ಅಂಶಗಳನ್ನೂ ಉಪಯೋಗಿಸಿಕೊಳ್ಳಬೇಕು. ಆಕಾಂಕ್ಷೆಯ ಮಟ್ಟ, ಸಾಧನೆಯ ಅವಶ್ಯಕತೆ, ಸಾಮಾಜಿಕ ಮನ್ನಣೆಯ ಅವಶ್ಯಕತೆ—ಈ ಅಂಶಗಳನ್ನು ಅಧ್ಯಾಪಕರು ವಿದ್ಯಾರ್ಥಿಗಳಿಗೆ ಲಾಭದಾಯಕವಾಗುವಂತೆ ಉಪಯೋಗಿಸಿಕೊಳ್ಳಬಹುದು. ಜ್ಞಾನಾರ್ಜನೆಯ ಅವಶ್ಯಕತೆ ಹಾಗೂ ಗ್ರಹಿಕೆಯ ಅವಶ್ಯಕತೆಗಳು ಪಠ್ಯಕ್ರಮದಲ್ಲಿನ ಪಠ್ಯವಸ್ತು (ವಿಷಯವಸ್ತು) ವಿಗೆ ಸಂಬಂಧಪಟ್ಟಿವೆ. ಅಧ್ಯಾಪಕರು ಪ್ರಭಾವಯುತ ಬೋಧನ ತಂತ್ರಗಳ ಮೂಲಕ, ವಿಷಯವಸ್ತುವನ್ನು ಸರಿಯಾಗಿ ಆಯ್ಕೆ ಮಾಡಿ, ಸರಿಯಾದ ಕ್ರಮದಲ್ಲಿ ಅರ್ಥಪೂರ್ಣವಾಗಿ ವ್ಯವಸ್ಥೆಗೊಳಿಸುವುದರ ಮೂಲಕ ಹಾಗೂ ವಿದ್ಯಾರ್ಥಿಗಳ ಅಭಿರುಚಿಗಳನ್ನು ಗಮನದಲ್ಲಿಟ್ಟುಕೊಂಡು ಬೋಧಿಸುವುದರ ಮೂಲಕ ಈ ಅವಶ್ಯಕತೆಗಳನ್ನು ಉತ್ತಮ ರೀತಿಯಲ್ಲಿ ತೃಪ್ತಿಗೊಳಿಸಬಹುದು. ಬೋಧನೆಯ ಸಂವೇಗಾತ್ಮಕ (ಭಾವಾತ್ಮಕ) ಮುಖಕ್ಕೂ ಅಧ್ಯಾಪಕರು ಪ್ರಾಮುಖ್ಯತೆ ನೀಡಬೇಕಾಗುತ್ತದೆ. ವಿದ್ಯಾರ್ಥಿಗಳಲ್ಲಿ ಸೌಂದರ್ಯ ಪ್ರಜ್ಞೆ, ಪ್ರಶಂಸೆ, ಸಾಹಿತ್ಯ ಸೌಹಾರ್ದತೆ ಮತ್ತು ಇತರ ಸೌಂದರ್ಯ ಬೋಧಾತ್ಮಕ ವರ್ತನೆಗಳನ್ನು ಉಂಟುಮಾಡಲು ಅಧ್ಯಾಪಕರು ಪ್ರಯತ್ನಿಸಬೇಕು. ಒಟ್ಟಿನಲ್ಲಿ ಬೋಧನೆಯು ಮಾನವತಾವಾದಿಗಳು ಹೇಳುವಂತೆ, ವಿದ್ಯಾರ್ಥಿಗಳಲ್ಲಿ 'ಮಹತ್ವಪೂರ್ಣ ಕಲಿಕೆ' ಅಂದರೆ ಕಲಿಯುವವರ ದೃಷ್ಟಿಯಿಂದ ಅರ್ಥಪೂರ್ಣವಾದ ಕಲಿಕೆಯನ್ನು ಉಂಟು ಮಾಡಬೇಕು.

ಆದುದರಿಂದ ಅಧ್ಯಾಪಕ ವಿದ್ಯಾರ್ಥಿಗಳು ಕಲಿಕೆಯಲ್ಲಿ ಸಕ್ರಿಯವಾಗಿ ಭಾಗವಹಿಸುವಂತೆ ಮಾಡಬೇಕು. ಹೊರಗಿನ ಭೀತಿಗಳನ್ನು (ಅಧ್ಯಾಪಕರು ನೀಡುವ ಅಂಕ, ಶ್ರೇಣಿಗಳು ಮತ್ತು ಸೂಕ್ಷ್ಮವಾದ ಅಧ್ಯಾಪಕರ ಅಸಮ್ಮತಿ, ಅಸಂತುಷ್ಟಿ) ಸಾಧ್ಯವಾದಷ್ಟು ಮಟ್ಟಿಗೆ ಕಮ್ಮಿ ಮಾಡಬೇಕು. ಮತ್ತು ವಿದ್ಯಾರ್ಥಿಗಳಲ್ಲಿ ಸಹಜವಾಗಿರುವ ಕುತೂಹಲದ ಪ್ರಯೋಜನವನ್ನೂ ಪಡೆಯಬೇಕು. ಸ್ಪಷ್ಟವಾಗಿ ಹೇಳುವುದಾದರೆ, ಅಧ್ಯಾಪಕ ಕಲಿಕೆಯ ಸಾಧನ–ಸಾಮಗ್ರಿಗಳನ್ನು ಒದಗಿಸಬಹುದು ಮತ್ತು ಕಲಿಕೆಯ 'ಸುಗಮತಾ ಕರ್ತ'ನಾಗಿ ಪಾತ್ರವಾಡುವವನಾಗಬೇಕು ಮತ್ತು ವಿದ್ಯಾರ್ಥಿಗಳಿಗೆ ತಮ್ಮ ಕಲಿಕೆಯ ಗುರಿಗಳನ್ನು ನಿರ್ಧರಿಸಿಕೊಳ್ಳಲು ಸಹಾಯ ನೀಡಬೇಕು. ವೈಯುಕ್ತಿಕವಾಗಿ ಟೀಕಿಸದೆ ಅಧ್ಯಾಪಕ ವಿದ್ಯಾರ್ಥಿಗಳ ಯೋಚನೆಗಳನ್ನು ಮತ್ತು ಭಾವನೆಗಳನ್ನು ಸ್ವೀಕ

ರಿಸಬೇಕು. ಅಧ್ಯಾಪಕ ತನ್ನ ಭಾವನೆಗಳನ್ನು ಸಾಧ್ಯವಾದಷ್ಟು ಮುಕ್ತವಾಗಿ ಹಾಗೂ ಪ್ರಾಮಾಣಿಕವಾದ ರೀತಿಯಲ್ಲಿ ಒಪ್ಪಿಕೊಂಡು, ಅವುಗಳನ್ನು ಅಭಿವ್ಯಕ್ತಗೊಳಿಸಬೇಕು. (ಎರೋನ್ ಮತ್ತು ವೈನ್‌ಸ್ಟೈನ್. ಪು. 136)

ಮಾಸ್ಲೋವಿನ ಸಿದ್ಧಾಂತದ ಮೂಲಕ ವ್ಯಕ್ತಪಟ್ಟಿರುವಂತೆ, ಮಾನವತಾವಾದಿಗಳ ಅಭಿಪ್ರೇರಣೆ ಸಿದ್ಧಾಂತವು ಮಾನವನನ್ನು ಉನ್ನತಮಟ್ಟದ ಕಾರ್ಯಶೀಲತೆಗೆ ಪ್ರೇರೇಪಿಸುವ ಮಾನವನಲ್ಲಿರುವ ಗುರಿ(ಧ್ಯೇಯ)ಗಳನ್ನು ಆಯ್ಕೆಮಾಡಿಕೊಳ್ಳುವ ಮತ್ತು ಅವುಗಳನ್ನು ಅನುಸರಿಸುವ ಜನ್ಮಜಾತ ಸ್ವಾತಂತ್ರ್ಯಕ್ಕೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡುತ್ತದೆ. ಈ ಸಿದ್ಧಾಂತವು ಮಾನವನನ್ನು ಪರಿಸರದ ಶಕ್ತಿಗಳ ಮೂಲಕ ನಿಯಂತ್ರಿಸಲ್ಪಡುವ ಕೇವಲ ಒಂದು ಯಂತ್ರವನ್ನಾಗಿಸುವ, ವರ್ತನವಾದಿಗಳಿಂದ ಪ್ರತಿಪಾದಿಸಲ್ಪಟ್ಟ ಅಭಿಪ್ರೇರಣೆಯ ಯಾಂತ್ರಿಕವಾದಿ ಸಿದ್ಧಾಂತವನ್ನು ಅಲ್ಲಗಳೆಯುತ್ತದೆ. ಮಾನವತಾವಾದಿಗಳ ಪ್ರಕಾರ ಅಭಿಪ್ರೇರಣೆಯು ಹೆಚ್ಚು ಪ್ರಭಾವಯುತವಾಗಿರಬೇಕಾದರೆ ವ್ಯಕ್ತಿಯು ಅಂತರ್ಯದಿಂದ ಸ್ಫುಟಿಸಬೇಕು. ಪರಿಸರದ ಅಂಶಗಳಿಂದ ಪ್ರೇರಿಸಲ್ಪಟ್ಟ ವರ್ತನೆಗಿಂತ ಸ್ವಯಂಪ್ರೇರಿತಗೊಂಡ ವರ್ತನೆ ಹೆಚ್ಚು ಕಾಲ ಮುಂದುವರಿಯುತ್ತದೆ.

ಅಭಿಪ್ರೇರಣೆಯ ಸಂಜ್ಞಾನಾತ್ಮಕ ಸಿದ್ಧಾಂತಗಳು :

ಮಾನವನ ಅಭಿಪ್ರೇರಣೆಯನ್ನು ಅರ್ಥಮಾಡಿಕೊಳ್ಳುವ ಮತ್ತೊಂದು ರೀತಿಯೆಂದರೆ, ಅಭಿಪ್ರೇರಣೆಯ ಸಂಜ್ಞಾನಾತ್ಮಕ ಮುಖಗಳನ್ನು ಅರ್ಥಮಾಡಿಕೊಳ್ಳುವುದು. ಎಲ್ಲಾ ಮೂಲಭೂತ ಆವಶ್ಯಕತೆ (ಬೇಡಿಕೆ)ಗಳನ್ನು ತೃಪ್ತಿಗೊಳಿಸಿದರೂ ಸಹ, ಮಾನವನಲ್ಲಿ ಪರಿಸರವನ್ನು ಅರ್ಥಮಾಡಿಕೊಳ್ಳಬೇಕಾದ, ಪ್ರಚೋದನೆಯನ್ನು ಪಡೆಯುವ, ಸಾಧಿಸುವ ಹಾಗೂ ಸಾಧನೆಯನ್ನು ನಿರೀಕ್ಷಿಸುವ ಆತ್ಮಗೌರವವನ್ನು ಆರ್ಜಿಸುವ ಮತ್ತು ದಕ್ಷತೆಯನ್ನು ಸಾಧಿಸುವ ಆವಶ್ಯಕತೆಗಳು ಉಳಿದಿರುತ್ತವಲ್ಲದೆ, ಈ ಎಲ್ಲಾ ಆವಶ್ಯಕತೆಗಳೂ ಸಂಜ್ಞಾನಾತ್ಮಕ ವರ್ತನೆಯನ್ನು ಒಳಗೊಳ್ಳುವುದರಿಂದ ಇವುಗಳನ್ನು ಸಂಜ್ಞಾನಾತ್ಮಕ ಆವಶ್ಯಕತೆಗಳು ಎಂದು ಕರೆದಿದ್ದಾರೆ. ಈ ಸಂಜ್ಞಾನಾತ್ಮಕ ಆವಶ್ಯಕತೆಗಳು ಮಹತ್ವಪೂರ್ಣ ಅಭಿಪ್ರೇರಣೆಯ ಅಂಶಗಳಾಗಿ ಕೆಲಸ ಮಾಡಬಲ್ಲವು. ವಿವಿಧ ರೀತಿಯ ಸಂಜ್ಞಾನಾತ್ಮಕ ಅಂಶಗಳ ಮೇಲೆ ಒತ್ತುಕೊಟ್ಟು ಅನೇಕ ಮನೋವಿಜ್ಞಾನಿಗಳು ಸಿದ್ಧಾಂತಗಳನ್ನು ಮಂಡಿಸಿದ್ದಾರೆ. ಈ ಸಿದ್ಧಾಂತಗಳಲ್ಲಿ ಈ ಕೆಳಗಿನವು ಗಮನಾರ್ಹವಾದವುಗಳು. ಇವುಗಳಲ್ಲಿ ಸಾಧನಾ ಅಭಿಪ್ರೇರಣೆ ಸಿದ್ಧಾಂತವನ್ನು ಮಾತ್ರ ಮುಂದೆ ವಿವರಿಸಲಾಗಿದೆ.

(1) ಡೇವಿಡ್ ಮೆಕ್ಲೆಲ್ಯಾಂಡ್, ಅಟ್ಕಿನ್‌ಸನ್, ಮುಂತಾದವರಿಂದ ಪ್ರತಿಪಾದಿತವಾಗಿರುವ 'ಸಾಧನಾ ಅಭಿಪ್ರೇರಣಾ' ಸಿದ್ಧಾಂತ.

(2) ಹಂಟ್ ಮತ್ತು ಬರಿಲೀನ್‌ರಿಂದ ಪ್ರತಿಪಾದಿತವಾಗಿರುವ 'ಪರಿಕಲ್ಪನಾತ್ಮಕ ದ್ವಂದ್ವ' ಸಿದ್ಧಾಂತ :

(3) ಲಿಯೋನ್ ಫೆಸ್ಟಿಂಗರ್‌ನಿಂದ ಪ್ರಸಾದಿತವಾದ ಸಂಜ್ಞಾನಾತ್ಮಕ ಅಸಾಮರಸ್ಯ ಸಿದ್ಧಾಂತ.

ಸಾಧನಾ ಅಭಿಪ್ರೇರಣೆ :

ಡೇವಿಡ್ ಮೆಕ್ಲೆಲ್ಯಾಂಡ್, ಅಟ್ಕಿನ್‌ಸನ್ ಮತ್ತು ಇತರರು ಹಾರ್ವರ್ಡ್ ವಿಶ್ವವಿದ್ಯಾನಿಲಯದಲ್ಲಿ ಸಾಧನಾ ಅಭಿಪ್ರೇರಣೆಯ ಬಗ್ಗೆ ಅನೇಕ ಅಧ್ಯಯನಗಳನ್ನು ನಡೆಸಿದ್ದಾರೆ. ಮೆಕ್ಲೆಲ್ಯಾಂಡ್ ಹಾರ್ವರ್ಡ್‌ನ ಮುರ್ರೆಯಿಂದ ಪ್ರಭಾವಿತಗೊಂಡನು. ಮುರ್ರೆ ಮಾನವನಲ್ಲಿರುವ ಅವಶ್ಯಕತೆಗಳ ಒಂದು ಪಟ್ಟಿಯನ್ನೇ ಸೂಚಿಸಿದರು. ಅವನು ಸೂಚಿಸಿದ 20 ಮನೋಜನ್ಯ ಅವಶ್ಯಕತೆಗಳ ಪೈಕಿ ಸಾಧನೆಯ ಅವಶ್ಯಕತೆಯೂ ಒಂದು. ಈ ಅವಶ್ಯಕತೆಯು "ತನಗೆ ಸಾಧ್ಯವಿದ್ದಷ್ಟು ಉತ್ತಮ ರೀತಿಯಲ್ಲಿ ಕೆಲಸ ಮಾಡುವ, ಜಯಶೀಲನಾಗಬೇಕೆನ್ನುವ, ಕೌಶಲ್ಯ ಹಾಗೂ ಪ್ರಯತ್ನದಿಂದ ಮಾಡಬೇಕಾದ ಕಾರ್ಯಗಳನ್ನು ಕೈಗೊಳ್ಳುವ ಹೊರಗಿನ ಪ್ರಾಧಿಕಾರಗಳಿಂದ ಗುರ್ತಿಸಲ್ಪಡಬೇಕೆನ್ನುವ ಏನಾದರೂ ಮಹತ್ವಪೂರ್ಣವಾದುದನ್ನು ಸಾಧಿಸಬೇಕೆನ್ನುವ ಮತ್ತು ಕಠಿಣವಾದ ಕಾರ್ಯವೊಂದನ್ನು ಚೆನ್ನಾಗಿ ಮಾಡಬೇಕೆನ್ನುವ" ಅವಶ್ಯಕತೆಯನ್ನು ಸೂಚಿಸುತ್ತದೆ. ಈ ಸಾಧನಾ ಅಭಿಪ್ರೇರಣೆಯ ಸ್ವರೂಪವನ್ನು ತಿಳಿಯಲು ಮೆಕ್ಲೆಲ್ಯಾಂಡ್ ಮತ್ತು ಅಟ್ಕಿನ್ಸನ್ನರು ಪ್ರಸಿದ್ಧವಾದ ಪ್ರಕ್ಷೇಪಣ ಪರೀಕ್ಷತಾವಾದ (ಟಿ. ಎ. ಟಿ) ಪ್ರಧಾನ (ವಿಷಯಾನುಬೋಧನ ಪರೀಕ್ಷಣ)ವನ್ನು ಸ್ವಲ್ಪ ಮಾರ್ಪಾಡು ಮಾಡಿಕೊಂಡು ಉಪಯೋಗಿಸಿದ್ದಾರೆ. ಅವರು ತಮ್ಮ ಉದ್ದೇಶಕ್ಕಾಗಿ ತಮ್ಮದೇ ಆದ ಬೇರೆ ಕಾರ್ಡುಗಳನ್ನು ಸಿದ್ಧಪಡಿಸಿಕೊಂಡರು. ಮನೋವೈಜ್ಞಾನಿಕ ಸಾಹಿತ್ಯದಲ್ಲಿ ಸಾಧನಾ ಅಭಿಪ್ರೇರಣೆಯನ್ನು 'n-Ach' ಎಂದು ಸಂಕೇತಿಸುತ್ತಾರೆ.

ವ್ಯಕ್ತಿಗಳಲ್ಲಿರುವ ಸಾಧನಾ ಅಭಿಪ್ರೇರಣೆಯಲ್ಲಿ ಸಾಕಷ್ಟು ವ್ಯತ್ಯಾಸಗಳಿವೆ. ಕೆಲವರು ಬೇರೆಯವರು ಸಾಧಿಸುವುದಕ್ಕಿಂತ ಹೆಚ್ಚಾಗಿ ಅಥವಾ ತಾವೇ ಹಿಂದಿನ ಸಂದರ್ಭಗಳಲ್ಲಿ ಸಾಧಿಸಿದ್ದುದಕ್ಕಿಂತ ಹೆಚ್ಚು ಸಾಧಿಸಬೇಕೆನ್ನುವ ಪ್ರೇರಣೆಯನ್ನು ಹೊಂದಿರುತ್ತಾರೆ. ಕೆಲವರು ತಮ್ಮ ಆಕಾಂಕ್ಷೆಯ ಮಟ್ಟವನ್ನು ಉನ್ನತಮಟ್ಟದಲ್ಲಿ ಉಳಿಸಿಕೊಂಡು, ತಮ್ಮ ಗುರಿಗಳನ್ನು ಹೆಚ್ಚಿನ ಮಟ್ಟದಲ್ಲಿಟ್ಟುಕೊಳ್ಳುತ್ತಾರೆ. ಈ ಗುರಿಗಳನ್ನು ಸಾಧಿಸುವ ಪ್ರಯತ್ನದಲ್ಲಿ ಈ ಬಗೆಯ ಜನ ಅಪಾಯವನ್ನು ಎದುರಿಸಲು ಸಿದ್ಧರಿರುತ್ತಾರೆ. ಮತ್ತೆ ಕೆಲವರಲ್ಲಿ ಸಾಧನಾ ಅಭಿಪ್ರೇರಣೆ ಕೆಳಮಟ್ಟದಲ್ಲಿರುತ್ತದೆ. ಅವರು ವಿಫಲತೆಯ (ಸೋಲಿನ) ಹೆದರಿಕೆಯಿಂದ ಋಣಾತ್ಮಕವಾಗಿ ಪ್ರಭಾವಿತಗೊಳ್ಳುತಾರೆ. ಇಂಥ ವ್ಯಕ್ತಿಗಳು ಕೆಳಮಟ್ಟದ ಆಕಾಂಕ್ಷೆಯನ್ನು ಹೊಂದಿರುತ್ತಾರೆ. ಅಪಾಯವನ್ನು ಎದುರಿಸಲು ಹೆದರುತ್ತಾರೆ. ಸಾಂಸ್ಕೃತಿಕ ಅಂಶಗಳು ಸಾಧನಾ ಅಭಿಪ್ರೇರಣೆಯ ಮೇಲೆ ಹೆಚ್ಚಿನ ಪ್ರಭಾವ ಬೀರುತ್ತವೆಯೆಂಬುದನ್ನು ಮೆಕ್ಲೆಲ್ಯಾಂಡ್ ತೋರಿಸಿದ್ದಾನೆ. ಸಾಧನಾ ಅಭಿಪ್ರೇರಣೆಗೆ ಒತ್ತುಕೊಡುವುದರಲ್ಲಿ ಬೇರೆ ಬೇರೆ ಸಂಸ್ಕೃತಿಗಳ ನಡುವೆ ವ್ಯತ್ಯಾಸವಿದೆ.

ನಾಗರಿಕ ಸಂಸ್ಕೃತಿಗಳು ಸಾಧನಾ ಅಭಿಪ್ರೇರಣೆಗೆ ಹೆಚ್ಚಿನ ಮಹತ್ವ ನೀಡುತ್ತದೆ. ಕೆಲವು ಆದಿಕಾಲದ ಸಂಸ್ಕೃತಿಗಳಲ್ಲಿ ಸಾಧನಾ ಅಭಿಪ್ರೇರಣೆಗೆ ಅಷ್ಟೊಂದು ಮಹತ್ವವಿಲ್ಲದಿರುವುದು ತಿಳಿದುಬಂದಿದೆ. ಸಾಧನಾ ಅಭಿಪ್ರೇರಣೆಯ ಮಟ್ಟವನ್ನು ತರಬೇತಿಯ ಮೂಲಕ ಹೆಚ್ಚಿಸಬಹುದೆಂದು ತಿಳಿದುಬಂದಿದೆ. ವಿದ್ಯಾರ್ಥಿಗಳ ಆಕಾಂಕ್ಷೆಯ ಮಟ್ಟವನ್ನು ಸ್ವಲ್ಪ ಸ್ವಲ್ಪವಾಗಿ ಹೆಚ್ಚಿಸುತ್ತಾ ಅವರಲ್ಲಿ ಸಾಧನಾ ಅಭಿಪ್ರೇರಣೆಯನ್ನು ಹೆಚ್ಚಿಸಬಹುದು. ಸಾಧನಾ ಅಭಿಪ್ರೇರಣೆಯನ್ನು ಅನೇಕ ಕಾರಕಾಂಶಗಳು ಪ್ರಭಾವಿತಗೊಳಿಸುತ್ತವೆ. ಬುದ್ಧಿಮತ್ತೆ ಮತ್ತು ಸೃಜನಾತ್ಮಕತೆ ಈ ಕಾರಕಾಂಶಗಳಲ್ಲಿ ಮುಖ್ಯವಾದವುಗಳಾಗಿವೆ. ಹೆಚ್ಚಿನ ಮಟ್ಟದ ಬುದ್ಧಿಮತ್ತೆಯನ್ನೂ, ಸೃಜನಾತ್ಮಕತೆಯನ್ನೂ ಹೊಂದಿರುವ ಮಕ್ಕಳು ಹೆಚ್ಚಿನ ಮಟ್ಟದ ಸಾಧನಾ ಅಭಿಪ್ರೇರಣೆಯನ್ನು ಹೊಂದಿರುವುದು ಕಂಡುಬಂದಿದೆ. ಇಂಥ ಮಕ್ಕಳು ಅಪಾಯಗಳನ್ನೆದುರಿಸುವ (ಸೋಲಿನ ಸಾಧ್ಯತೆಯನ್ನೆದುರಿಸುವ) ಮನೋಭಾವವನ್ನು ತೋರಿಸುತ್ತಾರೆ. ಸಾಂಸ್ಕೃತಿಕ ನಿರೀಕ್ಷೆಗಳು, ಪರಿಸ್ಥಿತಿಯ ಅಂಶಗಳೂ ಸಹ ಸಾಧನಾ ಅಭಿಪ್ರೇರಣೆಯನ್ನು ಪ್ರಭಾವಗೊಳಿಸುತ್ತವೆ.

ಮೆಕ್ಲೆಲ್ಯಾಂಡ್ ರೂಪಿಸಿದ ಸಾಧನಾ ಅಭಿಪ್ರೇರಣೆ ಸಿದ್ಧಾಂತವನ್ನು ಅಟ್ಕಿನ್‌ಸನ್ ಇನ್ನೂ ಹೆಚ್ಚಾಗಿ ವಿಕಾಸಗೊಳಿಸಿದನು. ಅವನು ಈ ಸಿದ್ಧಾಂತಕ್ಕೆ ಸಂಬಂಧಪಟ್ಟ ತನ್ನ ನಿಲುವನ್ನು ಈ ಕೆಳಕಂಡ ಪರಿವರ್ತ್ಯಗಳನ್ನು ಪರಿಭಾವಿಸಿಕೊಳ್ಳುತ್ತಾನೆ.

	ಪರಿವರ್ತ್ಯಗಳು	ಅವುಗಳ ಸಂಕೇತ
(ಅ)	ಸಾಧನೆಯ ಅವಶ್ಯಕತೆ ಅಥವಾ ಅಭಿಪ್ರೇರಣೆ	Ms
	ಸಫಲತೆಯ ಸಂಭವ್ಯತೆ	Ps
	ಸಫಲತೆಯ ಪ್ರೋತ್ಸಾಹಕ ಮೌಲ್ಯ	Is
	ಸಾಧನೆಯ ಗುರಿಯತ್ತ ಮುನ್ನುಗ್ಗುವ ಪ್ರವೃತ್ತಿ	Ts

$$Ts = (Ms) \times (Ps) \times (Is)$$ — ಸೂತ್ರ 1

(ಆ)	ವಿಫಲತೆಯಿಂದ ತಪ್ಪಿಸಿಕೊಳ್ಳುವ ಅಭಿಪ್ರೇರಣೆ	Maf
	ವಿಫಲತೆಯ ಸಂಭವ್ಯತೆ	Pf
	ಸಫಲತೆಯ ಪ್ರೋತ್ಸಾಹಕ ಮೌಲ್ಯ	-If
	ವಿಫಲತೆಯಿಂದ ದೂರಸರಿಯುವ ಪ್ರವೃತ್ತಿ	Taf

$$Taf = (Maf) \times (Pf) \times (-If)$$ — ಸೂತ್ರ 2

ಯಾವುದೇ ಕಾರ್ಯದ ಅಂತಿಮ ಕಾರ್ಯಾನ್ವಿತ ಸಾಧಿಸಬೇಕೆನ್ನುವ ಅಭಿಪ್ರೇರಣೆ ಮತ್ತು ವಿಫಲತೆಯಿಂದ ದೂರಸರಿಯುವ ಪ್ರವೃತ್ತಿ — ಇವೆರಡರ ಪರಿಣಾಮವೆಂದು ಅಟ್ಕಿನ್‌ಸನ್ ಊಹಿಸುತ್ತಾನೆ. ಕೆಲವು ವೇಳೆ ಸೋಲಿನ (ವಿಫಲತೆಯ) ಭಯವೂ ಕೂಡ ಕೆಲಸವನ್ನು ಚೆನ್ನಾಗಿ ಮಾಡಲು ವ್ಯಕ್ತಿಯನ್ನು ಪ್ರೇರೇಪಿಸಬಲ್ಲುದು.

ಅಲ್ಲದೆ ಇನ್ನೂ ಕೆಲವು ವೇಳೆ ಸೋಲಿನ ಅತಿಯಾದ ಭಯವು ಕಾರ್ಯವನ್ನು ಪ್ರಯತ್ನಿಸದಂತೆ ವ್ಯಕ್ತಿಯನ್ನು ತಡೆಹಿಡಿಯಬಹುದು. ಆದುದರಿಂದ ಯಾವುದೇ ಕೆಲಸವನ್ನು ಕೈಗೊಂಡಾಗ ವಿದ್ಯಾರ್ಥಿ ಸೋಲಿನ ಸಾಧ್ಯತೆಯನ್ನು ದೂರೀಕರಿಸುವ ಪ್ರವೃತ್ತಿ ತೋರಿಸುವುದಕ್ಕಿಂತ ಹೆಚ್ಚಾಗಿ, ಹೆಚ್ಚಿನ ಜಯಗಳಿಸುವ ಪ್ರವೃತ್ತಿಯಿಂದ ಆ ಕೆಲಸವನ್ನು ಮಾಡುವಂತೆ ಪ್ರೇರೇಪಿಸುವುದು ಅಪೇಕ್ಷಣೀಯವಾದುದು.

ಅಟ್ಕಿನ್‌ಸನ್ ಮುಂದುವರಿದು, ಸಾಧನೆಯ ಆವಶ್ಯಕತೆ ಮತ್ತು ವಿಫಲತೆಯನ್ನು ದೂರೀಕರಿಸುವ ಪ್ರವೃತ್ತಿ ಎರಡೂ ಸಾಧನಾ ಅಭಿಪ್ರೇರಣೆಯನ್ನು ಪ್ರಭಾವಗೊಳಿಸುತ್ತವೆಂದು ಊಹಿಸುತ್ತಾನೆ ಏಕೆಂದರೆ, ವ್ಯಕ್ತಿ ತನ್ನ ಜಯದ ಸಾಧ್ಯತೆಯ ಬಗ್ಗೆ ಎಷ್ಟೇ ದೃಢವಿಶ್ವಾಸವನ್ನು ಹೊಂದಿದ್ದರೂ ಕೂಡ, ವಿಫಲತೆಯ ಸ್ವಲ್ಪವಾದರೂ ಭಯ ಅವನ ಅಂತರಾಳದಲ್ಲಿ ಸುಳಿದಾಡುತ್ತಿರುತ್ತದೆ. ಆದುದರಿಂದ ವ್ಯಕ್ತಿಯ ಸಾಧನಾ ಅಭಿಪ್ರೇರಣೆಯ ಮೊತ್ತವು ಅವನಲ್ಲಿರುವ ಕಾರ್ಯವನ್ನು ಸಮೀಪಿಸುವ ಪ್ರವೃತ್ತಿಯ ಬಲ ಮತ್ತು ಕಾರ್ಯದಿಂದ ದೂರ ಸರಿಯುವ ಪ್ರವೃತ್ತಿಯ ಬಲ ಈ ಎರಡರ ಮೊತ್ತಕ್ಕೆ ಸಮನಾಗಿರುತ್ತದೆ. ಈ ಅನುಮಾನದಿಂದ ಎರಡು ಸೂತ್ರಗಳನ್ನು ನಿವೃತ್ತಗೊಳಿಸಬಹುದು.

(1) ವ್ಯಕ್ತಿಯಲ್ಲಿನ ಕಾರ್ಯವನ್ನು ಸಮೀಪಿಸುವ ಬಲ (Ms), ಕಾರ್ಯದಿಂದ ದೂರಸರಿಯುವ ಪ್ರವೃತ್ತಿ (Maf)ಯ ಬಲಕ್ಕಿಂತ ಹೆಚ್ಚಾಗಿದ್ದಾಗ ವ್ಯಕ್ತಿಯಿಂದ ಫಲಿತವಾಗುವ ಸಾಧನೆಯು ಅಧಿಕವಾಗಿರುತ್ತದೆ ಅಂದರೆ Ms ಅಂಶ Maf ಅಂಶಕ್ಕಿಂತ ಹೆಚ್ಚಾಗಿರಬೇಕು.

(2) ವ್ಯಕ್ತಿಯಲ್ಲಿರುವ ಕಾರ್ಯದಿಂದ ದೂರ ಸರಿಯುವ ಪ್ರವೃತ್ತಿಯ ಬಲವು (Maf), ಕಾರ್ಯವನ್ನು ಸಮೀಪಿಸುವ ಪ್ರವೃತ್ತಿಯ (Ms) ಬಲಕ್ಕಿಂತ ಹೆಚ್ಚಾದಾಗ ವ್ಯಕ್ತಿಯಿಂದ ಫಲಿತವಾಗುವ ಸಾಧನೆಯು ಕಡಿಮೆಯಾಗಿರುತ್ತದೆ. ಅಂದರೆ Maf ಅಂಶವು Ms ಅಂಶಕ್ಕಿಂತ ಹೆಚ್ಚಾಗುತ್ತದೆ.

ಕಾರ್ಯವನ್ನು ಸಮೀಪಿಸುವ ಪ್ರವೃತ್ತಿ (Ts) ಮತ್ತು ಕಾರ್ಯವನ್ನು ದೂರೀಕರಿಸುವ ಪ್ರವೃತ್ತಿ (Taf) ಇವುಗಳಲ್ಲಿರುವ ಇತರ ಅಂಶಗಳನ್ನು ಸೂತ್ರ 1 ಮತ್ತು 2 ರಲ್ಲಿ ಗಮನಿಸಿ ಜಯ ಅಥವಾ ಅಪಜಯದ ಸಂಭಾವ್ಯತೆ ಮತ್ತು ಜಯದ ಪ್ರೋತ್ಸಾಹಕ ಮೌಲ್ಯ (ಜಯ ಯಾವ ರೂಪದ್ದು ಎನ್ನುವುದು)ಗಳೂ ಸಹ ಈ ಪ್ರವೃತ್ತಿಗಳನ್ನು ಪ್ರಭಾವಗೊಳಿಸುತ್ತವೆ. ಈ ಅಂಶ ಸೂತ್ರ 1 ಮತ್ತು 2 ರಲ್ಲಿ ಸ್ಪಷ್ಟವಾಗುತ್ತದೆ.

ಈ ಸೈದ್ಧಾಂತಿಕ ಚೌಕಟ್ಟಿನಲ್ಲಿ ಪ್ರಾಯೋಗಿಕ ಪರಿಸ್ಥಿತಿಗಳಲ್ಲಿ ವ್ಯಕ್ತಿಗಳಿಗೆ ಅನೇಕ ವಿಧದ ಕೆಲಸಗಳನ್ನು ಕೊಟ್ಟು ನಡೆಸಿದ ಅಧ್ಯಯನಗಳಿಂದ ಸಾಧನಾ ಅಭಿಪ್ರೇರಣೆಗೆ ಸಂಬಂಧಿಸಿದಂತೆ ಈ ಕೆಳಕಂಡ ತೀರ್ಮಾನಗಳನ್ನು ತಲುಪಿದ್ದಾರೆ.

(1) ಫಲಿತಗೊಳ್ಳುವ ಸಾಧನಾ ಅಭಿಪ್ರೇರಣೆಯನ್ನು ಕಡಿಮೆಯಾಗಿ ಹೊಂದಿರುವ ವಿದ್ಯಾರ್ಥಿಗಳಿಗೆ (Maf–Ms) ಎಲ್ಲಾ ಬಗೆಯ ಸಾಧನಾ ಕಾರ್ಯಗಳು ಅಪ್ರಿಯವೆನಿಸಿ, ಅವರಲ್ಲಿ ಹೆದರಿಕೆಯನ್ನುಂಟು ಮಾಡುತ್ತವೆ. ಆದರೆ ಇಂಥವರಿಗೆ

ಮಧ್ಯಮ ಮಟ್ಟದ ಕಠಿಣತೆಯಿಂದ ಕೂಡಿದ ಕಾರ್ಯಗಳಿಗಿಂತ, ಅತಿ ಸುಲಭವಾದ ಅಥವಾ ಅತಿ ಕಠಿಣವಾದ ಕೆಲಸಗಳು ಕಡಿಮೆ ಆಪ್ರಿಯತೆಯನ್ನು ಹೊಂದಿರುತ್ತವೆ.

(2) ಫಲಿತಗೊಳ್ಳುವ ಸಾಧನಾ ಅಭಿಪ್ರೇರಣೆಯನ್ನು ಹೆಚ್ಚಾಗಿ ಹೊಂದಿರುವ ವಿದ್ಯಾರ್ಥಿಗಳಿಗೆ (Ms-Maf) ಮಧ್ಯಮಮಟ್ಟದ ಕಠಿಣತೆಯಿರುವ ಕಾರ್ಯಗಳು ಪರಮಾವಧಿ ಸಾಧನೆಗೆ ಅನುಕೂಲಕರವೆನಿಸುತ್ತದೆ.

(3) ಹೆಚ್ಚಿನಮಟ್ಟದ ಸಾಧನಾ ಅಭಿಪ್ರೇರಣೆಯನ್ನು ಹೊಂದಿರುವ ವಿದ್ಯಾರ್ಥಿಗಳು ಕಡಿಮೆ ಮಟ್ಟದ ಸಾಧನಾ ಅಭಿಪ್ರೇರಣೆಯನ್ನು ಹೊಂದಿರುವ ವಿದ್ಯಾರ್ಥಿಗಳಿಗಿಂತ ತಮ್ಮ ಔದ್ಯೋಗಿಕ ಆಯ್ಕೆಯಲ್ಲಿ ಹೆಚ್ಚಿನ ವಾಸ್ತವಿಕವಾದಿಗಳಾಗಿರುತ್ತಾರೆ.

(4) ಕಡಿಮೆ ಮಟ್ಟದ ಸಾಧನಾ ಅಭಿಪ್ರೇರಣೆಯನ್ನು ಹೊಂದಿರುವ ವಿದ್ಯಾರ್ಥಿಗಳು ತಮ್ಮ ಸಾಮರ್ಥ್ಯಗಳನ್ನು ಮೌಲ್ಯಮಾಪನ ಮಾಡಿಕೊಳ್ಳುವುದರಲ್ಲಿ ಹೆಚ್ಚಿನ ತಪ್ಪುಗಳನ್ನು ಮಾಡುತ್ತಾರೆ.

(5) ತರಗತಿಯಲ್ಲಿ ಅಧ್ಯಾಪಕರು ಕೊಡುವ ನಿಯೋಜಿತ ಕಾರ್ಯಗಳ ಕಠಿಣತೆಯ ಮಟ್ಟವು ವಿದ್ಯಾರ್ಥಿಗಳ ಸಾಧನಾ ಅಭಿಪ್ರೇರಣೆಯನ್ನು ಪ್ರಭಾವಗೊಳಿಸಬಹುದೆಂದು ತಿಳಿದು ಬಂದಿದೆ.

(6) ಸಾಧನಾ ಅಭಿಪ್ರೇರಣೆ ಹೆಚ್ಚಾಗಿರುವ ವಿದ್ಯಾರ್ಥಿಗಳ ಅಭಿಪ್ರೇರಣೆಯ ಮಟ್ಟವು ಸೋಲನ್ನು ಅನುಭವಿಸಿದ ನಂತರವೂ ಉತ್ತಮಗೊಳ್ಳಬಹುದು.

(7) ಸಾಧನಾ ಅಭಿಪ್ರೇರಣೆ ಹೆಚ್ಚಾಗಿರುವ ವಿದ್ಯಾರ್ಥಿಗಳ ಅಭಿಪ್ರೇರಣೆಗೆ ಜಯವುಂಟಾದನಂತರ ಅವಿರೋಧವುಂಟಾಗುವ ಸಾಧ್ಯತೆಯಿದೆ.

(8) ಸಾಧನಾ ಅಭಿಪ್ರೇರಣೆ ಕಡಿಮೆಯಿರುವ ವಿದ್ಯಾರ್ಥಿಗಳ ಅಭಿಪ್ರೇರಣೆ ಕಡಮೆಯಿರುವ ವಿದ್ಯಾರ್ಥಿಗಳ ಅಭಿಪ್ರೇರಣೆಯ ಮಟ್ಟ ಜಯವುಂಟಾದ ನಂತರ ಉತ್ತಮಗೊಳ್ಳುತ್ತದೆ.

(9) ಸಾಧನೆಯನ್ನು ನಿರೀಕ್ಷಿಸುವುದು ಕಾರ್ಯಾನ್ವಿತೆಯ ಮೇಲೆ ಅಭಿಪ್ರೇರಣಾತ್ಮಕ ಪ್ರಭಾವವನ್ನು ಬೀರುತ್ತದೆ. ತಮ್ಮಿಂದ ಏನನ್ನು ನಿರೀಕ್ಷಿಸಲ್ಪಡುತ್ತದೆಯೆಂಬುದು ಮೊದಲೇ ಗೊತ್ತಾದರೆ, ವ್ಯಕ್ತಿಗಳು ತಮ್ಮ ವರ್ತನೆಗಳನ್ನು ಬದಲಿಸಿಕೊಳ್ಳುತ್ತಾರೆ. ಇದು ವ್ಯಕ್ತಿಗಳನ್ನು ಪ್ರೇರೇಪಿಸುವಂಥ ಒಂದು ಗುರಿಯಾಗುತ್ತದೆ. ಇದು ಅವರು ಕೆಲಸ ಮಾಡಲು ಒಂದು ಸಾಂದರ್ಭಿಕ ಚೌಕಟ್ಟನ್ನು ಒದಗಿಸುತ್ತದೆ.

(10) ಸಾಧನಾ ಅಭಿಪ್ರೇರಣೆ ಕಡಿಮೆಯಿರುವ ವಿದ್ಯಾರ್ಥಿಗಳ ಅಭಿಪ್ರೇರಣೆಗೆ ಸೋಲುಂಟಾದರೆ ಅವಿರೋಧವುಂಟಾಗುತ್ತದೆ.

ಮೆಕ್ಲೆಲ್ಯಾಂಡ್ ಸಾಧನಾ ಅಭಿಪ್ರೇರಣೆಯ ಪರವಾಗಿ ಒತ್ತುಕೊಟ್ಟು ಉತ್ಸಾಹದಿಂದ ವಾದಿಸಿದ್ದಾನೆ. ವಾಸ್ತವಾಂಶವೆಂದರೆ, ಈ ಅಭಿಪ್ರೇರಣೆಗೆ ಸಂಬಂಧಿಸಿದಂತೆ ಭಾರತವೂ ಸೇರಿದಂತೆ ಅನೇಕ ದೇಶಗಳಲ್ಲಿ ವ್ಯಾಪಕವಾಗಿ ಅಧ್ಯಯನಗಳನ್ನು ನಡೆಸಿದ್ದಾರೆ. ಕೆಲವು ಲೇಖಕರು ಈ ಅಭಿಪ್ರೇರಣೆಯ ಪ್ರಯೋಜನೆಯ ಸಾಧ್ಯತೆಗಳನ್ನು ಅತಿ

ಯಾಗಿ ಕೊಂಡಾಡಿದ್ದಾರೆ. ಸಾಧನಾ ಅಭಿಪ್ರೇರಣೆಯು ಮೂಲತಃ ಕಲಿಕೆಯಿಂದ ಉಂಟಾಗುವುದರಿಂದ, ತರಬೇತಿಯ ಮೂಲಕ ಈ ಅಭಿಪ್ರೇರಣೆಯನ್ನು ಹೆಚ್ಚಿಸಬಹುದೆಂದು ಮೆಕ್ಲೆಲ್ಯಾಂಡ್ ಅಭಿಪ್ರಾಯಪಡುತ್ತಾನೆ. ಸಾಧನಾ ಅಭಿಪ್ರೇರಣೆಯ ಮೇಲೆ ತಾನು ರೂಪಿಸಿದ ಅನೇಕ ತರಬೇತಿ ಕಾರ್ಯಕ್ರಮಗಳ ಪ್ರಭಾವವನ್ನು ಪರೀಕ್ಷಿಸಲು ಇವನು ಅನೇಕ ಅಧ್ಯಯನಗಳನ್ನು ನಡೆಸಿದನು. ಸಾಧನಾ ಅಭಿಪ್ರೇರಣೆಯನ್ನು ಹೆಚ್ಚಿಸಲು ಇವನು ಈ ಮುಂದೆ ಕಾಣಿಸಿರುವ ಕೆಲವು ನಿಯಮ (ತತ್ವ)ಗಳನ್ನು ರೂಪಿಸಿದ್ದಾನೆ. (1) ವ್ಯಕ್ತಿಯನ್ನು ತನ್ನ ಸಾಧನೆಯ ಬಗ್ಗೆ ಚಿಂತಿಸುವಂತೆ ಮಾಡುವುದು ಸಾಧನಾ ಅಭಿಪ್ರೇರಣೆಯ ಪರೀಕ್ಷಣಗಳ ಮೂಲಕ ವ್ಯಕ್ತಿಯನ್ನು ಪರೀಕ್ಷಿಸಿ ಅವನಲ್ಲಿರುವ ಸಾಧನಾ ಅಭಿಪ್ರೇರಣೆಯ ಮಟ್ಟ ಅವನಿಗೆ ತಿಳಿಯುವಂತೆ ಮಾಡಬೇಕು. (2) ವ್ಯಕ್ತಿಗೆ ಸಂಜ್ಞಾನಾತ್ಮಕವಾಗಿ ಬೆಂಬಲ ನೀಡುವುದು. ಅಂದರೆ ಸಾಧನೆಗೂ ಮತ್ತು ಸಾಮಾಜಿಕ ನಿರೀಕ್ಷಣೆಗೂ ಇರುವ ಸಂಬಂಧವನ್ನು ತಿಳಿಯಪಡಿಸುವುದು, ವ್ಯಕ್ತಿ ವ್ಯಕ್ತಿತ್ವ ಬದಲಾವಣೆಯ ಮೇಲೆ ಸಾಧನಾ ಅಭಿಪ್ರೇರಣೆಯ ಪ್ರಭಾವ ಇತ್ಯಾದಿ ಮಾಹಿತಿಗಳ ಮೇಲೆ ತಿಳಿವಳಿಕೆ ನೀಡುವುದು. (3) ವ್ಯಕ್ತಿಯಿಂದ ಸಾಧನಾ ಅಭಿಪ್ರೇರಣೆಯ ಮಟ್ಟವನ್ನು ಗಮನದಲ್ಲಿಟ್ಟುಕೊಂಡು ಕಾರ್ಯಗಳ ಕಠಿಣತೆಯ ಮಟ್ಟವನ್ನು ಸರಿಯಾಗಿ ಆಯ್ಕೆ ಮಾಡುವುದು. (4) ವಿಫಲತೆಯ (ಸೋಲಿನ) ಭಯವನ್ನು ಕನಿಷ್ಟ ಮಿತಿಗೆ ಇಳಿಸಬೇಕು. (5) ಲೆಕ್ಕಾಚಾರದಿಂದ ಕೂಡಿದ (ಇತಿಮಿತಿಯಿಂದ ಕೂಡಿದ) ಅಪಾಯಗಳನ್ನೆದುರಿಸಲು ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವುದು. (6) ಕೆಳಗಿನ ಸಾಮಾಜಿಕ ಆರ್ಥಿಕ ಮಟ್ಟದಿಂದ ಬರುವ ವಿದ್ಯಾರ್ಥಿಗಳ ಶೈಕ್ಷಣಿಕ ಸಾಧನೆಯ ಮಟ್ಟವನ್ನು ಸಾಧನಾ ಅಭಿಪ್ರೇರಣೆಯನ್ನು ವೃದ್ಧಿಗೊಳಿಸುವಂತಹ ತರಬೇತಿ ಕಾರ್ಯಕ್ರಮಗಳ ಮೂಲಕ ಹೆಚ್ಚಿಸಬಹುದು. (7) ಅಧ್ಯಾಪಕರ ನಿರೀಕ್ಷೆಯು ಸಾಧನಾ ಅಭಿಪ್ರೇರಣೆಯನ್ನು ಪ್ರಭಾವಿತಗೊಳಿಸಬಲ್ಲುದು. ತನ್ನ ವಿದ್ಯಾರ್ಥಿಗಳು ಹೆಚ್ಚಿನ ಸಾಧನೆಯನ್ನು ತೋರಿಸಬಲ್ಲರು ಎನ್ನುವ ಆಶಾವಾದದಿಂದ ಕೂಡಿದ ಮನೋಭಾವವನ್ನು ಇಟ್ಟುಕೊಂಡು, ಅದು ವಿದ್ಯಾರ್ಥಿಗಳಿಗೆ ತಿಳಿಯುವಂತೆ ಮಾಡುವುದರಿಂದ ಅಧ್ಯಾಪಕರು ವಿದ್ಯಾರ್ಥಿಗಳ ಸಾಧನಾ ಅಭಿಪ್ರೇರಣೆಯ ಮಟ್ಟವನ್ನು ಹೆಚ್ಚಿಸಬಹುದು. (8) ವಿದ್ಯಾರ್ಥಿಗಳಲ್ಲಿರುವ ಸಾಧನಾ ಅಭಿಪ್ರೇರಣೆಯನ್ನು ಶೈಕ್ಷಣಿಕವಾಗಿ ಲಾಭದಾಯಕವಾಗುವಂತೆ ಉಪಯೋಗಿಸಿಕೊಳ್ಳಲು ಅಧ್ಯಾಪಕರಿಗೆ ತರಬೇತಿ ನೀಡಬಹುದು.

ಮೆಕ್ಲೆಲ್ಯಾಂಡ್ ಮತ್ತು ಅಟ್ಕಿನ್‌ಸನ್ನರ ಸಿದ್ಧಾಂತ ಭಾರತದ ಅಧ್ಯಾಪಕರಿಗೆ ವಿಶೇಷವಾದ ಶೈಕ್ಷಣಿಕ ನಿಹಿತಾರ್ಥಗಳನ್ನು ಹೊಂದಿದೆ. ನಮ್ಮ ಸಮಾಜವಲ್ಲಿ ಉನ್ನತ ಮಟ್ಟದ ಸಾಧನೆಗೆ ಅಷ್ಟೊಂದು ಮಹತ್ವವಿದ್ದಂತೆ ಕಾಣಿಸುವುದಿಲ್ಲ. ಆದರಲ್ಲಿಯೂ ಅನುಕೂಲಕರ ಕುಟುಂಬಗಳಿಂದ ಬರುವ ಮಕ್ಕಳು ಸಾಧನಾ ಅಭಿಪ್ರೇರಣೆಯಲ್ಲಿ ಕೆಳಮಟ್ಟದಲ್ಲಿರುತ್ತಾರೆ. ಭಾರತೀಯ ಶಾಲೆಗಳಲ್ಲಿ ಅಧ್ಯಾಪಕರು ಇಂಥ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವ ವಿಷಯದಲ್ಲಿ ಆಸಕ್ತಿ ತೋರಿಸುವುದೂ ಇಲ್ಲ. ಭಾರತದಲ್ಲಿ ಮೆಹತಾ

ಎಂಬುವರು ಕೈಗೊಂಡ ಅಧ್ಯಯನಗಳಿಂದ ಸಮಾಜದ ಕೆಳವರ್ಗಗಳಿಂದ ಬರುವ ಮಕ್ಕಳ ಸಾಧನಾ ಅಭಿಪ್ರೇರಣೆಯನ್ನು ಸಾಧನಾ ಅಭಿಪ್ರೇರಣಾ ತರಬೇತಿಯ ಮೂಲಕ ಉತ್ತಮ ಗೊಳಿಸಬಹುದೆಂದು ಸಿದ್ಧಪಟ್ಟಿದೆ. ಆದುದರಿಂದ ಅಧ್ಯಾಪಕರು ಸಾಧನಾ ಅಭಿಪ್ರೇರ ಣೆಯ ಗತಿಶೀಲತೆಯನ್ನು (ಪ್ರಭಾವ ಬೀರುವ ರೀತಿಯನ್ನು) ತಿಳಿದುಕೊಳ್ಳುವುದು ಅವಶ್ಯ. ವಿದ್ಯಾರ್ಥಿಗಳಲ್ಲಿ ಅವರಲ್ಲಿ ಸುಪ್ತವಾಗಿರುವ ಸಾಧನೆಯ ಸಾಧ್ಯತೆಯ ಬಗ್ಗೆ ವಿಶ್ವಾಸವನ್ನುಂಟು ಮಾಡಬೇಕು. ಮೂಲತಃ ಪ್ರತಿಭಾವಂತರಾಗಿದ್ದು ಅದಕ್ಕೆ ಅನು ಗುಣವಾದ ಸಾಧನೆಯನ್ನು ಮಾಡದೇ ಇರುವ ನಿಮ್ನ-ಸಾಧಕರನ್ನೂ ಸಹ ಈ ಅಭಿ ಪ್ರೇರಣೆಯನ್ನು ಜಾಗೃತಗೊಳಿಸುವುದರಿಂದ ಪ್ರೋತ್ಸಾಹಿಸಬಹುದು. ವಿದ್ಯಾರ್ಥಿಗಳು ಆಗಾಗ್ಗೆ ಕ್ಷೈಕ್ಷಣಿಕ ಸಮಸ್ಯೆಗಳನ್ನು ಬಿಡಿಸುವಾಗ ಲೆಕ್ಕಾಚಾರದಿಂದ ಕೂಡಿದ ಅಪಾಯ ಗಳನ್ನೆದುರಿಸುವಂತೆ ಪ್ರೋತ್ಸಾಹಿಸಬೇಕು. ಕಲಿಕೆ ಕಾರ್ಯಗಳ ಆಯ್ಕೆಯನ್ನು ಎಚ್ಚರದಿಂದ ಮಾಡಬೇಕಾಗುತ್ತದೆ.

ಈ ಸಿದ್ಧಾಂತದಲ್ಲಿ ಬಹಳ ಮಟ್ಟಿಗೆ ಸತ್ಯಾಂಶವಿದೆ. ಆದರೆ ಮೆಕ್ಲೆಲ್ಯಾಂಡ್ ಸಾಧಿಸುವಂತೆ ಅದೊಂದೇ ಸಾರ್ವಭೌಮಿಕ ಅಭಿಪ್ರೇರಣೆಯಲ್ಲ. ಆದರೂ ಅಧ್ಯಾಪಕರು ಇದರ ಪ್ರಯೋಜನ ಪಡೆಯಬೇಕು.

ಅಭಿಪ್ರೇರಣೆಯ ವರ್ತನವಾದಿ ದೃಷ್ಟಿಕೋನ :

ವರ್ತನವಾದಿಗಳಾದ ವಾಟ್ಸನ್, ಹೌಲ್, ಸ್ಕಿನ್ನರ್ ಮುಂತಾದವರು ಮಾನ ವನ ಅಭಿಪ್ರೇರಣೆಯು ಕಲಿಕೆಯಂತೆಯೇ ಅನುಬಂಧನ (ಕಂಡಿಷನಿಂಗ್)ದಿಂದ ಉಂಟಾ ಗುತ್ತದೆ, ಎಂದು ಅಭಿಪ್ರಾಯಪಡುತ್ತಾರೆ. ಜೀವಿಗಳು ತಮ್ಮ ಸ್ವರೂಪದಿಂದಾಗಿಯೇ ನಿರ್ದಿಷ್ಟ ಪ್ರಚೋದನೆಗಳಿಗೆ ನಿರ್ದಿಷ್ಟ ರೀತಿಯಲ್ಲಿ ಪ್ರತಿಕ್ರಿಯಿಸುವ ಸಾಮರ್ಥ್ಯವನ್ನು ಹೊಂದಿರುತ್ತವೆ. ಅವು ಹಸಿವು, ನೀರಡಿಕೆ, ಸಂಯೋಗಾತ್ಮಕ ಪ್ರತಿಕ್ರಿಯಾ ಪ್ರವೃತ್ತಿ ಗಳನ್ನು ಜನ್ಮಜಾತವಾಗಿ ಪಡೆದೇ ಹುಟ್ಟಿರುತ್ತವೆ ಇವು ಜೀವಿಯಲ್ಲಿ ಚಟುವಟಿಕೆ ಯನ್ನುಂಟುಮಾಡುತ್ತವೆ. ಅನುಬಂಧನ ಕಲಿಕೆಯ ನಿಯಮಗಳನ್ನು ಉಪಯೋಗಿಸಿ ಕೊಂಡು, ಪರಿಸರದಲ್ಲಿರುವ ವಿವಿಧ ಪರಿವರ್ತ್ಯಗಳನ್ನು ಸರಿಯಾದ ರೀತಿಯಲ್ಲಿ ನಿರ್ವಹಿಸು ವುದರ ಮೂಲಕ, ಜೀವಿಯಲ್ಲಿ ಹುಟ್ಟಿನಿಂದಲೇ ಇರುವ ಅನುಕ್ರಿಯೆಗಳನ್ನು ಯಾವುದೇ ರೀತಿಯ ಪ್ರಚೋದನೆಗೆ ಅನುಬಂಧಿಸಲು ಸಾಧ್ಯವಾಗುತ್ತದೆ ಎಂದು ವರ್ತನವಾದಿಗಳು ವಾದಿಸುತ್ತಾರೆ. ಇವರ ಪ್ರಕಾರ ಕಲಿಯಲು ಪ್ರೇರಣೆ ವರ್ತನೆಯ ಪರಿಣಾಮದಿಂದ ಬರುತ್ತದೆ. ವಿಕಾಸದ ಅವಧಿಯಲ್ಲಿ ಮನುಷ್ಯರ ವರ್ತನೆಗಳು ಆಯೋಚಿತವಾದ ರೀತಿ ಯಲ್ಲಿ ಪರಿಸರದಲ್ಲಿರುವ ಅನೇಕ ಪ್ರಚೋದನೆಗಳಿಗೆ ಅನುಬಂಧಿತಗೊಳ್ಳುವುದರ ಮೂಲಕ ಹೊಸ ಹೊಸ ಕ್ರಿಯೆಗಳನ್ನು ಹೊರಡಿಸಲು ಸಮರ್ಥವಾಗುತ್ತವೆ. ಪ್ರಚೋದನ ಪರಿಸ್ಥಿತಿ ಯನ್ನು ಉದ್ದೇಶ್ಯಪೂರ್ವಕವಾಗಿ ವರ್ತಿಸುವುದರಿಂದ ಯಾವುದೇ ಪ್ರಚೋದನೆಯನ್ನು ಯಾವುದೇ ಅನುಕ್ರಿಯೆಗೆ ಅನುಬಂಧಿಸಬಹುದೆಂದು ವರ್ತನವಾದಿಗಳು ವಾದಿಸುತ್ತಾರೆ.

ಹೀಗೆ ಬಾಹ್ಯ ಪ್ರಚೋದನೆಗಳು ಜೀವಿಯನ್ನು ಅಭಿಪ್ರೇರಿತಗೊಳಿಸಲು ಸಮರ್ಥವಾಗುತ್ತವೆ.

ಅಭಿಪ್ರೇರಣೆಯ ವರ್ತನವಾದಿ ಸಿದ್ಧಾಂತದ ಕೇಂದ್ರ ಪರಿಕಲ್ಪನೆಯೆಂದರೆ ಪುನರ್ಬಲನ. ಅನುಕ್ರಿಯೆಯೊಂದರ ಸಂಭಾವ್ಯತೆಯನ್ನು ಹೆಚ್ಚಿಸುವ ಯಾವುದೇ ವಸ್ತು ಅಥವಾ ಕ್ರಿಯೆ ಪುನರ್ಬಲನವೆನ್ನಿಸುತ್ತದೆ. ಹಲ್ ಎಂಬುವನು ಪ್ರಾಥಮಿಕ ಹಾಗೂ ಆನುಷಂಗಿಕ ಪುನರ್ಬಲನಗಳ ನಡುವೆ ವ್ಯತ್ಯಾಸ ಕಲ್ಪಿಸಿದ್ದಾನೆ. ಯಾವುದೇ ಪುನರ್ಬಲನ (ಪರಿಸರದಲ್ಲಿನ ವಸ್ತು ಅಥವಾ ಗುರಿ) ಜೀವಿಯನ್ನು ತೃಪ್ತಿಪಡಿಸಿದಾಗ ಅಥವಾ ಜೀವಿಯ ಚೋದನ ಸ್ಥಿತಿಯನ್ನು ಕಡಿಮೆ ಮಾಡಿದರೆ ಅದು ಪ್ರಾಥಮಿಕ ಪುನರ್ಬಲನವೆನ್ನಿಸುತ್ತದೆ. ಉದಾಹರಣೆಗೆ, ಪ್ರಾಣಿಯೊಂದು ಲೋಹಪಟ್ಟಿಕೆಯನ್ನು ಒತ್ತಿದಾಗ ಅದಕ್ಕೆ ಆಹಾರದ ಪೊಟ್ಟಣವನ್ನು ಒದಗಿಸುವುದು. ತಟಸ್ಥ ಪ್ರಚೋದನೆಯೊಂದನ್ನು ಪ್ರಾಥಮಿಕ ಪುನರ್ಬಲಕದೊಡನೆ ಪದೇ ಪದೇ ಉಪಯೋಗಿಸಿದಾಗ, ಅದು ಪ್ರಾಥಮಿಕ ಪುನರ್ಬಲಕದ ಗುಣಗಳನ್ನು ಪಡೆದುಕೊಳ್ಳುತ್ತದೆ. ಪಾವ್ಲೋವನ ಅನುಬಂಧನ ಕಲಿಕೆಯ ಪ್ರಯೋಗದಲ್ಲಿ ಗಂಟೆಯ ಶಬ್ದವನ್ನು ಆಹಾರದೊಂದಿಗೆ ಪದೇ ಪದೇ ಉಪಯೋಗಿಸಿದಾಗ ಗಂಟೆಯ ಶಬ್ದ ಜೊಲ್ಲು ಸುರಿಸುವ ಅನುಕ್ರಿಯೆಯನ್ನೂ ಹೊರಡಿಸಲು ಶಕ್ತವಾಯಿತು. ಹೀಗೆ ಮೊದಲು ತಟಸ್ಥವಾಗಿದ್ದು ನಂತರ ಪುನರ್ಬಲಕದ ಗುಣಗಳನ್ನು ಪಡೆದುಕೊಳ್ಳುವ ವಸ್ತು ಯಾ ಗುರಿ ಆನುಷಂಗಿಕ ಪುನರ್ಬಲಕವೆನ್ನಿಸುತ್ತದೆ. ಯಾವುದೇ ರೀತಿಯ ಭೌತಿಕ ಬಹುಮಾನವನ್ನು (ಆಹಾರ, ಇತ್ಯಾದಿ) ಆನುಷಂಗಿಕ ಪುನರ್ಬಲಕವೆಂದು ಪರಿಗಣಿಸಬಹುದು. "ಒಂದು ವರ್ತನೆಯ ತುಣುಕಿನ ನಂತರ, ನಿರ್ದಿಷ್ಟ ರೀತಿಯ ಪರಿಣಾಮವುಂಟಾದರೆ, ಆ ವರ್ತನೆಯ ತುಣುಕು ಪುನಃ ಉಂಟಾಗುವ ಸಂಭಾವ್ಯತೆ ಹೆಚ್ಚು. ಈ ರೀತಿಯ ಪ್ರಭಾವವನ್ನುಂಟುಮಾಡುವ ಪರಿಣಾಮವನ್ನು ಪುನರ್ಬಲಕವೆಂದು ಕರೆಯಬಹುದು" ಎಂದು ಸ್ಕಿನ್ನರ್ ಹೇಳುತ್ತಾನೆ (ಸಹಾಕೆಯಾನ್‌ನಿಂದ ಉದ್ಧೃತ. ಪುಟ — 103). ಯಾವ ಪುನರ್ಬಲಕವು ಅನುಕ್ರಿಯೆಯೊಂದನ್ನು ಪ್ರಬಲಗೊಳಿಸಿ, ಅದರ ಸಂಭಾವ್ಯತೆಯನ್ನು ಹೆಚ್ಚಿಸುತ್ತದೆಯೋ, ಅಂಥದನ್ನು ಧನಾತ್ಮಕ ಪುನರ್ಬಲಕವೆನ್ನುತ್ತಾರೆ. ಯಾವ ಪುನರ್ಬಲಕವು (ಉದಾಹರಣೆಗೆ ವಿದ್ಯುತ್‌ಷಾಕ್ ಅನುಕ್ರಿಯೆಯ ಸಂಭಾವ್ಯತೆಯನ್ನು ಕಡಿಮೆ ಮಾಡುತ್ತದೆಯೋ ಅಥವಾ ಅಸುಖದಾಯಿ ಪ್ರಚೋದನೆಯನ್ನು ನಿವಾರಣೆ ಮಾಡುತ್ತದೆಯೋ, ಅಂಥದನ್ನು ಋಣಾತ್ಮಕ ಪುನರ್ಬಲಕ ಎಂದು ಕರೆಯುತ್ತಾರೆ. "ಎಲ್ಲಾ ಪುನರ್ಬಲಕಗಳನ್ನೂ ಅವುಗಳು ಉಂಟುಮಾಡುವ ಪರಿಣಾಮಗಳಿಂದ ಅರ್ಥೈಸಬೇಕಾಗುತ್ತದೆ". ತಟಸ್ಥ ಪ್ರಚೋದನೆಗಳನ್ನೂ ಪ್ರಾಥಮಿಕ ಪುನರ್ಬಲಕದೊಂದಿಗೆ ಪದೇ ಪದೇ ಉಪಯೋಗಿಸಿದಾಗ, ಅದು ಪ್ರಾಥಮಿಕ ಪುನರ್ಬಲಕದ ಗುಣಗಳನ್ನು ಪಡೆಯುತ್ತದೆ; ಎನ್ನುವ ಹಲ್ಲನ ನಿಲುವನ್ನು ಸ್ಕಿನ್ನರ್ ಸಹ ಒಪ್ಪಿಕೊಳ್ಳುತ್ತಾನೆ. ಆದರೆ ಸ್ಕಿನ್ನರ್

ಹಲ್ಲನ ಆನುಷಂಗಿಕ ಪುನರ್ಬಲಕ ಎನ್ನುವ ಪದಕ್ಕೆ ಪ್ರತಿಯಾಗಿ ಅನುಬಂಧಿತ ಪುನರ್ಬಲಕವೆನ್ನುವ ಪದವನ್ನು ಉಪಯೋಗಿಸಿದ್ದಾನೆ.

ಸ್ಕಿನ್ನರ್ ತನ್ನ ಪುನರ್ಬಲಕ ಸಿದ್ಧಾಂತವನ್ನು ವ್ಯಾಪಕವಾದ ರೀತಿಯಲ್ಲಿ ರೂಪಿಸಿದ್ದಾನೆ. ಅವನು ಪಾವ್ಲೋವನ ಅನುಬಂಧನ ಕಲಿಕೆಯ ತತ್ವಗಳನ್ನು ಇನ್ನೂ ಉತ್ತಮಪಡಿಸಿದನು. ತನ್ನ ಅನುಬಂಧನ ವಿಧಾನವನ್ನೂ ಅವನು ಕ್ರಿಯಾಪ್ರಸೂತ ಅನುಬಂಧನ ಎಂದು ಕರೆದಿದ್ದಾನೆ. ಪುನರ್ಬಲನದ ಏರ್ಪಾಡುಗಳನ್ನು ಕೈಯಾಡಿಸುವ ಅನೇಕ ತಂತ್ರಗಳನ್ನು ಅವನು ರೂಪಿಸಿದ್ದಾನೆ.

ಗೇಜ್ ಮತ್ತು ಬರ್ಟನರ್ ಎಂಬುವರು ಮಾನವನ ಅಭಿಪ್ರೇರಣೆಗೆ ಸಂಬಂಧಿಸಿದಂತೆ ವರ್ತನವಾದಿಗಳ ಅದರಲ್ಲಿಯೂ ಸ್ಕಿನ್ನರ್‌ನ ಕ್ರಿಯಾಪ್ರಸೂತ ಅನುಬಂಧನ ಉಪಕ್ರಮದ ಮೂಲ ನಿಲುವನ್ನು ಈ ರೀತಿ ವರ್ಣಿಸುತ್ತಾರೆ. "———— ಖಚಿತವಾದ ಅರ್ಥದಲ್ಲಿ ಹೇಳುವುದಾದರೆ, ಕ್ರಿಯಾಪ್ರಸೂತ ಅನುಬಂಧನ ಪರಿಕಲ್ಪನೆಗಳಿಗೆ ಅಂಟಿಕೊಳ್ಳುವ ಮನೋವಿಜ್ಞಾನಿಗಳಿಗೆ, ಅಭಿಪ್ರೇರಣೆಯ ಪರಿಕಲ್ಪನೆ ಒಂದು ಅನಾವಶ್ಯಕ ಪರಿಕಲ್ಪನೆಯೆನ್ನಿಸುತ್ತದೆ. ಏಕೆಂದರೆ ಅವರ ಪ್ರಕಾರ ಈ ಪರಿಕಲ್ಪನೆಗೆ ವಂಚಿಸುವುದು (ಆಹಾರ, ನೀರು ಇತ್ಯಾದಿಗಳನ್ನು ತಪ್ಪಿಸುವುದು), ತೊಂದರೆ ಕೊಡುವುದು (ಷಾಕ್ ನೀಡಿ), ಪ್ರೋತ್ಸಾಹಕವನ್ನು ಒದಗಿಸುವುದು ಅಥವಾ ಪುನರ್ಬಲನ ನೀಡುವುದು — ಈ ಕ್ರಿಯೆಗಳಿಂದಾಚೆಗೆ ಯಾವ ಅರ್ಥವನ್ನೂ ಸೂಚಿಸುವುದಿಲ್ಲ. ಈ ಕ್ರಿಯೆಗಳಲ್ಲಿ ಯಾವುದಾದರಿಂದಲೂ ವರ್ತನೆಯನ್ನು ರೂಪಿಸಬಹುದು. ಕ್ರಿಯಾಪ್ರಸೂತ ಅನುಬಂಧನದ ಚೌಕಟ್ಟಿನಲ್ಲಿ, ಅಭಿಪ್ರೇರಿತನಾದ ವಿದ್ಯಾರ್ಥಿ ಕಲಿಯಬೇಕೆನ್ನುವ ಪ್ರಬಲ ಪ್ರೇರಣೆಗಳನ್ನಾಗಲೀ, ಅಥವಾ ಶಕ್ತಿಯುತವಾದ ಜೈವಿಕ ಯಾ ಸಾಮಾಜಿಕ ಅವಶ್ಯಕತೆ (ಚೋದನೆ)ಗಳಿಂದ ತಳ್ಳಲ್ಪಟ್ಟವನಾಗಿರಬೇಕೆಂಬುದಲ್ಲ. ಇದರ ಬದಲು ಅವನು ಸರಿಯಾದ ರೀತಿಯಲ್ಲಿ ಪುನರ್ಬಲನ ಪಡೆಯುವವನಾಗಿರಬೇಕು. ಪುನರ್ಬಲಕಗಳು ಅವನಿಗೆ ಸರಿಯಾದ ಅನುಪಾತದಲ್ಲಿ ಸರಿಯಾದ ರೀತಿಯಲ್ಲಿ ಒದಗಬೇಕು. ಅವು ಸಾಕಷ್ಟು ಆವೃತ್ತಿಯಲ್ಲಿ ಮತ್ತು ಸರಿಯಾದ ವೇಳೆಯಲ್ಲಿ (ಸಾಧ್ಯವಾದಷ್ಟು ಬೇಗ) ಇವನ ಅನುಕ್ರಿಯೆಗಳಿಗೆ ಒದಗಬೇಕು". (ಪುಟ 316)

ಯುಕ್ತರೀತಿಯ ಪುನರ್ಬಲನಕ್ಕೆ ಎರಡು ಅಂಶಗಳು ಅವಶ್ಯಕ. ಹೊಸದಾಗಿ ರೂಪಿಸಬೇಕಾದ ಅಥವಾ ತೊಡೆದುಹಾಕಬೇಕಾದ ವರ್ತನ ವಿನ್ಯಾಸವನ್ನು ಗುರ್ತಿಸಿ, ಸ್ಪಷ್ಟವಾಗಿ ವಿವರಿಸಿಕೊಳ್ಳಬೇಕು. ನಂತರ ವರ್ತನೆಯನ್ನು ಸರಿಯಾಗಿ ಪುನರ್ಬಲನಗೊಳಿಸುವ ಪ್ರೋತ್ಸಾಹಕವನ್ನು ಆಯ್ಕೆಮಾಡಿಕೊಳ್ಳಬೇಕು. ಪುನರ್ಬಲನಗೊಳಿಸುವ ಯಾವುದೇ ವಸ್ತು ಅಥವಾ ಶಾಬ್ದಿಕ ಹೇಳಿಕೆ (ಷಹಬಾಷ್, ಒಳ್ಳೆಯದು) ಪ್ರೋತ್ಸಾಹಕವೆನ್ನಿಸುತ್ತದೆ. "ಪ್ರೋತ್ಸಾಹಕವನ್ನು ಪುನರ್ಬಲನದ ಭರವಸೆ ಅಥವಾ ನಿರೀಕ್ಷೆ ಎನ್ನಬಹುದು" ಪ್ರೋತ್ಸಾಹಕ ಮತ್ತು ಪುನರ್ಬಲಕ ಒಂದೇ ಅಲ್ಲ. ಆಹಾರ ಒಂದು ಪ್ರೋತ್ಸಾಹಕ. ಇದು ಜೀವಿಯೊಂದರ ಹಸಿವನ್ನು ತೀರಿಸಿದಾಗ ಮಾತ್ರ ಅದು

ಪುನರ್ಬಲಕವೆನ್ನಿಸುತ್ತದೆ. ವಸ್ತುಗಳು ಅವುಗಳಿಗೆ ಸಂಬಂಧಿಸಿದಂತೆ ನಮ್ಮ ಸುಖಕರವಾದ ಯಾ ದುಃಖಕರವಾದ ಅನುಭವಗಳನ್ನು ಅವಲಂಬಿಸಿ ಪ್ರೋತ್ಸಾಹಕ ಗುರ್ತುಗಳನ್ನು ಪಡೆದುಕೊಳ್ಳುತ್ತವೆ. ಯುಕ್ತ ರೀತಿಯಲ್ಲಿ ಆಯ್ಕೆಮಾಡಿದ ಪ್ರೋತ್ಸಾಹಕಗಳು ಕಾರ್ಯನಿರ್ವಹಣೆಯನ್ನು ಉನ್ನತಮಟ್ಟದಲ್ಲಿ ಉಳಿಸಿಕೊಳ್ಳಬಲ್ಲವು. ಅಂದರೆ ಅವು ಅಭಿಪ್ರೇರಣೆಯ ಮಟ್ಟವನ್ನು ಕಾಯ್ದುಕೊಳ್ಳುತ್ತವೆ.

ವಿದ್ಯಾರ್ಥಿಗಳಲ್ಲಿ ಹೊಸಹೊಸ ವರ್ತನವಿನ್ಯಾಸಗಳನ್ನು ರೂಪಿಸಲು, ಶಾಲಾ ವಿಷಯಗಳನ್ನು ಕಲಿಯಲು ಮತ್ತು ಒಂದೇ ಮಟ್ಟದಲ್ಲಿ ಅವರ ಕಾರ್ಯನಿರ್ವಹಣೆಯನ್ನು ಉಳಿಸಿಕೊಂಡು ಹೋಗಲು ಅವರನ್ನು ಅಭಿಪ್ರೇರಣೆಗೊಳಿಸಲು ಕ್ರಿಯಾಪ್ರಸೂತ ಅನುಬಂಧನದ ನಿಯಮಗಳನ್ನು ಅನೇಕ ರೀತಿಗಳಲ್ಲಿ ಉಪಯೋಗಿಸಿದ್ದಾರೆ. ಈ ಮುಂದೆ ವಿವರಿಸಿರುವ ಉದಾಹರಣೆಗಳು ಈ ರೀತಿಯ ಕೆಲವು ಮಾರ್ಗಗಳನ್ನು ದೃಷ್ಟಾಂತೀಕರಿಸುತ್ತವೆ.

1 ಪುನರ್ಬಲನದ ತಪಸೀಲುಗಳು :

ಸ್ಕಿನ್ನರ್ ಪುನರ್ಬಲನದ ಏರ್ಪಾಡುಗಳನ್ನು ಮಾಡಲು ಅನೇಕ ಮಾರ್ಗಗಳನ್ನು ರೂಪಿಸಿದ್ದಾನೆ. ಇವುಗಳಿಗೆ ಪುನರ್ಬಲನದ ತಪಸೀಲುಗಳೆಂದು ಹೆಸರು. ಪ್ರತಿಯೊಂದು ತಪಸೀಲಿನಲ್ಲೂ ಅನುಕೂಲ, ಅನನುಕೂಲವಾದ ಅಂಶಗಳಿವೆ. ಇವುಗಳಲ್ಲಿ ಮುಖ್ಯವಾದ ಕೆಲವು ತಪಸೀಲುಗಳು ಯಾವುವೆಂದರೆ — (ಅ) ಮಧ್ಯಂತರ ಪುನರ್ಬಲನ — ಬೇಕಾದ ವರ್ತನೆ ಉಂಟಾಗಲಿ, ಬಿಡಲಿ, ಸ್ವಲ್ಪ ಕಾಲಾನಂತರ, ಉದಾಹರಣೆಗೆ ಪ್ರತಿ ಹತ್ತು ನಿಮಿಷಗಳಿಗೊಮ್ಮೆ ಪುನರ್ಬಲನ ನೀಡುವುದು. (ಆ) ಅಂತರಾಯಿತ (ಬಿಟ್ಟುಬಿಟ್ಟು ಬರುವ) ಪುನರ್ಬಲನ — ಉದ್ದಿಷ್ಟ (ಸರಿಯಾದ) ವರ್ತನೆಯನ್ನು ಆಗೊಮ್ಮೆ ಈಗೊಮ್ಮೆ ಪುನರ್ಬಲನಗೊಳಿಸುವುದು. (ಇ) ಅನುಪಾತೀಯ ಪುನರ್ಬಲನ — ಸರಿಯಾದ ವರ್ತನೆಗೂ, ಪುನರ್ಬಲನಕ್ಕೂ ನಡುವೆ ಒಂದು ನಿರ್ದಿಷ್ಟ ಅನುಪಾತವನ್ನು ಕಾಯ್ದುಕೊಳ್ಳುವುದು. ಉದಾಹರಣೆಗೆ ಪ್ರತಿ ಐದನೇ ಸರಿಯಾದ ವರ್ತನೆಗೆ ಪುನರ್ಬಲನ ನೀಡುವುದು. ಈ ರೀತಿಯ ಇನ್ನೂ ಅನೇಕ ತಪಸೀಲುಗಳನ್ನು ಅನೇಕ ರೀತಿಯ ವರ್ತನ ವಿನ್ಯಾಸಗಳನ್ನು ರೂಪಿಸಲು ಮತ್ತು ಬೇಡದಿರುವ ವರ್ತನೆಗಳನ್ನು ತೊಡೆದುಹಾಕಲು ಉಪಯೋಗಿಸಿದ್ದಾರೆ. ಇವುಗಳಲ್ಲಿ ಕೆಲವು ತಪಶೀಲುಗಳು — ಅಂತರಾಯಿತ ಮತ್ತು ವ್ಯತ್ಯಸ್ತ ಅನುಪಾತೀಯ ತಪಸೀಲುಗಳು ವಿದ್ಯಾರ್ಥಿಗಳು ಹೆಚ್ಚಿನ ಮಟ್ಟದಲ್ಲಿ ತಮ್ಮ ಕಾರ್ಯನಿರ್ವಹಣೆಯನ್ನು ಉಳಿಸಿಕೊಂಡು ಹೋಗಲು ಪ್ರೇರಣೆಯನ್ನುಂಟುಮಾಡುತ್ತವೆಂದು ತಿಳಿದುಬಂದಿದೆ.

2 ಗುರುತಿನ ಅರ್ಥವ್ಯವಸ್ಥೆ :

ತಟಸ್ಥ ಪ್ರಭಾವವನ್ನು ಹೊಂದಿರುವ ಯಾವುದೇ ಪದಾರ್ಥವನ್ನು (ವಸ್ತುವನ್ನು)

ಅಪೇಕ್ಷಿತ ಪರಿಣಾಮಗಳೊಂದಿಗೆ ಉಪಯೋಗಿಸಿ, ಅವುಗಳನ್ನು ಪ್ರಭಾವಯುತ ಪುನರ್ಬಲಕಗಳನ್ನಾಗಿ ಉಪಯೋಗಿಸಬಹುದು. ಉದಾಹರಣೆಗೆ, ಪ್ರಯೋಗವೊಂದರಲ್ಲಿ ಚಿಂಪಾಂಜಿಯೊಂದಕ್ಕೆ ಕೇವಲ ಪ್ಲಾಸ್ಟಿಕ್ ಬಿಲ್ಲೆಗಳನ್ನು ಪಡೆಯುವುದಕ್ಕಾಗಿ ಕೆಲಸ ಮಾಡುವಂತ ತರಬೇತಿ ಕೊಡಲಾಯಿತು ಈ ಬಿಲ್ಲೆಗಳನ್ನು ಚಿಂಪಾಂಜಿ ತನ್ನ ಕೆಲಸದ ನಂತರ ಯಂತ್ರವೊಂದರಲ್ಲಿ ಹಾಕಿ ಆಹಾರವನ್ನು ಪಡೆಯಬಹುದಾಗಿತ್ತು. ಆದ್ದರಿಂದಲೇ ಪ್ಲಾಸ್ಟಿಕ್ ಬಿಲ್ಲೆಗಳು ಚಿಂಪಾಂಜಿಗೆ ಪುನರ್ಬಲಕಗಳಾಗಲು ಸಾಧ್ಯವಾಯಿತು. ಈ ರೀತಿಯ ಕೃತಕ ರೀತಿಯಲ್ಲಿ ಉಂಟುಮಾಡುವ ಪುನರ್ಬಲನ ವ್ಯವಸ್ಥೆಗೆ ಗುರುತಿನ ಅರ್ಥಶಾಸ್ತ್ರ (ಟೋಕನ್ ಎಕೋನಮಿ) ಎಂದು ಹೆಸರು. ಕೋಹೆನ್ ಎಂಬುವವನು ಈ ರೀತಿಯ ಗುರುತಿನ ಅರ್ಥವ್ಯವಸ್ಥೆಯೊಂದನ್ನು ರೂಪಿಸಿದ್ದಾನೆ. ಇದನ್ನು ಅವನು ಕಿಶೋರ (ತರುಣ)ರಿಗಾಗಿ ಅಂತರವ್ಯಕ್ತ್ಯಾತ್ಮಕ ಪಠ್ಯಕ್ರಮಗಳ ಕಾರ್ಯಕ್ರಮ ಎಂದು ಕರೆದಿದ್ದಾನೆ. ಈ ಕಾರ್ಯಕ್ರಮ ವಿದ್ಯಾರ್ಥಿಗಳು ತಮ್ಮ ಸರಿಯಾದ ವರ್ತನೆಗೆ ಪಡೆದ ಅಂಕ(ಶ್ರೇಣಿ)ಗಳನ್ನು ಹೆಚ್ಚಿನ ಮನರಂಜನೆಗೆ ಸಮಯ, ಒಂದು ಒಳ್ಳೆಯ ಭೋಜನ, ಷವರ್ ಸ್ನಾನ ಇತ್ಯಾದಿಗಳನ್ನು ಪಡೆಯಲು ಉಪಯೋಗಿಸಿಕೊಳ್ಳಬಹುದಾದ ವ್ಯವಸ್ಥೆಯನ್ನು ಮಾಡಲಾಗಿತ್ತು. ಒಂದು ವರ್ಷದ ನಂತರ ವಿದ್ಯಾರ್ಥಿಗಳು ತಮ್ಮ ಅಂತರವ್ಯಕ್ತ್ಯಾತ್ಮಕ ಸಂಬಂಧಗಳನ್ನು ಉತ್ತಮಪಡಿಸಿಕೊಂಡದ್ದೇ ಅಲ್ಲದೆ, ತಮ್ಮ ಶಾಲಾ ಸಾಧನೆಯಲ್ಲೂ ಪ್ರಗತಿಯನ್ನು ತೋರಿಸಿದರು.

3 ಅಭಿಪ್ರೇರಣಾತ್ಮಕ ಒಪ್ಪಂದಗಳು :

ಈ ಕಾರ್ಯಕ್ರಮವು ನಾಲ್ಕನೇ ಗ್ರೇಡಿನ ಮಕ್ಕಳು ಗಣಿತ ಕಲಿಯುವುದನ್ನು ಒಳಗೊಂಡಿತ್ತು. ಪ್ರತಿಯೊಂದು ಮಗುವಿಗೂ ಮೊದಲೇ ಸ್ವಲ್ಪ ಆಟಿಕೆಯ ಹಣವನ್ನು ಕೊಡಲಾಯಿತು. ಈ ಹಣವನ್ನು ಲೆಕ್ಕಗಳನ್ನು ಬಿಡಿಸುವುದಕ್ಕೆ ಪಣ ಇಡಬಹುದಾಗಿತ್ತು. ಲೆಕ್ಕಗಳ ಸರಿಯಾದ ಉತ್ತರಕ್ಕೆ ಬೇರೆಬೇರೆ ಪ್ರಮಾಣದಲ್ಲಿ ಪ್ರತಿಫಲ (ಲಾಭ) ದೊರೆಯುತ್ತಿತ್ತು. ಕಠಿಣವಾದ ಲೆಕ್ಕಗಳಿಗೆ ಲಾಭದ ಪ್ರಮಾಣ ಹೆಚ್ಚಾಗಿದ್ದರೂ, ಅಪಾಯದ (ಸೋಲುವ) ಸಾಧ್ಯತೆಯೂ ಹೆಚ್ಚಾಗಿರುತ್ತಿತ್ತು. ಸುಲಭವಾದ ಲೆಕ್ಕಗಳಿಗೆ ಲಾಭದ ಪ್ರಮಾಣ ಕಡಿಮೆಯಿದ್ದು, ಅಪಾಯದ ಸಾಧ್ಯತೆಯೂ ಕಡಿಮೆಯಾಗಿರುತ್ತಿತ್ತು. ವಿದ್ಯಾರ್ಥಿಗಳು ಪೂರ್ಣಗೊಳಿಸದೇ ಇದ್ದ ಲೆಕ್ಕಗಳಿಗೆ ಮತ್ತು ತಪ್ಪು ಉತ್ತರಗಳಿಗೆ ದಂಡ ತೆರಬೇಕಾಗಿತ್ತು. ಈ ನಿಯಮಗಳ ವಿವರಗಳನ್ನೊಳಗೊಂಡ ಒಪ್ಪಂದಕ್ಕೆ ಪ್ರತಿಯೊಬ್ಬ ವಿದ್ಯಾರ್ಥಿಯೂ ಸಹಿ ಮಾಡಬೇಕಾಗಿತ್ತು. ಈ ಒಪ್ಪಂದದ ಫಲಿತಾಂಶ ಸಾಕಷ್ಟು ಆಶಾದಾಯಕವಾಗಿತ್ತು.

4 ವ್ಯಕ್ತಿಗತ ಮಾರ್ಗದರ್ಶನದಿಂದ ಕೂಡಿದ ಅಭಿಪ್ರೇರಣೆ :

ಈ ಕಾರ್ಯಕ್ರಮವನ್ನು ವಿಸ್ಕಾನ್‌ಸಿನ್ ವಿಶ್ವವಿದ್ಯಾಲಯದ ಸಂಜ್ಞಾನಾತ್ಮಕ

ಕಲಿಕೆಯ ಸಂಶೋಧನೆ ಮತ್ತು ವಿಕಾಸ ಕೇಂದ್ರದಲ್ಲಿ ರೂಪಿಸಲಾಯಿತು. ಇದು ಹೆಚ್ಚು ಕಡಿಮೆ ಈ ಹಿಂದೆ ವಿವರಿಸಿದ ಅಭಿಪ್ರೇರಣಾತ್ಮಕ ಒಪ್ಪಂದದಂತೆಯೇ ಇದ್ದಿತು. ಪ್ರತಿಯೊಬ್ಬ ವಿದ್ಯಾರ್ಥಿಗೂ ಅವನ ಅಭಿಪ್ರೇರಣೆಯ ಮಟ್ಟವನ್ನು ಉನ್ನತ ಮಟ್ಟದಲ್ಲಿ ಉಳಿಸಿಕೊಂಡು ಹೋಗಲು ವ್ಯಕ್ತಿಗತವಾಗಿ ಮಾರ್ಗದರ್ಶನ ನೀಡಲಾಯಿತು.

ಶಿಕ್ಷಣ ಮತ್ತು ಅಭಿಪ್ರೇರಣೆ :

ಇದುವರೆಗೆ ವಿವರಿಸಿದ ವಿವಿಧ ಅಭಿಪ್ರೇರಣೆ ಸಿದ್ಧಾಂತಗಳಿಂದ ಒಂದು ಅಂಶ ಸ್ಪಷ್ಟವಾಗುತ್ತದೆ. ಪ್ರತಿಯೊಂದು ಸಿದ್ಧಾಂತವೂ ಒಂದೊಂದು ಅಂಶಕ್ಕೆ ಪ್ರಾಮುಖ್ಯತೆಯನ್ನು ನೀಡುತ್ತದೆ. ಮನೋವಿಶ್ಲೇಷಣವಾದಿಗಳು ಅವಚೇತನಾತ್ಮಕ ಪ್ರೇರಣೆಗಳಿಗೆ ಒತ್ತು ಕೊಡುತ್ತಾರೆ. ಮಾನವತಾವಾದಿಗಳು ಸ್ವಪ್ರೇರಿತ, ಆಂತರಿಕ ಅಭಿಪ್ರೇರಣೆ ಮಹತ್ವವುಳ್ಳದ್ದೆನ್ನುತ್ತಾರೆ. ಸಂಜ್ಞಾನಾತ್ಮಕ ಸಿದ್ಧಾಂತಿಗಳು ವ್ಯಕ್ತಿ ತನ್ನ ಬಗೆಗೆ ತಾನು ಏನು ತಿಳಿದುಕೊಳ್ಳುತ್ತಾನೆಯೋ, ಕಡೆಯಲ್ಲಿ ಏನು ಪರಿಣಾಮವುಂಟಾಗುತ್ತದೆಯೆಂದು ನಿರೀಕ್ಷಿಸುತ್ತಾನೆಯೋ – ಇವು ಅಭಿಪ್ರೇರಕಾಂಶಗಳೆಂದು ಅಭಿಪ್ರಾಯಪಡುತ್ತಾರೆ. ವರ್ತನವಾದಿಗಳು ವಿದ್ಯಾರ್ಥಿಗಳ ಅಭಿಪ್ರೇರಣೆಯನ್ನು ಉಳಿಸಿಕೊಳ್ಳಲು ಪುನರ್ಬಲನವನ್ನು ನಿರ್ವಹಿಸುವುದು ಮುಖ್ಯವಾದುದೆನ್ನುತ್ತಾರೆ. ಈ ಎಲ್ಲಾ ಸಿದ್ಧಾಂತಗಳ ಸಾರವನ್ನು ಗ್ರಹಿಸುವುದು ಸಾರಗ್ರಾಹಿ ಉಪಕ್ರಮವೆನ್ನಿಸುತ್ತದೆ. ಅಭಿಪ್ರೇರಣೆಯು ವ್ಯಕ್ತಿಗತ ಪರಿವರ್ತ್ಯಗಳು (ಚೋದನೆಗಳು, ಆತ್ಮ ಸಾಕ್ಷಾತ್ಕಾರದ ಪ್ರವೃತ್ತಿ, ಸಾಧನೆಯ ಆವಶ್ಯಕತೆ, ಸಂಲಗ್ನತೆ) ಮತ್ತು ಪರಿಸರದ ಪರಿವರ್ತ್ಯಗಳು (ವಿವಿಧ ರೀತಿಯ ಪ್ರೋತ್ಸಾಹಕಗಳು) ಈ ಎರಡು ರೀತಿಯ ಪರಿವರ್ತ್ಯಗಳ ಸಂಯುಕ್ತ ಪರಿಣಾಮದಿಂದ ಉಂಟಾಗುತ್ತದೆಯೆಂಬುದನ್ನು ಮನಗಾಣುವುದು ಆವಶ್ಯಕವಾಗುವುದು.

ಈ ಎಲ್ಲಾ ಸಿದ್ಧಾಂತಗಳಿಂದ ವಿದ್ಯಾರ್ಥಿಗಳ ಅಭಿಪ್ರೇರಣೆಯ ಮಟ್ಟವನ್ನು ಉಳಿಸಿಕೊಳ್ಳಲು ತರಗತಿಯಲ್ಲಿ ಉಪಯೋಗಿಸಬಹುದಾದ ಅನೇಕ ನಿರ್ದಿಷ್ಟಕ್ರಮಗಳನ್ನು ಆಯ್ದು ತೆಗೆಯಬಹುದು. ಈ ಕೆಳಗೆ ಅವುಗಳ ಒಂದು ಪಟ್ಟಿಯನ್ನು ಕೊಡಲಾಗಿದೆ.

(1) ತರಗತಿಯಲ್ಲಿ ಅನುಭವಗಳು ಮಕ್ಕಳಿಗೆ ಸಾಧ್ಯವಾದಷ್ಟು ಸಂತೋಷಕಾರಕಗಳಾಗುವಂತೆ ವಿದ್ಯಾರ್ಥಿಗಳಲ್ಲಿ ಅನಾವಶ್ಯಕವಾಗಿ ತುಡಿತವುಂಟಾಗದಂತೆ ನೋಡಿಕೊಳ್ಳಿ.

(2) ತಮ್ಮಲ್ಲಿರುವ ಜನ್ಮಜಾತ ಗುಣಗಳಿಂದ ಉಂಟಾಗುವ ಸತ್ವವನ್ನು ಸಾಮಾಜಿಕವಾಗಿ ಒಪ್ಪಿತವಾದ ಮಾರ್ಗಗಳಲ್ಲಿ ವ್ಯಕ್ತಪಡಿಸಲು ವಿದ್ಯಾರ್ಥಿಗಳಿಗೆ ಅವಕಾಶಗಳನ್ನು ಕಲ್ಪಿಸಿ. ಈ ಪ್ರತಿಕ್ರಿಯೆಗೆ ಉದಾತ್ತೀಕರಣ ಎಂದು ಕರೆಯುತ್ತಾರೆ.

(3) ನಿರ್ದಿಷ್ಟಮಿತಿಯೊಳಗೆ ವಿದ್ಯಾರ್ಥಿಗಳ ನಡುವೆ ಸ್ಪರ್ಧೆ ಏರ್ಪಡಿಸಿ.

(4) ತರಗತಿಯಲ್ಲಿ ಆರೋಗ್ಯಕರವಾದ ಸಾಮಾಜಿಕ ಸಂಬಂಧಗಳನ್ನು ಉಂಟುಮಾಡಿ.

(5) ವಿದ್ಯಾರ್ಥಿಗಳ ಮೂಲ ಆವಶ್ಯಕತೆಗಳು (ಹಸಿವು, ನೀರಡಿಕೆ) ಸಾಧ್ಯವಾದಷ್ಟು ಮಟ್ಟಿಗೆ ತೃಪ್ತಿಯಾಗುವಂತೆ ನೋಡಿಕೊಳ್ಳಿ.

(6) ಹೊರಗಿನ ಭೀತಿಯನ್ನು ಸಾಧ್ಯವಾದಷ್ಟು ಕಡಿಮೆ ಮಾಡಿ.

(7) ಸ್ವಮೌಲ್ಯಮಾಪನ ಮಾಡಿಕೊಳ್ಳುವಂತೆ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಿ.

(8) ವಿದ್ಯಾರ್ಥಿಗಳ ಸ್ವಪ್ರೇರಿತ ಕಲಿಕೆಯಿಂದ ಕಲಿಕೆಯನ್ನು ಮುಂದುವರಿಸಿ.

(9) ವಿದ್ಯಾರ್ಥಿಗಳಿಗೆ ಅವರ ಸಾಮರ್ಥ್ಯಗಳ ಮತ್ತು ಮಿತಿಗಳ ಪರಿಚಯ ದೊರೆಯುವಂತೆ ಮಾಡಿ.

(10) ಸೋಲಿನ ಭಯವನ್ನು ಕಡಿಮೆ ಮಾಡಿ ಮತ್ತು ಜಯದ ನಿರೀಕ್ಷೆಯನ್ನು ಹೆಚ್ಚು ಮಾಡಿ.

(11) ವಿದ್ಯಾರ್ಥಿಗಳ ಸಾಮರ್ಥ್ಯಗಳು, ಮನೋಭಾವಗಳು ಮತ್ತು ಅಭಿರುಚಿಗಳನ್ನು ಗಮನದಲ್ಲಿಟ್ಟುಕೊಂಡು ಕಲಿಕೆಯ ಕಾರ್ಯಗಳನ್ನು ಆಯ್ಕೆಮಾಡಿ.

(12) ಲೆಕ್ಕಾಚಾರದಿಂದ ಕೂಡಿದ ಅಪಾಯಗಳನ್ನೆದುರಿಸಲು ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಿ.

(13) ವಿದ್ಯಾರ್ಥಿಗಳಲ್ಲಿ ಉಂಟಾಗುವ ಮಾನಸಿಕ ದ್ವಂದ್ವಗಳನ್ನು ಅಪೇಕ್ಷಿತ ದಿಕ್ಕಿನಲ್ಲಿ ಪರಿಹರಿಸಿಕೊಳ್ಳಲು ಅವರಿಗೆ ಸಹಾಯ ನೀಡಿ.

(14) ಆಗೊಮ್ಮೆ ಈಗೊಮ್ಮೆ ವಿದ್ಯಾರ್ಥಿಗಳಿಗೆ ವಿಫಲತೆಯ, ಭಗ್ನಮನೋರಥ ಆಶಾಭಂಗದ ಅನುಭವವುಂಟಾಗುವಂತೆ ಮಾಡಿ.

(15) ವಿದ್ಯಾರ್ಥಿಗಳ ಕಲಿಕೆಯನ್ನು ಪುನರ್ಬಲನಗೊಳಿಸಲು ಹೊಗಳಿಕೆ, ಬಹುಮಾನಗಳನ್ನು ಉಪಯೋಗಿಸಿ.

(16) ವಿದ್ಯಾರ್ಥಿಗಳನ್ನು ಪುನರ್ಬಲನಗೊಳಿಸಲು ಯುಕ್ತರೀತಿಯ ಪುನರ್ಬಲಕಗಳನ್ನು ಆಯ್ಕೆ ಮಾಡಿಕೊಳ್ಳಿ.

(17) ಪುನರ್ಬಲನ ನೀಡುವುದರಲ್ಲಿ ಏಕರೂಪತೆಯನ್ನು ಕಾಯ್ದುಕೊಳ್ಳಿ. ಯಾವಾಗಲೋ ಒಮ್ಮೆ ಪುನರ್ಬಲನ ನೀಡುವುದು, ಉದ್ದೇಶವಿಲ್ಲದೆ ಪುನರ್ಬಲನ ನೀಡುವುದು ಪ್ರಯೋಜನಕಾರಿಯಾಗದು.

(18) ಹೊಸ ವರ್ತನ ವಿನ್ಯಾಸಗಳನ್ನು ರೂಪಿಸುವಾಗ ಸ್ವಲ್ಪಸ್ವಲ್ಪವಾಗಿ ಮುಂದುವರಿಸಿ.

(19) ನೀವು ವಿದ್ಯಾರ್ಥಿಗಳಲ್ಲಿ ರೂಪಿಸಬೇಕೆಂದಿರುವ ವರ್ತನೆಗೆ ಸರಿಯಾದ ನಮೂನೆಯನ್ನು ಒದಗಿಸಿ. ಅಧ್ಯಾಪಕರೇ ನಮೂನೆಯಾಗಿ ಆ ವರ್ತನೆಯನ್ನು ತೋರಿಸಬಹುದು.

(20) ಕಲಿಕೆಯ ಪರಿಸ್ಥಿತಿಯಲ್ಲಿರಬಹುದಾದ ಪ್ರತಿಸ್ಪರ್ಧಾತ್ಮಕ ಅಭಿಪ್ರೇರಣ ವ್ಯವಸ್ಥೆಗಳ ಆಕರ್ಷಣೆಯನ್ನು ಕಡಿಮೆಮಾಡಿ.

(21) ಆಗಾಗ್ಗೆ ವಿದ್ಯಾರ್ಥಿಗಳ ಮೌಲ್ಯಮಾಪನ ಮಾಡಿ. ಅವರ ಸಾಧನೆಯ ಬಗ್ಗೆ ಹೆಚ್ಚು ವಿಳಂಬ ಮಾಡದೆ ಪ್ರತಿಪುಷ್ಟಿ (ಫೀಡ್‌ಬ್ಯಾಕ್) ಒದಗಿಸಿ.

(22) ವಿದ್ಯಾರ್ಥಿಗಳಲ್ಲಿರುವ ಕುತೂಹಲ, ಆಶ್ಚರ್ಯ ಮತ್ತು ಅನ್ವೇಷಣೆ ಪ್ರವೃತ್ತಿ ಇವುಗಳನ್ನು ಅವರನ್ನು ಅಭಿಪ್ರೇರಿತಗೊಳಿಸಲು ಉಪಯೋಗಿಸಿಕೊಳ್ಳಿ.

(23) ಆಗಾಗ್ಗೆ ಅನಿರೀಕ್ಷಿತವಾದ್ದೇನನ್ನಾದರೂ ತರಗತಿಯಲ್ಲಿ ಮಾಡಿ. ಇದು ವಿದ್ಯಾರ್ಥಿಗಳು ತರಗತಿಯಲ್ಲಿ ಗಮನವನ್ನು ಕೇಂದ್ರೀಕರಿಸಲು ಸಹಾಯ ಮಾಡುವುದು.

(24) ನಿಮ್ಮ ವಿದ್ಯಾರ್ಥಿಗಳ ಸಾಧನಸಾಮರ್ಥ್ಯದ ಬಗ್ಗೆ ಧನಾತ್ಮಕವಾದ ಮನೋಭಾವ ಬೆಳೆಸಿಕೊಳ್ಳುವುದೇ ಅಲ್ಲದೆ ಅದನ್ನು ವಿದ್ಯಾರ್ಥಿಗಳಿಗೆ ತಿಳಿಯಪಡಿಸಿ.

25 ನಿಮ್ಮ ಬೋಧನೆಯಲ್ಲಿ ಉತ್ಸಾಹವನ್ನು ತೋರಿಸಿ.

ಪರಾಮರ್ಶನ ಗ್ರಂಥಗಳು :

1. ಗೇಜ್.ಎನ್.ಎಲ್. ಮತ್ತು ಬರ್ಲಿನರ್—ಎಜುಕೇಷನಲ್ ಸೈಕಾಲಜಿ, ರ್‍ಯಾಂಡ್ ಮೆಕಾಲ್ನಿ ಕಾಲೇಜ್ ಪಬ್ಲಿಷಿಂಗ್ ಕಂಪೆನಿ, ಷಿಕಾಗೋ, 1975. ಅಧ್ಯಾಯಗಳು 14, 15, 16 ಮತ್ತು 17.
2. ಯಲೋನ್, ಎಸ್. ಎಲ್ ಮತ್ತು ವೈನ್‌ಸ್ಟೈನ್. ಜಿ.ಡಬ್ಲ್ಯೂ—ಎ ಟೀಚರ್ಸ್ ವರ್ಲ್ಡ್—ಸೈಕಾಲಜಿ ಇನ್ ದಿ ಕ್ಲಾಸ್ ರೂಂ—ಮೆಗ್ರಾಹಿಲ್ ಕೋಗಾಕು ಪ. ಲಿ. ಟೋಕಿಯೋ, 1977. ಅಧ್ಯಾಯಗಳು 3, 9.
3. ದುಡ್ ಟಿ.ಎಲ್. ಮತ್ತು ಟ್ರೋಫಿ ಜಿ.ಇ. — ಎ ಟೀಚರ್ಸ್ ವರ್ಲ್ಡ್— ಎಜುಕೇಷನಲ್ ಸೈಕಾಲಜಿ; ಹೋಲ್ಟ್, ರೈನ್‌ಹಟ್ ಮತ್ತು ವಿನ್ಸ್ಟನ್, ನ್ಯೂಯಾರ್ಕ್. 1977, ಅಧ್ಯಾಯಗಳು — 11, 12.
4. ಮನ್. ಎನ್.ಎಲ್—ಸೈಕಾಲಜಿ, ಆಕ್ಸ್‌ಫರ್ಡ್ ಮತ್ತು ಐ.ಬಿ,ಎಚ್. ಪಬ್ಲಿಷಿಂಗ್ ಕಂಪೆನಿ, ಕಲ್ಕತ್ತ, ನಾಲ್ಕನೇ ಆವೃತ್ತಿ, 1967, ಅಧ್ಯಾಯ 6.
5. ಮಾರ್ಗನ್ ಜಿ.ಟಿ. ಕಿಂಗ್.ಆರ್.ಎ. ಮತ್ತು ರಾಬಿನ್‌ಸನ್ ಎನ್.ಎಂ.—ಇಂಡ್ರಕ್ಷನ್ ಟು ಸೈಕಾಲಜಿ, ಟಾಟಾ–ಮೆಗ್ರಾಹಿಲ್ ಪಬ್ಲಿಷಿಂಗ್ ಕಂಪೆನಿ, ಲಿ., ನವದೆಹಲಿ, ಆರನೇ ಆವೃತ್ತಿ 1979, ಅಧ್ಯಾಯಗಳು 7, 11, 12.
6. ಸಾರ್ ಜೆ. ಎಂ. ಮತ್ತು ಟೆಲ್‌ಫರ್ಡ್, ಸಿ.ಡಬ್ಲ್ಯೂ—ಎಜುಕೇಷನಲ್ ಸೈಕಾಲಜಿ, ಪ್ರೆಂಟಿಸ್ ಹಾಲ್ ಆಫ್ ಇಂಡಿಯಾ ಪ್ರೈ ಲಿ. ನವದೆಹಲಿ, ಎರಡನೇ ಆವೃತ್ತಿ, 1964, ಅಧ್ಯಾಯಗಳು.

ಪ್ರಾಚೀನ ಭಾರತದ ಎಲ್ಲ ಜೀವನ ಕ್ಷೇತ್ರಗಳಿಗೂ ಆಧ್ಯಾತ್ಮವೇ ಹಿನ್ನೆಲೆಯಾಗಿದ್ದಂತೆ ಶಿಕ್ಷಣಕ್ಕೂ ಹಿನ್ನೆಲೆಯಾಗಿತ್ತು. ಪವಿತ್ರ ಧಾರ್ಮಿಕ ಗ್ರಂಥಗಳ ಕಂಠಪಾಠ ಮಾಡಿ ಅವನ್ನು ಅವರ ಶುದ್ಧ ಸ್ವರೂಪದಲ್ಲಿ ಮುಂದಿನ ಪೀಳಿಗೆಗೆ ಹಸ್ತಗತ ಮಾಡುವುದು ಶಿಕ್ಷಣದ ಪ್ರಥಮ ಉದ್ದೇಶವಾಗಿತ್ತು. ಬರವಣಿಗೆ ಇನ್ನೂ ಅಸ್ತಿತ್ವದಲ್ಲಿಲ್ಲದಿದ್ದಾಗ ಇದು ಅಗತ್ಯವೇ ಆಗಿತ್ತು. ಬರವಣಿಗೆ ಪ್ರಚಾರಕ್ಕೆ ಬಂದ ಮೇಲೆ ಈ ಉದ್ದೇಶ ಹಿಂಬದಿಗೆ ಬೀಳುತ್ತ ಬಂತು. ವಿದ್ಯಾರ್ಥಿಗಳ ವ್ಯಕ್ತಿತ್ವದ ನಿರೂಪಣೆಯ ಉದ್ದೇಶ ಪ್ರಧಾನವಾಗುತ್ತ ಬಂತು. ಆತ್ಮಗೌರವ, ಆತ್ಮಸಂಯಮ, ಸ್ವಾವಲಂಬನೆ ಮುಂತಾದ ಗುಣಗಳ ಬೆಳವಣಿಗೆಗೆ ಗಮನ ಕೊಡಲಾಗುತ್ತಿತ್ತು. ಕೇವಲ ಧರ್ಮಗ್ರಂಥಗಳ ಕಂಠಪಾಠದ ಜೊತೆಗೆ ಪುರಾಣಗಳು ಜಾತಕದ ಕಥೆಗಳು, ತೀರ್ಥಂಕರರ ಚರಿತ್ರೆಗಳು ಪಠ್ಯಕ್ರಮದಲ್ಲಿ ಸೇರಿಕೊಂಡವು. ಜೊತೆಗೆ ಜೀವನೋಪಾಯಕ್ಕೆ ನೆರವಾಗತಕ್ಕ ವಾಣಿಜ್ಯ, ಕೈಗಾರಿಕೆ ಮುಂತಾದವುಗಳೂ ಪ್ರಚಾರಕ್ಕೆ ಬಂದವು. ಜಾತಿ ಪದ್ಧತಿ ಪ್ರಚಾರಕ್ಕೆ ಬಂದಂತೆ ಪ್ರತಿ ಜಾತಿಯವರೂ ತಮ್ಮ ಜಾತಿಗೆ ಬಂದ ಕಸಬನ್ನು ಮನೆಯಲ್ಲಿ ಗುರುಗಳ ಮುಖದಿಂದಲೇ ಕಲಿತು ಆ ಮೂಲಕ ಸಮಾಜ ಜೀವನಕ್ಕೆ ನೆರವಾಗುವ ಅವಕಾಶವೂ ಹೆಚ್ಚುತ್ತ ಬಂತು.

o—O—o

ಹು. ಲ. ಚಂದ್ರಶೇಖರ ಎಂ.ಎ.

ಸಂಗೀತ ಮತ್ತು ಅನುಭಾವ

ಸಂತರಲ್ಲಿ ನಾವು ಮೂರು ವರ್ಗಗಳನ್ನು ಗುರುತಿಸಬಹುದು. ಮೊದಲನೆ ವರ್ಗದ ಸಂತರು ತಮ್ಮ ಭಕ್ತಿ ಹಾಗೂ ಆಧ್ಯಾತ್ಮಿಕ ಅನುಭವಗಳಿಗೆ ತಾರ್ಕಿಕ ತಳಹದಿಯನ್ನು ನೀಡಿದವರು, ಶ್ರೀ ಶಂಕರಾಚಾರ್ಯ, ಶ್ರೀ ರಾಮಾನುಜಾಚಾರ್ಯ ಮತ್ತು ಶ್ರೀ ಮಧ್ವಾಚಾರ್ಯರು ಈ ವರ್ಗಕ್ಕೆ ಸೇರುತ್ತಾರೆ. ಇವರ ತಾತ್ವಿಕ ಬೋಧನೆಗಳು ಮೂಲತಃ ತರ್ಕಪ್ರಧಾನವಾಗಿದ್ದು ಇವರೆಲ್ಲರ ಉದ್ದೇಶವು ತಮ್ಮ ಪಾರಮಾರ್ಥಿಕ ಅನುಭವವನ್ನು ಇಲ್ಲವೇ ಶ್ರುತಿಯನು ಒಂದು ನಿರ್ದಿಷ್ಟವಾದ ತಾರ್ಕಿಕ ಚೌಕಟ್ಟಿನಲ್ಲಿ ಅಳವಡಿಸುವುದಾಗಿತ್ತು. ಎರಡನೇ ವರ್ಗದ ಸಂತರು ತಮ್ಮ ಅನುಭವಕ್ಕೆ ತರ್ಕಪ್ರತಿಪಾದನೆಯನ್ನು ನೀಡುವ ಗೋಜಿಗೆ ಹೋಗದೆ ಕೇವಲ ಈಶ್ವರನ ನಾಮ ಹಾಗೂ ಗುಣಸಂಕೀರ್ತನ ಮಾಡುವುದರಲ್ಲಿ ತಮ್ಮ ಜೀವಿತವನ್ನು ಕಳೆದವರು. ವೈಷ್ಣವ ಪಂಥದ ಆಳ್ವಾರರು ಹಾಗೂ ಶೈವ ಪಂಥದ ನಾಯನಮಾರರು, ಹಾಗೂ ಕರ್ಣಾಟಕದ ಶಿವಶರಣರು ಈ ಗುಂಪಿಗೆ ಸೇರುತ್ತಾರೆ. ಆದರೆ, ಮೂರನೇ ವರ್ಗದ ಸಂತರು—ಅವರಿಗೆ ತತ್ವಜಿಜ್ಞಾಸೆಯ ಬಗ್ಗೆ, ತಮ್ಮ ಭಕ್ತಿ ಹಾಗೂ ಪಾರಮಾರ್ಥಿಕ ಅನುಭವಕ್ಕೆ ತಾರ್ಕಿಕ ಬುನಾದಿಯನ್ನು ನೀಡುವುದರ ಬಗ್ಗೆ — ಎರಡನೆಯ ವರ್ಗದ ಸಂತರಷ್ಟೇ ಔದಾಸ್ಯಭಾವವಿದ್ದರೂ ತಮ್ಮ ಆಧ್ಯಾತ್ಮಿಕ ಗುರಿಯನ್ನು ಸಾಧಿಸಲು ಇನ್ನೂ ನಿರ್ದಿಷ್ಟವಾದ ಸಾಧನವೊಂದನ್ನು ತಮ್ಮ ಸಾಧನೆಯ ಚೌಕಟ್ಟಿನಲ್ಲಿ ಅಳವಡಿಸಿಕೊಂಡರು. ಅದೇ ನಾದಯೋಗ ಈ ಸಂತರ ಪ್ರಕಾರ ನಾದವೆಂಬುದು ಸಾಧನವಷ್ಟೇ ಅಲ್ಲ, ಸಾಧ್ಯವೂ, ಎಂದರೆ ಮಾನವನು ಸಾಧಿಸಬೇಕಾದ ಅಂತಿಮ ಗುರಿಯೂ ಹೌದು. ಭಗವಂತನು ನಾದಪ್ರಿಯ, ನಾದಲೋಲನಷ್ಟೇ ಅಲ್ಲ, ಆತನು ನಾದಾತ್ಮನೂ ನಾದಸ್ವರೂಪನೂ ಹೌದು. ಈ ವರ್ಗದ ಸಂತರಲ್ಲಿ ತಾಳ್ಳಪಾಕ ಅನ್ನಮಾಚಾರ್ಯರು, ಪುರಂದರದಾಸರು, ತ್ಯಾಗರಾಜರು, ದೀಕ್ಷಿತರು ಮತ್ತು ಶ್ಯಾಮಶಾಸ್ತ್ರಿಗಳು ಅಗ್ರಗಣ್ಯರು. ತ್ಯಾಗರಾಜರು "ಎಲೈ ಮನಸ್ಸೇ ಇತರ ಮಾರ್ಗಗಳನ್ನು ಅನುಸರಿಸುವವನಿಗೆ ಮುಕ್ತಿಯನ್ನು ಪಡೆಯಲು ಅನೇಕ ಜನ್ಮಗಳೇ ಬೇಕಾಗುತ್ತದೆ, ಆದರೆ, ಸಹಜ ಭಕ್ತಿಯೊಂದಿಗೆ ರಾಗಗಳ ಜ್ಞಾನವನ್ನು ಹೊಂದಿರುವ

ವರು ಜೀವನ್ಮುಕ್ತರೇ ಸರಿ"[1] ಎಂದು ಹೇಳುತ್ತಾರೆ. ಪುನಃ ಇನ್ನೊಂದು ಕಡೆ ನೈಜ ಭಕ್ತಿ ಹಾಗೂ ಸಂಗೀತ ಜ್ಞಾನವಿಲ್ಲದವಗೆ ಮೋಕ್ಷವುಂಟೇ ಎಂದು ಪ್ರಶ್ನಿಸುತ್ತಾರೆ.[2]

ತತ್ವದ ತರ್ಕಬದ್ಧ ಪ್ರತಿಪಾದನೆಯೇ ತಾತ್ವಿಕತೆ ಎಂದು ತಿಳಿದಿರುವವನಿಗೆ ಭಕ್ತಿ ಪಾರವಶ್ಯದಿಂದ ಹಾಡಿದ ಇವರ ಪದಗಳು — ಇವುಗಳಲ್ಲಿ ಅನೇಕ ವಿರೋಧಾಭಾಸಗಳು ತೋರುವುದರಿಂದಲೂ ಹಾಗೂ ಇವುಗಳ ತಾತ್ವಿಕ ಅಂಶಗಳು ಪೌರಾಣಿಕ ಇಲ್ಲವೇ ಪಾಶ್ಚಾತ್ಯರ ದೃಷ್ಟಿಯಿಂದ ಹೇಳಬಹುದಾದರೆ ಗೊಡ್ಡು ಧಾರ್ಮಿಕ ಅಂಶಗಳೊಂದಿಗೆ ಮಿಳಿತವಾಗಿರುವುದರಿಂದಲೂ — ಅವೈಚಾರಿಕವಾಗಿ ತೋರಬಹುದು. ಆದರೆ ವಾಸ್ತವವಾಗಿ ಈ ಭಕ್ತರಿಗೆ ತಮ್ಮ ದೈವಭಕ್ತಿಗೆ ತಾರ್ಕಿಕ ಬುನಾದಿಯನ್ನು ನೀಡುವುದರಲ್ಲಿ ಆಸಕ್ತಿಯಿರಲಿಲ್ಲ. ಮಾನವನನ್ನು ಅನಗತ್ಯ ಮನೋಗೊಂದಲಗಳಿಗೆ ಎಡೆಮಾಡಿಕೊಡುವಂತಹ ಒಣತರ್ಕ ಇವರಿಗೆ ಬೇಕಿರಲಿಲ್ಲ. ಇವರೆಲ್ಲರೂ ತಮ್ಮ ಜೀವಿತವನ್ನು ಈಶ್ವರನ ಗುಣಗಾನ ಮಾಡುವುದರಲ್ಲೇ ಕಳೆದವರು. ತಮ್ಮ ಇಡೀ ಜೀವನವೂ ಈಶ್ವರದರ್ಶನಕ್ಕಾಗಿ ಹಾತೊರೆದವರು ಹಾಗೂ ತಮ್ಮ ಸಾಧನೆಯ ಒಂದು ನಿರ್ದಿಷ್ಟ ಹಂತದಲ್ಲಿ ತಮ್ಮ ಆಧ್ಯಾತ್ಮಿಕ ತೃಷೆಯನ್ನು ನೀಗಿಸಿಕೊಂಡರೂ ಕೂಡ. ಇವರೆಲ್ಲರೂ ತಮ್ಮ ಹೃದಯದ ಆಳದಿಂದ ಅಂತಿಮ ಸತ್ಯದೊಂದಿಗೆ ಸಂಭಾಷಿಸಿದರೇ ಹೊರತು ವಿಮರ್ಶಿಸಿದವರಲ್ಲ. ನಾವು ಇಲ್ಲಿ ನೆನೆಸಬೇಕಾದ ಮತ್ತೊಂದು ಅಂಶವೇನೆಂದರೆ ಇವರ ಬೋಧನೆಗಳು ಮೂಲತಃ ಭಕ್ತಿ ಭಾವುಕತೆಗಳಿಂದ ತುಂಬಿದ್ದರೂ, ತಮ್ಮ ಆಧ್ಯಾತ್ಮಿಕ-ಅನುಭವಗಳಿಗೆ ಇವರೆಲ್ಲರೂ ತಾರ್ಕಿಕ ವ್ಯಾಖ್ಯಾನವನ್ನು ನೀಡುವ ಗೋಜಿಗೆ ಹೋಗದಿದ್ದರೂ ಇವರುಗಳು ತಮ್ಮ ಸಾಧನೆಯ ಜೀವನದಲ್ಲಿ ತರ್ಕವನ್ನು ಅಳವಡಿಸಿಕೊಂಡರು ಎಂಬುದು ; ಅಂದರೆ ಇವರು ನಿತ್ಯಾನಿತ್ಯ ವಸ್ತುಗಳು, ಆತ್ಮಾನಾತ್ಮ , ಒಳಿತು ಕೆಡಕುಗಳನ್ನು ಅರಿತುಕೊಳ್ಳಲು ತಮ್ಮ ಹರಿತವಾದ ವಿಚಾರಶಕ್ತಿಯನ್ನು ಬಳಸಿದ್ದರೆಂಬುದು ನಮಗೆ ಸ್ಮರಣೀಯವಾದ ಅಂಶ.

ಈ ಸಂತರು ತಮ್ಮ ಜೀವನದಲ್ಲಿ ಅಳವಡಿಸಿಕೊಂಡ ಮಾಧ್ಯಮವು ಇವರ ತತ್ವಶಾಸ್ತ್ರದ ಸ್ವರೂಪದಿಂದ ನಿರ್ಧಾರಿತವಾಗಿದೆಯೆಂಬುದನ್ನು ನಾವು ಪುನಃ ಗಮನಿಸುವುದು ಅವಶ್ಯ. ಇವರು ಅಳವಡಿಸಿಕೊಂಡ ಪ್ರಸಾರ ಮಾಧ್ಯಮ ಸಂಗೀತ. ಇದರ ಕ್ರಿಯೆ ಎರಡು ರೀತಿಯದು. ಮೊದಲನೆಯದಾಗಿ, ಮಾನವನಲ್ಲಿ ಸುಪ್ತವಾಗಿ ಹುದುಗಿರುವ ಭಾವನೆಗಳನ್ನು-ಇವು ಸಂತಸಪೂರ್ಣವಾಗಿರಬಹುದು. ವಿಷಾದಪೂರ್ಣವಾಗಿರಬಹುದು-ಕಾವ್ಯ ಇಲ್ಲವೇ ಸಂಗೀತವೊಂದೇ ಯಶಸ್ವಿಯಾಗಿ ಹೊರಹೊಮ್ಮಿಸಬಲ್ಲುದು. ಇದನ್ನು ಯಾವ ತರ್ಕವೊ ಅದು ಎಷ್ಟೇ ಸಮರ್ಪಕವಾಗಿದ್ದರೂ ಯಾವ ಪದಜಾಲವೂ ಸಹ ಪರಿಣಾಮಕಾರಿಯಾಗಿ ಮೂಡಿಸಲು ಸಾಧ್ಯವಿಲ್ಲ. ಸಾಮಾನ್ಯ ಭಾಷೆಗೆ ನಿಲುಕದ ಭಾವನಾತ್ಮಕ ವಿಷಯಗಳನ್ನು ಒಂದೇ ಒಂದು ರಾಗವು ಹೊರಹೊಮ್ಮಿಸಬಲ್ಲುದು. ಪ್ರತಿಯೊಂದು ರಾಗವು ಕವಿಯ ಇಲ್ಲವೇ ಭಕ್ತನ ಮನಸ್ಸಿನ ಒಂದು ನಿರ್ದಿಷ್ಟ ಭಾವನೆಯನ್ನು ಬಿಂಬಿಸುತ್ತದೆ. ಮಾನವನ ಭಾವನೆಗಳಿಗೆ ಅವು ಶುದ್ಧವೂ, ಪ್ರಾಮಾಣಿಕವೂ ತೀವ್ರವೂ

ಆಗಿದ್ದ ಪಕ್ಷದಲ್ಲಿ ತನ್ನಷ್ಟಕ್ಕೇ ತಾನೇ ಯಾವ ಮಾಧ್ಯಮದ ಸಹಾಯವಿಲ್ಲದೇ ಕಾವ್ಯ ಇಲ್ಲವೇ ಗಾನರೂಪವಾಗಿ ಮಾರ್ಪಾಡು ಹೊಂದುವ ಸಾಮರ್ಥ್ಯವಿದೆ. ಇಷ್ಟು ನಾವು ಸಂಗೀತಗಾರನ ದೃಷ್ಟಿಯಿಂದ ಹೇಳಬಹುದಾದ ವಿಷಯ. ಎರಡನೆಯದಾಗಿ ಕೇಳುಗನ ದೃಷ್ಟಿಯಿಂದಲೂ ಸಂಗೀತವು ಅವ್ಯಾಹತೆ (Spontaneity) ಎಂಬ ಲಕ್ಷಣದಿಂದ ಕೂಡಿದೆ. ಸಂಗೀತಕಲೆಗೆ ಇತರ ಉಪಯುಕ್ತ ಕಲೆಗಳಿಗೆ (Useful arts) ಇರುವಂತೆ ಯಾವ ಪ್ರಾಯೋಜಿಕ ಮೌಲ್ಯವಿರುವುದಿಲ್ಲ. ಮಾನವನು ಸಂಗೀತದಿಂದ ಬರಬಹುದಾದ ಲೌಕಿಕ ಪ್ರಯೋಜನಗಳನ್ನು ಮನಸ್ಸಿನಲ್ಲಿರಿಸಿಕೊಂಡು ಅದನ್ನು ಕೇಳುವುದಿಲ್ಲ. ಅದನ್ನು ಅದಕ್ಕೋಸ್ಕರವೇ ಕೇಳುತ್ತಾನೆ. ಸಂಗೀತದ ಒಂದು ಅಮೋಘವಾದ ಸಾಮರ್ಥ್ಯವೇನೆಂದರೆ ಅದು ಮಾನವನ ಮನಸ್ಸನ್ನು ಪ್ರಯೋಜನಾ ದೃಷ್ಟಿಯಿಂದ ದೂರವಿಡುತ್ತದೆ, ಅವನ ಹೃದಯಕ್ಕೂ ಅದಕ್ಕೂ ನಡುವೆ ಯಾವ ಪ್ರಾಪಂಚಿಕ ವಿಚಾರ, ಇಲ್ಲವೇ ಲೌಕಿಕ ಲಾಭವೂ ಅಡ್ಡಬರದಿರುವಂತೆ ಮಾಡುತ್ತದೆ. ಗಾಯಕನ ಹೃದಯದಿಂದ ಅವ್ಯಾಹತವಾಗಿ ಹೊರಹೊಮ್ಮುವ ಗಾನವು ಕೇಳುಗನ ಹೃದಯವನ್ನು ನೇರವಾಗಿ ಸ್ಪರ್ಶಿಸಿ ಅವನ ಹೃದಯದ ತಂತಿಗಳನ್ನು ಅವ್ಯಾಹತವಾಗಿ ಪ್ರತಿಸ್ಪಂದಿಸುತ್ತದೆ. ಈ ಕಾರಣದಿಂದ ಸಂಗೀತಕ್ಕೆ ಮೂಲವಾಗಿರುವ ಕವಿಯ ಭಾವನೆಗಳನ್ನು ಮಾನವನು ಸುಲಭವಾಗಿ ಅರ್ಥಮಾಡಿಕೊಳ್ಳಬಲ್ಲವನಾಗುತ್ತಾನೆ. ಇನ್ನೂ ಸ್ಥೂಲವಾಗಿ ಹೇಳಬಹುದಾದರೆ ಸಂಗೀತವು ಕೇಳುಗನನ್ನು ಅದರ ಸಾಹಿತ್ಯದ ಸನಿಹಕ್ಕೆ ಕರೆದೊಯ್ಯುತ್ತದೆ. ಸಂಗೀತ ಕಲೆಗಿರುವ ಸಾರ್ವತ್ರಿಕ ಪ್ರಭಾವವು "ಸಂಗೀತ ಸಾಹಿತ್ಯಗಳಲ್ಲಿ ಆಸಕ್ತಿರಹಿತನಾದವನೂ ಒಂದೇ, ಕೊಂಬು ಬಾಲವಿಲ್ಲದ ಕೋಣವೂ ಒಂದೇ" ಎಂಬ ಸಂಸ್ಕೃತೋಕ್ತಿಯಿಂದ ಸ್ಪಷ್ಟವಾಗುತ್ತದೆ.[3] ತ್ಯಾಗರಾಜರು ಸ್ವರಲಯಗಳಿಗೆ ಪ್ರತಿಸ್ಪಂದಿಸದವರನ್ನು ಕುರಿತು "ಸ್ವರಲಯಂಬುಲೆರುಂಗಕನು ಶಿಲಾತ್ಮುಲೈ" ಎಂದು ಉಲ್ಲೇಖಿಸುತ್ತಾರೆ.[4] ಮಕ್ಕಳು, ಸರ್ಪವೇ ಮುಂತಾದ ವಿಶ್ವದ ಎಲ್ಲಾ ವಿಧವಾದ ಜೀವಗಳಿಗೂ ನಾದಕ್ಕೆ ಅವ್ಯಾಹತವಾಗಿ ಸ್ಪಂದಿಸುವ ಸಾಮರ್ಥ್ಯವಿದೆಯೆಂದು ಒಂದು ಸಂಸ್ಕೃತೋಕ್ತಿಯಿಂದ ನಮಗೆ ತಿಳಿಯುತ್ತದೆ.[5] ವಾಸ್ತವವಾಗಿ 'ಸ್ವರ' ಎಂಬ ಪದದ ವ್ಯುತ್ಪತ್ತಿಯೇ ಅದರ ಕಲಾತ್ಮಕ ಲಕ್ಷಣವನ್ನು ಸೂಚಿಸುತ್ತದೆ.[6] ಇಡೀ ಸೃಷ್ಟಿಯ ವ್ಯವಸ್ಥೆಯನ್ನೇ ಹೇಗೆ ಸಂಗೀತವು ತಿರುಗುಮುರುಗಾಗಿ ಬದಲಿಸಬಲ್ಲುದು ಎಂಬುದನ್ನು ಭಾಗವತವು ವಿವರಿಸುತ್ತದೆ.[7]

ಇಲ್ಲಿ ನಾವು ಗಮನಿಸಬೇಕಾದ ಮತ್ತೊಂದು ಅಂಶವೇನೆಂದರೆ ಸಂಗೀತವೆಂಬುದು ಎಲ್ಲ ಅನುಭಾವಿಗಳ ಪ್ರಕಾರ ದೈವಿಕವಾದದ್ದು. ಭಾರತೀಯ ವೈದಿಕ ದರ್ಶನಗಳ ಪ್ರಕಾರ ಒಂದು ಕಲೆಯ ಕಲಾತ್ಮಕ ಮೌಲ್ಯವು ಆ ಕಲೆಯಲ್ಲೇ ಅಂತರ್ಗತವಾದುದಲ್ಲ. ವಾಸ್ತವವಾಗಿ ಕಲಾತ್ಮಕ ಮೌಲ್ಯವನ್ನು ಪಡೆದಿರುವ ಅಂತಹ ವಸ್ತುವು ತನ್ನಲ್ಲಿ ಅಂತಸ್ಥವಾಗಿದ್ದೂ ಅತೀತವಾಗಿರುವ ದೈವಿಕ ತತ್ವದ ಅಸ್ತಿತ್ವವನ್ನು ಸೂಚಿಸುತ್ತದೆ. ವಸ್ತುವಿನ ಕಲಾತ್ಮಕತೆಯನ್ನು ನಾವು ದೈವಿಕ ನಿರೂಪಣೆಯ ಮೂಲಕ ಮಾತ್ರವೇ ವಿವರಿಸಲು

ಸಾಧ್ಯ. ಸೌಂದರ್ಯವೆಂಬುದು ಒಂದು ಜಡವಸ್ತುವಿನ ವಿಶೇಷಣವಾಗಲು ಸಾಧ್ಯವಿಲ್ಲ. ದೈವಿಕವಾದ ಕಲ್ಪನೆಯಿಲ್ಲದೇ ನಾವು ಯಾವ ವಸ್ತುವಿನ ಸೌಂದರ್ಯವನ್ನೂ ಕಲ್ಪಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಇದನ್ನೇ ಭಗವಾನ್ ಕೃಷ್ಣನು ಘನವೆಂದು ಹೇಳಿಕೊಳ್ಳಬಹುದಾದ ಏನೆಲ್ಲ ವಸ್ತುಗಳಿವೆಯೋ ಆ ವಸ್ತುಗಳಿಗೆ ಘನತೆಯೆಂಬುದು ನನ್ನಿಂದಲೇ ದೊರಕುವುದು ಎಂದು ಹೇಳುವುದು.[೪] ಸಂಗೀತವು ತಾತ್ವಿಕ ಸತ್ಯಗಳನ್ನು ಅರಿತುಕೊಳ್ಳಲು ಯಶಸ್ವಿಯಾದ ಮಾಧ್ಯಮವಾಗಿದ್ದಲ್ಲಿ ಅದಕ್ಕೆ ಕಾರಣ ಅದರ ಕಲಾತ್ಮಕ ಚೌಕಟ್ಟಲ್ಲ, ಅದು ತನ್ನ ಮೂಲವನ್ನು ದೈವದಲ್ಲಿ ಪಡೆದಿದೆ ಎಂಬುದು. ವೇದಾಂತ ದರ್ಶನದಲ್ಲಿ ವೇದಾಂತ ವ್ಯುತ್ಪತ್ತಿ ಅಥವಾ ಅಪರ್ಯವಸಾನವೃತ್ತಿ ಎಂಬ ವಾದವಿದೆ. ಈ ವಾದದ ಪ್ರಕಾರ ಪ್ರತಿಯೊಂದು ಪದಕ್ಕೂ ಒಂದು ಸಾಧಾರಣ ಅರ್ಥದ ಜೊತೆಗೆ ಅಂತಿಮಾರ್ಥವೂ ಇದ್ದು ವಿಶ್ವದ ಎಲ್ಲ ಪದಗಳೂ ಭಾಷೆಗಳೂ ಅಂತಿಮವಾಗಿ ಒಂದೇ ತಾತ್ಪರ್ಯವನ್ನು ಸೂಚಿಸುತ್ತವೆ. ಇದೇ ಈಶ್ವರ ಅಥವಾ ಪರಮಾತ್ಮ. ಪದಗಳಿಗೆ ದೈವಿಕ ತಾತ್ಪರ್ಯವಿದೆಯೆಂಬ ವಾದವು ಶಬ್ದಶಾಸ್ತ್ರಕ್ಕೂ ಅನ್ವಯಿಸುತ್ತದೆ. ಅದರಂತೆ ಎಲ್ಲ ಶಬ್ದಗಳೂ ಕಟ್ಟಕಡೆಗೆ ಭಗವಂತನನ್ನೇ ಸೂಚಿಸುವುದು. ಈ ವಾದದ ಹಿನ್ನೆಲೆಯಲ್ಲಿಯೇ ನಾವು 'ಈಶ್ವರನು ಬಹುಶಬ್ದಮಯ' ಎಂಬ ಹೇಳಿಕೆಯನ್ನು ಅರ್ಥಮಾಡಿಕೊಳ್ಳಬೇಕು. ಈ ಸಂದರ್ಭದಲ್ಲಿ ಸಂಗೀತ ಸಾಹಿತ್ಯಗಳಿಗೆ ಮಾಧ್ಯಮವಾದ, ಶಬ್ದವು ವಿಷ್ಣುವಿನ ಅಂಶ ಎಂಬ ವಿಷ್ಣು ಪುರಾಣದ ಶ್ಲೋಕವೂ ಉಲ್ಲೇಖನೀಯವಾಗಿದೆ.

ಆಧ್ಯಾತ್ಮಿಕ ಸಾಧನವನ್ನಾಗಿ ಇಲ್ಲವೇ ಅತೀಂದ್ರಿಯ ಅನುಭವವನ್ನು ಅಭಿವ್ಯಕ್ತಗೊಳಿಸಲು ಗಾನಕಲೆಯನ್ನು ಸಾಧನವನ್ನಾಗಿ ಬಳಸಿಕೊಂಡುದರ ಬಗ್ಗೆ ನಮಗೆ ದೊರಕಿರುವ ಅತ್ಯಂತ ಪ್ರಾಚೀನ ಉಲ್ಲೇಖನೆಂದರೆ ವೇದಗಳು. ವೇದಗಳು ಋಷಿಗಳು ಪಡೆದ ಸತ್ಯದ ಅತೀಂದ್ರಿಯ ಅನುಭವಗಳ ವಾಗಭಿವ್ಯಕ್ತಿಗಳಾಗಿವೆ. ಸೂಕ್ತ ರೂಪದಲ್ಲಿರುವ ಈ ವಾಗಭಿವ್ಯಕ್ತಿಗಳನ್ನು ನಿಗದಿತವಾದ ಸ್ವರಗಳಲ್ಲಿ ಉಚ್ಚರಿಸುವುದರಿಂದ ದೇವತೆಗಳಿಗೆ ಪ್ರೀತಿಯುಂಟಾಗುವುದೆಂದು ಪ್ರತೀತಿ. ಸಾಮವೇದದ ಆರ್ಷೇಯ ಬ್ರಾಹ್ಮಣವು ಭಾರತೀಯ ಸಂಗೀತ ಶಾಸ್ತ್ರಕ್ಕೆ ಮೂಲ ತಳಹದಿ, ಯಾಜ್ಞವಲ್ಕ್ಯ ಸ್ಮೃತಿಯು ಸ್ವರಗಳನ್ನು ಬದಲಿಸಬಾರದ ಗಾಂಧರ್ವ ಅಥವ ಮಾರ್ಗ ಎಂಬ ಒಂದು ಬಗೆಯ ಗಾನಗಳನ್ನು ಉಲ್ಲೇಖಿಸುತ್ತದೆ. ಭಾಗವತರ ಪ್ರಕಾರ ಕೀರ್ತನೆಯೆಂಬುದು ನವವಿಧಭಕ್ತಿಗಳಲ್ಲಿ ಒಂದು ಎಂಬುದು ಎಲ್ಲರಿಗೂ ತಿಳಿದ ವಿಷಯ.

ನಾದೋಪಾಸನೆಯಲ್ಲಿ ನಾವು ವಿವಿಧ ಹಂತಗಳನ್ನು ಗುರುತಿಸಬಹುದು.[೮] ಮೊದಲನೆಯ ಹಂತದಲ್ಲಿ ಸಾಧಕನಿಗೂ ಆತನ ಉಪಾಸನಾ ದೇವತೆಗೂ ಭಿನ್ನತೆಯಿದ್ದು ಸಾಧಕನು ನಾದವನ್ನು ಆ ಉಪಾಸನಾ ದೇವತೆಯ ವಿಶೇಷಣ ಇಲ್ಲವೇ ಧರ್ಮವೆಂಬುದಾಗಿ ತಿಳಿಯುತ್ತಾನೆ. ಈ ಹಂತದಲ್ಲಿ ಭಗವಂತನು ನಾದಪ್ರಿಯ, ನಾದಲೋಲ, ರಾಗರಸಿಕ ಇವೇ ಮುಂತಾದ ವಿಶೇಷಣಗಳಿಂದ ಸ್ತುತಿಸಲ್ಪಡುತ್ತಾನೆ. ಈ ಮೊದಲ ಮೆಟ್ಟಿಲಲ್ಲೇ ಸಾಧಕನು ಸಂಗೀತದ ಹಾಗೂ ನೈತಿಕವಾದ ಕೆಲವು ನಿಯಮಗಳನ್ನು ತನ್ನ ಆಧ್ಯಾತ್ಮಿಕ

ಸಾಧನ ಜೀವನದಲ್ಲಿ ಅಳವಡಿಸಿಕೊಂಡು ಅವುಗಳನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಾನೆ. ಜಗತ್ತಿನ ಮಹಾನ್ ಸಂಗೀತ ಸಂತರೆಲ್ಲರ ಪ್ರಕಾರ ಸಂಗೀತಕ್ಕೆ ತನ್ನದೇ ಆದ ಕೆಲವು ನಿಯಮಗಳಿವೆ. ಆ ನಿಯಮಗಳಿಗೆ ಅನುಸಾರವಾಗಿ ಗಾಯಕನು ಪಕ್ಕವಾದ್ಯಗಳಿಲ್ಲದೆ ಹಾಡಬಾರದು. ಅವನ ಸಂಗೀತವು ಸರಿಯಾದ ಸ್ವರ ಹಾಗೂ ಲಯಗಳಿಂದ ಕೂಡಿರಬೇಕು. ಪುರಂದರದಾಸರು ತಾಳಮೇಳಗಳ ಆವಶ್ಯಕತೆಯನ್ನು ತಮ್ಮ 'ತಾಳಬೇಕು ತಕ್ಕ ಮೇಳ ಬೇಕು ಎಂಬ ಪದದಲ್ಲಿ ಉಲ್ಲೇಖಿಸುತ್ತಾರೆ. ತ್ಯಾಗರಾಜರು 'ಸರಿಯಾಗಿ ತಂಬೂರಿಯನ್ನು ಹಿಡಿದು ಸಂಪ್ರದಾಯವನ್ನು ಬಿಡದೇ ಸರಿಯಾದ ಸ್ವರದಲ್ಲಿ ನಿನ್ನನ್ನು ಕುರಿತು ಗಾನಮಾಡುವವನಿಗೆ ನಿನ್ನ ಕೃಪೆಯನ್ನು ತೋರುತ್ತೀಯ ಎಂಬುದಾಗಿ ಭಗವಂತನನ್ನು ಕೊಂಡಾಡುತ್ತಾರೆ.[9] ಶಿಶುನಾಳ ಷರೀಫರು ತಂಬೂರಿಯನ್ನು ನುಡಿಸುವ ವಿಧಾನದ ಬಗ್ಗೆ ಹೇಳುತ್ತಾ 'ಸರಸ ಸಂಗೀತದ ಕುರುಹುಗಳರಿಯದೇ ಬರಿದೇ ಬಾರಿಸದಿರು ತಂಬೂರಿ' ಎಂದು ಬೋಧಿಸುತ್ತಾರೆ. ರಾಗದಲ್ಲಿ ಯಾವ ವೈಪರೀತ್ಯವನ್ನು ತರದಿರುವುದು ಮತ್ತೊಂದು ಆವಶ್ಯಕ ನಿಯಮ. ರಾಗ ವೈಪರೀತ್ಯವಿಲ್ಲದಿರುವಿಕೆಯ ಆವಶ್ಯಕತೆಯು ನಮಗೆ ಬೃಹದ್ಧರ್ಮಪುರಾಣದ ಒಂದು ಕಥೆಯಿಂದ ತಿಳಿಯುತ್ತದೆ. ಭಗವಂತನು ನಾರದರಿಗೆ ಅಪ್ಸರೆಯರನ್ನು ಹೋಲುವ ಒಂದು ಲಲನಾಸಮೂಹವೇ ಅಂಗವಿಕಲರಾಗಿ ಬಿದ್ದಿರುವುದನ್ನು ತೋರಿಸುತ್ತಾನೆ. ನಾರದರು ಅವರಾರೆಂದು ಪ್ರಶ್ನಿಸಿದಾಗ ಭಗವಂತನು ಅವರೆಲ್ಲರೂ ರಾಗಗಳ ಅಧಿದೇವತೆಗಳೆಂದೂ, ನಾರದರು ತಮ್ಮ ಗಾಯನ ಲೋಪದಿಂದ ಅವರನ್ನು ಈ ರೀತಿಯ ವೈಫಲ್ಯಕ್ಕೆ ಗುರಿಪಡಿಸಿದ್ದಾರೆಂದು ಹೇಳುತ್ತಾನೆ.[10] ತ್ಯಾಗರಾಜರು ತಮ್ಮ ಇನ್ನೊಂದು ಕೃತಿಯಲ್ಲಿ ವಿವಿಧ ಗತಿಗಳನ್ನು ಅರಿಯದೇ ಸುಮ್ಮನೆ ಮೃದಂಗವನ್ನು ಮರ್ದನ ಮಾಡುವುದರಲ್ಲಿ ಯಾವ ಸುಖವುಂಟು ?" ಎಂದು ಪ್ರಶ್ನಿಸುತ್ತಾರೆ.[11]

ಮತ್ತೆ ಸಂಗೀತಕ್ಕೆ ಒಂದು ಸಾಹಿತ್ಯವಿದ್ದು ಈ ಸಾಹಿತ್ಯವು ನಮ್ಮ ಪ್ರಾಚೀನ ಧರ್ಮಗ್ರಂಥಗಳನ್ನಾಗಲೀ ಅಥವಾ ಮಹಾತ್ಮರ ಬೋಧನೆಗಳನ್ನು ಆಧರಿಸಿದ್ದಾಗಿರಬೇಕು. ಸಂಗೀತಕ್ಕೆ ಕೇವಲ ಕಲಾಚೌಕಟ್ಟಿನಿಂದ, ಶಬ್ದರಚನೆಗಳ ಸಾಮರಸ್ಯದಿಂದ ಕಲಾತ್ಮಕತೆ ಬರುವುದೆಂಬ ಪಾಶ್ಚಾತ್ಯ ದೇಶದ formalist ವಾದವನ್ನು ನಾವು ಪರಿಗ್ರಹಿಸಲು ಸಾಧ್ಯವಿಲ್ಲ. ಅಂತಹ ಸಂಗೀತದ ಕಲಾವೈಪುಲ್ಯವನ್ನು ನಾವು ತಿರಸ್ಕರಿಸಲು ಸಾಧ್ಯವಾಗದಿದ್ದರೂ, ಅದು ದೊಡ್ಡ ಕಲೆಯೆಂದೇನೂ ಅನಿಸಿಕೊಳ್ಳಲಾರದೆಂಬುದನ್ನು ನಾವು ನೆನಪಿನಲ್ಲಿಡಬೇಕು. ರೂಪ ಹಾಗೂ ವಸ್ತು—ಇವುಗಳ ಸಾಮರಸ್ಯ ಮಿಳಿತವು ಮಾತ್ರ ಕೇಳುಗನ ಮನಸ್ಸನ್ನು ಪ್ರಭಾವಿಸಬಲ್ಲದು. ಸಂಗೀತವು ಕೇಳಲೂ ಮಧುರವಾಗಿರಬೇಕು, ಮತ್ತು ಕೇಳುಗನನ್ನು ಹಾಗೂ ಗಾಯಕನನ್ನು ಆಧ್ಯಾತ್ಮಿಕವಾಗಿಯೂ ಔನ್ನತ್ಯಗೊಳಿಸುವಂತಹುದುದಾಗಿರಬೇಕು. ಸಂಗೀತಕ್ಕೆ ಇಂತಹ ಸಾಮರ್ಥ್ಯ ಬರುವುದು ಅದು ಒಂದು ಸರಿಯಾದ ಸಾಹಿತ್ಯವನ್ನೂ ಹೊಂದಿದ್ದರೆ ಮಾತ್ರ. ಈ ಸಾಹಿತ್ಯವನ್ನು ನಾವು ಯಾವ ಕಾಲ್ಪನಿಕ ಪ್ರಮಾಣಗಳಿಂದಲೂ ಪಡೆದಿರದೇ ಶಾಸ್ತ್ರಗಳಿಂದಲೇ

ಪಡೆದಿರಬೇಕು. Coleridge ಎಂಬಾತನು ಸಂಗೀತದ ಶ್ರೇಷ್ಠತೆಯನ್ನು ಅದು ಹೊಂದಿರಬಹುದಾದ ಪಾವಿತ್ರ್ಯದ ಆಧಾರದ ಮೇಲೆ ನಿರ್ಧರಿಸುತ್ತಾನೆ.12 ತ್ಯಾಗರಾಜರು “ಶ್ರೀರಾಮನೇ ಮೃದಂಗ ಹಾಗೂ ತಾಳಗಳ ಮೇಳಗಳಿಂದಲೂ, ಉಪನಿಷತ್ತುಗಳ ತಾತ್ಪರ್ಯವನ್ನು ಹೊಂದಿರುವ ಪದಸಮೂಹಗಳಿಂದಲೂ, ಶುದ್ಧವಾದ ಸ್ವರದಿಂದಲೂ, ಮತಿವಿಶ್ರಮಗಳಿಂದಲೂ ಕೂಡಿರುವ ನೈಜಭಕ್ತಿಗಳನ್ನು ಹೊರಸೂಸುವ, ದ್ರಾಕ್ಷಾರಸದಂತೆ ಮಧುರವೂ ಲಲಿತವೂ ಆಗಿರುವ, ನವರಸಗಳಿಂದ ಕೂಡಿರುವ ಹಾಡುಗಳಿಂದ ನಿನ್ನನ್ನು ಮೆಚ್ಚಿಸಬಹುದಾದ ಮಹಾಪುರುಷನು ಎಲ್ಲಿರುವನು ? ತ್ಯಾಗರಾಜನಿಗಂತೂ ಈ ಕಾರ್ಯ ಅಸಾಧ್ಯ” ಎನ್ನುತ್ತಾರೆ.13

ಇನ್ನಿತರ ಯಾವುದೇ ಮೋಕ್ಷ ಸಾಧನದಂತೆ ನಾದಯೋಗವೂ ಸುಭದ್ರವಾದ ಒಂದು ನೈತಿಕ ತಳಹದಿಯನ್ನು ಅಪೇಕ್ಷಿಸುತ್ತದೆ. ಒಂದು ಕಡೆ ಸಂಗೀತವು ಶಾಸ್ತ್ರಾಧಾರಿತವಾದ ಸಾಹಿತ್ಯವನ್ನು ಹೊಂದಿದ್ದು ಮತ್ತೊಂದು ಕಡೆ ಅದು ನೈತಿಕತೆಯ ಬುನಾದಿಯನ್ನು ಪಡೆದಿರಬೇಕು. ಸಂತರೆಲ್ಲರೂ ಆತ್ಮ ನಿಗ್ರಹ, ಮನಶ್ಶುದ್ಧಿ, ಅರಿಷಡ್ವರ್ಗಗಳ ಮೇಲಿನ ನಿಯಂತ್ರಣ, ಒಳಿತು ಕೆಡಕುಗಳ ಹಾಗೂ ನಿತ್ಯಾನಿತ್ಯ ವಸ್ತುಗಳ ವಿವೇಕ ಇವುಗಳ ಆವಶ್ಯಕತೆಯನ್ನು ಒತ್ತಿ ನುಡಿದಿದ್ದಾರೆ. ತ್ಯಾಗರಾಜರು “ನಿದ್ದೆಯನ್ನು ಗೆದ್ದು ಶುದ್ಧ ಮನಸ್ಕನಾಗಿ ಭಜಿಸುವವನನ್ನು ನೀನು ರಕ್ಷಿಸುತ್ತೀಯೆ' ಎಂದು ಹೇಳುತ್ತಾರೆ.14 ಎಲ್ಲಕ್ಕಿಂತಲೂ ಮುಖ್ಯವಾಗಿ ಭಕ್ತಿಯು ಆವಶ್ಯಕ. ಇದಿಲ್ಲವೇ ಸಂಗೀತಶಾಸ್ತ್ರದ ಎಲ್ಲ ನಿಯಮಗಳನ್ನು ಸಾಧಕನು ಪಾಲಿಸಿದ್ದರೂ ತನ್ನ ಗುರಿಯನ್ನು ಮುಟ್ಟಲಾರ. ಪುರಂದರ ದಾಸರು ‘ತಾಳಮೇಳಗಳಿದ್ದು ಪ್ರೇಮವಿಲ್ಲದ ಗಾನ ಕೇಳನೋ ಹರಿ' ಎಂದು ಹೇಳಿ ‘ಸಾಧಕನು ಹೆಜ್ಜೆಹೆಜ್ಜೆಗೂ ಆನಂದಬಾಷ್ಪಗಳನ್ನು ಸುರಿಸುತ್ತ ಭಕ್ತಿಯಿಂದ ಮಾಡಿದ ಗುಣಗಾನವನ್ನು ಮಾತ್ರ ದೇವರು ಆಲಿಸುತ್ತಾನೆ' ಎಂದು ಸಾರುತ್ತಾರೆ. ತ್ಯಾಗರಾಜರು “ಭಕ್ತಿರಹಿತವಾದ ಸಂಗೀತಜ್ಞಾನವು ಮಾನವನನ್ನು ಮುಕ್ತಿಯ ಪಥಕ್ಕೆ ಕೊಂಡೊಯ್ಯಬಲ್ಲದೇ” ಎಂದು ಪ್ರಶ್ನಿಸುತ್ತಾರೆ. ಧರ್ಮ ಯಾವುದು, ಅಧರ್ಮ ಯಾವುದು ಎಂಬುವದನ್ನೂ ಈ ಜಗತ್ತೆಲ್ಲವೂ ಮಾಯೆಯೆಂಬುದಾಗಿಯೂ, ಆರು ಅಂತಶ್ಶತ್ರುಗಳನ್ನು ನಿಗ್ರಹಿಸುವ ಬಗೆಯನ್ನೂ ತಿಳಿದಿರುವ ತ್ಯಾಗರಾಜನು ಎಂದರೆ ಶಿವಭೃಂಗಿ, ಗಣೇಶ, ಆಂಜನೇಯ, ಅಗಸ್ತ್ಯ, ಮತಂಗ ನಾರದರೇ ಮುಂತಾದ ಭಕ್ತರು ಮಾತ್ರ ಈ ನಾದೋಪಾಸನೆಯ ರಹಸ್ಯವನ್ನು ಬಲ್ಲರು ಎಂದು ಅದೇ ಕೃತಿಯಲ್ಲಿ ಉತ್ತರಿಸುತ್ತಾರೆ.15 ಈ ಕಾರಣದಿಂದಾಗಿಯೇ ಸಂತರೆಲ್ಲರೂ ಸಂಗೀತವನ್ನು ದುರುಪಯೋಗಪಡಿಸಿಕೊಳ್ಳುವುದನ್ನು ಖಂಡಿಸಿದ್ದಾರೆ. ಇವರೆಲ್ಲರೂ ತಾವು ಬದುಕಿರುವವರೆಗೂ ಈ ಆದರ್ಶವನ್ನು ಪಾಲಿಸಿದವರು. ವಿಜಯನಗರದ ಅರಸನಾಗಿದ್ದ ಸಾಳ್ವನರಸಿಂಹರಾಯನು ಅನ್ನಮಾಚಾರ್ಯರನ್ನು ತನ್ನ ಮೇಲೆ ಶೃಂಗಾರ ತಾತ್ಪರ್ಯದಿಂದ ಕೂಡಿರುವ ಪದವನ್ನು ರಚಿಸೆಂದು ಆದೇಶಿಸಿದಾಗ ಅನ್ನಮಾಚಾರ್ಯರು ‘ಹರಿಮುಕುಂದುನಿ ಕೊನಿಯಾಡು ನಾಜಿಹ್ವ, ನಿನು ಕೊನಿಯಾಡ ನೇರದು” ಎಂದು ನಿಷ್ಠುರವಾಗಿ ಹೇಳಿಬಿಟ್ಟರು.16 ತ್ಯಾಗರಾಜರನ್ನು ನರ

ಸ್ತುತಿಯನ್ನು ಮಾಡಬೇಕಾಗಿ ಬರುವುದೆಂಬ ಭಯದಿಂದಲೇ ಅರಸನು ಅವರಿಗೆ ನೀಡಿದ್ದ ಕೊಡುಗೆಗಳನ್ನು ನಿರಾಕರಿಸಿಬಿಟ್ಟರು. "ಓ ಧರ್ಮಾತ್ಮ ನೀನೇ ನನ್ನ ಧನ ಧಾನ್ಯ ದೈವ ಎಲ್ಲವೂ ಆಗಿರುವಾಗ ಸದಾ ದುರ್ಮಾರ್ಗದಲ್ಲಿ ನಿರತರಾಗಿರುವವರನ್ನೂ ತಮ್ಮ ಕೃತಿಗಳನ್ನು ಈ ನೀಚರಿಗೆ ಸಮರ್ಪಿಸುವವರನ್ನು 'ನೀವೇ ನನ್ನ ಒಡೆಯರು' ಎಂದು ನಾನು ಹೇಗೆ ಸ್ತುತಿಸಲಿ ? ಎಂದು ಅವರು ಹೇಳಿದರು.17

ನಾದಯೋಗಾಭ್ಯಾಸದ ಮೊದಲ ಹಂತದ ಸಾಧಕನು ಸಂಗೀತವನ್ನು ವೈಯುಕ್ತಿಕ ಇಚ್ಛೆಯಿಂದ ತನ್ನ ಸಾಧನೆಯಲ್ಲಿ ಅಳವಡಿಸಿಕೊಳ್ಳುತ್ತಾನೆ. ಭಗವಂತನನ್ನು ಆತ್ಮ ನಿಗ್ರಹಪೂರ್ವಕವಾದ, ಶಾಸ್ತ್ರಬದ್ಧವಾದ ಹಾಗೂ ಪಕ್ಕವಾದ್ಯಗಳಿಂದ ಕೂಡಿದ ಸಂಗೀತದಿಂದ ಮೆಚ್ಚಿಸಲು ಯತ್ನಿಸುತ್ತಾನೆ. ಎರಡನೆಯ ಹಂತದಲ್ಲಿ ಸಾಧಕನು ತನ್ನನ್ನೇ ಸಂಗೀತವಾದ್ಯವನ್ನಾಗಿಸಿಕೊಂಡು ಭಗವಂತನನ್ನು ಭಜಿಸುತ್ತಾನೆ. ಈ ಹಂತದಲ್ಲಿ ಭಕ್ತನೇ ಗಾಯಕ, ತಾಳ ಮೇಳ ವಾದ್ಯಗಳೆಲ್ಲವೂ ಸಂಗೀತವೆಂಬುದು ಆತನ ಅಭಿವ್ಯಕ್ತಿಯಾಗಿದ್ದು ಭಗವಂತನು ಸ್ತುತಿಸಲ್ಪಡುವ ವಸ್ತುವಾಗುತ್ತಾನೆ. ಶ್ರೀ ತಾಳ್ಲಪಾಕ ಅನ್ನಮಾಚಾರ್ಯರು ತಮ್ಮ ಮುಂಡವನ್ನೇ, ತಂಬೂರಿಯ ಕತ್ತನ್ನು ಮಾಡಿ ಶಿರವನ್ನು ತಂಬೂರಿಯ ತಲೆಯನ್ನಾಗಿಸಿ ಮೂವತ್ತೆರಡು ರಾಗಗಳಿಂದ ಭಗವಂತನ ಗುಣಗಾನವನ್ನು ಮಾಡುತ್ತೇನೆಂದು ಹೇಳುತ್ತಾರೆ.18

ನಾದದ ನಿರಾಕಾರ ಉಪಾಸನೆ ಇಲ್ಲವೇ ನಿರಾಕಾರವಾದ ನಾದಕ್ಕೆ ಒಂದು ಮೂರ್ತಿಯನ್ನು ನೀಡಿ ಅದನ್ನು ಆರಾಧಿಸುವುದು ಮೂರನೆಯ ಹಂತದ ಲಕ್ಷಣವಾಗುತ್ತದೆ. ಈ ಹಂತದಲ್ಲಿ ತ್ಯಾಗರಾಜರು ಭಗವಾನ್ ಕೃಷ್ಣನನ್ನು ಸ್ತುತಿಸುವ ರೀತಿ ಗಮನಾರ್ಹವಾದುದು, "ಎಲ್ಲ ವೇದಾಂತಗಳ ಮೂಲವಾದ ಪ್ರಣವದಿಂದ ಉದ್ಭವಿಸಿದ ಸಪ್ತಸ್ವರಗಳೆಂಬ ಪರ್ವತದಲ್ಲಿ ಬೆಳಗುತ್ತಿರುವ ಜ್ಯೋತಿಯೇ' ಎಂದು ಕೃಷ್ಣನನ್ನು ಸ್ತುತಿಸುತ್ತಾರೆ.19 ಇಲ್ಲಿ ತ್ಯಾಗರಾಜರು ಅಮೂರ್ತ ಲಕ್ಷಣವನ್ನು ಕೊಂಡಾಡಿದರೆ ಇನ್ನು ತಮ್ಮ ಇತರ ಕೆಲವು ಕೃತಿಗಳಲ್ಲಿ ನಿರಾಕಾರವಾದ ನಾದಕ್ಕೆ ಒಂದು ಆಕೃತಿಯನ್ನು ನೀಡಿ ಅದನ್ನು ಶರೀರದ ವಿವಿಧ ಸ್ಥಾನಗಳಲ್ಲಿ ನೆಲೆಸಿರುವ ಏಳು ಸ್ವರಗಳನ್ನು "ಏಳು ಸುಂದರ ದೇವತೆಗಳ" ರೂಪದಲ್ಲಿ ಅವರು ಕಲ್ಪಿಸಿಕೊಳ್ಳುತ್ತಾರೆ,20 ಆರಾಧಿಸುತ್ತಾರೆ. ಅವರ ಪ್ರಕಾರ ಶಂಕರನು ನಾದವೇ ತನುವಾಗಿ ಉಳ್ಳವನು. ಹೇಗೆ ನಾದವೆಂಬ ಅಮೃತದ ರಸವು ಹಾಗೂ ಈ ರಸದ ವಿವಿಧ ಅಂಶಗಳು ಶ್ರೀರಾಮನಾಗಿ ಮೂರ್ತೀಭವಿಸಿ ಬಂದವೆಂದು ಹೇಳುತ್ತಾರೆ. ಅವರ ಪ್ರಕಾರ ವಿವಿಧ ರಾಗಗಳು ಶ್ರೀರಾಮನ ಧನುಸ್ಸಿನ ರೂಪವನ್ನು ತಳೆದರೆ, ಸಪ್ತಸ್ವರಗಳು ಆ ಧನುಸ್ಸಿನಲ್ಲಿ ಅಲಂಕಾರಕ್ಕಾಗಿ ಧರಿಸಿರುವ ಏಳು ಗಂಟೆಗಳಾಗುತ್ತವೆ. ಸಂಗೀತ ಶೈಲಿಗಳಾದ ದುರ, ನಯ, ದೇಶ್ಯಗಳು ಧನುಸ್ಸಿನ ಮೂರು ಹಗ್ಗಗಳಾದರೆ, ಸಂಗೀತದ ಸ್ಥಿರವಾದ ಗತಿಯು ಶರವಾಗಿ ಪರಿಣಮಿಸಿ ಸಂಗತಿಯಲ್ಲಿ ಸುಸ್ವರವಾಗಿ ಆಗುವ ಬದಲಾವಣೆಗಳು ಶ್ರೀರಾಮನ ವಾಕ್ಕಾಗಿ ಪರಿಣಮಿಸುತ್ತವೆ.21

ಎರಡನೆಯ ಹಂತದಲ್ಲಿ ಭಕ್ತನು ತನ್ನನ್ನೇ ಸಂಗೀತ ವಾದ್ಯವಾಗಿಸಿಕೊಂಡು ಭಗವಂತನನ್ನು ಭಜಿಸುತ್ತಾನೆ. ಈ ಹಂತದಲ್ಲಿ ಭಕ್ತನೇ ಗಾಯಕ, ತಾಳ ಮೇಳ ವಾದ್ಯವೆಲ್ಲವೂ. ಸಂಗೀತವೆಂಬುದು ಅವನ ಅಭಿವ್ಯಕ್ತಿ. ಭಗವಂತನು ಸ್ತುತಿಸಲ್ಪಡುವ ವಸ್ತು. ಮೂರನೆಯ ಹಂತದಲ್ಲಿ ಈ ಒಡೆತನವು ಈಶ್ವರನಿಗೆ ಸಲ್ಲುತ್ತದೆ. ಭಕ್ತನು ಉಪಕರಣತ್ವವೆಂಬ ಲಕ್ಷಣವನ್ನು ಉಳಿಸಿಕೊಳ್ಳುತ್ತಾನಾದರೂ, ಅದರ ಮೇಲೆ ತನ್ನ ಒಡೆತನವನ್ನು ಕಳೆದುಕೊಂಡುಬಿಟ್ಟು ಭಗವಂತನೇ ಈ ಉಪಕರಣದ ಒಡೆಯನೆಂಬ ಧನ್ಯತಾಭಾವವನ್ನು ಪಡೆಯುತ್ತಾನೆ. ಇಲ್ಲಿ ಸಾಧಕನ ವೈಯುಕ್ತಿಕ ಯತ್ನವು ಸರಿಸಿ ಹೋಗಿ ಸಂಗೀತವು ಅವನ ಹೃದಯದಲ್ಲಿ ಅಡಗಿರುವ ಆತ್ಮದ ಸುಪ್ತ ಆಳದಿಂದ ಅವ್ಯಾಹತವಾಗಿ ಹೊರಹೊಮ್ಮುವ ಪ್ರಕ್ರಿಯೆಯಾಗುತ್ತದೆ. ಸಂಗೀತವು ಇಲ್ಲಿ ಸಾಧಕನ ಭಕ್ತಿಯ ಅಭಿವ್ಯಕ್ತಿಯಾಗಿರದೇ, ಅವನ ಹೃದಯದಲ್ಲಿ ಅಂತಸ್ಥವಾಗಿರುವ ಈಶ್ವರನ ಅವ್ಯಾಹತ ಅಭಿವ್ಯಕ್ತಿಯಾಗುತ್ತದೆ. ಶಿಶುನಾಳ ಷರೀಫರು ಒಂದು ಪದದಲ್ಲಿ ಹೇಳಿರುವಂತೆ ರಾಗವು 'ನಿಜ ರಾಗವಾಗಿ ಪರಿಣಮಿಸುತ್ತದೆ.[22] ಹದಿನೈದನೇ ಶತಮಾನದ ತಾಳ್ಳಪಾಕ ಅನ್ನಮಾಚಾರ್ಯರು ತಮ್ಮ ಪದ ಕವಿತಾ ಸಾಮರ್ಥ್ಯವನ್ನು ಕುರಿತು ಹೇಳುವುದನ್ನು ನಾವು ಇಲ್ಲಿ ಸ್ಮರಿಸಬೇಕು. ಭಗವಂತನೇ ತನ್ನ ಮಹಿಮೆಯನ್ನು ಕೊಂಡಾಡುವ ಭಾಗ್ಯವನ್ನು ನನ್ನ ನಾಲಿಗೆಗೆ ನೀನೇ ಕರುಣಿಸಿರುವೆ. ನಾನು ಈ ಕೆಲಸವನ್ನು ಮಾಡಲು ಎಷ್ಟು ಮಾತ್ರಕ್ಕೂ ಶಕ್ತನಲ್ಲ, ಸ್ವತಂತ್ರನಲ್ಲ ಎಂದು ಅವರು ಹೇಳುತ್ತಾರೆ.[23] ಇದನ್ನೇ ಮೊದಲು ನಮ್ಮಾಳ್ವಾರರು 'ತನ್ನೈಕ್ಕವಿ ತಾನ್ ಸೊಲ್ಲಿ' ಎಂದು ಹೇಳಿದರು. ಅವರು 'ಅಕಳಂಕವಾದ ಪದ ಸಮೂಹಗಳಿಂದ ನನ್ನನ್ನು ಉಪಕರಣವಾಗಿ ಬಳಸಿಕೊಂಡು ತನ್ನನ್ನು ಕುರಿತು ತಾನೇ ಕೃತಿಗಳನ್ನು ರಚಿಸಿದ ಭಗವಂತನನ್ನು ನಾನು ಹೇಗೆ ಮರೆಯಲಿ ? ಎಂದು ಹೃದಯತುಂಬಿ ನುಡಿದರು[24] ಬಸವಣ್ಣನವರು ತಮ್ಮೊಂದು ವಚನದಲ್ಲಿ ಉಪಕರಣತ್ವದ ಧನ್ಯತಾಸ್ಥಿತಿಯನ್ನು ಪಡೆಯಲೆಂದು ಭಗವಂತನನ್ನು ಕುರಿತು "ಓ ಕೂಡಲ ಸಂಗಮ ದೇವನೇ ನನ್ನ ಶರೀರವನ್ನು ದಂಡಿಗೆಯನ್ನಾಗಿಸಿ, ಶಿರವನ್ನು ಸೋರೆಯನ್ನಾಗಿಸಿ ನರಗಳನ್ನು ತಂತಿಯನ್ನಾಗಿಸಿ 'ನಾಭಿ' ಎಂಬ ಸೂಕ್ತ ಸ್ಥಾನದಲ್ಲಿ ಬೆರಳನ್ನು ಒತ್ತುವ ಮೂಲಕ ಮೂವತ್ತೆರಡು ರಾಗಗಳು ಹೊರಹೊಮ್ಮುವಂತೆ ಮಾಡು" ಎಂದು ಹಾತೊರೆದರು.[25] ಇಲ್ಲಿ ನಾದವೆಂಬುದು ಈ ಹಂತದಲ್ಲಿ ಜೀವನೆಂಬ ಕರಣದ ಮೂಲಕ ಹೊರಹೊಮ್ಮುವುದಾದರೂ, ಆ ಕರಣ ಹಾಗೂ ಅದರಿಂದ ಹೊರಹೊಮ್ಮುವ ನಾದದ ಒಡೆತನವು ಈಶ್ವರನಿಗೆ ಸಲ್ಲುತ್ತದೆ. ನಾದವೆಂಬುದು ಈ ಹಂತದಲ್ಲಿ ಇನ್ನೂ ಭಗವಂತನ ವಿಶೇಷಣ ಇಲ್ಲವೇ ಧರ್ಮಸ್ಥಾನೀಯವಾಗಿದ್ದು, ಭಗವಂತ ಹಾಗೂ ನಾದಗಳ ನಡುವೆ ಭಿನ್ನತೆಯಿರುತ್ತದೆ. ಇವೆರಡೂ ಏಕವೆಂಬ ಭಾವವು ಸಾಧಕನಿಗಿನ್ನೂ ಉಂಟಾಗಿರುವುದಿಲ್ಲ.

ನಾಲ್ಕನೆಯ ಹಂತದಲ್ಲಿ ಸಾಧಕನು ಈ ಉಪಕರಣದಲ್ಲೇ ಭಗವಂತನ ಅಸ್ತಿತ್ವವನ್ನು ಕಂಡುಕೊಳ್ಳುತ್ತಾನೆ. ಈ ಹಂತದಲ್ಲಿ ಭಗವಂತ ಹಾಗೂ ನಾದಗಳ ನಡುವೆ

ವಿಶೇಷ್ಯ ವಿಶೇಷಣ ಭಾವವು ಹೊರಟುಹೋಗಿ ಅವೆರಡರ ತಾದಾತ್ಮ್ಯಭಾವವನ್ನು ಸಾಧಕನು ಪಡೆಯುತ್ತಾನೆ. ಈಶ್ವರನು ಕೇವಲ ನಾದಲೋಲನೆನಿಸಿಕೊಳ್ಳದೇ ನಾದ ಸ್ವರೂಪಿಯೇ ಆಗಿಬಿಡುತ್ತಾನೆ. ಈ ಸಂದರ್ಭದಲ್ಲಿ ನಾವು ಕಾರ್ಲೈಲನ ಹೇಳಿಕೆಯನ್ನು ಗಮನಿಸಬೇಕು. ಕಾರ್ಲೈಲನು ಹೀಗೆ ಹೇಳುತ್ತಾನೆ. "ಪ್ರಪಂಚದಲ್ಲಿ ಇರಬಹುದಾದ ಸೂಕ್ಷ್ಮತಮ ವಸ್ತುಗಳೆಲ್ಲವೂ ಸ್ವರಮಾಧುರ್ಯದಿಂದ ಕೂಡಿವೆ. ಇವೆಲ್ಲವೂ ಗಾನದ ಮೂಲಕವೇ ತಮ್ಮ ಇರುವಿಕೆಯನ್ನು ತೋರ್ಪಡಿಸಿಕೊಳ್ಳುವುದು. ಮನುಷ್ಯನೇ ಆಳ ವಾಗಿ ನೀನು ನೋಡಬಲ್ಲೆಯಾದರೆ ಪ್ರಕೃತಿಯ ಒಳಗೆಲ್ಲಾ ಗಾನವೇ ವ್ಯಾಪಿಸಿರುವುದು, ನೀನು ಗಾನಾತ್ಮಕವಾಗಿಯೇ ಎಲ್ಲವನ್ನೂ ಕಾಣುವುದು.26

ಇದುವರೆಗೂ ಹೊರಮುಖವಾಗಿ ಒಳಗಿನಿಂದ ಹರಿಯುತ್ತಿದ್ದ ನಾದವು ಒಳಮುಖ ವಾಗುತ್ತದೆ. ಅದು ಸ್ಥೂಲ ಇಂದ್ರಿಯಗಳಿಗೆ ಗೋಚರವಲ್ಲದ ಕೇವಲ ಒಳಗೆ ಮಾತ್ರ ಸಾಧಕನಿಗೆ ಅತೀಂದ್ರಿಯವಾಗಿ ಗೋಚರವಾಗುವಂತಹ ತತ್ವವಾಗಿ ಪರಿಣಮಿಸುತ್ತದೆ. ಸಾಧಕನು ಕಾಣುವಂತಹುದನ್ನು ಕೇಳಿ, ಕೇಳುವಂತಹುದನ್ನು ಕಾಣಬಲ್ಲವನಾಗು ತ್ತಾನೆ. ಎಂದರೆ ಇಂದ್ರಿಯ ಕ್ರಿಯೆಗಳೆಲ್ಲವೂ ಈ ಸ್ಥಿತಿಯಲ್ಲಿ ಸ್ತಬ್ಧವಾಗಿದ್ದರೂ, ಎಲ್ಲ ವಸ್ತುಗಳನ್ನೂ ನಾದಾತ್ಮಕವಾಗಿ ಇಂದ್ರಿಯ ಮಾಧ್ಯಮವಿಲ್ಲದೇ ತನ್ನ ಆತ್ಮದ ಬೆಳಕಿ ನಿಂದ ಅರಿಯಬಲ್ಲವನಾಗುತ್ತಾನೆ. ಈ ಉತ್ಕೃಷ್ಟ ಸ್ಥಿತಿಯ ಹಿನ್ನೆಲೆಯಲ್ಲೇ ನಾವು ಉಪನಿಷತ್ತುಗಳು ವಿಧಿಸುವ ಅನೇಕ ಉಪಾಸನಾವಿಶೇಷಣಗಳಲ್ಲಿ ಒಂದಾದ ಸಾಮೋ ಪಾಸನೆಯನ್ನು ನೋಡಬೇಕು. ಛಾಂದೋಗ್ಯ ಉಪನಿಷತ್ತಿನ ಪ್ರಕಾರ ಸಾಮವೆಂಬುದು ಪ್ರಣವ ಇಲ್ಲವೇ ಉದ್ಗೀತದಿಂದ ಉಂಟಾಗುವ ಏಳು ಸಾರಭೂತ ತತ್ವಗಳಲ್ಲಿ ಒಂದಾದುದ ರಿಂದ ಅದರ ಉಪಾಸನೆಯು ಸಾಧಕನನ್ನು ಮುಕ್ತಾವಸ್ಥೆಗೆ ಕೊಂಡೊಯ್ಯಬಲ್ಲದು.27 ಇದರಿಂದ ನಮಗೆ ತಿಳಿಯಬಹುದಾದ ಮತ್ತೊಂದು ಅಂಶವೇನೆಂದರೆ ಯೋಗಾಭ್ಯಾಸ ಗಳು ಉಪನಿಷತ್ ಕಾಲದಲ್ಲೇ ಪ್ರಚಲಿತವಾಗಿತ್ತೆಂಬುದು ಯೋಗದರ್ಶನವೂ ಸಹ ಆತ್ಮ ಸಾಕ್ಷಾತ್ಕಾರಕ್ಕೆಂದು ಸಾಧಕನು ಮಾಡಬೇಕಾದ ನಿಗದಿತ ಶಬ್ದಗಳ ಮೇಲಿನ ಕೇಂದ್ರೀ ಕರಣವನ್ನು ಕುರಿತು ವಿವರಣೆ ನೀಡುತ್ತದೆ.

ತ್ಯಾಗರಾಜರೇ ಮುಂತಾದ ಮಹಾತ್ಮರುಗಳು ನಾದದ ಮೂಲವನ್ನು ತಮ್ಮ ಒಳಗೇ ಕಾಣುತ್ತಾರೆ. ಅವರ ಪ್ರಕಾರ ನಾದವೆನ್ನುವುದು ಮೂಲಾಧಾರದಿಂದ ಹೊರ ಹೊಮ್ಮುತ್ತದೆ. ಮೂಲಾಧಾರದಿಂದ ಪ್ರಾಣಾಗ್ನಿ ಸಂಯೋಗದ ಮೂಲಕ ಪ್ರಣವವು ಹೊರಹೊಮ್ಮಿ ತನ್ಮೂಲಕ ಸಪ್ತಸ್ವರಗಳು ಸಾಧಕನಿಗೆ ತನ್ನ ಶರೀರದ ಒಳಗೆ ವಿವಿಧ ಸ್ಥಾನಗಳಲ್ಲಿ ನೆಲೆಸಿರುವುದು ಅನುಭವವಾಗುತ್ತದೆ. ತ್ಯಾಗರಾಜರು ಮೂಲಾಧಾರದಿಂದ ಹೊರಹೊಮ್ಮುವ ನಾದದ ಸ್ವರೂಪವನ್ನು ಅರಿತುಕೊಳ್ಳುವುದೇ ಮೋಕ್ಷ ಎಂದು ಹೇಳು ತ್ತಾರೆ.28 ಶಾರ್ಙ್ಗದೇವನು ತನ್ನ ಸಂಗೀತ ರತ್ನಾಕರದಲ್ಲಿ ನಾದ ಪದದ ವ್ಯುತ್ಪತ್ತಿ ಯನ್ನು ಸೂಚಿಸುತ್ತ 'ನಕಾರಂ ಪ್ರಾಣನಾಮಾನಂ ದಕಾರಮನಿಲಂ ವಿದುಃ ಜಾತಃ ಪ್ರಾಣಾಗ್ನಿ ಸಂಯೋಗಾತ್ ತೇನ ನಾದೋಽಭಿಧೀಯತೇ' ಎಂದು ಹೇಳುತ್ತಾನೆ.

ತ್ಯಾಗರಾಜರು ಇದನ್ನೇ ಪ್ರಾಣವು ಅಗ್ನಿಯ ಸಂಯೋಗವನ್ನು ಹೊಂದಿ ಪ್ರಣವ ಹಾಗು ಸಪ್ತಸ್ವರಗಳನ್ನು ಹೊರಹೊಮ್ಮಿಸುತ್ತದೆಂದು ಹೇಳುತ್ತಾರೆ.29 ಪುನಃ ಅವರು 'ಮಹತ್ತರವಾದ ಸಪ್ತಸ್ವರಗಳು ಉದ್ಭವಿಸುವ ಶರೀರದ ವಿವಿಧ ಸ್ಥಾನಗಳ ಜ್ಞಾನವೇ ಮೋಕ್ಷ' ಎಂದು ಹೇಳಿ ತಮ್ಮ ಇನ್ನೊಂದು ಕೃತಿಯಲ್ಲಿ ಶರೀರದ ಒಳಗೆ ಇರುವ ಸಪ್ತ ಸ್ವರದ ವಿವಿಧ ನೆಲೆಗಳನ್ನು ಕುರಿತು ಉಲ್ಲೇಖಿಸುತ್ತಾರೆ.30 ಅವರ ಪ್ರಕಾರ ನಾಭಿ, ಹೃದಯ, ಕಂಠ, ನಾಲಗೆ ಮತ್ತು ಮೂಗು ಇವೇ ಮುಂತಾದ ಶರೀರ ಸ್ಥಾನಗಳು ಸಪ್ತ ಸ್ವರದ ನೆಲೆಗಳು.

ಆಧ್ಯಾತ್ಮ ಸಾಧನೆಯ ಪ್ರಗತಿಯ ಹಂತದಲ್ಲಿ ಸಾಧಕನು ಅತೀಂದ್ರಿಯ ಶಬ್ಧಗಳನ್ನೂ ಕೇಳುತ್ತಾನೆ. ಇದನ್ನು ಷರೀಫ್ ಸಾಹೇಬರು ತಮ್ಮ ಪದದಲ್ಲಿ ಉಲ್ಲೇಖಿಸುತ್ತ ಈ ಶರೀರವೆಂಬುದು ಒಂದು ಗುಡಿಯಿದ್ದಂತೆ. ಈ ಗುಡಿಯಲ್ಲಿ ತೇಜಃಪುಂಜವಾದ ಚೈತನ್ಯದ ಗರ್ಭದಲ್ಲಿ ಪರಮಾತ್ಮನು ಅಡಗಿಕೊಂಡಿರುವನು. ಶರೀರದ ಆರುಮೂರುಗಳನ್ನು ಕಟ್ಟಿ ಎಂದರೆ ನವರಂಧ್ರಗಳನ್ನು ಭದ್ರವಾಗಿ ಮುಚ್ಚಿ ತನ್ನೊಳಗೆ ಕಂಡಲ್ಲಿ ಸಾಧಕನು ದೇಹವೆಂಬ ಗುಡಿಯಲ್ಲಿನ ಜೀಕಿನ ಗುಡಿಯಲ್ಲಿ ಅಡಗಿಕೊಂಡಿರುವ ಆತ್ಮನನ್ನು ಭೇರಿ, ತಾಳ ಸಂಬಿನಾದಗಳೊಡನೆ ಕೇಳುತ್ತಾನೆ. ಇದು ಬಾಹ್ಯದೇವಾಲಯದೊಳಗೆ ಆರತಿಯ ಸಂದರ್ಭದಲ್ಲಿ ದೇವರ ದರ್ಶನದ ಜೊತೆಗೆ ಆಗುವ ಭೇರಿವಾದ್ಯಗಳ ಮೊರೆತವನ್ನು ಹೋಲುತ್ತದೆ.31 ಗಂಗಾಧರನೆಂಬುವನು ಸಾಧಕನು ಸುಷುಮ್ನಾದ ಮೂಲಕ ನಾಲ್ಕು ಮಾರ್ಗಗಳು ಸೇರುವ, ಮಿದುಳಿನಲ್ಲಿರುವ ಒಂದು ಸ್ಥಳವನ್ನು ತಲುಪಬೇಕೆಂದು, ಶೃಂಗಾತಕ ಅಥವಾ ಬ್ರಹ್ಮರಂಧ್ರವೆನಿಸಿಕೊಳ್ಳುವ ಆ ಸ್ಥಳವನ್ನು ತಲುಪಿದಾಗ ಸಾಧಕನಿಗೆ ನಿರಂತರವಾಗಿ ಭೇರಿ ಮೊಳಗಿದ ಶಬ್ಧವು ಕೇಳುವುದೆಂದು ಹೇಳುತ್ತಾನೆ.32 ಚಿದಾನಂದನೆಂಬ ಮತ್ತೊಬ್ಬ ಅನುಭಾವಿಯು ತನ್ನ ಅನುಭವವನ್ನು ಕುರಿತು 'ನಾನಾ ವರ್ಣದ ಛಾಯೆಯ ನೋಡುವ . . . . . ಭಾನುಕೋಟಿ ಪ್ರಕಾಶ ಬೆಳಕಲಿ ನಾದವ ಕೇಳಿದೆನು' ಎಂದು ಹೇಳುತ್ತಾನೆ.33 ಧನ್ಯ ಕಬೀರನಿಗೆ ತನ್ನ ಶರೀರದ ಮೂಳೆಗಳೇ ತಂಬೂರಿಯ ಚೌಕಟ್ಟಾದರೆ ನರಗಳು ತಂತಿಯಾಗಿ ಶರೀರವೆಂಬ ಆ ತಂಬೂರಿಯ ರೋಮರೋಮದಲ್ಲೂ ಅನಾಹತವು ಹೊರಹೊಮ್ಮುತ್ತದೆ. ('ರೋಮ್') ರೋಮ್ ಸುರ್ ಉಠತ್ ಹೈ). ಗಾಯನದ ಹಿನ್ನೆಯಲ್ಲಿರುವ ಗಾಯಕನನ್ನೂ ಕಂಡೊಡನೆಯೇ ಸಾಧಕನಿಗೆ ದೇವಸ್ಥಾನದಿಂದ ದೇವಸ್ಥಾನಕ್ಕೆ ಅಲೆಯುವ ಅವಶ್ಯಕತೆಯಾದರೂ ಎಲ್ಲಿ ಎಂದು ಕಬೀರನು ಕೇಳುತ್ತಾನೆ.34

ಹೀಗೆ ಸಂಗೀತವೆಂಬುದು ಮೊದಲು ಸಾಧಕನ ಹೊರಗಿನ ಸಾಧನವಾಗಿ ನಂತರ ತಾನೇ ಸಾಧ್ಯವಾಗಿ ಪರಿಣಮಿಸುತ್ತದೆ. ಈ ಲೇಖನವನ್ನು ಶಂಕರಾಚಾರ್ಯರ ಯೋಗತಾರಾವಳಿಯ ಶ್ಲೋಕವೊಂದರ ಉಲ್ಲೇಖನೊಂದಿಗೆ ಮುಕ್ತಾಯಗೊಳಿಸೋಣ.

ನಾದಾನು ಸಂಧಾನ ನಮೋಸ್ತು ತುಭ್ಯಂ
ತ್ವಂ ಸಾಧನಂ ತತ್ವ ಪದಸ್ಯ ಜಾನೇ

ಭವ ಪ್ರಸಾದಾತ್ ಪವನೇನಸಾಕಂ
ವಿಲೀಯತೇ ವಿಷ್ಣು ಪದೇ ಮನೋ ಮೇ ||

ನಾದವೇ, ನಿನಗೆ ನಮಸ್ಕಾರ. ನೀನು ಪರತತ್ವವನ್ನು ತಿಳಿಯಲು ಸಾಧನವೆಂದು ನಾನು ತಿಳಿಯುತ್ತೇನೆ. ನಿನ್ನ ಕೃಪಾಪ್ರಸಾದದಿಂದ ನನ್ನ ಮನಸ್ಸು ಪ್ರಾಣವಾಯು ವಿನೊಂದಿಗೆ ವಿಷ್ಣುವಿನ ಶ್ರೀಪಾದಗಳಲ್ಲಿ ಲೀನವಾಗುತ್ತದೆ.35

ಅಡಿ ಟಿಪ್ಪಣಿಗಳು

1 ಬಹು ಜನ್ಮಮುಲಕು ಪೈನಿ ಜ್ಞಾನಿಯೈ ಬರಗುಟ ಮೋಕ್ಷ ಮುರಾ
ಸಹಜ ಭಕ್ತಿತೋ ರಾಗಜ್ಞಾನ ಸಹಿತುಡು ಮುಕ್ತುಡು ರಾ
— ಶಂಕರಾಭರಣದ ಸ್ವರರಾಗಸುಧಾರಸಯುತ

2 ನೀ ಸದ್ಭಕ್ತಿ ಸಂಗೀತ ಜ್ಞಾನವಿಹೀನುಲುಕು ಮೋಕ್ಷಮು ಗಲದಾ
— ಸಾರಮತಿಯ ಮೋಕ್ಷಮು ಗಲದಾ

3 ಸಂಗೀತ ಸಾಹಿತ್ಯ ಕಲಾವಿಹೀನಃ ಸಾಕ್ಷಾತ್ ಪಶುಃ ಪುಚ್ಛವಿಷಾಣಹೀನಃ

4 ಪಂಚರತ್ನ ಕೃತಿಗಳಲ್ಲಿ ಒಂದಾದ ಗೌಳರಾಗದ ದುಡುಕುಗಲ

5 ಶಿಶುರ್ವೇತ್ತಿ ಪಶುರ್ವೇತ್ತಿ ವೇತ್ತಿ ಗಾನರಸಂ ಫಣಿಃ

6 ಸ್ವತಃ ರಂಜಯತೀತಿ ಸ್ವರಃ

7 ದಶಮಸ್ಕಂಧ

8 ಯದ್ಯದ್ವಿಭೂತಿಮತ್ ಸತ್ವಂ ಶ್ರೀಮದೂರ್ಜಿತಮೇವ ವಾ |
ತತ್ತದೇವಾವಗಚ್ಛ ತ್ವಂ ಮಮತೇಜೋಂಶ ಸಂಭವಮ್ || ಗೀತೆ 10-41

8ಅ ಕಾವ್ಯಾಲಾಪಶ್ಚಯೇ ಕೇಚಿತ್‌ಗೀತಕಾನ್ಯಖಿಲಾನಿ ಚ | ಶಬ್ದಮೂರ್ತಿಧರ ಸ್ಯೈತೇ ವಿಷ್ಣೋರಂಶಾ ಮಹಾತ್ಮನಃ ||

8ಆ ನಾದೋಪಾಸನೆಯ ಒಂದು ನಿರ್ದಿಷ್ಟ ಹಂತವು ಒಂದು ಇಡೀ ಕೃತಿಯಲ್ಲೇ ಸೂಚಿಸಲ್ಪಡಬೇಕಾದ್ದಿಲ್ಲ. ಒಂದೇ ಕೃತಿಯು ಸಾಧಕನ ಆಧ್ಯಾತ್ಮಿಕ ಅನು ಭವದ ವಿವಿಧ ಸ್ತರಗಳನ್ನು ಒಳಗೊಂಡಿರಬಹುದು. ಇದನ್ನು ಗಮನದಲ್ಲಿ ಇರಿಸಿಕೊಂಡು ಇಲ್ಲಿ ನಾವು ಸಂತರ ರಚನೆಗಳನ್ನು — ಅವುಗಳಲ್ಲಿ ಅಡಗಿ ರುವ ಆಧ್ಯಾತ್ಮಿಕ ಅನುಭವದ ವಿವಿಧ ಹಂತಗಳನ್ನು ಗುರುತಿಸುವ ಉದ್ದೇಶ ದಿಂದ ವಿಶ್ಲೇಷಣೆಗೆ ಗುರಿಪಡಿಸಿದ್ದೇವೆ.

9 ಮುದ್ದುಗ ದಂಬುರ ಬಟ್ಟಿ ಸುಸ್ವರಮುತೋ ಬದ್ದುತಪ್ಪಕ
ಭಜಿಯಿಂಚು ಭಕ್ತಪಾಲನಮು ಸೇಯು ತಪ್ಪಶಾಲಿವಿ
— ತೋಡಿರಾಗ ದಕದ್ದನುವಾರಿಕಿ

10 Spiritual Heritage of Tyagaraja ಪು. 46-47

11 ಮದ್ದಳ ತಾಳಗತುಲು ತೆಲಿಯಕನೇ ಮರ್ದಿಂಚುಟ ಸುಖಮಾ ?

— ಸ್ವರರಾಗಸುಧಾರಸಯುತ

12 ಡಾ. ವಿ. ರಾಘವನ್‌ರವರು The Spiritual Heritage of Tyagaraja ದಲ್ಲಿನ ತಮ್ಮ ಮಹಾಪ್ರಬಂಧದಲ್ಲಿ ಉಲ್ಲೇಖಿಸಿರುವ ಹೇಳಿಕೆ.

13 ನಿಗಮಶಿರೋರ್ಥಮು ಗಲ್ಗಿನ ನಿಜವಾಕ್ಕುಲತೋ, ಸ್ವರಶುದ್ಧಮುತೋ
ಯತಿ–ವಿಶ್ರಮ ಸದ್ಭಕ್ತಿ ವಿರತಿ ದ್ರಾಕ್ಷಾರಸ ನವರಸಯುತ ಕೃತಿಚೇ

— ಶ್ರೀ ರಂಜನಿಯ ಸೊಗಸುಗಾ ಮೃದಂಗ ತಾಳಮು

14 ನಿನ್ನುರ ನಿರಾಕರಿಂಚಿ ಶುದ್ಧಮೈನ ಮನಸುಚೇ ಭಜಿಯಿಂಚು
ಭಕ್ತಪಾಲನಮು ಸೇಯು ತದ್ದಯಶಾಲಿವಿ

— ಕದ್ದನುವಾರಿಕಿ

15 ಸಂಗೀತಜ್ಞಾನಮು ಭಕ್ತಿವಿನಾ ಸನ್ಮಾರ್ಗಮು ಗಲದೇ — ಧನ್ಯಾಸಿ ರಾಗದ ಕೃತಿ

16 ಅನ್ನಮಾಚಾರ್ಯ ಚರಿತ್ರ ಪೀಠಿಕ ಪುಟ. 49

17 ಧರ್ಮಾತ್ಮಕ ಧನಧಾನ್ಯ ದೈವಮು ನೀವೈಯುಂಡಗ
ಪಲುಕುಬೋಟಿನಿ ಸಭಲೋನ ಪತಿತ ಮಾನವುಲಕೊಸಗು
ಖಸುಲನೆಚ್ಚಟ ಬೊಗಡನಿ ಶ್ರೀಕರ ।
ದುರ್ಮಾರ್ಗಚರಾಧಮುಲನು ದೊರ ನೀವನ ಜಾಲರಾ

— ಶ್ರೀರಂಜನಿಯ ದುರ್ಮಾರ್ಗಚರ

18 ಪಾಡೇಮು ನೇಮು ಪರಮಾತ್ಮ ನಿನ್ನುನು
ವೇಡುಕ ಮುಪ್ಪದಿರೆಂಡುವೇಳಲ ರಾಗಾಲನು
ತನುವೇ ವೊಳವು ತಲಯೇ ದಂಡಕಾಯಿ . . . ಚೌಳಿರಾಗ

9 ನೇ ಸಂಪುಟದ 178 ನೇ ಪದ

19 ವೇದಶಿರೋಮಾತೃಜ ಸಪ್ತಸ್ವರ ನಾದಾಚಲದೀಪ

ಹಿಂದೋಳರಾಗದ ಸಾಮಜ ವರಗಮನ

20 ಚಿತ್ತರಂಜನೀಯ ನಾದತನುಮ್ ; ಸಪ್ತಸ್ವರ ಸುಂದರುಲ ಭಜಿಂಪವೇ ಮನಸಾ ಜಗನ್ಮೋಹಿನೀರಾಗದ ಶೋಭಿಲ್ಲು

21 ಆರಭಿರಾಗದ ನಾದಸುಧಾರಸಂಬಿಲನು

22 "ಇದೇ ಬ್ರಹ್ಮಜ್ಞಾನ" Pathway to God in Kannada Literature, ಪುಟ 171

23 ನಾನಾಲಿಕಪ್ಪೆನುಂಡಿ ನಾನಾ ಸಂಕೀರ್ತನಲು

ಪೂನಿ ನಾಜೇ ನಿನ್ನು ಬೊಗಡಿಂಚಿತಿವಿ
ವೇನಾವಮಾಲವೆನ್ನುಡಾ ವಿನುಕಿಂಚ ನೆಂಕವಾಡ
ಕಾನಿಮ್ಮನಿ ನಾಕೇ ಪುಣ್ಯಮುಗಟ್ಟಿ ಗಟ್ಟಿತಿ ವಿಂತೇ ಯಯ್ಯಾ
ಯಿಾವಮಾಟ ಗರ್ವಮು ಗಾದು ನೀ ಮಹಿಮೋ ಕೊನಿಯಾಡಿತಿ ಗಾನಿ
ಜೀಮುಂಚಿ ನಾ ಸ್ವತಂತ್ರಮು ಚೆಪ್ಪಿನವಾಡಗಾನು

— ಗುಂಡಕ್ರಿಯದ ವಾಚಿಲಕೋನಿ ಪಾಡಾಲಕ್ಕ
7 ನೇ ಸಂಪುಟ 104 ನೇ ಪದ

24 7 ನೇ ಮತ್ತು 9 ನೇ ತಿರುವಾಯ್‌ಮೊಳಿ 4 ನೇ ಪಾಶುರ

25 ಉನ್ನಕಾಯವಾ ದಂಡಿಗೆಯು ಮಾದಯ್ಯ

26 "All inmost things are melodious, naturally offer themselves in song" . . . . "See deep enough, and you see musically, the heart of nature being everywhere, music, if you can only reach it" . . . On Heroes and Heroworship — Lecture III "The Hero Aspect".

27 ಇತರ ಸಾರಭೂತ ತತ್ವಗಳು ಋಕ್, ವಾಚ, ಪುರುಷ, ಓಷಧೀ ಅಪ್, ಮತ್ತು ಪೃಥ್ವೀ; ಛಾಂದೋಗ್ಯ ಉಪನಿಷತ್ 1-1-1, 23 ; 2-1-1

28 ಮಲಾಧಾರಜ ನಾದಮೆರುಗುಟ ಮುದಮುಗು ಮೋಕ್ಷಮುರಾ-ಸ್ವರರಾಗ ಸುಧಾರಸ

29 ಪ್ರಾಣಾನಲ ಸಂಯೋಗಮುವಲ್ಲ ಪ್ರಣವನಾದಮು ಸಪ್ತಸ್ವರಮುಲೈ ಬರಗ ಮೋಕ್ಷಮುಗಲದಾ

30 ಕೋಲಾಹಲ ಸಪ್ತಸ್ವರ ಗೃಹಮುಲ ಗುರುತೇ ಮೋಕ್ಷಮು ರಾ — ಸ್ವರ ರಾಗಸುಧಾರಸ ; ನಾಭೀಹೃತಂಠರಸನ ನಾಸಾದುಲಯಂದು ಶೋಭಿಲ್ಲು ಸಪ್ತಸ್ವರ — ಶೋಭಿಲ್ಲು

31 ಗುಡಿಯ ನೋಡಿರಣ್ಣಾ

32 ಲಿಂಗಪೂಜೆ ಆಗುತದಣ್ಣಾ — Pathway to God in Kannada Literature ಪುಟ. 236-238

33 Ibid, ಪುಟ. 244

34 Pathway to God in Hindi Literature

35 Pathway to God in Kannada Literature ಎಂಬ ಪುಸ್ತಕದಲ್ಲಿ ಉಲ್ಲೇಖಿಸಲ್ಪಟ್ಟಿರುವ ಶ್ಲೋಕ.

ಗ್ರಂಥಋಣ

1 Pathway to God in Kannada Literature by R.D. Ranade
2 Pathway to God in Hindi Literature by R.D. Ranade
3 Aesthetics in Ramanu ja's Philosophy by Prof S.S. Raghavachar
4 Spiritual Heritage of Tyagaraja Tr. by C. Ramanujachari ; Introductory Thesis by Dr. V. Raghavan
5 Aestheties by Dr. G. Srinivasan
6 Metaphysics of value by Dr. K. R. Srinivasa Iyengar

ಶಿ. ರಾಜೇಂದ್ರಪ್ಪ

ಸಂತ ಫ್ರಾನ್ಸಿಸ್ ಕ್ಸೇವಿಯರ್

ಭಾರತದ ಭೂಪಟದಲ್ಲಿ ಗೋವಾಕ್ಕೆ ವಿಶಿಷ್ಟ ಸ್ಥಾನವಿದೆ. ಗೋವಾದ ಇತಿಹಾಸ ದಕ್ಷಿಣ ಭಾರತದ ಚರಿತ್ರೆಯೊಂದಿಗೆ ಹಾಸುಹೊಕ್ಕಾಗಿ ಹರಿದು ಬಂದಿದ್ದರೂ 16 ನೇ ಶತಮಾನದಿಂದ ಪೋರ್ಚುಗೀಸರ ಅಧೀನಕ್ಕೆ ಒಳಪಡುವುದರ ಮೂಲಕ ಐರೋಪ್ಯ ಸಂಸ್ಕೃತಿಯ ಪ್ರಭಾವಕ್ಕೆ ಸಿಲುಕಿ ತನ್ನದೇ ಆದ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ, ಹಾಗೂ ವಿಶೇಷವಾಗಿ ಧಾರ್ಮಿಕ ವೈಶಿಷ್ಟ್ಯತೆಯನ್ನು ಪಡೆದಿದೆ. ಬ್ರಿಟಿಷ್ ಸಾಮ್ರಾಜ್ಯ ಷಾಯಿ ಹಿಡಿತದಿಂದ ಭಾರತವು ಮುಕ್ತಗೊಂಡ ಹದಿನಾಲ್ಕು ವರ್ಷಗಳ ಸುದೀರ್ಘ ಹೋರಾಟದ ನಂತರ ಗೋವಾ, ಡಾಮನ್ ಮತ್ತು ಡಯು ಭಾರತದೊಂದಿಗೆ 1961ರ ಡಿಸೆಂಬರ್‌ನಲ್ಲಿ ಸೇರಿತು. ಇಂದು ಸುವರ್ಣಗೋವಾ ಎಂದು ಸುಪರಿಚಿತವಾಗಿರುವ ಈ ಪ್ರಾಂತ್ಯವು ವಿಶೇಷವಾಗಿ ಕ್ರೈಸ್ತ ಇಗರ್ಜಿಗಳಿಗೆ ಪ್ರಸಿದ್ಧವಾಗಿದ್ದು ಅಸಂಖ್ಯಾತ ಇಗರ್ಜಿ, ಪ್ರಾರ್ಥನಾ ಮಂದಿರಗಳ ಆಗರವಾಗಿದ್ದು ಪೌರ್ವಾತ್ಯ ರೋಮ್ ಎಂದೇ ಪ್ರಸಿದ್ಧವಾಗಿದೆ. ವೆಲ್ಹಾಗೋವಾ ಅಥವಾ ಪ್ರಾಚೀನ ಗೋವಾದಲ್ಲಿರುವ ಫ್ರಾನ್ಸಿಸ್ ಅಸಿಸಿಯ ಇಗರ್ಜಿ, ಸೆ.ಕ್ಯಾಥೆಡ್ರಲ್, ಬಾಮ್ ಜೀಸಸ್ ಹಾಗು ಇನ್ನಿತರ ಇಗರ್ಜಿಗಳು ಈಗಲೂ ಮೂಕ ಸಾಕ್ಷಿಗಳಾಗಿ ನಿಂತಿವೆ.

1453 ರಲ್ಲಿ ಕಾನ್‌ಸ್ಟ್ಯಾಂಟಿನೋಪಲ್ ಟರ್ಕರ ವಶವಾದದ್ದು ಐರೋಪ್ಯ ರಾಷ್ಟ್ರಗಳಿಗೆ ಶಾಪವಾಗಿ ಪರಿಣಮಿಸಿ ಪೌರ್ವಾತ್ಯ ರಾಷ್ಟ್ರಗಳಿಗೆ ನೂತನ ಸಮುದ್ರ ಮಾರ್ಗವನ್ನು ಕಂಡುಹಿಡಿಯುವಲ್ಲಿ ನಾಂದಿಯಾಯಿತು. ಹೀಗೆ ವ್ಯಾಪಾರೋದ್ದೇಶದಿಂದ ಬಂದ ಐರೋಪ್ಯರು ತಮ್ಮೊಡನೆ ಕ್ರೈಸ್ತಧರ್ಮವನ್ನು ಪ್ರಚಾರ ಮಾಡಲು ಪಾದ್ರಿಗಳನ್ನು ತಂದರು ಅಷ್ಟೇ ಅಲ್ಲ; ಕ್ರೈಸ್ತಧರ್ಮವನ್ನು ವಿಶ್ವಧರ್ಮವನ್ನಾಗಿ ಮಾಡಲು ಹಂಬಲಿಸುತ್ತಿದ್ದರು. ಈ ದಿಸೆಯಲ್ಲಿ ಪೋರ್ಚುಗೀಸರು ಹೆಚ್ಚು ಉತ್ಸುಕರಾಗಿದ್ದರು. 1510 ರಲ್ಲಿ ದಕ್ಷಿಣ ಭಾರತದ ಪಶ್ಚಿಮದಲ್ಲಿ ಭದ್ರವಾಗಿ ತಳವೂರಿದ ಪೋರ್ಚುಗೀಸರು ಗೋವಾವನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡು 1961 ರವರೆಗೂ ಅವಿಚ್ಛಿನ್ನವಾಗಿ ಆಳ್ವಿಕೆ ನಡೆಸಿದರು. ಅವರ ಆಳ್ವಿಕೆಯಲ್ಲಿ ಕಟ್ಟಲ್ಪಟ್ಟ ಇಗರ್ಜಿಗಳು

ನೂರಾರು, ಕ್ರೈಸ್ತ ಧರ್ಮ ಪ್ರಚಾರಕ್ಕೆಂದು ಬಂದ ಕ್ರೈಸ್ತ ಪಾದ್ರಿಗಳು ಅಸಂಖ್ಯಾತ ಹಾಗೆ ಬಂದ ಅಸಂಖ್ಯಾತ ಪಾದ್ರಿಗಳ ಸರಮಾಲೆಯಲ್ಲಿ 16 ನೇ ಶತಮಾನದಲ್ಲಿ ಬಂದ ಸಂತ ಫ್ರಾನ್ಸಿಸ್ ಕ್ಸೇವಿಯರ್‌ನ ಸ್ಥಾನ ವಿಶಿಷ್ಟವಾದುದು. ಸಂತ ಗತಿಸಿ ಸುಮಾರು 432 ವರ್ಷಗಳು ಸಂದಿದ್ದರೂ ಇಂದಿಗೂ ಗೋವನ್ನರಲ್ಲಿ ಅಷ್ಟೇ ಏಕೆ ಇಡೀ ವಿಶ್ವದ ಕ್ರೈಸ್ತ ಬಾಂಧವರಲ್ಲಿ ಅವನ ನೆನಪು ಹಚ್ಚ ಹಸಿರಾಗಿದೆ. ಈತ ಕೇವಲ ವ್ಯಕ್ತಿಯಾಗಿರದೆ ಒಂದು ಶಕ್ತಿಯಾಗಿದ್ದು ಕರಾವಳಿಯ ಕ್ರೈಸ್ತಬಂಧುಗಳ ಆರಾಧ್ಯ ದೇವನಾಗಿದ್ದಾನೆ. ಅವನು ಜೀವಿಸಿದ್ದು ಅತ್ಯಲ್ಪ ಕಾಲ. ವರ್ಷಗಳ ಲೆಕ್ಕದಲ್ಲಿ ಹೇಳುವುದಾದರೆ ಕೇವಲ 47 ವರ್ಷ ಮಾತ್ರ. ಆದರೆ ಸಾಧಿಸಿದ್ದು ಅಗಾಧ. ಪೌರ್ವಾತ್ಯ ರಾಷ್ಟ್ರಗಳಿಗೆ ಧರ್ಮ ಪ್ರವಾಸಕ್ಕೆಂದು ಆಗಮಿಸಿದ ಕ್ರೈಸ್ತ ಸಂತರಲ್ಲೇ ಅತ್ಯಂತ ಪ್ರಸಿದ್ಧನಾದ ಈತ ಕ್ರೈಸ್ತ ಪಾದ್ರಿಗಳ ಸಮುದಾಯದಲ್ಲಿ ಧ್ರುವತಾರೆಯಂತೆ. ಅವನು ಸತ್ತಿದ್ದರೂ ಅವನ ಚೈತನ್ಯ ವಿನ್ನೂ ಜೀವಂತವಾಗಿದೆ ಎಂಬುದಕ್ಕೆ ಇಂದಿಗೂ ಹತ್ತು ವರ್ಷಕ್ಕೊಮ್ಮೆ ಜರುಗುವ ಆತನ ಅಸ್ಥಿಗಳ ಪವಿತ್ರ ದರ್ಶನಕ್ಕೆ ದೇಶ ವಿದೇಶಗಳಿಂದ ಸಹಸ್ರ ಸಂಖ್ಯೆಯಾಗಿ ಕ್ರೈಸ್ತಬಾಂಧವರು, ಪ್ರವಾಸಿಗಳು, ಸಾಗರೋಪಾದಿಯಲ್ಲಿ ಗೋವಾಕ್ಕೆ ಬರುತ್ತಿರುವುದೇ ಜ್ವಲಂತ ಸಾಕ್ಷಿ. 1984ರ ಡಿಸೆಂಬರ್ 21ರಿಂದ 45 ದಿನಗಳವರೆಗೂ ಈ ಸಂತನ ಕಳೇಬರನನ್ನು ಹಳೆಯ ಗೋವೆಯ ಸೇ. ಕ್ಯಾಥಡ್ರಲ್ ಚರ್ಚಿನಲ್ಲಿ ದರ್ಶನಕ್ಕೆ ಇಡುವುದಿದ್ದು ಈ ಸಂದರ್ಭದಲ್ಲಿ ಆತನನ್ನು ಸ್ಮರಿಸುವುದು ಸೂಕ್ತವೆಂದು ಭಾವಿಸಿ ಈ ಲೇಖನದಲ್ಲಿ ಆತನ ಜೀವನ ಸಾಧನೆಗಳನ್ನು ಪರಿಚಯಿಸುವ ಪ್ರಯತ್ನ ಮಾಡಲಾಗಿದೆ.

ಸಂತ ಫ್ರಾನ್ಸಿಸ್ ಕ್ಸೇವಿಯರ್ ಜೀವನ ಚರಿತ್ರೆಯನ್ನು ಅರಿಯಲು ನಮಗೆ ಲಭ್ಯವಿರುವ ಆಧಾರಗಳು ಹೇರಳವಾಗಿ ದೊರಕದಿದ್ದರೂ ವಿರಳವೆಂದು ಹೇಳಲು ಬರುವುದಿಲ್ಲ. ಸ್ವತಃ ಫ್ರಾನ್ಸಿಸನೇ ಬರೆದಿರುವ ಪತ್ರಗಳು 133 ಕ್ಕೂ ಮಿಗಿಲಾಗಿವೆ. ಹಾಗೆಯೇ ಸುಮಾರು 16 ನೇ ಶತಮಾನದ ಅಂತ್ಯದಲ್ಲಿ ಅವನ ಆತ್ಮ ಚರಿತ್ರೆಯನ್ನು ಬರೆದಿರುವ ತ್ರೆಸೇರನ ಕೃತಿ ಇವೆ. ಶಾಸನಗಳಲ್ಲೂ ಅಪರೂಪಕ್ಕೊಮ್ಮೆ ಉಲ್ಲೇಖ ದೊರಕಬಹುದೇನೋ? ಒಟ್ಟಾರೆ ಅವನ ಬಾಲ್ಯ ಹಾಗು ಕಾಲೇಜು-ಪೂರ್ವ ಶಿಕ್ಷಣದ ಬಗೆಗೆ ಸಾಕಷ್ಟು ಮಾಹಿತಿ ನಿಖರವಾಗಿ ದೊರೆಯುವುದಿಲ್ಲವೆಂದರೆ ತಪ್ಪಾಗಲಾರದು. ಆದರೆ ಭಾರತಕ್ಕೆ ಬಂದು ಸಕ್ರಿಯವಾಗಿ ಧರ್ಮ ಪ್ರಚಾರಕ್ಕೆ ತೊಡಗಿದ ಮೇಲೆ ಸಾಧುವಿನ ನಡೆ-ನುಡಿ ಜೀವನ ವೈಖರಿ, ಬೋಧನ ಕ್ರಮ ಮುಂತಾದ ಅಂಶಗಳ ಬಗೆಗೆ ಸಮೃದ್ಧವಾಗಿ ಮಾಹಿತಿಗಳು ದೊರಕುತ್ತವೆ. ಇವುಗಳ ಸಹಾಯದಿಂದ ಸಂತನ ವ್ಯಕ್ತಿತ್ವವನ್ನು ಚಿತ್ರಿಸಬಹುದಾಗಿದೆ.

ಸಂತ ಫ್ರಾನ್ಸಿಸ್ ಕ್ಸೇವಿಯರ್ ಸ್ಪೈಯಿನಿನ ನವಾರ ಸಾಮ್ರಾಜ್ಯದ ಕ್ಸೇವಿಯರ್ ದುರ್ಗದಲ್ಲಿ ಶ್ರೀಮಂತ ಕುಟುಂಬವೊಂದರಲ್ಲಿ ಮೇರಿಯ ಹಾಗು ಜ್ಯೂಯನ್‌ರ ಆರನೆಯ ಹಾಗು ಕಿರಿಯ ಸಂತಾನವಾಗಿ 1506ರ ಏಪ್ರಿಲ್ 7 ರಂದು ಕ್ಸೇವಿಯರ್ ದುರ್ಗದಲ್ಲಿ ಜನಿಸಿದನು. ಇವನಿಗೆ ಮೂವರು ಸಹೋದರಿಯರು, ಮತ್ತು ಇಬ್ಬರು ಸಹೋದರರ

ದ್ದರು. ಅವನ ತಂದೆ ನವಾರ ಸಂಸ್ಥಾನದಲ್ಲಿ ಹಣಕಾಸು ಸಚಿವನಾಗಿದ್ದ. ಕ್ಸೇವಿಯರ್ ದುರ್ಗವು ಫ್ರಾನ್ಸಿಸನ ತಾಯಿಗೆ ಉಂಬಳಿಯಾಗಿ ಬಂದಿತ್ತು. ಆದರೆ ಫ್ರಾನ್ಸಿಸ್‌ನ ಬಾಲ್ಯಾವಸ್ಥೆಯಲ್ಲಿ ಅವನ ಕುಟುಂಬ ಅತಿಯಾದ ಸಂಕಷ್ಟಕ್ಕೆ ಈಡಾಗಿತ್ತು. ಕ್ಸೇವಿಯರ್ ದುರ್ಗವು ಎರಡು ಸಾಮ್ರಾಜ್ಯಗಳಾದ ಆರಗಾನ್ ಹಾಗು ಫ್ರಾನ್ಸ್ ಹೋರಾಟದಲ್ಲಿ ಅಂತರ್ಗತವಾಗಿತ್ತು. 1515 ರಲ್ಲಿ ಫ್ರಾನ್ಸಿಸ್ ತಂದೆಯ ಮರಣ, 1516ರಲ್ಲಿ ಕ್ಸೇವಿಯರ್ ದುರ್ಗದ ವಿನಾಶ ಹತ್ತು ವರ್ಷದ ಬಾಲಕನನ್ನು ತಬ್ಬಿಬ್ಬುಗೊಳಿಸಿತ್ತು. ಬಾಲಕ ತನ್ನ ಬಾಲ್ಯವನ್ನು ತಾಯಿ ಮೇರಿಯ ಹಾಗು ಚಿಕ್ಕಮ್ಮ ವಿಯೋಲಾಂಟೆಯ ಪ್ರೇಮವಾತ್ಸಲ್ಯದಲ್ಲಿ ಬೆಳೆದಂತೆ ತೋರುತ್ತದೆ. ಈ ಪರಿಸ್ಥಿತಿ (1516–24) ವರೆವಿಗೂ ಮುಂದುವರೆಯಿತು. ಈ ವರ್ಷಗಳು ಫ್ರಾನ್ಸಿಸನ ಜೀವನದಲ್ಲಿ (1516–24) ಸಾಕಷ್ಟು ಗಲಿಬಿಲಿಯನ್ನು ಉಂಟು ಮಾಡಿರಬೇಕು. ಅವನ ಸಹೋದರರು 1524ರಲ್ಲಿ ಸ್ಪೆಯಿನ್ ದೊರೆಗೆ ಶರಣಾದ ನಂತರ ಕ್ಸೇವಿಯರ್ ದುರ್ಗ ಅವರ ಸುಬದ್ಧಿಗೆ ಬಂತು. ಇಷ್ಟೆಲ್ಲ ರಾಜಕೀಯ ಅಸ್ಥಿರತೆಯ ನಡುವೆ ಫ್ರಾನ್ಸಿಸನು ಸೈನಿಕ ವೃತ್ತಿಗೆ ಒಲವು ತೋರದೆ ತಟಸ್ಥನಾಗಿದ್ದುದು ಆಶ್ಚರ್ಯವೇ ಸರಿ. ಇದಕ್ಕೆ ಕಾರಣ ವಿಧಿಬರಹವಿರಬಹುದೇನೋ. ಆತನ ಹಿರಿಯ ಸಹೋದರಿಯಾದ ಮ್ಯಾಗ್ಡಲೀನಳ ಅಭಿಲಾಷೆಯಂತೆ ತಾಯಿ ಮೇರಿಯ ಇಚ್ಛೆಯಂತೆ ಫ್ರಾನ್ಸಿಸನು ಭಗವಂತನ ಸೇವೆಯತ್ತ ಒಲವು ತೋರಲು ಪ್ರಚೋದಿತನಾಯಿತು. ಇದರಿಂದಾಗಿ 1525 ರಲ್ಲಿ ಪಾಂಪ್ಲೊನದ ಬಿಷಪ್ಪಿನಲ್ಲಿ ಪಾದ್ರಿತನಕ್ಕೆ ಧರ್ಮದೀಕ್ಷೆ ಕೊಡಲಾಯಿತು. ಹಾಗು ಅದೇ ಬೇಸಿಗೆಯಲ್ಲಿ ವ್ಯಾಸಂಗಕ್ಕಾಗಿ ಪ್ಯಾರಿಸ್ ವಿಶ್ವವಿದ್ಯಾನಿಲಯಕ್ಕೆ ಫ್ರಾನ್ಸಿಸನನ್ನು ಕಳುಹಿಸಿಕೊಡಲಾಯಿತು.

ವ್ಯಾಸಂಗಕ್ಕೆಂದು ಕುದುರೆಯ ಮೇಲೆ ಪ್ಯಾರಿಸ್ಸಿಗೆ ಪ್ರಯಾಣ ಹೊರಟ ಫ್ರಾನ್ಸಿಸನಿಗೆ ವಿಶಾಲವಾದ ಹಸಿರು ಬಯಲುಗಳು, ಬೃಹತ್ ಕಮಾನು ಸೇತುವೆಗಳನ್ನುಳ್ಳ ನದಿಗಳು ಅಚ್ಚರಿಯನ್ನು ತಂದವು. ಹೀಗೆ ಮೂರು ವಾರ ಪ್ರಯಾಣ ಮಾಡಿದ ಮೇಲೆ ಪ್ಯಾರಿಸ್ಸನ್ನು ತಲುಪಿ ಸಂತ ಬಾರಬರ್ ಕಾಲೇಜಿನಲ್ಲಿ ವಸತಿಯ ಸೌಲಭ್ಯವನ್ನು ಪಡೆದನು. ಈ ವಿಶ್ವವಿದ್ಯಾನಿಲಯವು ಕಾಲೇಜು, ಮಠ, ಇಗರ್ಜಿ, ಪುಸ್ತಕದ ಅಂಗಡಿ, ಹಾಗು ಮದ್ಯಪಾನದ ಅಂಗಡಿಗಳನ್ನು ಒಳಗೊಂಡಿದ್ದು ಸುಪ್ರಸಿದ್ಧವಾಗಿತ್ತು. ಇಲ್ಲಿನ ವಾತಾವರಣ ಫ್ರಾನ್ಸಿಸನ ಮೇಲೆ ಯಾವುದೇ ಬಗೆಯ ಪ್ರಭಾವವನ್ನು ಬೀರದಿದ್ದರೂ ಅತಿಯಾದ ದುಂದುಗಾರಿಕೆಯನ್ನು ಮತ್ತು ದುಶ್ಚಟಗಳನ್ನು ಕಲಿಸಿತು. ಜಗಿತ ಅವನ ಅಚ್ಚುಮೆಚ್ಚಿನ ಆಟವಾಗಿತ್ತು. ಅವನ ದುಂದುವೆಚ್ಚ ಅವನನ್ನು ಕ್ಸೇವಿಯರ್ ದುರ್ಗಕ್ಕೆ ವಾಪಸು ಕರೆಸಿಕೊಳ್ಳುವಷ್ಟು ಅತಿಯಾಗಿತ್ತು. ಆದರೆ ಆ ಸಂದರ್ಭದಲ್ಲಿ ಅವನ ಹಿರಿಯಕ್ಕ ಅವನ ವೆಚ್ಚವನ್ನು ಭರಿಸಲು ಮುಂದಾದುದರಿಂದ ಫ್ರಾನ್ಸಿಸ್ ಓದನ್ನು ಮುಂದುವರಿಸಿದ. ಫ್ರಾನ್ಸಿಸನಿಗೆ ವ್ಯಾಸಂಗಾವಧಿಯಲ್ಲಿ ಆದ ಎರಡು ಪ್ರಯೋಜನಗಳಲ್ಲಿ ಒಂದು ಪೀಟರ್ ಫೇಬರ್‌ನ ಸ್ನೇಹ. ವಯಸ್ಸಿನಲ್ಲಿ ಕಿರಿಯನಾದರೂ ಅನುಭವದಲ್ಲಿ ಹಿರಿಯನಾಗಿದ್ದ ಫ್ರಾನ್ಸಿಸನನ್ನು ಪರಿವರ್ತಿಸಿದವರಲ್ಲಿ ಪ್ರಮುಖನಾಗಿದ್ದ. ಅದರಲ್ಲೂ ಅವನು

ಫ್ರಾನ್ಸಿಸನಿಗೆ ಕೊಠಡಿ ಸಹಪಾಠಿಯಾಗಿದ್ದುದು ಒಂದು ರೀತಿಯಲ್ಲಿ ಅವನಿಗೆ ನೆರವಾಯಿತು. 1529 ರಲ್ಲಿ ತತ್ವಶಾಸ್ತ್ರದಲ್ಲಿ ಪದವಿ ಪಡೆದ ಫ್ರಾನ್ಸಿಸನಿಗೆ ಆ ಸಂತಸ ಹೆಚ್ಚು ಹೊತ್ತು ಸಿಲ್ಲಲಿಲ್ಲ. ಅದೇ ವರ್ಷ ಅವನ ತಾಯಿಯು ಗತಿಸಿಹೋದುದು ಭಾರೀ ಪೆಟ್ಟನ್ನು ನೀಡಿತು. 1530 ರಲ್ಲಿ ಫ್ರಾನ್ಸಿಸ್ ಹಾಗು ಫೇಬರ್ ಬೋಧಿಸಲು ಅರ್ಹರೆಂದು ಘೋಷಿಸುವ ಸನ್ನದನ್ನು ಪಡೆದರು. ಅದೇ ವರ್ಷ ಫ್ರಾನ್ಸಿಸನು ಅದ್ಧೂರಿಯಾದ ಔತಣವನ್ನು ನೀಡುವುದರೊಂದಿಗೆ ಸ್ನಾತಕೋತ್ತರ ಪದವಿಯನ್ನು ಪಡೆದನು. ಹಾಗು ಅತಿ ಶೀಘ್ರದಲ್ಲಿ ಅದೇ ವಿಶ್ವವಿದ್ಯಾನಿಲಯದಲ್ಲಿ ಪ್ರಾಧ್ಯಾಪಕನ ಹುದ್ದೆಯನ್ನು ಸಂಪಾದಿಸಿಕೊಂಡನು.

ಆದರೆ ಇವೆಲ್ಲಕ್ಕೂ ಮಿಗಿಲಾಗಿ ಫ್ರಾನ್ಸಿಸನ ಜೀವನವನ್ನು ಮಾರ್ಪಡಿಸಿದ ಮಹತ್ತರವಾದ ಘಟನೆ 1524 ರಲ್ಲಿ ನಡೆಯಿತು. ಆ ಘಟನೆಯೇ ಇಗ್ನಿಷಿಯಸ ಲೊಯಲ್ಲ ಹಾಗು ಫ್ರಾನ್ಸಿಸನ ಭೇಟಿ. ಈ ಭೇಟಿ ಫ್ರಾನ್ಸಿಸನ ಜೀವನದಲ್ಲೊಂದು ಮೈಲಿಗಲ್ಲು. ಇಗ್ನಿಷಿಯಸ್ ಲೊಯಲನ ಜತೆಯಲ್ಲಿ ಕಳೆದ ದಿನಗಳು ಫ್ರಾನ್ಸಿಸನ ಜೀವನ ಪಥವನ್ನೇ ಬದಲಿಸಿದ ಮಹತ್ತರ ದಿನಗಳು. ಫ್ರಾನ್ಸಿಸ್ ದೈವಸಂದೇಶವಾಹಕನಾಗಿ ಪರಿವರ್ತಿತನಾಗಲು ಅವನೇ ಕಾರಣ. ಫ್ರಾನ್ಸಿಸನನ್ನು ಹಂತ ಹಂತವಾಗಿ ತನ್ನ ಪ್ರಭಾವಕ್ಕೆ ಒಳಪಡಿಸಿಕೊಂಡು ಅವನ ಜೀವನ ಪ್ರೈಖರಿಯನ್ನೇ ಬದಲು ಮಾಡಿದ ಮಹನೀಯ ಇಗ್ನಿಷಿಯಸ್. ಇದನ್ನು ಸ್ವತಃ ಫ್ರಾನ್ಸಿಸನೇ ಒಪ್ಪಿರುವುದು ಪ್ರಶಂಸನೀಯ. ಜನತಾ ಸೇವೆಯೇ ಜನಾರ್ಧನ ಸೇವೆ. ಶ್ರೀ ಸಾಮಾನ್ಯನಿಗೆ ಮುಕ್ತಿ ಮಾರ್ಗವನ್ನು ತೋರುವುದಕ್ಕಿಂತ ಉತ್ತಮವಾದ ಕಾರ್ಯ ಬೇರೊಂದಿಲ್ಲ. ಪರಮಾತ್ಮನ ಸೇವೆಯಲ್ಲೇ ಪ್ರಾಣತ್ಯಾಗ ಮಾಡುವುದಕ್ಕಿಂತ ಮಿಗಿಲಾದ ತ್ಯಾಗ ಮತ್ತಾವುದು ಇಲ್ಲ ಎಂಬ ದಿವ್ಯಸತ್ಯದರ್ಶನದ ಅರಿವನ್ನು ಫ್ರಾನ್ಸಿಸನಲ್ಲಿ ಉಂಟುಮಾಡಿ ಸಾವಕಾಶವಾಗಿ ಫ್ರಾನ್ಸಿಸನನ್ನು ತನ್ನ ಪ್ರಭಾವದ ಒಳಗೆ ಕೆಡವಿಕೊಂಡು ಫ್ರಾನ್ಸಿಸ್‌ನಲ್ಲಿ ನವ ಚೈತನ್ಯದ ಧಾರೆ ಎರೆದನು. ಹೀಗೆ ಇಗ್ನಿಷಿಯಸ್ ಲೊಯಲ ಫ್ರಾನ್ಸಿಸನಿಗೆ ನೂತನ ಆಯಾಮದ ಹಾದಿತೋರಿ ಫ್ರಾನ್ಸಿಸನಿಗೆ ಪರಮ ಪೂಜ್ಯನಾದನು.

ಪ್ಯಾರಿಸಿನಲ್ಲಿದ್ದಾಗ ತಾತ್ವಿಕ ದೃಷ್ಟಿಯಿಂದ ಸಮಾನ ಚಿಂತನೆಯುಳ್ಳ (ಏಳು) ಮಂದಿ ಒಟ್ಟಾಗಿ ಕೂಡಿದುದು ಮತ್ತೊಂದು ಆಶ್ಚರ್ಯದ ಅಂಶ. ಇಗ್ನಿಷಿಯಸ್, ಫ್ರಾನ್ಸಿಸ್, ಫೇಬರ್, ಲೇನೆಜ್, ಸಾಲ್‌ಮೆರನ್, ನಿಕೊಲಸ್ ಆಲ್ನ್ಸೊ ಹಾಗು ಬೊಬಿಡಿಲ್ಲ ಆ ಏಳು ಮಂದಿಗಳಾಗಿದ್ದು ಇವರು ಎಲ್ಲಾ ಸಂದರ್ಭಗಳಲ್ಲೂ ಒಂದಾಗಿ ಇರುವ ತೀರ್ಮಾನ ಕೈಗೊಂಡುದು ಹಾಗು ಇಗ್ನಿಷಿಯಸ್ ಪ್ರೇರಣೆಗೆ ಒಳಗಾಗಿ ದೀನ ದಲಿತರ ಸಹಾಯಕ್ಕೆ ಧಾವಿಸುತ್ತಿದ್ದುದು ತಮ್ಮದೇ ಆದ ಒಂದು ಸಂಸ್ಥೆಯನ್ನು ಸ್ಥಾಪಿಸುವ ಸಿದ್ಧತೆಯಲ್ಲಿದ್ದರು. ಇದರ ಪರಿಣಾಮವಾಗಿ ಮುಂದೆ 1533ರಲ್ಲಿ ಫ್ರಾನ್ಸಿಸ್ ಹಾಗು ಅವನ ಮಿತ್ರರು ವೆನಿಸ್ ರೋಮಿಗೆ ಪ್ರಯಾಣ ಬೆಳೆಸಿ, ರೋಮಿನಲ್ಲಿ ಪೋಪನನ್ನು ಕಂಡು ಜೆರುಸಲೇಮ್‌ಗೆ ಹೋಗಬೇಕೆಂದಿರುವ ತಮ್ಮ ಆಕಾಂಕ್ಷೆಯನ್ನು ವ್ಯಕ್ತಪಡಿಸಿ

ದರು. ಅವನು ರೋಮಿನಲ್ಲಿ ಇದ್ದ ದಿನಗಳಲ್ಲಿ ಆಸ್ಪತ್ರೆಗಳಲ್ಲಿ ತಂಗಿ ರೋಗಿಗಳ ಶುಶ್ರೂಷೆಯಲ್ಲಿ ತೊಡಗಿದ್ದು ಶ್ರೀ ಸಾಮಾನ್ಯರಿಗೆ ಆಶ್ಚರ್ಯವನ್ನು ಉಂಟುಮಾಡಿತು. ಇದೇ ಸಂದರ್ಭದಲ್ಲಿ ಫ್ರಾನ್ಸಿಸ್ ತನ್ನ ಪ್ರಥಮ ಸಾರ್ವತ್ರಿಕ ಪ್ರಾರ್ಥನೆಯನ್ನು ಇಲ್ಲಿ ಮಾಡಿದನು. ಆದರೆ ಹಲವಾರು ಕಾರಣಗಳಿಂದ ಜೆರುಸಲೇಮಿನ ಪ್ರಯಾಣ ಮುರಿದು ಬಿದ್ದಾಗ ಪೂರ್ವ ಯೋಜಿತ ನಿರ್ಣಯದಂತೆ ಪೋಪನ ಸಮ್ಮುಖದಲ್ಲಿ ಆಜ್ಞೆಗಾಗಿ ಕಾದು ನಿಂತರು. ಈ ಮಧ್ಯೆ ಇಗ್ನಿಷಿಯಸ್ ಫ್ರಾನ್ಸಿಸ್, ಫೇಬರ್, ಲೇನೇಜ್, ಸಾಲ್ಮೆರನ್, ನಿಕೋಲಸ್ ಅಲಿನ್ಸೊ ಹಾಗು ಬೊಬಡಿಲ್ಲರಿಂದ ಕೂಡಿದ ಜೇಸಸ್ ಸಂಘದ ಸ್ಥಾಪನೆಗೆ ಪೋಪನಿಂದ ಬಾಯಿ ಮಾತಿನ ಒಪ್ಪಿಗೆ ದೊರೆತು ಇಗ್ನಿಷಿಯಸ್‌ನನ್ನು ಅದರ ಅಧ್ಯಕ್ಷನನ್ನಾಗಿ ಮಾಡಲಾಯಿತು. ಹಾಗು ಫ್ರಾನ್ಸಿಸ್‌ನ ಅನಾರೋಗ್ಯ ನಿಮಿತ್ತ ಅವನನ್ನು ಇಗ್ನಿಷಿಯಸ್ ತನ್ನ ಕಾರ್ಯದರ್ಶಿಯನ್ನಾಗಿ ಮಾಡಿಕೊಂಡನು.

ಈ ಮಧ್ಯೆ ಪೋರ್ಚುಗಲ್ಲಿನ ರಾಜನ ವಿನಂತಿಯ ಮೇರೆಗೆ ಪೋಪನು ಇಗ್ನಿಷಿಯಸ್‌ಗೆ ಅವನ ಸಂಘದಿಂದ ಇಬ್ಬರು ಪಾದ್ರಿಗಳನ್ನು ಪೌರ್ವಾತ್ಯ ದೇಶಕ್ಕೆ ಧರ್ಮ ಪ್ರಚಾರಕ್ಕೆ ಕಳುಹಿಸಲು ಆಜ್ಞಾಪಿಸಿದಾಗ ಇಗ್ನಿಷಿಯಸ್‌ನ ಆಯ್ಕೆ ನಿಕೊಲಸ್ ಅಲಿನ್ಸೊ ಹಾಗು ಬೊಬಡಿಲ್ಲ; ಆದರೂ ದೈವ ನಿಮಿತ್ತವೆಂಬಂತೆ ಅವರ ಅನಾರೋಗ್ಯದ ಸಲುವಾಗಿ ಕಡೇ ಕ್ಷಣದಲ್ಲಿ ಫ್ರಾನ್ಸಿಸನು ಲಿಸಬನ್ನಿಗೆ ಪ್ರಯಾಣ ಬೆಳೆಸಿದನು. ಅವನ ಸಂಗಡ ಪಾಲ್ ಕಾಮರಿನೋ ಎಂಬ ಮತ್ತೊಬ್ಬ ಪಾದ್ರಿ ಸ್ವಇಚ್ಛೆಯಿಂದ ಲಿಸಬನ್ನಿಗೆ ಪ್ರಯಾಣ ಕೈಗೊಂಡ. ಲಿಸಬನ್ನಿನಲ್ಲಿ ಫ್ರಾನ್ಸಿಸನ ಸರಳತೆಗೆ ಮಾರುಹೋದ ಪೋರ್ಚುಗೀಸ್ ದೊರೆ ಮೂರನೆಯ ಜಾನ್ (1521–51) ಅವನ ಪೌರ್ವಾತ್ಯ ಪ್ರಯಾಣದ ಸೌಲಭ್ಯದ ಒಗೆಗೆ ಉದಾರವಾಗಿ ಕೇಳಿದಾಗ ಫ್ರಾನ್ಸಿಸ್ ನಕಾರಾತ್ಮಕ ಉತ್ತರ ನೀಡಿದನು. ಜಾನ್ ತನ್ನ ನೂತನ ಗೌರ್ನರನು ಭಾರತಕ್ಕೆ ಹೋಗುತ್ತಿದ್ದ ಸಾಮ್ರಾಜ್ಯದ ಹಡಗಿನಲ್ಲಿ ಈ ಸಂತರುಗಳನ್ನು ಕರೆದೊಯ್ಯುವಂತೆ ಗೌರ್ನರನಿಗೆ ಆಜ್ಞಾಪಿಸಿ 1541ರಲ್ಲಿ ಅವರನ್ನು ಬೀಳ್ಕೊಟ್ಟನು.

ಫ್ರಾನ್ಸಿಸ್ ತನ್ನ 25 ನೇ ಹುಟ್ಟುಹಬ್ಬದಂದು ಭಾರತಕ್ಕೆ ಪ್ರಯಾಣ ಬೆಳೆಸಿದನು (ಏಪ್ರಿಲ್ 17, 1541). ಅವನು ಪ್ರಯಾಣ ಕೈಗೊಂಡ ಹಡಗು ಸಾಂಟಿಯಾಗೋ. ಭಾರತಕ್ಕೆ ನೂತನ ಗೌರ್ನರ್ ಆಗಿ ನೇಮಕಗೊಂಡಿದ್ದ ಡಾನ್ ಮಾರ್ಟೆ ಅಫೋನ್ಸೊ ಡಿಸೋಜ ಅದರ ನೌಕಾಧಿಪತಿಯಾಗಿದ್ದ. ಫ್ರಾನ್ಸಿಸ್ ತನ್ನ ಸರಳ ನಡೆ–ನುಡಿಯಿಂದ ಅತೀ ಶೀಘ್ರದಲ್ಲೇ ಇದೇ ಹಡಗಿನಲ್ಲಿದ್ದ ಸರ್ವರ ಗೌರವಾದರಕ್ಕೆ ಪಾತ್ರನಾದ. ಅವನನ್ನು ಎಲ್ಲರೂ ಪವಿತ್ರ ಗುರು ಎಂದು ಸಂಬೋಧಿಸುವಷ್ಟರ ಮಟ್ಟಕ್ಕೆ ಬೆಳೆದ. ತನ್ನ ಕೆಲಸಕಾರ್ಯ, ಬೇಕು–ಬೇಡಗಳಿಗೆ ಸ್ವಾವಲಂಬಿಯಾಗಿದ್ದ ಫ್ರಾನ್ಸಿಸ್ ಇತರರ ಸೇವೆಗೂ ಮುಂದಾಗುತ್ತಿದ್ದ. ಪ್ರಯಾಣದ ಅವಧಿಯಲ್ಲಿ ಅನಾರೋಗ್ಯಕ್ಕೆ ತುತ್ತಾದರೂ ಫ್ರಾನ್ಸಿಸ್ ಇತರರ ನೆರವಿಗೆ ಧಾವಿಸುತ್ತಿದ್ದುದು ಸರ್ವೇಸಾಮಾನ್ಯವಾಗಿತ್ತು. ಲಿಸಬನ್ನಿನಿಂದ ಹೊರಟ ಐದುಹಡಗುಗಳು ಒಟ್ಟಾರೆ ತೇಲುವ ಆಸ್ಪತ್ರೆಗಳಾಗಿ

ಮೂರ್ಪಟ್ಟು ರೋಗಿಗಳ ಶುಶ್ರೂಷೆಗೆ ಫ್ರಾನ್ಸಿಸ್, ಪಾಲ್ ಮರಿನೋ ಹಾಗು ಮನ್ಸಿಲ್ಲಸ್ ಮುಂದಾದರು. ಹವಾಗುಣ ಮತ್ತೆ ಸ್ಥಿಮಿತಕ್ಕೆ ಬಂದು ಯಾನ ಮುಂದುವರೆಯುವವರೆವಿಗೂ ಫ್ರಾನ್ಸಿಸ್ ಮತ್ತು ಅವನ ಸಹಚಾರರಿಗೆ ರೋಗಿಗಳ ಶುಶ್ರೂಷೆಯೇ ಪ್ರಮುಖ ಕೆಲಸವಾಯಿತು. ಭಾರತವನ್ನು ತಲುಪುವ ಮುನ್ನ ಮಧ್ಯೆ ಮೊಜಾಂಬಿಕ್‌ನಲ್ಲಿ ನಿಲ್ಲಬೇಕಾಯಿತು. ಭಾರತದಿಂದ ಬಂದ ಸುದ್ದಿ ಗೌರ್ನರ್ ಡಿಸೋಜನನ್ನು ತ್ವರಿತ ಯುದ್ಧ ನೌಕೆಯಲ್ಲಿ ತುರ್ತು ಪ್ರಯಾಣ ಕೈಗೊಳ್ಳಲು ಪ್ರೇರೇಪಿಸಿತು. ಅದರಂತೆ ಗೌರ್ನರ್‌ನು ಫ್ರಾನ್ಸಿಸನೊಡಗೂಡಿ ಹೊರಟು ಮಾರ್ಗ ಮಧ್ಯ ಮೆಳಿಂದೆ ಮತ್ತು ಸೊಕೊಟ್ರಗಳಲ್ಲಿ ಲಘು ವಿಶ್ರಾಂತಿಗಾಗಿ ತಂಗಿಪರು. ಆ ದ್ವೀಪಗಳಲ್ಲಿ ಫ್ರಾನ್ಸಿಸ್ ಕ್ರೈಸ್ತರಿಗೆ ಬೋಧಿಸಿ ಅಲ್ಲಿ ನಿಲ್ಲುವ ಯೋಚನೆ ಮಾಡಿದನು. ಆದರೆ ಗೌರ್ನರನು ಅದಕ್ಕೆ ಕಿವಿಗೊಡದೆ ಹೊರಟು 1542 ರ ಮೇ 4 ರಂದು ಸಂಜೆ ಗೋವಾವನ್ನು ಗೌಪ್ಯವಾಗಿ ತಲುಪಿದನು.

ಇಲ್ಲಿಂದ ಮುಂದೆ ಫ್ರಾನ್ಸಿಸ್ ಕೈಗೊಂಡ ಪ್ರಯಾಣ ಅಪಾರ. ಕ್ರೈಸ್ತಧರ್ಮದ ಛಾವಡಿಯಡಿಗೆ ತಂದ ಜನರ ಸಂಖ್ಯೆ ಅಪರಿಮಿತ. ಮುಂದಿನ ಹತ್ತು ವರ್ಷಗಳು ಫ್ರಾನ್ಸಿಸ್ ಗೋವಾದಿಂದ ದಕ್ಷಿಣಕ್ಕೆ ಕರಾವಳಿ ಅಂಚಿನಲ್ಲಿ ಕೊಚ್ಚಿನ್, ತುತ್ತುಕೋರಿನ್, ಕೇಪ್ ಕಾಮೋರಿನ್ ಮತ್ತೆ ಉತ್ತರಕ್ಕೆ ರಾಮೇಶ್ವರದವರೆವಿಗೂ ಧಾರ್ಮಿಕ ಪ್ರಚಾರ ಕೈಗೊಂಡು ಹಳ್ಳಿಹಳ್ಳಿಗೂ ಭೇಟಿ ಕೊಟ್ಟು ಅವರ ಮನವೊಲಿಸಿ ಕ್ರೈಸ್ತ ಮತಕ್ಕೆ ಮತಾಂತರಗೊಳ್ಳುವಂತೆ ಪ್ರೇರೇಪಿಸಿ ಯಶಸ್ಸನ್ನು ಪಡೆದ ಕಾಲ. ಇದಕ್ಕೆ ಕಳಸವಿಟ್ಟಂತೆ ದೂರಪ್ರಾಚ್ಯನಾಡುಗಳಿಂದ ಜಪಾನ್, ಮಲಕ್ಕಾ, ಚೀನಗಳಿಗೂ ಧರ್ಮ ಸಂದೇಶವನ್ನು ಒಯ್ದು ತನ್ಮೂಲಕ ಕ್ರೈಸ್ತ ಸಂದೇಶವನ್ನು ಅರುಹಿದ ಮಹನೀಯನಾದನು. 1542 ರಿಂದ 1553 ರವರೆಗೆ ಪಶ್ಚಿಮ ಕರಾವಳಿ ಸೆರಗಿನ ನೂರಾರು ಜನಾಂಗಗಳ ಆರಾಧ್ಯ ದೈವವಾಗಿ ಜ್ಞಾನಜ್ಯೋತಿಯಂತೆ ಹೋದೆಡೆಯಲ್ಲೆಲ್ಲ ಜ್ಞಾನವನ್ನು ಬೆಳಗುತ್ತ ಕ್ರೈಸ್ತ ಧರ್ಮವೆಂಬ ನಂದಾದೀಪಕ್ಕೆ ಬತ್ತಿಯಾಗಿ ನಿಂತು ಬೆಳಗಿ ಅಬಾಲವೃದ್ಧರಿಗೆ ಆಧ್ಯಾತ್ಮಿಕ ದಾರಿ ತೋರಿ ಅದರಲ್ಲೇ ಲೀನವಾದ.

ಗೋವಾವನ್ನು ತಲುಪುತ್ತಿದ್ದಂತೆ ಫ್ರಾನ್ಸಿಸನು ಬಿಷಪ್ಪನನ್ನು ಸಂದರ್ಶಿಸಿ ತನ್ನಲ್ಲಿದ್ದ ಅಧಿಕೃತ ಸನ್ನದುಗಳನ್ನು ಅರ್ಪಿಸಿ ತನ್ನನ್ನೇ ಬಿಷಪ್ಪನಿಗೆ ಒಪ್ಪಿಸಿದ. ಅವನ ಸರಳತೆಯನ್ನು ಮೆಚ್ಚಿದ ಬಿಷಪ್ಪನು ಅವನಿಗೆ ಧರ್ಮಪ್ರಚಾರ ಮಾಡುವಲ್ಲಿ ಸರ್ವ ಸ್ವಾತಂತ್ರ್ಯವನ್ನು ನೀಡಿದ. ಫ್ರಾನ್ಸಿಸನು 16 ನೆಯ ಶತಮಾನದಲ್ಲಿ ಪ್ರಚಲಿತದಲ್ಲಿದ್ದ ಭಕ್ತಿಪಂಥದ ಮಾರ್ಗವನ್ನು ಧರ್ಮ ಬೋಧನೆಯಲ್ಲಿ ಅನುಸರಿಸಿದ್ದು ಮತ್ತೊಂದು ಗಮನಾರ್ಹವಾದ ಅಂಶ. ಜನಸಾಮಾನ್ಯರಿಗೆ ಆಧ್ಯಾತ್ಮಿಕ ಜ್ಞಾನ ಗ್ರಾಹ್ಯವಾಗುವುದು ಆಡುನುಡಿಯಲ್ಲಿ ಬೋಧಿಸಿದಾಗ ಮಾತ್ರ ಸಾಧ್ಯವೆಂಬ ಬಸವಣ್ಣನ ಅರಿವನ್ನು ಅನುಸರಿಸಿದ ಭಕ್ತಿಪಂಥದ ಅನುಯಾಯಿಗಳಂತೆ ಫ್ರಾನ್ಸಿಸನು ತನ್ನ ಧರ್ಮಪ್ರಸಾರ ಕಾರ್ಯದಲ್ಲಿ ಕೈಯಲ್ಲಿ ಗಂಟೆ ಹಿಡಿದು ಬೀದಿಯಲ್ಲಿ ಬಾರಿಸುತ್ತ ಅಬಾಲವೃದ್ಧರಾದಿಯಾಗಿ ಎಲ್ಲರ ಗಮನವನ್ನು ತನ್ಮೂಲಕ ತನ್ನತ್ತ ಆಕರ್ಷಿಸಿ, ಎಲ್ಲರನ್ನೂ ಸಮೀಪದ ಚೌಕಕ್ಕೆ

ಕರೆದೊಯ್ದು ಅಲ್ಲಿ ಧರ್ಮ ಬೋಧನೆ ಮಾಡಿ ಕ್ರಿಸ್ತನ ಗುಣಗಾನ ಮಾಡಿ, ಭಜಿಸಿ ಅವರ ಮನವೊಲಿಸಲು ಪ್ರಯತ್ನಿಸುತ್ತಿದ್ದನು. ಇದಕ್ಕೆ ಕಿರೀಟಪ್ರಾಯವಾಗಿ ಸರಳ ಜೀವನ ನಡೆಸುವವರ ಮೂಲಕ ಅಸಂಖ್ಯಾತ ಜನರ ಕೇಂದ್ರಬಿಂದುವಾಗಿ ಅತಿ ಶೀಘ್ರದಲ್ಲಿ ಗೋವಾದಲ್ಲಿ ಪ್ರಸಿದ್ಧನಾದ. ವೃದ್ಧರ ಹಾಗೂ ರೋಗಿಗಳ ಒಗೆಗೆ ಹೆಚ್ಚು ಮುತುವರ್ಜಿ ವಹಿಸಿ ಅವರ ಶುಶ್ರೂಷೆಗೆ ಮುಂದಾಗಿ ಇತರರಿಗೆ ಆದರ್ಶನಾದ. ಹೀಗೆ ನಾಲ್ಕು ತಿಂಗಳು ಕಳೆದ ನಂತರ ಗೌರ್ನರನು ಫ್ರಾನ್ಸಿಸನಿಗೆ ಕೊಂಕಣ, ಕೋರಮಂಡಲಗಳಿಗೆ ಪ್ರಸಾರ ಕಾರ್ಯಕ್ಕಾಗಿ ಭೇಟಿ ನೀಡಲು ಆಜ್ಞಾಪಿಸಿದ. ಗೋವಾದಿಂದ, ಕೊಚ್ಚಿನ್, ಕೇಪ್ ಕಾಮೋರಿನ್, ರಾಮೇಶ್ವರದವರೆವಿಗೆ ತೀರ ಪ್ರದೇಶದಲ್ಲಿ ಹಲವಾರು ಬಾರಿ ಪ್ರವಾಸ ಕೈಗೊಂಡ ಕ್ಸೇವಿಯರ್ ಮೀನುಗಾರರ ಏಳ್ಗೆಗಾಗಿ ಶ್ರಮಿಸಿದ. ಅವರನ್ನು ಕ್ರೈಸ್ತಧರ್ಮಾವಲಂಬಿಗಳನ್ನಾಗಿ ಮಾಡುವಲ್ಲಿ ಯಶಸ್ವಿಯಾದ. ಪರಿವಾರ ಜಾತಿ, ಬೇಡ ಜಾತಿ, ಬೆಸ್ತ ಹಾಗು ಮುಕ್ಕವರ್ ಜನಾಂಗದ ಜನರನ್ನು ಮತಾಂತರಿಸುವಲ್ಲಿ ಸಫಲನಾದ. ಹಾಗು ಧರ್ಮ ಪ್ರಚಾರ ಮಾಡುವ ಸಲುವಾಗಿ ತಮಿಳನ್ನು ಕಲಿತು ಅವಶ್ಯಕವಾದ ಬೋಧನೆಗಳನ್ನು ತಮಿಳಿಗೆ ಭಾಷಾಂತರಿಸಿದ. ಹಾಗೆ ಮತಾಂತರ ಗೊಂಡವರಿಗೆ ಸೂಕ್ತ ಮಾರ್ಗದರ್ಶನ ನೀಡಲೆಂದು ವೇತನ ಪಡೆಯುವ ಪ್ರತಿನಿಧಿಗಳನ್ನು ನೇಮಿಸಿದ. ಪೋರ್ಚುಗಲ್ ರಾಣಿಯು ಮೊರೆಹೊಕ್ಕು ಮುತ್ತಿನ ಸಂಗ್ರಹಣಾ ಕಾರ್ಯದಿಂದ ಬರುವ ಲಾಭದ ಒಂದು ಭಾಗ ರಾಣಿಯು ಪಾದರಕ್ಷೆಯ ವೆಚ್ಚಕ್ಕೆ ಮೀಸಲಾಗಿದ್ದು ಅದನ್ನು ಪ್ರತಿನಿಧಿಗಳ ವೇತನವನ್ನು ಭರಿಸಲು ಅವಳಿಂದ ದತ್ತಿಯಾಗಿ ಪಡೆದನು. ಇದ ರಿಂದ ಅವನಿಗೆ ವರ್ಷಕ್ಕೆ 4000 ಪಣ ಆದಾಯ ಬರುವಂತಾಯಿತು. ಫ್ರಾನ್ಸಿಸ್ ಮದ್ಯಪಾನದ ಕಡುವೈರಿಯಾಗಿದ್ದನು. ಮದ್ಯಪಾನದಲ್ಲಿ ತೊಡಗಿರುವವನ್ನು ಶಿಕ್ಷಿಸಲು ಅಧಿಕಾರಿಯೊಬ್ಬನನ್ನು ಧರ್ಮಾಧಿಕಾರಿಗೆ ಸಹಾಯಕವಾಗಿರಲು ನೇಮಿಸಿದ್ದನು. ಅವರು ಕೆಲಸದಲ್ಲಿ ಹೆಚ್ಚು ಆಸಕ್ತರಾಗಿರುವಂತೆ ಮಾಡಲು ಭಕ್ಷೀಸನ್ನು ಘೋಷಿಸಿದ್ದನು ಹಾಗೂ ಮದ್ಯಪಾನ ಮಾಡುತ್ತಿದ್ದ ಸ್ತ್ರೀಯರನ್ನು ಮೂರು ದಿನ ಕಾರಾಗೃಹದಲ್ಲಿ ಬಂಧಿಸಿ ಶಿಕ್ಷಿಸುತ್ತಿದ್ದನು. ಈ ರೀತಿಯಾಗಿ ಮದ್ಯಪಾನವನ್ನು ಸಂಪೂರ್ಣವಾಗಿ ವರ್ಜಿಸಲು ಯತ್ನಿಸಿದ ಅವನ ಪ್ರಯತ್ನ ಪ್ರಶಂಸಾರ್ಹವೇ ಸರಿ. 1543ರಲ್ಲಿ ಮತ್ತೆ ಗೋವಾಕ್ಕೆ ಬಂದಾಗ ಜೇಸಸ್ ಸಂಸ್ಥೆಯ ಸ್ಥಾಪನೆಗೆ ಪೋಪನ ಅಧಿಕೃತ ಒಪ್ಪಿಗೆ ಹಾಗು ಅದರ ಅಧ್ಯಕ್ಷನಾಗಿ ಇಗ್ನಿಷಿಯಸ್ ಲೊಯೆಲ್ಲನ ಆಯ್ಕೆಯಾಗಿರುವ ವಿಷಯ ತಿಳಿದು ಪರಮಾ ನಂದಗೊಂಡನು. 1544ರಲ್ಲಿ ಮತ್ತೆ ಫಿಷರಿ ತೀರಕ್ಕೆ ಪ್ರಯಾಣ ಬೆಳೆಸಿ ಅಲ್ಲಿಗೆ ಬರುತ್ತಿ ದ್ದಂತೆ ಕೇಪ್ ಕಾಮೋರಿನ್‌ನ ಪರವ ಜನಾಂಗದ ಮೇಲೆ ಒಳಪ್ರಾಂತ್ಯದ ಬೇಡರು ಆಕ್ರಮಣ ಮಾಡಿ ಪರಿವಾರ ಜನ ದ್ವೀಪಕ್ಕೆ ಪಲಾಯನಗೈದಿರುವ ವಿಷಯ ಸಿಡಿಲಿನಂತೆ ಅವನಿಗೆ ತಲುಪಿತು. ಕುರಿಗಳನ್ನು ಕಾಯುವ ಸಮರ್ಥ ಕುರುಬನಂತೆ ತಕ್ಷಣವೇ ಫ್ರಾನ್ಸಿಸ್ ತನ್ನ ಹಿಂಬಾಲಕರ ರಕ್ಷಣೆಗೆ ಮುಂದಾಗಿ ಸುತ್ತಮುತ್ತಲಿನ ಹಳ್ಳಿಯ ಜನರ ನೆರವು ಪಡೆದು ಪರವ ಜನಾಂಗದವರನ್ನು ರಕ್ಷಿಸುವಲ್ಲಿ ಸಫಲನಾದ.

1544ರಲ್ಲೀ ಮನ್ನಾರ್ ದ್ವೀಪದ ನಿವಾಸಿಗಳ ಆಹ್ವಾನದ ಮೇರೆಗೆ ತನ್ನ ಸಮೀಪವರ್ತಿಯೊಬ್ಬನನ್ನು ಶ್ರೀಲಂಕಾದ ಮನ್ನಾರ್ ದ್ವೀಪಕ್ಕೆ ಧರ್ಮ ಪ್ರಸಾರಕ್ಕೆ ಕಳುಹಿಸಿದ. ಇದನ್ನು ತಿಳಿದ ಜಾಫ್ನಾದ ದೊರೆ ಸೇನೆಯನ್ನು ಕಳುಹಿಸಿ ಮತಾಂತರಿಗಳನ್ನು ಸದೆಬಡಿಸಿದ. ಈ ಮಧ್ಯೆ ತಿರುವಾಂಕೂರಿನ ರಾಜ ಮುಕ್ಕುವಾರ ಜನಾಂಗದವರಿಗೆ ಧರ್ಮ ಬೋಧನೆ ಮಾಡಲು ಫ್ರಾನ್ಸಿಸನಿಗೆ ಅನುಮತಿ ನೀಡಿದ್ದ, ಅದರ ಫಲವಾಗಿ ಸುಮಾರು 10,000 ಮಂದಿಯನ್ನು ಮತಾಂತರಿಸಿದ್ದ. ಆದರೆ ಮನ್ನಾರಿನ ನರಮೇಧ ಕ್ಸೇವಿಯರನನ್ನು ಕೂಡಲೆ ಗೋವಾಕ್ಕೆ ಧಾವಿಸುವಂತೆ ಮಾಡಿತು. ಗೋವಾದಲ್ಲಿ ಗೌರ್ನರನನ್ನು ಸಂದರ್ಶಿಸಿ ಮನ್ನಾರ್ ರಾಜನ ವಿರುದ್ಧ ಜರೂರು ಕ್ರಮ ಕೈಗೊಳ್ಳಲು ಒತ್ತಾಯಿಸಿ, ಗೌರ್ನರನು ನಾಗಪಟ್ಟಣದ ಸೇನಾಧಿಪತಿಗೆ ಕ್ರಮ ಕೈಗೊಳ್ಳಲು ಆದೇಶ ನೀಡಿದ ಮೇಲೆ ಫ್ರಾನ್ಸಿಸನು ಮಲಬಾರಿನತ್ತ ಪ್ರಯಾಣ ಹೊರಟು 1545 ರಲ್ಲಿ ಕೊಚ್ಚಿನನ್ನು ತಲುಪಿದನು. ಅಲ್ಲಿ ಅವನಿಗೆ ಆಗ್ನೇಯ ಏಷ್ಯದಲ್ಲಿ ಧರ್ಮಪ್ರಚಾರಕ್ಕೆ ಹೆಚ್ಚು ಅವಕಾಶವಿದೆ ಎಂಬ ಅಂಶ ಆಗ ತಾನೇ ಬಂದಿದ್ದ ಪ್ರಯಾಣಿಕರಿಂದ ತಿಳಿಯಿತು. ಅಲ್ಲಿಂದ ನಾಗಪಟ್ಟಣಕ್ಕೆ ಬಂದಾಗ ಅಲ್ಲಿ ಪೋರ್ಚುಗೀಸ್ ಅಧಿಕಾರಿ ಜಾಫ್ನಾ ದೊರೆಯೊಂದಿಗೆ ಶಾಮೀಲಾಗಿರುವ ವಿಷಯ ತಿಳಿದು ಬೇಸರಗೊಂಡನು. ಅಲ್ಲಿಂದ ಮೈಲಾಪುರದ ಸಂತ ಥಾಮಸ್‌ನ ಇಗರ್ಜಿಯಲ್ಲಿ ತಂಗಿದ್ದು ಹಲವಾರು ದಿನಗಳ ಧ್ಯಾನದ ನಂತರ ಮಲಕ್ಕ ದ್ವೀಪಕ್ಕೆ ಹೋಗಲು ನಿಶ್ಚಯಿಸಿದನು.

ಒಂದು ತಿಂಗಳ ಪ್ರಯಾಣದ ನಂತರ ಮಲಕ್ಕ ದ್ವೀಪವನ್ನು ತಲುಪಿ ಮಲಯಾ ಭಾಷೆಗೆ ಪ್ರಾರ್ಥನೆಗಳನ್ನು ಅನುವಾದಿಸಿ ಬೋಧಿಸತೊಡಗಿದನು. ಅಲ್ಲಿಂದ ಅಂಬೋನ-ಟರ್ನೆಟ್-ಮಾಟ್ಸೋದ್ವೀಪಗಳಿಗೆ ಭೇಟಿ ನೀಡಿ ಅಲ್ಲಿನ ಜನರಿಗೆ ಧರ್ಮೋಪದೇಶ ಮಾಡಿದ್ದನು. ಈ ಸ್ಥಳಗಳಿಗೆ ಪ್ರಯಾಣ ಮಾಡುತ್ತಿದ್ದಾಗ ಒಮ್ಮೆ ಭೀಕರ ಅಲೆಗಳ ಹೊಡೆತಕ್ಕೆ ಹಡಗು ಸಿಲುಕಿದಾಗ ಅದನ್ನು ಶಮನಗೊಳಿಸಲು ತನ್ನ ಶಿಲುಬೆಯನ್ನು ಕೊರಳಿನಿಂದ ತೆಗೆದು ಅಲೆಗಳನ್ನು ಮುಟ್ಟುತ್ತಿದ್ದಾಗ ಕೈಜಾರಿ ಸಾಗರ ತಳ ಸೇರಿತು. ಸಾಗರ ಪ್ರಶಾಂತಗೊಂಡು ಅವರ ಪ್ರಯಾಣ ಸುಖಾಂತ್ಯವಾಗಿತ್ತು. ಆದರೆ ಶಿಲುಬೆ ಕಳೆದು ಹೋದ ಕೊರಗು ಫ್ರಾನ್ಸಿಸನನ್ನು ಕಾಡುತ್ತಿತ್ತು. ಮಾರನೆಯ ಮುಂಜಾನೆ ಫ್ರಾನ್ಸಿಸ್ ಸಹಚಾರರೊಡನೆ ತೀರದಲ್ಲಿ ನಡೆದಾಡುತ್ತಿದ್ದಾಗ ಏಡಿಯೊಂದು ಶಿಲುಬೆಯನ್ನು ತರುತ್ತಿರುವುದನ್ನು ಕಂಡು ಫ್ರಾನ್ಸಿಸನು ಮೂಕನಾದನೆಂಬ ಉಲ್ಲೇಖ ಅವನ ಸಹಚಾರಿಗಳ ಪತ್ರದಿಂದ ದೊರಕುತ್ತದೆ. ಇದು ದಂತಕಥೆ ಇರಬಹುದು. ಆದರೆ ಈ ಘಟನೆ ಅವನ ಆತ್ಮ ವಿಕಾಸಕ್ಕೆ ಪ್ರತೀಕವಾಗಿದೆ. 1547ರಲ್ಲಿ ಮಲಕ್ಕಾದಿಂದ ಭಾರತಕ್ಕೆ ವಾಪಸ್ಸಾಗಲು ಪ್ರಯಾಣ ಕೈಗೊಂಡನು. ಆಗ ಅಲ್ಲಿಂದ ಹತ್ತು ಮಂದಿ ಬಾಲಕರನ್ನು ಗೋವಾದ ಸಂತ ಪಾಲ್ ಕಾಲೇಜಿನಲ್ಲಿ ಶಿಕ್ಷಣಕ್ಕೆಂದು ತನ್ನ ಜೊತೆ ಕರೆದುಕೊಂಡು ಹೊರಟನು.

ಮಲಕ್ಕದಲ್ಲಿ ಫ್ರಾನ್ಸಿಸ್ ಜಪಾನಿನ ಬಗ್ಗೆ ಪೋರ್ಚುಗೀಸ್ ವ್ಯಾಪಾರಿಗಳ ಮೂಲಕ ಕೇಳಿ ತಿಳಿದನು. ಹಾಗು ಆ ಸಂದರ್ಭದಲ್ಲಿ ಅಂಜಿರೋ ಎಂಬ ಜಪಾನೀಯ

ನನ್ನು ಸಹ ಭೇಟಿಯಾದನು. ಅಂಜಿರೋ ಫ್ರಾನ್ಸಿಸನಿಗೆ ಜಪಾನಿಗೆ ಬರಲು ಆಹ್ವಾನಿಸಿದನು. ಜಪಾನಿಗೆ ಹೋಗಲು ಯೋಚಿಸಿ 1548ರಲ್ಲಿ ಅಂಜಿರೋನ ಜೊತೆ ಕೊಚ್ಚಿನ್‌ಗೆ ಆಗಮಿಸಿದನು. ಕೊಚಿನ್‌ನಿಂದ ಎರಡು ಬಾರಿ ಫಿಷರಿ ತೀರಕ್ಕೆ ಭೇಟಿ ನೀಡಿ ಅಲ್ಲಿನ ಪರಿಸ್ಥಿತಿಯ ಅಧ್ಯಯನ ಮಾಡಿ ಅಲ್ಲಿನ ಪ್ರತಿನಿಧಿಗಳಿಗೆ ಸಲಹೆ ಸೂಚನೆಗಳನ್ನು ನೀಡಿದನು. ಇದೇ ಸಂದರ್ಭದಲ್ಲಿ ಕೊಚ್ಚಿನ್, ಕ್ರಾಂಗನೂರ್, ಕ್ವಿಲಾನ್‌ಗಳಲ್ಲಿ ಒಂದೊಂದು ಕಾಲೇಜನ್ನು ಸ್ಥಾಪಿಸಿ ಅದರ ಹೊಣೆಯನ್ನು ಜೇಸಸ್ ಸಂಸ್ಥೆಗೆ ವಹಿಸಿದನು. 1542ರಷ್ಟು ಹಿಂದೆಯೇ ಗೋವಾದಲ್ಲಿ ಕಾಲೇಜಿದ್ದು ಅದರ ಹೊಣೆ ಕ್ಸೇವಿಯರ್‌ಗೆ ನೇರವಾಗಿ 1548ರಲ್ಲಿ ಬಂದರೂ ಅದರ ಏಳ್ಗೆಗೆ ಹೆಚ್ಚು ದುಡಿದದ್ದು ಪಾಲ್ ಕಾಮೋರಿನ್ ಎಂಬುದನ್ನು ಮರೆಯುವಂತಿಲ್ಲ. ಮಲಬಾರ್ ಹಾಗು ಕೋರಮಂಡಲಗಳನ್ನು ವ್ಯವಸ್ಥಿತಗೊಳಿಸಿ 1549ರಲ್ಲಿ ಕ್ಸೇವಿಯರನು ಅಂಜಿರೋ ಹಾಗು ಇನ್ನಿತರ ಅನುಯಾಯಿಗಳೊಡನೆ ಕೊಚ್ಚಿನ್‌ನಿಂದ ಜಪಾನಿನತ್ತ ಪ್ರಯಾಣ ಬೆಳೆಸಿದನು. ಅದೊಂದು ಅಂತರಾಷ್ಟ್ರೀಯ ಗುಂಪೆನಿಸುವಂತೆ ಹಲವಾರು ದೇಶದ ಜನರನ್ನು ಪ್ರತಿನಿಧಿಸಿತ್ತು. ನಾಲ್ಕು ತಿಂಗಳ ಪ್ರಯಾಣದ ನಂತರ ಅಂಜಿರೋವಿನ ತೌರೂರಾದ ಕಗೋಷಿಮವನ್ನು ತಲುಪಿದರು. ಅಲ್ಲಿ ಒಂದು ವರ್ಷ ತಂಗಿದ್ದರು. ಆ ಅವಧಿಯಲ್ಲಿ ಫ್ರಾನ್ಸಿಸನು ತನ್ನ ನಡೆ–ನುಡಿ, ಜೀವನ ವೈಖರಿಯಿಂದ ಜಪಾನೀಯರನ್ನು ಕ್ರೈಸ್ತಧರ್ಮಕ್ಕೆ ಮತಾಂತರಿಸುವಲ್ಲಿ ಜಯಶೀಲನಾದ. ಅವನು ಜಪಾನೀಯರ ಬಗ್ಗೆ ಆಡಿರುವ ಪ್ರಶಂಸೆಯ ಮಾತು ಇಂದಿಗೂ ಸೂಕ್ತವಾಗಿದೆ. ಇವರ ಏಳ್ಗೆಯನ್ನು ಸಹಿಸದ ಬೌದ್ಧ ಭಿಕ್ಷುಗಳು ರಾಜನ ಕಿವಿ ಚುಚ್ಚಿ ಕ್ರೈಸ್ತಧರ್ಮ ಬೋಧನೆಯನ್ನು ಮತ್ತು ಮತಾಂತರವನ್ನು ಸಂಪೂರ್ಣ ನಿಷೇಧಿಸುವಂತೆ ಮಾಡಿದರು. ಇದರಿಂದಾಗಿ ಕ್ಸೇವಿಯರನು ತನ್ನ ನೆಲೆಯನ್ನು 1550ರಲ್ಲಿ ಹಿರೋಡಕ್ಕೆ ಬದಲಾಯಿಸಿ ಜಪಾನಿನ ರಾಜನನ್ನು ಸಂದರ್ಶಿಸಲು ಕಿಯೋಟೊ ನಗರಕ್ಕೆ ಪಾದ ಬೆಳೆಸಿದನು. ಆದರೆ ಅವನಿಗೆ ರಾಜದರ್ಶನ ದೊರಕಲಿಲ್ಲ. ಮೇಲಾಗಿ ರಾಜಾಜ್ಞೆ ಕೋಟೆಯಿಂದ ಮೂರು ಮೈಲಿ ಸುತ್ತಳತೆಯೊಳಗೆ ಮಾತ್ರ ಶಕ್ತಿಯುತವಾಗಿದೆಯೆಂಬ ಅಂಶ ತಿಳಿದು ಹತಾಶನಾಗಿ ಹಿಂದಿರುಗಿದನು. ಆದರೂ ನಿರಾಶನಾಗದೆ ಯಮಗೂಚಿ ಪಂಗಡದ ಸ್ಥಳೀಯ ನಾಯಕನನ್ನು ಸಂದರ್ಶಿಸಿ ತಾನು ಪೋರ್ಚುಗೀಸ್ ದೊರೆಯ ರಾಯಭಾರಿಯೆಂದು ಪರಿಚಯಿಸಿಕೊಂಡು ಧರ್ಮಪ್ರಚಾರಕ್ಕೆ ಅನುಮತಿಯನ್ನು ಪಡೆದನು. ಈ ದಿಸೆಯಲ್ಲಿ ಸನ್ನದನ್ನೂ ಪಡೆಯುವಲ್ಲಿ ಯಶಸ್ವಿಯಾದನು. ಅಲ್ಲಿ ತಂಗಿದ್ದ ನಾಲ್ಕು ತಿಂಗಳ ಅವಧಿಯಲ್ಲಿ ಸಮುರಾಯಿ ವರ್ಗಕ್ಕೆ ಸೇರಿದ ಜನರನ್ನು ಮತಾಂತರಗೊಳಿಸುವಲ್ಲಿ ಸಫಲನಾದನು. ಆದರೆ ಒಕಿನೋಹಾಮಕ್ಕೆ ಪೋರ್ಚುಗೀಸ್ ಹಡಗುಗಳು ಬಂದಿರುವ ಸುದ್ದಿ ತಿಳಿದು ಮೂವರು ಜಪಾನಿ ಪಾದ್ರಿಗಳೊಂದಿಗೆ ರೇವಿಗೆ ಬಂದನು. ಆದರೆ ಅವನಿಗಾಗಿ ಏನು ಪತ್ರ ಕಾದಿರಲಿಲ್ಲ. ಅಲ್ಲಿಂದ ಗೋವಾಕ್ಕೆ ಹೋಗಲು ತೀರ್ಮಾನಿಸಿ ಹೊರಟು 1551ರ ಡಿಸೆಂಬರ್ 17ರಂದು ಸ್ಯಾನ್ಸಿಯನ್ ದ್ವೀಪವನ್ನು ತಲುಪಿದನು. ಅಲ್ಲಿ ಚೀನದ ಬಗೆಗೆ ಕೇಳಿದನು. ಅಲ್ಲಿಗೂ ಹೋಗಲು ಆಲೋಚಿಸುತ್ತ 1552ರ ಜನವರಿ

ಯಲ್ಲಿ ಕೊಚ್ಚಿನನ್ನು ತಲುಪಿದನು. ಅಲ್ಲಿಂದ ಗೋವಾಕ್ಕೆ ಬಂದು ಅಲ್ಲಿನ ಪರಿಸ್ಥಿತಿಯನ್ನು ಪರಿಶೀಲಿಸಿ 1552 ರ ಏಪ್ರಿಲ್ 18 ರಂದು ಚೀನಾಕ್ಕೆ ಫೇರೀರಾ ಎಂಬ ವ್ಯಾಪಾರಿಯೂ ಸೇರಿದಂತೆ 6 ಮಂದಿಯೊಂದಿಗೆ ಚೀನಕ್ಕೆ ಪ್ರಯಾಣ ಬೆಳೆಸಿದನು.

ಮಲಕ್ಕಾದ ಪೋರ್ಚುಗೀಸ್ ಸೇನಾಧಿಪತಿ ವಾಸ್ಕೋಡಗಾಮನ ಕಿರಿಯಪುತ್ರನಾಗಿದ್ದರೂ, ಚೀನಾದೇಶಕ್ಕೆ ಸಾಧಾರಣ ವ್ಯಾಪಾರಿಯೋರ್ವನನ್ನು ರಾಯಭಾರಿಯನ್ನಾಗಿ ನಿಯೋಜಿಸಿರುವುದು ತನಗೆ ಅಪಮಾನ ಮಾಡಿದಂತೆಂದು ಭಾವಿಸಿ ಫ್ರಾನ್ಸಿಸನ ಪ್ರಯಾಣಕ್ಕೆ ಅಡ್ಡಗಾಲಿಟ್ಟು ಕಡೆಗೆ ವ್ಯಾಪಾರಿಯನ್ನು ತನ್ನಲ್ಲೇ ಉಳಿಸಿಕೊಂಡು ತನ್ನ ಸಿಬ್ಬಂದಿ ವರ್ಗದಿಂದ 25 ಮಂದಿಯನ್ನು ಕ್ಸೇವಿಯರ್‌ನೊಂದಿಗೆ ಕಳುಹಿಸುತ್ತ ಪ್ರಯಾಣಕ್ಕೆ ಬಿಟ್ಟುಕೊಟ್ಟನು. ಇದರಿಂದ ಚೀನಕ್ಕೆ ಪ್ರವೇಶಿಸುವ ಕ್ಸೇವಿಯರನ ಆಸೆ ಕರಗಿ ಹೋಯಿತು. ಆದರೂ ಅಕ್ಟೋಬರ್ ತಿಂಗಳಲ್ಲಿ ಚೀನಾದ ತೀರವನ್ನು ತಲುಪಿ ಸ್ಯಾನ್ಸಿಯನ್ ದ್ವೀಪದಲ್ಲಿ ಇಳಿದು ಅಲ್ಲಿಂದ ತನ್ನನ್ನು ಗೋಪ್ಯವಾಗಿ ಚೀನದೊಳಗೆ ಕೊಂಡೊಯ್ಯಲು ಕ್ಯಾಂಟನ್‌ನ ವ್ಯಾಪಾರಿಯೊಬ್ಬನನ್ನು ಪ್ರಲೋಭಿಸಿ ಅವನ ಬರುವಿಕೆಯನ್ನು ನಿರೀಕ್ಷಿಸುತ್ತ ನವೆಂಬರ್ 21ರಲ್ಲಿ ಅನಾರೋಗ್ಯಕ್ಕೆ ತುತ್ತಾದನು. ಆ ಸಮಯದಲ್ಲಿ ಸಾಂತಾಕ್ರೂಜ್ ಹೊರತು ಉಳಿದೆಲ್ಲ ಹಡಗುಗಳು ಹೊರಟುಹೋಗಿದ್ದುವು. ಅವನೊಡನೆ ಅಂತೋಣಿ ಮತ್ತು ಕ್ರಿಸ್ಟಫರ್ ಇದ್ದರು. ನವೆಂಬರ್ 28 ರಂದು ಕ್ಸೇವಿಯರ್ ಮಾತನಾಡುವ ಚೈತನ್ಯ ಕಳೆದುಕೊಂಡು ಮೂರು ದಿನ ನಿಶ್ಚೇತನಗೊಂಡಿದ್ದನು. ನಂತರ ಜ್ಞಾನ ಬಂದರೂ ಯಾರನ್ನು ಗುರುತಿಸಲಾಗದೆ ಏನನ್ನು ಸೇವಿಸದೆ ದೇವರ ಧ್ಯಾನದಲ್ಲಿ ತೊಡಗಿದ್ದನು. ಡಿಸಂಬರ್ 2, 1552 ರ ಶನಿವಾರ ಬೆಳಗಿನ ಜಾವ 5 ಗಂಟೆಯ ಮಬ್ಬಿನಲ್ಲಿ ಅರುಣೋದಯವಾಗುತ್ತಿದ್ದಂತೆ ಈ ಮಹಾನ್ ಚೇತನ ಅಸ್ತಮಿಸಿತ್ತು. ಅಲ್ಲಿ ಶವವನ್ನು ಹೂಳುವಾಗ ದೇಹ ನಶಿಸಿ ಹೋಗಲೆಂದು ಸುಣ್ಣವನ್ನು ಹಾಕಿ ಶವವನ್ನು ಹೂಳಲಾಯಿತು. 1552ರ ಫೆಬ್ರವರಿಯಲ್ಲಿ ಸಮಾಧಿಯನ್ನು ಅಗೆದು ನೋಡಿದಾಗ ಶವವು ಸ್ವಲ್ಪವು ಮುಕ್ಕಾಗದಿರುವುದನ್ನು ಕಂಡು ಮಲಕ್ಕಾಗೆ ಅದನ್ನು ತಂದು ಅಲ್ಲಿ ಹೂಳಲಾಯಿತು. 1553ರ ಆಗಸ್ಟ್‌ನಲ್ಲಿ ಅವನ ಉತ್ತರಾಧಿಕಾರಿ ದರ್ಶನ ಪಡೆಯುವ ಸಲುವಾಗಿ ಗುಂಡಿ ಅಗೆದಾಗ ಶವವು ಕೆಡದಿರುವುದನ್ನು ಕಂಡು ಅಲ್ಲಿಂದ ರಾತ್ರೋರಾತ್ರಿ ಅದನ್ನು ಫೇರೀರಾನ ಮನೆಗೆ ಸಾಗಿಸಿ ಅದಕ್ಕೆ ಉತ್ತಮ ವಸ್ತ್ರ ಹೊದಿಸಿ ಹೊಸ ಪೆಟ್ಟಿಗೆಯಲ್ಲಿ ಇಡಲಾಯಿತು. 1553 ರ ಡಿಸೆಂಬರ್ 16 ಕ್ಕೆ ಗೋವಾಕ್ಕೆ ರವಾನಿಸಲಾಯಿತು. ಅದನ್ನು ವೈಜ್ಞಾನಿಕ ಪರೀಕ್ಷೆಗೆ ಒಳಪಡಿಸಿದಾಗ ಶವ ಕೆಡದಂತೆ ಮಾಡಲು ಯಾವುದೇ ರೀತಿಯ ರಸಾಯನಿಕ ವಸ್ತುಗಳನ್ನು ಉಪಯೋಗಿಸಿಲ್ಲವೆಂಬ ಅಂಶವನ್ನು ಸ್ಥಿರಪಡಿಸಿದುವು. ಇದನ್ನು ಕ್ಸೇವಿಯರ್‌ನ ಆತ್ಮ ಚರಿತ್ರಕಾರ ತೈಕ್ಷೀರ ಕೂಡ ಒಪ್ಪುತ್ತಾನೆ. ಆ ಶವವನ್ನು 1560ರವರೆಗೆ ಸಂತಪಾಲ್ ಕಾಲೇಜಿನಲ್ಲಿ ಇಡಲಾಗಿತ್ತು. ಆದರೆ ಕಟ್ಟಡವನ್ನು ವಿಸ್ತರಿಸುವ ಸಲುವಾಗಿ ಶವಪೆಟ್ಟಿಗೆಯನ್ನು ಕೊಠಡಿಯಿಂದ ಕೊಠಡಿಗೆ 1572ರಲ್ಲಿ ಹೊಸ ಇಗರ್ಜಿ ಕಟ್ಟುವವರೆವಿಗೂ ವರ್ಗಾಯಿಸಲಾಯಿತು. 1613ರಲ್ಲಿ ಅದು ಶಾಶ್ವತ

ನಾಗಿ ಕಾಲೇಜಿನಿಂದ ಬಾನ್ ಜೀಸಸ್ ಇಗರ್ಜಿಗೆ ವರ್ಗಾಯಿಸಲಾಯಿತು. ಈಗ ಸದ್ಯ ಕ್ಸೇವಿಯರನ ಅಸ್ಥಿ ಇರುವ ಬೆಳ್ಳಿಯ ತಗಡಿನ ಗಾಜಿನ ಪೆಟ್ಟಿಗೆಯನ್ನು ಬಾನ್ ಜೀಸಸ್ ಇಗರ್ಜಿಯ ದಕ್ಷಿಣ ಭಾಗದಲ್ಲಿ ಎತ್ತರವಾದ ಪೀಠದ ಮೇಲೆ ಇಡಲಾಗಿದೆ. ಅದು 1654 ರಿಂದ ಅಲ್ಲಿಯೇ ಇರುವುದು ಆಶ್ಚರ್ಯವೇ ಸರಿ.

ಇಲ್ಲಿಯವರೆವಿಗೂ ಈ ಶವವನ್ನು ಪೆಟ್ಟಿಗೆಯಿಂದ ಸಾಕಷ್ಟು ಬಾರಿ ತೆಗೆದು ಪರೀಕ್ಷಿಸ ಲಾಗಿದೆ. ಇವರ ಪರಿಣಾಮವಾಗಿ ಹಲವಾರು ಅಂಗಗಳು ಕೈತಪ್ಪಿ ಹೋಗಿವೆ. ಕೆಲವು ಅಸ್ಥಿ ಗಳನ್ನು ಪವಿತ್ರವೆಂದು ಪರಿಗಣಿಸಿ ರೋಮ್ ಮತ್ತು ಜಪಾನಿನಲ್ಲಿ ಇಡಲಾಗಿದೆ. 1636 ರಲ್ಲಿ ದೇಹದ ಅಂತರಿಕ ಭಾಗಗಳನ್ನು ತೆಗೆದು ಪಳೆಯುಳಿಕೆಯಂತೆ ಪೂರ್ವ ಪಶ್ಚಿಮ ದೇಶ ಗಳಲ್ಲಿ ವಿತರಣೆ ಮಾಡಲಾಯಿತು ಆದರೂ ಈ ಶವದ ಚರ್ಮ ಒಣಗಿದೆಯೇ ಹೊರತು ಕೆಟ್ಟಿಲ್ಲ. ಇದರಿಂದಾಗಿ ಇದು 1600 ರಲ್ಲಿ ಇದ್ದ ಸ್ಥಿತಿಯಲ್ಲಿಲ್ಲದೆ ಕ್ಷೀಣಿಸುತ್ತಿದೆ. ಈ ರೀತಿ ಶವಗಳು ಕೆಡದೆ ಇರುವುದು ಇತಿಹಾಸಕ್ಕೆ ಹೊಸದೇನಲ್ಲ ಇದರ ಪ್ರಾಚೀನತೆ ಯನ್ನು ಈಜಿಪ್ಟಿಯನ್ ನಾಗರಿಕತೆಯಷ್ಟು ಹಿಂದಕ್ಕೆ ಗುರುತಿಸಬಹುದಾಗಿದೆ. ಆದರೆ ಅವುಗಳನ್ನು ಸಂರಕ್ಷಿಸಲು ರಾಸಾಯನಿಕ ವಸ್ತುಗಳನ್ನು ಪ್ರಯೋಗಿಸಿರುವುದರ ಬಗೆಗೆ ಖಚಿತವಾದ ಮಾಹಿತಿ ಇದೆ. ಆದರೆ ಕ್ಸೇವಿಯರನ ಶವಕ್ಕೆ ಬೇಗ ಅಳಿಯಲೆಂದು ಸುಣ್ಣ ವನ್ನು ಉಪಯೋಗಿಸಿರುವುದೊಂದನ್ನು ಬಿಟ್ಟರೆ ಬೇರೆ ವಿಧವಾದ ಯಾವುದೇ ರಾಸಾಯನಿಕ ವಸ್ತುಗಳ ಪ್ರಯೋಗದ ಬಗೆಗೆ ಆಧಾರವಿಲ್ಲ. ಇದನ್ನು ದೈವ ನಿಮಿತ್ತವೆಂತಲೂ, ಆತನು ದೈವಾಂಶಸಂಭೂತನೆಂಬ ನಂಬಿಕೆಯನ್ನು ಅಸಂಖ್ಯಾತ ಬಾಂಧವರು ಇಟ್ಟಿರುವುದು ಸಹ ಈ ನಾಡಿನ ಮಣ್ಣಿಗೆ ಹೊಸದೇನಲ್ಲ. ಹಾಗೆಯೇ ಸರಿಸುಮಾರು ಸ್ವಲ್ಪ ಅಚೆ–ಈಚೆ ಮಡಿದ ಮೆಡ್ರಿಡ್‌ನ ಸಂತ ಇಸಿಡೇರಿ, ಸಂತ ಇಗ್ನಿಷಿಯಸ್ ಲೊಯಲ್ಲ, ಸಿರಿಯಾದ ಸಂತ ಫಿಲಿಪ್ ಮತ್ತು ಸಂತ ಥೆರಿಸ್ಸರ ಶವಗಳು ಸಹ ಕೆಡದೆ ಇದ್ದುದನ್ನು ಇಲ್ಲಿ ಸ್ಮರಿಸ ಬಹುದಾಗಿದೆ. ಆದರೂ ಇವುಗಳು ಕ್ರಮೇಣ ಭಕ್ತರ ಭಕ್ತಿಗೆ ಬಲಿಯಾಗಿ ಹಲವಾರು ಶಸ್ತ್ರಪ್ರಯೋಗಕ್ಕೆ ಒಳಗಾಗಿ ಮುಕ್ಕಾಗಿರುವುದು ಸ್ಪಷ್ಟವಾಗಿದೆ. ಈ ಮಹನೀಯರ ಶವ ಗಳು ಕೆಡದಿರುವುದಕ್ಕೆ ಏನೇ ಕಾರಣವಿರಲಿ ಅದು ಇಲ್ಲಿ ಪ್ರಮುಖವಲ್ಲ. ಅವರು ಜೀವಿ ಸಿದ ಬಗೆ, ಗಳಿಸಿದ ಸಾಧನೆ, ಸಂಪಾದಿಸಿದ ಗೌರವ ಶ್ರೀ ಸಾಮಾನ್ಯರ ಏಳ್ಗೆಗೆ ಸರ್ವಸ್ವ ವನ್ನು ತ್ಯಜಿಸಿದ ರೀತಿ, ಎಲ್ಲಕ್ಕೂ ಮಿಗಿಲಾಗಿ ಧರ್ಮ ಸಂಸ್ಕರಣ ಕಾರ್ಯಕ್ಕೆ ತಮ್ಮನ್ನೇ ಅರ್ಪಿಸಿಕೊಂಡ ಬಗೆ ಸರ್ವಕಾಲಕ್ಕೂ ಆದರ್ಶಪ್ರಾಯವಾದುದಾಗಿದೆ. ಅಂತಹ ಮಹಾನ್ ಶಕ್ತಿಗಳ ಸಮೂಹದಲ್ಲಿ ಎದ್ದು ಕಾಣುವ ಕ್ಸೇವಿಯರ್ ನಡೆದಾಡಿದ ನಾಡಿನಲ್ಲಿ ನಾವು ಇರುವುದು ಹೆಮ್ಮೆಯ ಸಂಗತಿ. ಕ್ಸೇವಿಯರ್ ವಿಶ್ವಭ್ರಾತೃತ್ವವನ್ನು ಸ್ಥಾಪಿಸುವ ಸಲು ವಾಗಿ, ಸಂಕಷ್ಟದಲ್ಲಿ ಸಿಲುಕಿರುವ ಶ್ರೀಸಾಮಾನ್ಯನ ಮುಕ್ತಿಯ ಸಲುವಾಗಿ ತನ್ನನ್ನೇ ಅರ್ಪಿಸಿಕೊಂಡು ಇತಿಹಾಸದ ಸೆರಗಿನಲ್ಲಿ ಕರಗಿ ಹೋಗಿದ್ದಾನೆ. ಆದರೂ ಇಂದು ಅವನು ನಮ್ಮ ನೆನಪಿನಲ್ಲಿ ಚಿರಸ್ಥಾಯಿಯಾಗಿರಲೆಂಬ ಅಭಿಲಾಷೆಯಿಂದ ದಶಕಕ್ಕೊಮ್ಮೆ ಏರ್ಪಡಿ ಸುವ ದರ್ಶನದ ಅವಕಾಶ ಕ್ರೈಸ್ತರಿಗೆ ಏಕೆ ಇಡೀ ಮಾನವ ಕುಲಕ್ಕೆ ಸ್ಫೂರ್ತಿಯನ್ನು

ನೀಡುವುದಾದರೆ ಆಗ ನಾವು ಕ್ಸೇವಿಯರನ ಶಿರಕ್ಕೆ ಕಳಶವಿಟ್ಟು ಋಣಮುಕ್ತರಾದಂತೆಯೇ ಸರಿ.

ಪರಾಮರ್ಶಿತ ಗ್ರಂಥಗಳು

Albert Jou. S. J. (1954) ; The Saint on a Mission, Gujarat Sahitya Prakash Anand ; India

Gune. V. C. (1979) ; Gazetteer of the Union territory of Goa, Daman and Diu, Part 1 ; Goa.

Judilia Nunes (1979) ; The monuments in Goa, Agamkala Prakasan ; Delhi

Mariano Dias (1974) ; Rome of the East ; Old Goa, Bom Jesus Basilica ; Old Goa

Rajagopal S. (1982) ; Old Goa, A. S. I. Delhi

P. Rayanna S. J. (1984) ; St. Francis Xavier and his Shrines ; Ranchi ;

ಆರ್. ರಾಮಕೃಷ್ಣ

ಬೆಲ್ಜಿಯಮ್ ದೇಶದ ಭಾಷಾಸಮಸ್ಯೆ

ಪ್ರಪಂಚದ ಪ್ರಚಲಿತ ಸಮಸ್ಯೆಗಳ ಪೈಕಿ ಭಾಷಾಸಮಸ್ಯೆಯೂ ಒಂದು. ಭಾರತದಂಥ ದೊಡ್ಡ ರಾಷ್ಟ್ರಗಳಲ್ಲಿ ಈ ಸಮಸ್ಯೆ ಸಹಜ. ಆದರೆ ಬೆಲ್ಜಿಯಮ್‌ನಂಥ ಪುಟ್ಟ ರಾಷ್ಟ್ರದಲ್ಲೂ ಭಾಷಾಸಮಸ್ಯೆ ಕಂಡುಬಂದಿರುವುದು ಸೋಜಿಗದ ಸಂಗತಿ. ಭಾಷಾ ವೈಷಮ್ಯದ ಜೊತೆಗೆ ಪ್ರಾಂತೀಯ ಪ್ರಭೇದ, ಆರ್ಥಿಕ ಅಸಮತೆ, ಮುಂತಾದ ಅಂಶಗಳು ಬೆಲ್ಜಿಯಮ್ಮಿನ ಪ್ರಮುಖ ಪ್ರಜೆಗಳಾದ ಫ್ಲೆಮಿಷರಲ್ಲೂ ವ್ಯಾಲೂನರಲ್ಲೂ ತೀವ್ರ ಅಸಮಾಧಾನವನ್ನು ಹುಟ್ಟಿಸಿವೆ. ಇದರಿಂದಾಗಿ ಬೆಲ್ಜಿಯಮ್ ಬಿರಿದು ಬೇರೆಯಾಗುವುದೇ ಎಂಬ ಸಂದೇಹಕ್ಕೆ ಎಡೆಮಾಡಿಕೊಟ್ಟಿದೆ.

ಬೆಲ್ಜಿಯಮ್ ಪಶ್ಚಿಮ ಯೂರೋಪಿನಲ್ಲಿರುವ ಒಂದು ಪುಟ್ಟ ದೇಶ. ಪೂರ್ವದಲ್ಲಿ ಪಶ್ಚಿಮ ಜರ್ಮನಿ ಮತ್ತು ಲಕ್ಸೆಂಬರ್ಗ್, ದಕ್ಷಿಣದಲ್ಲಿ ಫ್ರಾನ್ಸ್, ಪಶ್ಚಿಮದಲ್ಲಿ ಉತ್ತರ ಸಮುದ್ರ, ಉತ್ತರ ಮತ್ತು ಈಶಾನ್ಯದಲ್ಲಿ ನೆದರ್ಲೆಂಡ್ಸ್ — ಇದರ ಮೇರೆಗಳು. ದೇಶದ ವಿಸ್ತೀರ್ಣ 30,508 ಚ.ಕಿಮೀ. ಜನಸಂಖ್ಯೆ 9,800,000 (1981). ರಾಜಧಾನಿ ಬ್ರಸೆಲ್ಸ್. ಆಡಳಿತ ಸೌಲಭ್ಯಕ್ಕೆ ಅನುಗುಣವಾಗಿ ದೇಶವನ್ನು ಪಶ್ಚಿಮ ಫ್ಲಾಂಡರ್ಸ್, ಪೂರ್ವ ಫ್ಲಾಂಡರ್ಸ್, ಆಂಟವರ್ಪ್, ಲಿಂಬರ್ಗ್, ಬ್ರಾಬಾನ್, ಹೇನಾಟ್, ಲಿಯಾಷ್, ಲಕ್ಸೆಂಬರ್ಗ್ ಮತ್ತು ನಾಮುದ್ ಎಂಬ ಒಂಭತ್ತು ಪ್ರಾಂತ್ಯಗಳಾಗಿ ವಿಂಗಡಿಸಲಾಗಿದೆ.

ಪ್ರಪಂಚದ ಅತ್ಯಂತ ಜನಸಾಂದ್ರ ದೇಶಗಳಲ್ಲಿ ಬೆಲ್ಜಿಯಂ ದೇಶವೂ ಒಂದು. ಇಲ್ಲಿ ಸರಾಸರಿ ಪ್ರತಿ ಚ.ಕಿಮೀಗೆ ಸುಮಾರು 325 ಮಂದಿ ವಾಸಿಸುತ್ತಾರೆ. ದೇಶದಲ್ಲಿ ಮುಖ್ಯವಾಗಿ ಎರಡು ಭಾಷೆಗಳನ್ನಾಡುವ ಜನ ಇದ್ದಾರೆ. ದೇಶದ ಉತ್ತರ ಭಾಗಗಳಾದ ಪಶ್ಚಿಮ ಫ್ಲಾಂಡರ್ಸ್, ಪೂರ್ವಫ್ಲಾಂಡರ್ಸ್, ಆಂಟವರ್ಪ್ ಮತ್ತು ಲಿಂಬರ್ಗ್ ಪ್ರಾಂತ್ಯಗಳಲ್ಲಿಯ ಜನ ಫ್ಲೆಮಿಂಗರು. ಇವರ ಭಾಷೆ ಫ್ಲೆಮಿಷ್, ಬರಹರೂಪದ ಫ್ಲೆಮಿಷ್, ನೆದರ್ಲೆಂಡ್ಸಿನ ಡಚ್ ಭಾಷೆಯನ್ನು ಹೋಲುತ್ತದೆ. ಆದರೆ ಉಚ್ಚಾರಣೆಯಲ್ಲಿ ತುಂಬಾ ಭಿನ್ನವಾಗಿದೆ. 'ಫ್ಲೆಮಿಷ್', ಡಚ್ ಭಾಷೆಯ ಉಪಭಾಷೆ' ಎಂಬುದಾಗಿ ಅಭಿಪ್ರಾಯ

ಪಟ್ಟಿರುವುದೂ ಉಂಟು. ದಕ್ಷಿಣ ಭಾಗಗಳಾದ ಹೇನಾಟ್, ಲಿಯಾಷ್, ಲಕ್ಸೆಂಬಗ್ ಮತ್ತು ನಾಮುರ್ ಪ್ರಾಂತ್ಯಗಳಲ್ಲಿಯ ಜನ ವ್ಯಾಲೂನರು. ಇವರ ಭಾಷೆ ಫ್ರೆಂಚ್. ದೇಶದ ಮಧ್ಯಭಾಗದಲ್ಲಿಯ ಬ್ರಾಬಾನ್ ದ್ವಿಭಾಷಿಕ ಕ್ಷೇತ್ರ. ಇಲ್ಲಿ ಫ್ಲೆಮಿಷ್ ಮತ್ತು ಫ್ರೆಂಚ್ ಭಾಷೆಗಳೆರಡೂ ಬಳಕೆಯಲ್ಲಿವೆ. ರಾಜಧಾನಿ ಬ್ರಸೆಲ್‌ನ 5/4 ಫ್ರೆಂಚ್ ಮಾತಾಡುವವರೂ 5/1 ಫ್ಲೆಮಿಷ್ ಮಾತಾಡುವವರೂ ಇದ್ದಾರೆ.

ಇತಿಹಾಸದ ಉದ್ದಕ್ಕೂ ಬೆಲ್ಜಿಯಮ್ಮನ್ನು ಪರಕೀಯರಾದ ರೋಮನ್ನರು, ಬರ್ಗಂಡಿಯನ್ನರು, ಸ್ಪೇನರು, ಆಸ್ಟ್ರಿಯನ್ನರು, ಫ್ರೆಂಚರು, ಜರ್ಮನೀಯರು ನಿಯಂತ್ರಿಸಿದ್ದಾರೆ. ಇವರೆಲ್ಲರ ಆಕ್ರಮಣದಿಂದ ಬೆಲ್ಜಿಯಮ್ ಪ್ರಜೆಗಳು ಅನುಭವಿಸಿದ ತೊಂದರೆಗಳು ಅನೇಕ. ಬಹಳ ಹಿಂದಿನಿಂದಲೂ ಫ್ರೆಂಚ್ ಭಾಷೆ ಪ್ರತಿಷ್ಠಿತರ ಅಧಿಕಾರದಲ್ಲಿ ಇರುವವರ ಭಾಷೆಯಾಗಿತ್ತು. ನೆದರ್‌ಲ್ಯಾಂಡ್ಸಿನ ದೊರೆ ವಿಲಿಯಮ್ ಎಂಬಾತನ ವಿರುದ್ಧ ಬೆಲ್ಜಿಯಮ್ ದೇಶದ ಜನರ ಬಂಡಾಯ ಸೇನೆಯ ಮುಂಭಾಗದಲ್ಲಿ ಇದ್ದವರು ಫ್ರೆಂಚ್ ಭಾಷೆಯನ್ನು ಆಡುವವರು. ಒಂದನೆಯ ಮಹಾಯುದ್ಧದ ಸಮಯದಲ್ಲಿ ಫ್ರೆಂಚ್ ಮತ್ತು ಫ್ಲೆಮಿಷರ ನಡುವೆ ಅಂತಃಕಲಹವನ್ನು ತಂದವರು ಜರ್ಮನರು. ಆ ವೇಳೆಯಲ್ಲಿ ಸಿಪಾಯಿಗಳಿಗೆ ಫ್ಲೆಮಿಷ್ ಭಾಷೆ ಮಾತ್ರ ಗೊತ್ತಿತ್ತು. ಸೈನ್ಯಾಧಿಕಾರಿಗಳಿಗೆ ಫ್ರೆಂಚ್, ಇಂಗ್ಲಿಷ್ ಬಿಟ್ಟು ಬೇರೆ ಯಾವ ಭಾಷೆಯೂ ಗೊತ್ತಿರಲಿಲ್ಲ. ಆದುದರಿಂದ ಸೈನ್ಯದಲ್ಲಿ ಸಾಮರಸ್ಯ ಉಂಟಾಗದೇ ಬಂಡಾಯ ಆದೀತು ಎಂಬ ಶಂಕೆಯಿತ್ತು. ಆದರೆ ಯುದ್ಧ ಮುಗಿದು ದೇಶಕ್ಕೆ ಸ್ವಾತಂತ್ರ್ಯ ದೊರಕಿದ ಬಳಿಕ ಅನೇಕ ಗಮನಾರ್ಹ ಬದಲಾವಣೆಗಳಾದುವು. ಭಾಷಿಕವಾಗಿ ಸಾಮಾಜಿಕವಾಗಿ ಶೋಷಿತರಾದ ಜನ ಎಚ್ಚೆತ್ತರು. ರಾಜಕಾರಣಿಗಳೂ ಪ್ರತಿಷ್ಠಿತ ವ್ಯಕ್ತಿಗಳೂ ತಮ್ಮ ಸಾಮಾಜಿಕ ಸ್ಥಾನಮಾನಗಳನ್ನು ಉಳಿಸಿಕೊಳ್ಳಲು ಭಾಷಾಸಂಗ್ರಾಮವನ್ನೇ ನಡೆಸಿ ಸಫಲರಾದರು. ದೇಶದ ಉತ್ತರ ಪ್ರಾಂತ್ಯಗಳು ಫ್ಲೆಮಿಷ್ ಭಾಷೆಯನ್ನೂ ದಕ್ಷಿಣ ಪ್ರಾಂತ್ಯಗಳು ಫ್ರೆಂಚ್ ಭಾಷೆಯನ್ನೂ ಅಧಿಕೃತ ಭಾಷೆಗಳನ್ನಾಗಿ ಆಯ್ಕೆ ಮಾಡಿಕೊಂಡವು. ಇದರ ಪರಿಣಾಮವಾಗಿ ಇವೆರಡೂ ಪ್ರಾಂತ್ಯಗಳ ನಡುವೆ ಸ್ಪಷ್ಟ ಗೆರೆ ಉಳಿದುಕೊಂಡಿದೆ.

ಫ್ಲೆಮಿಷ್ ಭಾಷೆಯನ್ನಾಡುವ ಪ್ರದೇಶಗಳಲ್ಲಿ ವ್ಯಾಲೂನರಿಗೆ ಸ್ಥಳಾವಕಾಶವಿಲ್ಲ. ಅಲ್ಲಿಯ ಸಾರ್ವಜನಿಕವಾದ ಪ್ರತಿಯೊಂದು ವ್ಯವಹಾರವೂ ಫ್ಲೆಮಿಷ್ ಭಾಷೆಯಲ್ಲೇ ನಡೆಯುತ್ತದೆ. ತೀವ್ರ ಭಾಷಾಭಿಮಾನದಿಂದ 1930ರಲ್ಲಿ ಘೆಂಟ್ ವಿಶ್ವವಿದ್ಯಾನಿಲಯವನ್ನು ಫ್ಲೆಮಿಷ್ ವಿಶ್ವವಿದ್ಯಾಲಯವೆಂದು ಹೆಸರಿಸಲಾಯಿತು. ಫ್ಲೆಮಿಷ್ ಮಂದಿಯೇ ಹೆಚ್ಚಾಗಿ ಇರುವ ಲುವೆಯನ್ ವಿಶ್ವವಿದ್ಯಾಲಯದಲ್ಲಿ ಫ್ರೆಂಚ್ ಭಾಷಾವಿಭಾಗ ಇರಕೂಡದೆಂದು ವಾದಿಸುತ್ತಿರುವ ರಾಜತಾಂತ್ರಿಕರಿದ್ದಾರೆ. ಫ್ರೆಂಚ್ ಬಲ್ಲ ವಕೀಲನೊಬ್ಬ ಫ್ಲೆಮಿಷ್ ಪ್ರದೇಶದಲ್ಲಿ ಕಾರೊಂದನ್ನು ಕೊಳ್ಳಲು ಸಾಧ್ಯವಾಗಲಿಲ್ಲ. ಕಾರಣ ಕಾರಿಗೆ ಸಂಬಂಧಿಸಿದ ವಿಚಾರಗಳು ಫ್ಲೆಮಿಷ್ ಭಾಷೆಯಲ್ಲಿ ಇತ್ತು. ಫ್ರೆಂಚ್ ಭಾಷೆಯಲ್ಲಿ ಕಾರಿನ ವಿವರಗಳನ್ನು ಒದಗಿಸಲು ಕೇಳಿದ ವಕೀಲನಿಗೆ ಅಧಿಕಾರಿಗಳಿಂದ ದೊರೆತ

ಉತ್ತರ : ಸ್ವಾಮಿ, ಇದು ಫ್ಲೆಮಿಷ್ ಪ್ರಾಂತ್ಯ. ಭಾಷಾ ವಿಷಯವಾಗಿ ವ್ಯಾಲೂನ ರೇನೂ ಹಿಂದೆ ಬಿದ್ದಿಲ್ಲ. ಅವರ ದೈನಂದಿನ ಎಲ್ಲ ವ್ಯವಹಾರವೂ ಆಡಳಿತವೂ ಫ್ರೆಂಚ್ ಭಾಷೆಯಲ್ಲೇ ನಡೆಯುತ್ತದೆ. ವ್ಯಾಲೂನರ ವ್ಯಾಪ್ತಿಯಲ್ಲಿ ಇರುವ ವಿಶ್ವವಿದ್ಯಾಲಯದಲ್ಲಿ ಸಂಶೋಧನೆ ನಡೆಸುತ್ತಿರುವ ವಿದ್ಯಾರ್ಥಿ ತನ್ನ ಪ್ರಾಧ್ಯಾಪಕರೊಡನೆ ಫ್ರೆಂಚ್ ಭಾಷೆಯಲ್ಲೇ ವಿಚಾರ ವಿನಿಮಯವನ್ನು ನಡೆಸಬೇಕು !

ಉತ್ತರ ದಕ್ಷಿಣ ಪ್ರಾಂತ್ಯಗಳ ಪಾಡು ಇಂತಾದರೆ, ದ್ವಿಭಾಷಿಕವಾದ ಕ್ಷೇತ್ರವಾದ ಬ್ರಾಬಾನ್‌ನಲ್ಲಿಯ ಜನರ ಸ್ಥಿತಿಗತಿ ತುಂಬಾ ಶೋಚನೀಯ. ಭಾಷೆಯ ಕಾರಣ ದಿಂದಾಗಿ ಫ್ಲೆಮಿಷರಿಗೂ ವ್ಯಾಲೂನರಿಗೂ ಅಲ್ಲಿ ನಿತ್ಯಯುದ್ಧ, ರಕ್ತಪಾತ.

ಆಂಟವರ್ಪ್ ಪ್ರಮುಖ ಬಂದರು. ಇತರ ದೇಶಗಳೊಡನೆ ಆಮದು ರಫ್ತು ವ್ಯಾಪಾರ ಅಲ್ಲಿ ಚೆನ್ನಾಗಿ ನಡೆಯುತ್ತದೆ. ರಾಜಧಾನಿಯಾದ ಬ್ರಸೆಲ್ಸ್ ಸುಂದರ ನಗರ. ಅದೊಂದು ಪುಟ್ಟ ಪ್ಯಾರಿಸ್, ಉತ್ತರ ಸಮುದ್ರದಿಂದ ಸುಮಾರು 90 ಕಿ.ಮೀ ಅಂತರ ದಲ್ಲಿದೆ.

ಬ್ರಸೆಲ್ಸ್ ಪ್ರಮುಖ ರೈಲ್ವೆ ಕೇಂದ್ರ. ಕಲೆ, ಕೈಗಾರಿಕೆ, ವಾಣಿಜ್ಯಗಳ ತೌರು. ದೇಶದ ಉತ್ತರ ಭಾಗಗಳಲ್ಲಿರುವ ಆಂಟ್‌ವರ್ಪ್ ಮತ್ತು ಬ್ರಸೆಲ್ಸ್, ಬೆಲ್ಜಿಯಮ್ಮಿನ ಎರಡು ಕಣ್ಣುಗಳಂತಿದ್ದು ದೇಶದ ಆರ್ಥಿಕ ಶ್ರೀಮಂತಿಕೆಗೆ ಬಹುಮಟ್ಟಿಗೆ ಕಾರಣವಾಗಿರು ವುದರಿಂದ ದಕ್ಷಿಣದ ಪ್ರಾಂತ್ಯಗಳ ಕಣ್ಣುರಿ. ಬ್ರಸೆಲ್ಸಿನಲ್ಲಿರುವ ವ್ಯಾಲೂನರು, ಫ್ಲೆಮಿಷ್ ರೊಡನೆ ನಡೆಸುವ ನಿತ್ಯ ಜಗಳವಲ್ಲಿ ದಕ್ಷಿಣ ವ್ಯಾಲೂನರ ಕೈವಾಡವಿದೆಯೆಂದು ಫ್ಲೆಮಿಷರ ಆರೋಪ. ಈ ಕಾರಣದಿಂದ ವ್ಯಾಲೂನರಿಗೆ ತೀವ್ರ ಅಸಮಾಧಾನ. ಹಾಗಾಗಿ ಸರ್ಕಾರದ ಮುಖ್ಯಸ್ಥ ಹಾಗೂ ಈಗಿನ ದೊರೆ ಬೋದ್ವಾನ್ ತನಕ ದೂರು. ಸಮಸ್ಯೆಗಳ ಸುಳಿಯಲ್ಲೇ ಸುತ್ತುತ್ತಿರುವ ಈ ದೊರೆ, 'ಸಾಮಾಜಿಕ ಜೀವನದಲ್ಲಿ, ಸಾಂಸ್ಕೃತಿಕ ವಲಯಗಳಲ್ಲಿ ಶೈಕ್ಷಣಿಕ ಕ್ಷೇತ್ರಗಳಲ್ಲಿಯ ಭಾಷಾ ಸಮಸ್ಯೆಯ ಬಗ್ಗೆ ತನ್ನ ಮಕ್ಕಳಲ್ಲಿ (ಪ್ರಜೆಗಳಲ್ಲಿ) ಜಗಳವಾದರೆ ಯಾರ ಪಕ್ಷವನ್ನು ವಹಿಸಲು ಸಾಧ್ಯವಾದೀತು ?

1980ರ ಅನಂತರ ವರ್ಷಗಳಲ್ಲಿ ಬೆಲ್ಜಿಯಮ್ ದೇಶದ ಭಾಷಾಸಮಸ್ಯೆ ರಾಜ ಕೀಯ ಸ್ಪರ್ಶದಿಂದ ಉಲ್ಬಣಾವಸ್ಥೆ ತಲುಪಿದೆ. ಅಲ್ಲಿಯ ಪಾರ್ಲಿಮೆಂಟ್ ಸದಸ್ಯರಾದ ಜೋಸೆಫ್ ಡೂಪ್ರೆಯವರು ಉದ್ವೇಗದಿಂದ ಹೀಗೆ ಹೇಳುತ್ತಾರೆ ; "ನಮ್ಮ ನರನಾಡಿ ಗಳಲ್ಲಿ ಹರಿಯುತ್ತಿರುವ ರಕ್ತ ಫ್ಲೆಮಿಷ್ ; ನಮ್ಮ ರಾಷ್ಟ್ರೀಯತೆ ಫ್ಲೆಮಿಷ್ ; ಫ್ಲೆಮಿಷ್ ರಾದ ನಾವು ಬೆಲ್ಜಿಯಮ್ ರಾಷ್ಟ್ರೀಯತೆಯನ್ನು ಹೊಂದಿದ್ದೇವೆಂದು ಹೇಳಿಕೊಳ್ಳಲು ಖಂಡಿತ ಇಷ್ಟಪಡುವುದಿಲ್ಲ." ಈ ಮಾತುಗಳಿಂದ ಉತ್ತೇಜಿತರಾದ ಇತರ ಫ್ಲೆಮಿಷ್ ರಾಜಕಾರಣಿಗಳ ಒಕ್ಕೊರಲ ಕೂಗಿದು : "ಬೆಲ್ಜಿಯಮ್ ದೇಶ ವಿಭಜನೆಯಾಗಲಿ, ಫ್ಲೆಮಿಷ್‌ರೊಡನೆ ವ್ಯಾಲೂನರ ಸಂಪರ್ಕವೇ ಬೇಡ, ವ್ಯಾಲೂನ್ ಪ್ರಾಂತ್ಯಗಳು ಫ್ರಾನ್ಸಿನೊಡನೆ ಸೇರಿಕೊಳ್ಳಲಿ, ಅಭಿವೃದ್ಧಿ ಸಾಧಿಸಲಿ".

ನಿಜ, ಒಗ್ಗಟ್ಟಿನಲ್ಲಿ ಬಲವಿದೆ . . . !

ಕನ್ನಡ ಭಾಷಾ ಪ್ರದೇಶವನ್ನು ಗಮನಿಸಿ ಸೂಕ್ಷ್ಮವಾಗಿ ಪರಿಶೀಲಿಸಿದಾಗ ಅದರಲ್ಲಿ ಅನೇಕ ಬಗೆಯ ಭಾಷಾ ಪ್ರಭೇದಗಳು ಕಾಣಿಸಿಕೊಳ್ಳುತ್ತವೆ. ಇವುಗಳಲ್ಲಿ ಮುಖ್ಯವಾಗಿ ಮೈಸೂರು ಕನ್ನಡ, ಕರಾವಳಿ ಕನ್ನಡ, ಧಾರವಾಡ ಕನ್ನಡ, ಗುಲ್ಬರ್ಗ ಕನ್ನಡ — ಎಂಬ ನಾಲ್ಕು ಉಪ ಭಾಷಾಪ್ರಭೇದಗಳನ್ನು ಗುರುತಿಸಬಹುದು. ಈ ಪ್ರಭೇದಗಳನ್ನು ಪ್ರಾದೇಶಿಕವಾಗಿ ಹಾಗೂ ಸಾಮಾಜಿಕವಾಗಿ ಪರಿಶೀಲಿಸಲು ಹೊರಟಾಗ ಇವುಗಳಲ್ಲೇ ಎಷ್ಟೋ ಬಗೆಯ ಒಳ ಪ್ರಭೇದಗಳು ಇರುವುದು ಕಂಡು ಬರುತ್ತದೆ.

. . . . ಮೈಸೂರು ಕನ್ನಡದ ವಿದ್ಯಾವಂತರ ಹಾಗೂ ಅವಿದ್ಯಾವಂತರ ಭಾಷೆಗಳ ನಡುವೆ ವ್ಯಾಕರಣ ವಿಚಾರಗಳಲ್ಲಿ ಕೇವಲ ಸ್ವಲ್ಪ ಅಂತರ ಕಂಡುಬರುತ್ತದೆ. ಉದಾ : ಅವನು→ಅವ್ನು, ಅವ ; ಮಾಡುತ್ತೇನೆ→ಮಾಡ್ತೇನೆ, ಮಾಡ್ತೀನಿ ಇತ್ಯಾದಿ. ಇತರ ಉಪಭಾಷಾ ಪ್ರಭೇದಗಳಲ್ಲವೆ ಆಂತರಿಕ ವಿಭಿನ್ನತೆ ಇರುವುದುಂಟು.

— ೦ — ೦ — ೦ —

ಧಾರವಾಡ ಕನ್ನಡ ಪ್ರಭೇದದಲ್ಲಿ 'ಎ'ಕಾರಾಂತ ಪದಗಳು 'ಇ'ಕಾರಾಂತವಾಗುತ್ತವೆ ಉದಾ : ಮನೆ→ಮನಿ, ದೋಸೆ→ದ್ವಾಸಿ. ಗುಲ್ಬರ್ಗ ಕನ್ನಡದಲ್ಲಿ ಉರ್ದು, ಮರಾಠೀ ಮತ್ತು ಸಂಸ್ಕೃತಗಳ ಪ್ರಭಾವ ತೀವ್ರತರವಾಗಿದೆ.

— ೦ — ೦ — ೦ —

ಉಪಭಾಷೆಗಳಲ್ಲಿ ಮೇಲೆ ಸೂಚಿಸಲಾದ ಪ್ರಾದೇಶಿಕ ಉಪ ಭಾಷೆಗಳ ಜೊತೆಗೆ ಆಯಾ ವಿಶಿಷ್ಟ ಸಮುದಾಯಕ್ಕೆ ಸೇರಿದ ಉಪಭಾಷೆಗಳೂ ಇವೆ. ಸೋಲಿಗ, ಬಡಗ, ಹವ್ಯಕ, ಕುರುಬ ಇತ್ಯಾದಿ ಭಾಷೆಗಳು ಈ ಗುಂಪಿಗೆ ಸೇರುತ್ತವೆ.

ಕರ್ನಾಟಕ ವಿಷಯ ವಿಶ್ವಕೋಶದ 'ಕನ್ನಡ ಉಪಭಾಷೆಗಳು'
ಲೇಖನದ ಆಧಾರಿತ

ಅನ್ನಪೂರ್ಣಾ ಎಂ. ನಾಯಕ್

ರಾಜಪರಿವಾರದವರು

ಮೈಸೂರು ಜಿಲ್ಲೆಯ ಗುಂಡ್ಲುಪೇಟೆ, ಚಾಮರಾಜನಗರ, ನಂಜನಗೂಡು, ಕೊಳ್ಳೇಗಾಲ, ಹೆಗ್ಗಡದೇವನಕೋಟೆ, ಹುಣಸೂರು, ಯಳಂದೂರು, ಪಿರಿಯಾಪಟ್ಟಣ, ಕೃಷ್ಣರಾಜನಗರ ತಾಲ್ಲೂಕುಗಳಲ್ಲಿ ರಾಜಪರಿವಾದವರೆಂಬ ಜನಾಂಗ ಕಂಡುಬರುತ್ತಾರೆ. 1981ರ ಜನಗಣತಿಯ ಪ್ರಕಾರ ಇವರ ಒಟ್ಟು ಜನಸಂಖ್ಯೆ 1,66,649, ಇವರು ತಮ್ಮನ್ನು ರಾಜಪರಿವಾರ, ಪರಿವಾರ, ರಾಜಪರಿವಾರ ನಾಯಕ, ನಾಯಕ, ಪಾಳೆಯಗಾರರೆಂತಲೂ ಕರೆದುಕೊಳ್ಳುತ್ತಾರೆ. ಈ ಜನಾಂಗದವರು ಅವರ ಹೆಸರಿನ ಮುಂದೆ "ನಾಯಕ" ಎಂಬ ಗೌರವ ಸೂಚಕ ಉಪನಾಮವನ್ನು ಸೇರಿಸಿಕೊಂಡಿರುತ್ತಾರೆ.

ರಾಜಪರಿವಾರದವರ ಬಗ್ಗೆ ಖಚಿತವಾಗಿ ಹೇಳಲು ಆಧಾರಗಳು ಸಿಕ್ಕುವುದು ಕಷ್ಟ. ರಾಜಪರಿವಾರದವರು ನಾವು ಕ್ಷತ್ರಿಯರು, ಹಿಂದೆ ರಾಜ್ಯವಾಳಿದ ಜನ ಮತ್ತು ರಾಜನ ಪರಿಚಾರಕರಲ್ಲಿ ಹೆಚ್ಚಾಗಿ ನಮ್ಮ ಜಾತಿಯವರೇ ಇದ್ದದ್ದು ಎನ್ನುತ್ತಾರೆ. ಕತ್ತಿ, ಗುರಾಣಿ, ಈಟಿ, ಭರ್ಜಿ, ಹಿಡಿಯುವುದು ಅವುಗಳ ಬಳಕೆ ಇವರಿಗೆ ಗೊತ್ತಿರುವಂತೆ ಇತರ ಜನಾಂಗದವರಿಗೆ ಅಷ್ಟಾಗಿ ಗೊತ್ತಿಲ್ಲ.

ಅನಂತಕೃಷ್ಣ ಅಯ್ಯರ್ ಅವರ The Mysore Tribes and Castes ಪುಸ್ತಕದ 4ನೇ ಸಂಪುಟದ 471ನೇ ಪುಟದಲ್ಲಿ ಹೀಗಿದೆ. "ಈ ಜಾತಿಯ ನಿಜವಾದ ಮಹತ್ವ ಸ್ವಲ್ಪ ಸಮಸ್ಯಾದಾಯಕವಾಗಿದೆ. 'ಪರಿವಾರದ ಪದದ ಅರ್ಥ 'ಸೈನ್ಯ' ಅಥವಾ ಹಿಂಬಾಲಕರು ಎಂದಾಗುತ್ತದೆ ಮತ್ತು ಈ ಪಂಗಡದವರು ಹಿಂದಿನ ಕಾಲದಲ್ಲಿ ಯೋಧರಾಗಿದ್ದರೆಂದು ಹೇಳಲಾಗಿದೆ. ಈ ಜಾತಿಯವರು ಮರವನ್, ಅಗಮುಡಿಯನ್ ಪಂಗಡಗಳ ಒಂದು ಸಗೋತ್ರ ವಿವಾಹ ಪದ್ಧತಿಯನ್ನು ಅನುಸರಿಸುವ ಗುಂಪಾಗಿರುತ್ತಾರೆ. ಮಧುರೈ ಮತ್ತು ತಿರುಚಿರಾಪಳ್ಳಿಯ ಪರಿವಾರರು ಮರವನ್ ಪಂಗಡದವರಿಂದ ಉಗಮ ಹೊಂದಿದವರೆನ್ನಲಾಗಿದೆ." 1901ರ ಜನಗಣತಿಯಲ್ಲಿ ಪರಿವಾರದವರ ಬಗ್ಗೆ ಈ ರೀತಿ ಬರೆದಿದೆ, "ಪರಿವಾರ"ವೆಂಬ ಪದ ಹಿಂಬಾಲಕ ಎಂಬ ಅರ್ಥವನ್ನು ಹೊಂದಿದೆಯೆಂದೂ, ಕೊಯಮತ್ತೂರು, ತಿರುಚಿರಾಪಳ್ಳಿ ಮತ್ತು ಮಧುರಾ ಜಿಲ್ಲೆಗಳ ತೋಟ್ಟಿಯ ಜಮೀನು

ದಾರರುಗಳ ಮನೆಗೆಲಸದವರಿಗೆ ಅನ್ವಯಿಸುವ ಒಂದು ವೃತ್ತಿನಾಮವೆಂದೂ ಹೇಳಲಾಗಿದೆ. ಮೈಸೂರು ಪ್ರದೇಶದ ಪರಿವಾರರು ಬಹುಶಃ ಈ ತಮಿಳು ಪ್ರದೇಶಗಳಿಂದ ವಲಸೆ ಬಂದವರ ಸಂತತಿಯಾಗಿರಬಹುದು.

ರಾಜಪರಿವಾರದವರು ನಾವು ರಾಜ್ಯವಾಳಿದ ಜನ ಎಂದು ಹೇಳಿಕೊಳ್ಳುವುದಕ್ಕೆ ಆಧಾರಗಳು ಈ ರೀತಿ ಇವೆ. ಬಿಳಿಗಿರಿರಂಗನ ಬೆಟ್ಟದ ರಂಗಪ್ಪನಾಯಕ, ಗೋಪಾಲಸ್ವಾಮಿ ಬೆಟ್ಟದ ದಣಾಯಕ, ಕಾರುಗಳ್ಳಿಯ ಮಾರನಾಯಕ, ಯಳಂದೂರಿನ ದೊಡ್ಡ ರಾಮರಾಜನಾಯಕ ಮುಂತಾದ ಪಾಳೆಯಗಾರರು ಈ ಜನಾಂಗಕ್ಕೆ ಸೇರಿದವರಾಗಿದ್ದರು. ಈ ಪಾಳೆಯಗಾರರು ಸಣ್ಣ ಸಣ್ಣ ಸಂಸ್ಥಾನಗಳನ್ನು ಕಟ್ಟಿಕೊಂಡು ರಾಜ್ಯಭಾರ ಮಾಡುತ್ತಿದ್ದರು. ಇನ್ನಲ್ಲದೆ ರಾಜಪರಿವಾರದವರೇ ಹೇಳುವಂತೆ ಇವರು ಹಿಂದೆ ಕಾಡುಗಳಲ್ಲಿ ವಾಸಿಸುತ್ತ ಬೇಟೆಯನ್ನು ಮುಖ್ಯ ಕಸುಬನ್ನಾಗಿ ಮಾಡಿಕೊಂಡು ಜೀವಿಸುತ್ತಿದ್ದರು. ಮತ್ತು ಕೇರಳ ಕಡೆಯ ಪೊರೆಯರೇ ಇಲ್ಲಿನ ಪರಿವಾರದವರು ಎನ್ನುವವರೂ ಇದ್ದಾರೆ. ಇದಕ್ಕೆ ಪೂರಕವಾಗಿ ಎನ್. ಸುಬ್ರಮಣ್ಯನ್ ಅವರ "Sangam Polity" ಪುಸ್ತಕದಲ್ಲಿ ಈ ರೀತಿ ಹೇಳಲಾಗಿದೆ. "ಚೇರರ ಪ್ರದೇಶ ಮಲೆನಾಡು ಮತ್ತು ಅವರ ಲಾಂಛನ ಬಿಲ್ಲು (ಇದು ಬೇಟೆಗಾರರಿಗೆ ಬಹಳ ಅಗತ್ಯವಾದುದು.) ಚೇರರು ವಿಲ್ಲವರ್ (ಬಿಲ್ಲಿನವರು) : ಏಕೆಂದರೆ ಅವರು ಬೇಟೆಗಾರರು ಅಥವಾ ಬಿಲ್ಲನ್ನು ಬಳಸುತ್ತಿದ್ದವರು. ಪೊರ್ಪೈ ಅಥವಾ ಮಲೈ ಸಹ ಚೇರರಿಗೆ ಸಮಾನಾರ್ಥ ಪದಗಳು — ಇವೆರಡು ಪದಗಳಿಗೆ ಬೆಟ್ಟವೆಂದು ಅರ್ಥ. ಸಹಜವಾಗಿಯೇ ಪರ್ವತ ಪ್ರದೇಶದ ಅಧಿಪತಿಗಳಾಗಿದ್ದ ಚೇರರನ್ನು ಪೊರ್ಪೈಯರ್ ಅಥವಾ ಮಲೈಯರ್ ಎಂದೂ ಕರೆಯಲಾಗುತ್ತಿತ್ತು." ಚೇರರು ಅವನತಿ ಹೊಂದಿದ ಮೇಲೆ ಕರ್ನಾಟಕದ ಗುಂಡ್ಲುಪೇಟೆ, ಚಾಮರಾಜನಗರ ಮತ್ತು ನಂಜನಗೂಡು ಕಡೆ ಬಂದು ನೆಲೆಸಿದರು. ಹೀಗೆ ಈ ಕಡೆಗಳಲ್ಲಿ ನೆಲೆಸಿದವರೆಲ್ಲ ರಾಜಪರಿವಾರದವರೆಂದು ಕರೆದುಕೊಳ್ಳುತ್ತಾರೆ ಎಂಬುದು ಕೆಲವರ ಅಭಿಪ್ರಾಯ.

ರಾಜಪರಿವಾರದ ಒಂದು ಪಂಗಡದವರು ತಾವು ಬೇಡರ ಜಾತಿಗೆ ಸೇರಿದವರೆಂದು ಮತ್ತೊಂದು ಪಂಗಡದವರು ತಾವು ಬೆಸ್ತರ ಜಾತಿಗೆ ಸೇರಿದವರೆಂದು ಹೇಳುತ್ತಾರೆ. ಆದರೆ ರಾಜಪರಿವಾರ ಸಂಘದ ಅಧ್ಯಕ್ಷ, ಕಾರ್ಯದರ್ಶಿ ಮತ್ತು ಇತರ ಮುಖ್ಯಸ್ಥರ ಪ್ರಕಾರ ರಾಜಪರಿವಾರದವರಿಗೂ ಬೆಸ್ತರಿಗೂ ಯಾವ ಸಂಬಂಧವೂ ಇಲ್ಲ. ಚಾಮರಾಜನಗರ, ಯಳಂದೂರು, ಕೊಳ್ಳೇಗಾಲ, ಹುಣಸೂರು, ಪಿರಿಯಾಪಟ್ಟಣ ಮುಂತಾದ ಕಡೆಗಳಲ್ಲಿ ರಾಜಪರಿವಾರ ಮತ್ತು ಬೆಸ್ತರು ಒಟ್ಟಿಗೆ ಕಂಡು ಬಂದರೂ ಇಬ್ಬರೂ ಬೇರೆ ಬೇರೆಯಾಗಿಯೇ ವಾಸಿಸುತ್ತಿದ್ದಾರೆ, ಬೆಸ್ತರು ವಾಸಿಸುವ ಬೀದಿಗೆ ಬೆಸ್ತಗೇರಿಯೆಂತಲೂ, ರಾಜಪರಿವಾರದವರು ವಾಸಿಸುವ ಬೀದಿಗೆ ಪರಿವಾರ ಬೀದಿ ಎಂದೂ ಈಗಲೂ ಕರೆಯಲಾಗುತ್ತದೆ. ಈ ಮುಖಂಡರುಗಳ ಅಭಿಪ್ರಾಯದಂತೆ ರಾಜಪರಿವಾರದವರ ಆಚಾರ, ವಿಚಾರ, ಮತನಂಬಿಕೆ ಎಲ್ಲವೂ ಬೇಡರಿಗೆ ಹೆಚ್ಚಾಗಿ ಹೋಲುತ್ತವೆ ಎನ್ನುತ್ತಾರೆ.

ರಾಜಪರಿವಾರದವರು ಬೇಡರ ಗುಂಪಿಗೆ ಸೇರಿದವರೆಂದು ಹೇಳಲು ಐತಿಹಾಸಿಕ

ವಾಗಿಯೂ ಕೂಡ ಕೆಲವು ಆಧಾರಗಳಿವೆ. ವಾಸುದೇವ ಕೆರೂರ ಅವರ 'ಯದುಮಹಾ ರಾಜ" ಪುಸ್ತಕದಲ್ಲಿ ಕಾರುಗಳ್ಳಿಯ ಮಾರನಾಯಕನು ಸುರಪುರದ ರಾಜ ವೆಂಕಟಪ್ಪ ನಾಯಕನ (ಈ ರಾಜ ಬೇಡರವನು) ಸೋದರಳಿಯ ಎಂದು ಬರೆದಿದ್ದಾರೆ. 15 ನೇ ಶತಮಾನದಲ್ಲಿ ಮೈಸೂರು ಸಂಸ್ಥಾನಕ್ಕೆ ಸೇರಿದ ಹದಿನಾಡು ರಾಜರು ಅಷ್ಟು ಪ್ರಬಲ ರಾಗಿರಲಿಲ್ಲ. ಪಕ್ಕದ ಹಳ್ಳಿಯಾದ ಕಾರುಗಳ್ಳಿಯ ಮಾರನಾಯಕನು ಆಗ ಬಹಳ ಬಲ ಶಾಲಿಯಾಗಿದ್ದನು. ಹದಿನಾಡು ರಾಜನುನೆತನದ ಮಗಳನ್ನು ಮದುವೆ ಮಾಡಿಕೊಳ್ಳಲು ಮಾರನಾಯಕನು ಕೇಳಿದ್ದರಿಂದ ರಾಜಪರಿವಾರದವರು ತಮ್ಮ ಜಾತಿಯನ್ನು ಹೇಳುವಾಗ ನಾವು ರಾಜರ ಮನೆತನಕ್ಕೆ ಸೇರಿದವರು; ಆದ್ದರಿಂದಲೇ ನಾವು ರಾಜಪರಿವಾರದವರೆಂದು ಕರೆಸಿಕೊಳ್ಳುವುದು ಎನ್ನುತ್ತಾರೆ. ಯಳಂದೂರಿನ ಪಾಳೆಯಗಾರನಾಗಿದ್ದ ದೊಡ್ಡ ರಾಮರಾಜ ನಾಯಕನು ಶ್ರೀರಂಗಪಟ್ಟಣದ ಶ್ರೀರಂಗನಾಯಕನ ಸಂಬಂಧಿಕನೆಂದು ಯಳಂದೂರಿನಲ್ಲಿ ದೊರೆತಿರುವ ಒಂದು ಶಾಸನದ ಪ್ರಕಾರ ತಿಳಿದುಬರುತ್ತದೆ.

ಸಾಮಾನ್ಯವಾಗಿ ಇವರ ಕಸಬು ಎಲೆತೋಟ ಮಾಡುವುದು, ಬೀಡಿ ಕಟ್ಟುವುದು, ವ್ಯವಸಾಯ ಮತ್ತು ದೊಡ್ಡ ಜಮೀನುದಾರರ ಹತ್ತಿರ ಜೀತದಾಳುಗಳಾಗಿ ದುಡಿಯು ವುದು ಮುಂತಾದವು. ಮೈಸೂರಿನ ಚಾಮುಂಡೇಶ್ವರಿ ಬೆಟ್ಟದಲ್ಲಿ ನೆಲೆಸಿರುವ ರಾಜಪರಿ ವಾರದ ಹೆಂಗಸರು ಚಾಮುಂಡೇಶ್ವರಿ ದೇವಸ್ಥಾನದ ಹೊರಗೆ ಭಕ್ತಾದಿಗಳಿಗೆ ಪೂಜಾ ಸಾಮಾನುಗಳನ್ನು ಮಾರುವುದು ಮತ್ತು ಗಂಡಸರು ದೇವಿಯ ಉತ್ಸವದಲ್ಲಿ ವಾಲಗ ಊದುವ ಕೆಲಸವನ್ನು ಮಾಡುತ್ತಾರೆ. ಈ ದೇವಿಗಲ್ಲದೆ ಬೇರಾರಿಗೂ ಈ ಜನ ವಾಲಗ ಊದಲು ಹೋಗುವುದಿಲ್ಲ ಅಲ್ಲದೆ ದೇವಸ್ಥಾನಕ್ಕೆ ಸಂಬಂಧಪಟ್ಟ ಇತರ ಕೆಲಸಗಳನ್ನು ಮಾಡುವುದು ಕೂಡ ಈ ಜನಾಂಗದವರೇ.

ವಿಚಿತ್ರ ಪದ್ಧತಿ

ಇವರಲ್ಲಿ ಅನೇಕ ವಿಚಿತ್ರ ಪದ್ಧತಿಗಳು ಈಗಲೂ ರೂಢಿಯಲ್ಲಿವೆ. ಇವರ ವಿವಾಹ ಪದ್ಧತಿಯು ಬೇರೆ ಜನಾಂಗದವರದಕ್ಕಿಂತ ಭಿನ್ನವಾಗಿದೆ. ಸಾಮಾನ್ಯವಾಗಿ ವಿವಾಹ ವರನ ಮನೆಯಲ್ಲಿಯೇ ನಡೆಯುತ್ತದೆ. ಈ ಜನಾಂಗದಲ್ಲಿ ಹಿಂದೆ ವರಾನ್ವೇಷಣೆಯೇ ಇರ ಲಿಲ್ಲ. ವರನ ಕಡೆಯವರು ವಧುವಿನ ಅನ್ವೇಷಣೆಗೆ ಹೋದಾಗ ವಧುವಿನ ಕಡೆಯವರು ಒಡವೆಗಳ ಒಂದು ಪಟ್ಟಿಯನ್ನೇ ಇಟ್ಟು ಅಷ್ಟೆಲ್ಲಾ ಒಡವೆಗಳನ್ನು ಮಾಡಿಸಿದರೆ ವಧು ವನ್ನು ಕೊಡುತ್ತೇವೆ ಎಂದು ಕೇಳುವ ಪದ್ಧತಿ ಇತ್ತೀಚಿನವರೆಗೂ ಇತ್ತು. ಈ ರೀತಿ ಕೇಳುವ ಹಿನ್ನೆಲೆ ಮದುವೆ ಮಾಡಿಕೊಂಡ ಗಂಡಸು ತನ್ನ ಹೆಂಡತಿ ಮಕ್ಕಳನ್ನು ಸಾಕುವ ಯೋಗ್ಯತೆಯನ್ನು ಪರೀಕ್ಷೆ ಮಾಡುವುದಾಗಿದ್ದಿರಬಹುದು. ವಿವಾಹ ಸಂಧರ್ಭಗಳಲ್ಲಿ ಕೆಲವು ಸ್ವಾರಸ್ಯಕರವಾದ ಶಾಸ್ತ್ರಗಳು ಬಳಕೆಯಲ್ಲಿವೆ. ಮೊದಲನೆಯದಾಗಿ ವರನಿಗೆ ವಿವಾಹ ಶಾಸ್ತ್ರ ಮುಗಿಯುವರೆಗೂ ಒಂದು ಸಣ್ಣ ಕತ್ತಿಯನ್ನು ಅವನ ಸೊಂಟದಲ್ಲಿ ಸಿಕ್ಕಿಸಿರು ತ್ತಾರೆ. ವಧುವನ್ನೇ ವರನ ಮನೆಗೆ ಕರೆತಂದು ಧಾರೆ ಎರೆದು ಕೊಡುತ್ತಾರೆ.

ಹೆಣ್ಣು ಮಕ್ಕಳು ಮೈನೆರೆದಾಗ ಯಾವ ಶಾಸ್ತ್ರವನ್ನು ಮಾಡುವುದಿಲ್ಲ. ಆ ದಿನ ಸ್ನಾನಮಾಡಿ ಅವಳು ಮನೆಯಲ್ಲೆಲ್ಲ ಓಡಾಡಬಹುದು, ದೇವರ ಮನೆಯೊಂದನ್ನು ಬಿಟ್ಟು. ಈ ದಿನಗಳಲ್ಲಿ ಅವಳನ್ನು ಮೈಲಿಗೆ ಎಂದು ಪರಿಗಣಿಸುವುದರಿಂದ ದೇವರ ಮನೆಗೆ ಹೋಗುವುದು, ದೇವರ ಪೂಜೆ ಮಾಡುವುದು ಅವಳಿಗೆ ನಿಷಿದ್ಧ. ಪೌಷ್ಟಿಕ ಆಹಾರವನ್ನು ಈ ದಿನಗಳಲ್ಲಿ ಅವಳಿಗೆ ಕೊಡುತ್ತಾರೆ. ವಿವಾಹ ನಿಶ್ಚಯವಾದ ದಿನಕ್ಕೆ ಮುಂಚೆ ಐದು ದಿನ ಇರುವಾಗ ಮನೆಯೊಳಗೆ ಹೊಂಗೆ ಸೊಪ್ಪು, ಲಕ್ಕಿಸೊಪ್ಪು, ಹಸಿತೆಂಗಿನ ಗರಿಗಳಿಂದ ಸಣ್ಣದೊಂದು ಗುಡಿಸಲನ್ನು ಕಟ್ಟಿ ಅವಳನ್ನು ಅದರಲ್ಲಿರಿಸುತ್ತಾರೆ. ಐದು ದಿನಗಳ ಕಾಲ ಹುಡುಗಿ ಆ ಗುಡಿಸಿಲಿನಲ್ಲಿ ಇರಬೇಕು. ಅವಳು ಆ ದಿನಗಳಲ್ಲಿ ಹಲಸಿನ ಎಲೆಯಲ್ಲೇ ಊಟ ಮಾಡಬೇಕು. ಮತ್ತು ಸಂಜೆಯ ಹೊತ್ತು ಅವಳನ್ನು ವಿವಿಧ ಆಭರಣಗಳಿಂದ ಅಲಂಕರಿಸಿ ಮನೆಯೊಳಗೆ ಕೂರಿಸಿ ಮುತ್ತೈದೆಯರು ಆರತಿ ಬೆಳಗುತ್ತಾರೆ. ನೆರೆದ ಮಕ್ಕಳಿಗೆ ನೆನೆಸಿದ ಅಕ್ಕಿ, ಕಡಲೆಕಾಳನ್ನು ಬೆರೆಸಿ ಹಂಚಬೇಕು.

ಇವರಲ್ಲಿ ವಿವಾಹ ವಿಚ್ಛೇದನ ರೂಢಿಯಲ್ಲಿದೆ. ವಿಚ್ಛೇದನ ಪಡೆದ ಗಂಡಸೋ ಅಥವ ಹೆಂಗಸೋ ಪುನಃ ಮದುವೆಯಾಗಬೇಕಿದ್ದರೆ ಅದು ಕೂಡುವಳಿ ಮಾತ್ರ. ಕೂಡುವಳಿ ರೀತಿಯ ಮದುವೆಯು ಬಹಳ ಸರಳವಾದದ್ದು, ಯಾವ ಶಾಸ್ತ್ರವು ಇರುವುದಿಲ್ಲ. ಕೂಡುವಳಿ ಮಾಡಿಕೊಳ್ಳುವ ಗಂಡಸು ಒಂದು ಸರಳ ಸಮಾರಂಭವನ್ನೇರ್ಪಡಿಸಿ ಮುಖ್ಯಸ್ಥರನ್ನು ಆಮಂತ್ರಿಸುತ್ತಾನೆ. ಆಮಂತ್ರಿತರೆಲ್ಲ ಹೆಣ್ಣಿನ ಮನೆಯಲ್ಲಿ ಸೇರಿದ ಮೇಲೆ ಅವನು ಹೆಣ್ಣಿಗೆ ಒಂದು ಜೊತೆ ಓಲೆ, ಮಾಂಗಲ್ಯ, ಸೀರೆ, ಕುಪ್ಪಸ ಚಿನ್ನ ಕೊಡಬೇಕು. ಜಾತಿಯ ಮುಖ್ಯಸ್ಥನು ಅವುಗಳನ್ನು ಒಪ್ಪಿಕೊಂಡ ಮೇಲೆ ಹೆಣ್ಣು ಅವುಗಳನ್ನು ಧರಿಸಿ (ಮಾಂಗಲ್ಯವನ್ನು ಬಿಟ್ಟು) ಎಲ್ಲರ ಸಮ್ಮುಖದಲ್ಲಿ ಬಂದು ಕೂರುತ್ತಾಳೆ, ನಂತರ ಅಲ್ಲಿ ನೆರೆದಿದ್ದವರ ಪೈಕಿ ಒಬ್ಬ ಮುತ್ತೈದೆಯು ಒಂದು ಹೆಣ್ಣಿಗೆ ತಾಳಿ ಕಟ್ಟುತ್ತಾಳೆ. ಹೀಗೆ ತಾಳಿ ಕಟ್ಟುವುದರ ಮೂಲಕ ಕೂಡುವಳಿ ಮುಕ್ತಾಯವಾಗುತ್ತದೆ. ನಂತರ ಅವಳನ್ನು ಗಂಡನ ಮನೆಗೆ ಕಳುಹಿಸಿಕೊಡುತ್ತಾರೆ. ಗಂಡು ಈ ಸಮಾರಂಭಕ್ಕೆ ಬರಬೇಕೆಂಬ ಕಡ್ಡಾಯವಿಲ್ಲ. ತಾನು ಒಪ್ಪಿದ ಹೆಣ್ಣನ್ನು ಕೂಡುವಳಿ ಮಾಡಿಕೊಳ್ಳಲು ಹೆಣ್ಣಿನ ಮನೆಗೆ ಒಡವೆ, ವಸ್ತ್ರ, ಮಾಂಗಲ್ಯವನ್ನು ಕಳುಹಿಸಿಕೊಟ್ಟರೆ ಸಾಕು.

ವಿವಾಹಿತ ಸ್ತ್ರೀ ತನ್ನ ಗಂಡನೊಡನೆ ಸಂಸಾರ ನಡೆಸಲು ಇಷ್ಟವಿಲ್ಲವೆ ಬೇರೆಯವನೊಬ್ಬನೊಟ್ಟಿಗೆ ಇರಲು ಇಷ್ಟಪಟ್ಟರೆ ಅವನು ಜಾತಿಯ ಪಂಚಾಯಿತಿಗೆ ಇಂತಿಷ್ಟು ಹಣ ಎಂದು ಕಟ್ಟಿಕೊಡಬೇಕು. ಆ ಹಣಕ್ಕೆ ಲಾಗೋಡು ಎಂದು ಹೆಸರು. ನಂತರ ಅವನು ಅವಳನ್ನು ಕೂಡುವಳಿ ಮಾಡಿಕೊಳ್ಳಬಹುದು. ಹಿಂದೆ ಒಬ್ಬ ಹೆಂಗಸು ಇಬ್ಬರು ಮೂವರು ಗಂಡಸರಿಂದ ವಿಚ್ಛೇದನ ಪಡೆದು ನಾಲ್ಕನೆಯವನನ್ನು ಕೂಡುವಳಿ ಮಾಡಿಕೊಂಡ ಪ್ರಸಂಗಗಳು ಇದ್ದವು. ಹಿಂದೆ ಸಾಮಾನ್ಯವಾಗಿದ್ದ ಈ ಪದ್ಧತಿ ಇತ್ತೀಚಿನ ದಿನಗಳಲ್ಲಿ ಬಹಳ ಕಡಿಮೆಯಾಗಿದೆ. ಜಾತಿಯ ಹೊರಗಿನ ಪುರುಷರೊಂದಿಗೆ ಹಾದರ ಮಾಡಿದ ಹೆಂಗಸರನ್ನು ಕ್ರೂರವಾಗಿ ಶಿಕ್ಷಿಸಿ ಜಾತಿಯಿಂದ ಹೊರಗೆ ಹಾಕುತ್ತಾರೆ. ಹಾದರ

ಮಾಡಿದ ಹೆಣ್ಣಿನ ಮಣ್ಣಿನ ಬೊಂಬೆಯನ್ನು ಮಾಡಿ ಅದರ ಎರಡು ಕಣ್ಣುಗಳಿಗೆ ಮುಳ್ಳನ್ನು ಚುಚ್ಚಿ ಊರಿನಿಂದ ಹೊರಗೆಸೆಯುತ್ತಾರೆ.

ಸಂಪ್ರದಾಯ, ಪದ್ಧತಿ, ಆಚಾರ ವಿಚಾರಗಳಲ್ಲಿ ಬೇಡರಿಗೂ ರಾಜಪರಿವಾರದರಿಗೂ ಹೋಲಿಕೆ ಇದೆ ಎಂಬ ಹೇಳಿಕೆಯನ್ನು ಬಲಪಡಿಸಲು ಅವರಲ್ಲಿರುವ ರಾಜಕೀಯ ವ್ಯವಸ್ಥೆಯೂ ಒಂದು ಸಾಕ್ಷ್ಯ. ಬೇಡರಂತೆಯೇ ರಾಜಪರಿವಾರದವರಲ್ಲಿ ಸಹ ತಮ್ಮದೇ ಆದ ಕುಲಪಂಚಾಯತಿ (ಒಂಬತ್ತು ಗ್ರಾಮಕ್ಕೆ ಸೇರಿದುದು) ನಾಡುಪ್ರದೇಶ ಅಥವಾ ಕಟ್ಟೆಮನೆ (ಹದಿನಾರು ಹಳ್ಳಿಗಳು ಸೇರಿರುತ್ತವೆ) ಮತ್ತು ಗಡಿಮನೆ (ಮುವತ್ತೆರಡು ಹಳ್ಳಿಗಳು ಸೇರಿರುತ್ತವೆ) ಎಂಬ ಘಟಕಗಳಿವೆ. ಪ್ರತಿಯೊಂದು ಕುಲಪಂಚಾಯತಿಯ ಮುಖ್ಯಸ್ಥರು ಮತ್ತು ಸದಸ್ಯರು ಕಟ್ಟೆಮನೆ ಮತ್ತು ಗಡಿಮನೆಗೆ ಸದಸ್ಯರಾಗಿರುತ್ತಾರೆ ಕುಲಪಂಚಾಯತಿಯಲ್ಲಿ ಬಗೆ ಹರಿಯದ ಸಮಸ್ಯೆಯನ್ನು ಕಟ್ಟೆಮನೆಗೆ ಕೊಡುತ್ತಾರೆ. ಅಲ್ಲಿ ಬಗೆ ಹರಿಯದಿದ್ದ ಪಕ್ಷದಲ್ಲಿ ಗಡಿ ಮನೆಗೆ ಕೊಡುತ್ತಾರೆ. ಈ ಎಲ್ಲಾ ಘಟಕಗಳ ಯಜಮಾನರ ನೇಮಕ ವಂಶಪಾರಂಪರ್ಯವಾಗಿ ಬರುತ್ತದೆ. ಮದುವೆ ಮುಂತಾದ ಸಂದರ್ಭಗಳಲ್ಲಿ ಇವರಿಗೆ ಅಗ್ರ ತಾಂಬೂಲ ದೊರೆಯುತ್ತದೆ. ಜಾತಿಯ ಕಟ್ಟುಕಟ್ಟಳೆ, ಮದುವೆ, ಕೊಡಿಕೆ, ಎಲ್ಲವೂ ಇವರ ಸಮ್ಮುಖದಲ್ಲೀ ನಡೆಯಬೇಕು.

ರಾಜಪರಿವಾರದವರಲ್ಲಿ ವೈಷ್ಣವರು ಮತ್ತು ಶೈವರೆಂಬ ಎರಡು ಪಂಗಡಗಳಿವೆ. ಸಾಮಾನ್ಯವಾಗಿ ವೈಷ್ಣವರು ವೆಂಕಟರಮಣ, ನಾರಾಯಣ, ಶ್ರೀನಿವಾಸ, ಬಿಳಿಗಿರಿ ರಂಗನ ಬೆಟ್ಟದಲ್ಲಿ ನೆಲೆಸಿರುವ ಗೋಪಾಲಸ್ವಾಮಿಯನ್ನು ಮನೆದೇವರಾಗಿ ಮಾಡಿಕೊಂಡು ಪೂಜಿಸುತ್ತಾರೆ. ಶೈವರು ನಂಜನಗೂಡಿನ ಶ್ರೀಕಂಠೇಶ್ವರ, ಮಹದೇಶ್ವರ ಸ್ವಾಮಿ ಬೆಟ್ಟದ ಮಹದೇಶ್ವರ, ಕಪಡಿಯ ಸಿದ್ದಾಪ್ಪಾಜಿ. ರಾಚಪ್ಪಾಜಿ, ಮಂಟೇಸ್ವಾಮಿ ದೇವರುಗಳನ್ನು ಪೂಜಿಸುತ್ತಾರೆ. ಮಹದೇಶ್ವರನನ್ನು ಮನೆ ದೇವರಾಗಿ ಪೂಜಿಸುವವರು ತಮ್ಮ ಮನೆಯಲ್ಲಿ ಒಬ್ಬ ಗಂಡು ಮಗನನ್ನು ಮಹದೇಶ್ವರನಿಗೆ ಗುಡ್ಡನನ್ನಾಗಿ ಬಿಡುತ್ತಾರೆ. ಹೀಗೆ ಗುಡ್ಡನಾದವನು ಕಂಚಿನ ತಟ್ಟೆಯಲ್ಲಿ ಊಟ ಮಾಡಬಾರದು. ಹೆಣ್ಣು ದೇವತೆಗಳಲ್ಲಿ ಮಾರಮ್ಮ, ದುರ್ಗಮ್ಮ ಮತ್ತು ಚಾಮುಂಡೇಶ್ವರಿಯನ್ನು ಪೂಜಿಸುತ್ತಾರೆ. ಮೈಸೂರು ಮತ್ತು ಸುತ್ತಮುತ್ತಲ ಹಳ್ಳಿಗಳಲ್ಲಿ ಮಾರಮ್ಮನ ದೇವಸ್ಥಾನದ ಅರ್ಚಕರು ರಾಜಪರಿವಾರದವರಾಗಿರುತ್ತಾರೆ. ಮೈಸೂರಿನ ಅರಮನೆಯ ಪಕ್ಕದಲ್ಲಿರುವ ಮಾರಮ್ಮನ ದೇವಸ್ಥಾನದಲ್ಲೂ ಕೂಡ ರಾಜಪರಿವಾರದವನೇ ಅರ್ಚಕ. ಇವರು ಹುಟ್ಟುಸಾವುಗಳ ಸೂತಕವನ್ನು ಹನ್ನೆರಡು ದಿನಗಳ ಕಾಲ ಆಚರಿಸುತ್ತಾರೆ. ಶವಸಂಸ್ಕಾರ ಪದ್ಧತಿಯು ಇತರ ಹಿಂದೂ ಜನಾಂಗಗಳಂತೆಯೇ ಇದೆ. ಹುಟ್ಟಿದ ಹನ್ನೆರಡನೆಯ ದಿನ ಮಗುವಿಗೆ ಹೆಸರಿಡುತ್ತಾರೆ ಮತ್ತು ಇಪ್ಪತ್ತೊಂಬತ್ತನೆಯ ದಿನ ಮಗುವಿಗೆ ಕಿವಿ ಚುಚ್ಚುವರು.

ಒಂದಾನೊಂದು ಕಾಲದಲ್ಲಿ ತಾವು ಕ್ಷತ್ರಿಯ ಕುಲಕ್ಕೆ ಸೇರಿದವರೆಂಬ ಪ್ರತಿಷ್ಠೆಯ ನೆನಪಿಗಾಗಿರಬಹುದು ಈಗಲೂ ಅವರು ಸಂಕ್ರಾಂತಿಯ ಮಾರನೆಯ ದಿನ ಬೇಟೆಯಾಡಲು ಕಾಡಿಗೆ ಹೋಗುತ್ತಾರೆ. ಬೇಟೆಯಾಡಿ ತಂದ ಪ್ರಾಣಿಯ ಮಾಂಸವನ್ನು ಊರಿನವರಿಗೆಲ್ಲ

ಹಂಚುತ್ತಾರೆ. ಏನೇ ಆದರೂ ಆ ದಿನ ಒಂದು ಚೂರಾದರೂ ಮಾಂಸವನ್ನು ತಿನ್ನಲೇ ಬೇಕೆಂಬ ಪದ್ಧತಿ ಈಗಲೂ ಇವರಲ್ಲಿದೆ.

1941 ನೇ ಜನಗಣತಿಯಲ್ಲಿ ರಾಜಪರಿವಾರದವರನ್ನು ಬೆಸ್ತರ ಗುಂಪಿಗೆ ಸೇರಿಸಿದ್ದರು. 1951 ನೇ ಜನಗಣತಿಯ ಸಮಯದಲ್ಲಿ ರಾಜಪರಿವಾರದ ಮುಖಂಡರುಗಳು ಜನಗಣತಿಯ ಡೈರೆಕ್ಟರ್ ಅವರಿಗೆ ತಮ್ಮನ್ನು ಬೆಸ್ತರಿಂದ ಬೇರ್ಪಡಿಸಬೇಕೆಂದು ಮನವಿ ಮಾಡಿಕೊಂಡಿದ್ದರು. ಅದು ನೆರವೇರಲಿಲ್ಲ. 1971 ರಲ್ಲಿ ಬೆಂಗಳೂರಿನಲ್ಲಿ ನಡೆದ ಅಖಿಲ ಕರ್ನಾಟಕ ನಾಯಕ ಸಮ್ಮೇಳನದಲ್ಲಿ ಬೇಡನಾಯಕರು ಮತ್ತು ರಾಜಪರಿವಾರದ ನಾಯಕರು ಸೇರಿ ಒಂದು ಒಪ್ಪಂದಕ್ಕೆ ಬಂದರು. ಅದರಂತೆ ಅವರು ಬೇಡ, ಪರಿವಾರ ಎಂಬ ಬೇರೆ ಬೇರೆ ಹೆಸರುಗಳಿಂದ ಕರೆಯುವುದಕ್ಕೆ ಬದಲು ನಾಯಕ ಎಂಬ ಒಂದೇ ಹೆಸರಿನಿಂದ ಕರೆದುಕೊಳ್ಳುವ ತೀರ್ಮಾನ ಕೈಗೊಂಡರು.

ಹಿಂದುಳಿದ-ಗಿರಿಜನರೆಂದು ಪರಿಗಣಿಸಲ್ಪಟ್ಟಿರುವ ಇವರು ಈಗ ತಮಗೆ ಗಿರಿಜನರಿಗೆ ದೊರೆಯುತ್ತಿರುವ ಸವಲತ್ತುಗಳು ಬೇಕು ಎಂದು ಸರ್ಕಾರವನ್ನು ಒತ್ತಾಯಿಸುತ್ತಿದ್ದಾರೆ. ಅಲ್ಲದೆ ತಮ್ಮನ್ನು ಗಿರಿಜನರೆಂದು ಪರಿಗಣಿಸಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತಿದ್ದಾರೆ. ಹಾವನೂರು ವರದಿಯಲ್ಲಿ ಇವರನ್ನು ಬೇಡರ ಒಂದು ಉಪಜಾತಿ ಎಂದು ಸೇರಿಸಿರುವುದರಿಂದ ಕರ್ನಾಟಕದಲ್ಲಿ ನಾಯಕರೆಂದರೆ ತಮ್ಮನ್ನಲ್ಲದೆ ಬೇರಾರನ್ನು ಕರೆಯುವುದಿಲ್ಲ. ಆದ್ದರಿಂದ ನಾಯಕ ಜನಾಂಗಕ್ಕೆ ದೊರೆಯುತ್ತಿರುವ ಪರಿಶಿಷ್ಟ ಬುಡಕಟ್ಟು ಸೌಲಭ್ಯವನ್ನು ಪಡೆಯಲು ನಾವು ಅರ್ಹರು. ಆದ್ದರಿಂದ 1976 ರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಜನಾಂಗಗಳ ಕಾಯಿದೆಯ ತಿದ್ದುಪಡಿ ಮೇರೆಗೆ ಆ ಸೌಲಭ್ಯಗಳು ನಮಗೆ ಸಲ್ಲಬೇಕೆಂಬ ಚಳುವಳಿ ಇತ್ತೀಚಿನ ದಿನಗಳಲ್ಲಿ ಕಂಡು ಬರುತ್ತಿದೆ.

ಗ್ರಂಥ ಋಣ

1 H. V. Nanjundayya and L. K, Ananthkrishna Iyer; The Mysore Tribes and Castes. vol. 4 page 471. Mysore Govt. Press, Bangalore (1931)

2 R. N. Venkatarayappa, Rural Society and Social change; Popular Prakashan Publication, Bombay (1973)

3 N. Subrahmanian, Sangam polity, The Administrative and Social life of the Sangam Tamils; Asian Publishing House (1966)

4 L. G. Havanur, Karnataka Backward Classes Commission Report. vol. 1, part 1 (1975)

ಟಿ. ದಯಾನಂದ ಪಟೇಲ್

ಅರಕೆರೆ : ಅಗ್ರಹಾರವಾಗಿ ಅದರ ಉಗಮ ಕುರಿತ ಒಂದು ಟಿಪ್ಪಣಿ†

ಅರಕೆರೆ ಅಗ್ರಹಾರ[1] ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲ್ಲೂಕಿನಲ್ಲಿದೆ. ಅದು ಶ್ರೀರಂಗಪಟ್ಟಣದಿಂದ ಎಂಟು ಮೈಲಿ ದೂರವಿದ್ದು, ಅದರ ಈಶಾನ್ಯಕ್ಕಿದೆ. ಅರಕೆರೆ ಯಾವಾಗ ಅಗ್ರಹಾರವಾಗಿ ರೂಪುಗೊಂಡಿತು ಎಂಬುದಕ್ಕೆ ಯಾವುದೇ ನೇರವಾದ ಶಾಸನೋಲ್ಲೇಖವಿಲ್ಲ. ಆದರೂ ಹೊಯ್ಸಳರ ಕಾಲದಲ್ಲಿ ಅದು ಅಗ್ರಹಾರವಾಗಿದ್ದಿರಬೇಕು ಎಂದು ಊಹಿಸಲಾಗಿದೆ.

ಅರಕೆರೆ[2], ಮಂಡ್ಯ[3], ಶ್ರವಣಬೆಳಗೊಳ[4]ವೇ ಮುಂತಾದ ಪ್ರದೇಶಗಳಲ್ಲಿ ದೊರೆಯುವ ಅನೇಕ ಶಾಸನಗಳು ಈ ಪ್ರದೇಶವನ್ನು ಅಗ್ರಹಾರವೆಂದೂ, ವೀರನರಸಿಂಹಪುರ ಅಲಿಯಾಸ್ ಅರಕೆರೆ ಎಂದು ಕುರಿತಿವೆ. ಆದರೆ ಈ ಯಾವುವೂ ಅದು ಅಗ್ರಹಾರವಾಗಿ ರೂಪುಗೊಂಡ ತೇದಿಯನ್ನು ಉಲ್ಲೇಖಿಸಿಲ್ಲ. ಆದರೆ ಮೈಸೂರು ಜಿಲ್ಲೆಯ ಟಿ. ನರಸೀಪುರ ತಾಲ್ಲೂಕಿನ ಚಿದರವಳ್ಳಿಯ ಶಾಸನವೊಂದು[5] ಮಾತ್ರ ಈ ಗ್ರಾಮವು ಅಗ್ರಹಾರವಾಗಿ ಹೊಯ್ಸಳರ ಎರಡನೆಯ ಬಲ್ಲಾಳನ ಕಾಲದಲ್ಲಿ ರೂಪುಗೊಂಡಿತು ಎಂದು ಹೇಳುತ್ತದೆ. ಈ ಚಿದರವಳ್ಳಿ ಅರಕೆರೆಯ ದಕ್ಷಿಣಕ್ಕೆ ಹನ್ನೆರಡು ಮೈಲು ದೂರದಲ್ಲಿದೆ. ಈ ಚಿದರವಳ್ಳಿ ಶಾಸನವು ಕಾಲಸೂಚಕ ಭಾಗಸಹಿತವಾಗಿ ತ್ರುಟಿತಗೊಂಡಿದೆ. ಶಾಸನವು ಎರಡನೆಯ ಬಲ್ಲಾಳನ ಸಾಧನೆಗಳನ್ನು ಕುರಿತಿರುವುದಲ್ಲದೆ ಆತನನ್ನು ಚೋಳಸಾಮ್ರಾಜ್ಯ ಪ್ರತಿಷ್ಠಾಪನಾಚಾರ್ಯ, ಪಾಂಡ್ಯರಾಜಾಕ್ರಮಣನೆಂದು ತಿಳಿಸುತ್ತದೆ. ಈ ರಾಜನ ಇತರ ಸಾಧನೆಗಳನ್ನು ಬಣ್ಣಿಸುವಾಗ ಆತ ಅರಕೆರೆಯನ್ನು ಅಗ್ರಹಾರವಾಗಿ ರೂಪುಗೊಳಿಸಿದ್ದನ್ನು ಹೇಳಿವೆ. ಇದು ಪ್ರಸ್ತುತ ಅರಕೆರೆಗೆ ಸಂಬಂಧಿಸಿದ್ದಾಗಿದೆ. ಬಲ್ಲಾಳ ಈ ಅರಕೆರೆಯನ್ನು ವೀರನರಸಿಂಹಪುರವೆಂದು ಕರೆದಿರುವುದನ್ನು ನೋಡಿದರೆ, ಇದು ಆತ ತನ್ನ ತಂದೆಯಾದ ಮೊದಲನೆಯ ನರಸಿಂಹನ ಸ್ಮಾರಕವಾಗಿ ಸ್ಥಾಪಿಸಿದ್ದಿರಬೇಕು ಎನಿಸುತ್ತದೆ.

---

† ಇದನ್ನು ದಕ್ಷಿಣ ಭಾರತೀಯ ಇತಿಹಾಸದ ಐದನೆಯ ವಾರ್ಷಿಕ ಅಧಿವೇಶನದಲ್ಲಿ ಮಂಡಿಸಲಾಯಿತು.

ಅರಕೆರೆಯ 1108ರ ಒಂದು ಶಾಸನದಿಂದ ಈ ಗ್ರಾಮವು ಅರಕೆರೆ ಎಂಬ ಹೆಸರನ್ನು ಹೊಂದಿದ್ದುದಾಗಿ ತಿಳಿಯುತ್ತದೆ. ಈ ಶಾಸನದ ಪ್ರಕಾರ ದಮ್ಮಿಸೆಟ್ಟಿಯ ಮಗನಾದ ಒಡೆಯನಂಬಿ ಅಲಿಯಾಸ್ ಉದಯಾದಿತ್ಯ ಪಲ್ಲವರಾಯ ಎಂಬಾತನು ಅಲ್ಲಿ ಒಂದು ಕೆರೆಯನ್ನು ಕಟ್ಟಿಸಿದನು. ಇಮ್ಮಡಿ ಬಲ್ಲಾಳನೇ ಇದನ್ನು ರೂಪುಗೊಳಿಸಿ ಬ್ರಾಹ್ಮಣರಿಗೆ ದಾನವಾಗಿತ್ತಿರಬೇಕು. ಆಕಾಲವಲ್ಲಿ ಇದೊಂದು ವಿದ್ಯಾಕೇಂದ್ರ ಕೂಡ ಆಗಿದ್ದಿರಬೇಕು. ಉಪಲಬ್ಧವಿರುವ ಶಾಸನ ದಾಖಲೆಗಳಿಂದ ಈ ಅಗ್ರಹಾರವು ಹೊಯ್ಸಳರ ಎರಡನೆಯ ಬಲ್ಲಾಳನ ಕಾಲದಲ್ಲಿ — ಎಂದರೆ 1173 ರಿಂದ 1121 ರೊಳಗೆ ರೂಪುಗೊಂಡಿರಬೇಕೆನ್ನಬಹುದು.

ಟಿಪ್ಪಣಿಗಳು

1 ಎಕ, 6 ಶ್ರೀರಂಗ, 98 ರಿಂದ 114
2 ಎಕ, 6 ಶ್ರೀರಂಗ, 98, 103, 108, 110
3 ಎಕ, 7 ಮಂಡ್ಯ, 56
4 ಎಕ, 2 ಶ್ರ. ಬೆ, 573
5 ಎಕ, 5 ತಿ. ನರಸಿ, 98
6 ಎಕ, 6 ಶ್ರೀರಂಗ, 113

ಯಮುನಾಬಾಯಿ ಆರ್. ರಾವ್

ಪ್ರಪಂಚದ ಸಂಕ್ಷಿಪ್ತ ಇತಿಹಾಸ
(ಮುಂದುವರೆದುದು)

ಕೃಷಿಯ ಆರಂಭ

ಭೂಮಿಯಲ್ಲಿ ಮಾನವರು ಬೇಸಾಯ ಮಾಡಲು ಮತ್ತು ಒಂದು ಸ್ಥಳದಲ್ಲಿ ನೆಲೆಯೂರಿ ನಿಲ್ಲಲು ಹೇಗೆ ಯಾವಾಗ, ಮೊದಲು ಮಾಡಿದರೆಂದು ಇನ್ನು ಸರಿಯಾಗಿ ತಿಳಿದಿಲ್ಲ. ಕಳೆದ ಐವತ್ತು ವರ್ಷಗಳಲ್ಲಿ ಇದರ ಬಗ್ಗೆ ಬೇಕಾದಷ್ಟು ಸಂಶೋಧನೆ ಮತ್ತು ಊಹೆ ನಡೆದಿದೆ. ಈಗ ಈ ಬಗ್ಗೆ ನಮಗೆ ಗೊತ್ತಿರುವುದಿಷ್ಟೆ. ಕ್ರಿ.ಪೂ. 15000 ಮತ್ತು ಕ್ರಿ.ಪೂ. 12000 ಗಳ ನಡುವೆ ಯಾವಾಗಲೋ, ಅಜಿಲಿಯನ್ನರು ದಕ್ಷಿಣ ಸ್ಪೇನಿನಲ್ಲಿದ್ದಾಗ, ಇವರಿಗೂ ಮೊದಲಿನ ಬೇಟೆಗಾರ ಪಂಗಡದವರು ಉತ್ತರ ಮತ್ತು ಪೂರ್ವ ದಿಕ್ಕುಗಳಿಗೆ ಹರಡುತ್ತಿದ್ದಾಗ ಉತ್ತರ ಆಫ್ರಿಕಾವಲ್ಲಿಯೋ ಪಶ್ಚಿಮ ಏಷ್ಯಾದಲ್ಲಿಯೋ ಈಗ ಮೆಡಿಟರೇನಿಯನ್ ಸಮುದ್ರದಲ್ಲಿ ಮುಳುಗಿಹೋಗಿರುವ ವಿಶಾಲವಾದ ಕಣಿವೆ ಪ್ರದೇಶದಲ್ಲಿಯೋ ಕೆಲವು ಜನರು ಪ್ರಾಣಿಗಳ ಸಾಕುವಿಕೆ ಮತ್ತು ವ್ಯವಸಾಯ ಇವೆರಡನ್ನೂ ನಿಧಾನವಾಗಿ ಕಲಿತರು. ಇದರೊಡನೆ ಇವರು ನಯಗೊಳಿಸಿದ ಕಲ್ಲಿನ ಆಯುಧಗಳನ್ನು ಮಾಡತೊಡಗಿದರು. ಇವರ ಹಿಂದಿದ್ದ ಬೇಟೆಗಾರ ಜನರು ಬರಿ ಚಕ್ಕೆಯೆಬ್ಬಿಸಿದ ಕಲ್ಲಿನ ಆಯುಧಗಳನ್ನು ಮಾಡುತ್ತಿದ್ದರು. ಬುಟ್ಟಿ ಹೆಣೆಯುವುದನ್ನು ಸಸ್ಯಗಳ ನಾರಿನಿಂದ ಒರಟಾದ ಬಟ್ಟೆ ಮಾಡುವುದನ್ನು ಇವರೇ ಕಂಡು ಹಿಡಿದರು. ಒರಟಾದ ಮಡಿಕೆ ಕುಡಿಕೆಗಳನ್ನು ಮಾಡುವುದೂ ಇವರಿಗೆ ಗೊತ್ತಿತ್ತು.

ಈ ಹೊಸ ಜನರು "ನೂತನ ಶಿಲಾಯುಗ"ದಲ್ಲಿ ಕಾಲಿಡುತ್ತಿದ್ದರು. ಇದು ಮಾನವ ಸಂಸ್ಕೃತಿಯಲ್ಲಿ ಒಂದು ಹೊಸ ಘಟ್ಟ. ಕ್ರೊಮಾಗ್ನಾನರು, ಗ್ರಿಮಾಲ್ಡಿಯನ್ನರು, ಅಜಿಲಿಯನ್ನರು, ಇವರೆಲ್ಲ ಪ್ರಾಚೀನ ಶಿಲಾಯುಗದವರು[10] ಈ ನೂತನ ಶಿಲಾಯುಗದವರು ನಿಧಾನವಾಗಿ ಪ್ರಪಂಚದ ಬೆಚ್ಚನೆಯ ಪ್ರದೇಶಕ್ಕೆಲ್ಲಾ ಹರಡಿದರು. ಇವರು ಕಲಿತ ಕೈ ಕಸಬುಗಳನ್ನೂ ಇವರು ಉಪಯೋಗಿಸುತ್ತಿದ್ದ ಸಸ್ಯ ಪ್ರಾಣಿಗಳನ್ನೂ ಉಳಿದ ಜನ ಇವರನ್ನು ನೋಡಿ ತಾವೂ ಹಾಗೆ ಮಾಡಲು ಕಲಿತಿದ್ದರಿಂದ ಅವುಗಳು ಇನ್ನೂ

ವಿಶಾಲವಾಗಿ ಹರಡಿದುವು. ಕ್ರಿ. ಪೂ. 10,000ದ ಹೊತ್ತಿಗೆ ಮಾನವ ವರ್ಗ ಹೆಚ್ಚಾಗಿ ನೂತನ ಶಿಲಾಯುಗದ ಮಟ್ಟದಲ್ಲಿತ್ತೆಂದು ಹೇಳಬಹುದು.[11]

ಭೂಮಿ ಗುಂಡಾಗಿದೆ ಎಂಬ ವಿಷಯ ನಮಗೆ ಹೇಗೆ ಏನು ಹೊಸದಾಗಿ ತೋರುವುದಿಲ್ಲವೋ ಹಾಗೆಯೇ ವ್ಯವಸಾಯದಲ್ಲಿ ಉಳುಮೆ, ಬಿತ್ತನೆ, ಕೊಯ್ಲು, ಧಾನ್ಯ ಒಕ್ಕುವುದು, ಬೀಸುವುದು. ಇವೆಲ್ಲಾ ಒಂದಾಗುತ್ತಲೊಂದು ನಡೆಯಬೇಕೆನ್ನುವುದು ಸಹ ನಮಗೆ ಸರ್ವೇ ಸಾಮಾನ್ಯವಾಗಿ ಕಾಣಿಸುತ್ತದೆ. ಆದರೆ 20,000 ವರ್ಷದ ಹಿಂದಿನ ಆ ಪ್ರಾಚೀನ ಮಾನವನಿಗೆ ನಮಗೆ ಈಗ ಸಾಧಾರಣವಾಗಿ ಹೋಗಿರುವ ಕಾರ್ಯ-ಕಾರಣಭಾವ ಎಳ್ಳಷ್ಟೂ ತಿಳಿದಿರಲಿಲ್ಲ. ವ್ಯವಸಾಯ ಈಗಿನ ರೂಪಕ್ಕೆ ಬರಬೇಕಾದರೆ ಮನುಷ್ಯ ಅದೆಷ್ಟೋ ಬಾರಿ ಪ್ರಯತ್ನ ಪಡಬೇಕಾಯಿತು. ಏನು ಮಾಡಬೇಕು, ಯಾವುದನ್ನು ಮುಂಚೆ ಮಾಡಬೇಕು. ಇದೆಲ್ಲವನ್ನೂ ಅವನು ಹೊಸದಾಗಿ ತನ್ನಷ್ಟಕ್ಕೆ ತಾನೇ ಮೇಲಿಂದ ಮೇಲೆ ಪ್ರಯತ್ನ ಮಾಡಿ ಕಲಿಯಬೇಕಾಯಿತು. ತಪ್ಪು ತಿಳುವಳಿಕೆಗಳು, ಅನವಶ್ಯಕವಾದ ವಿಚಿತ್ರ ಇವೆಲ್ಲ ಅಡ್ಡಿಗಳನ್ನು ಅವನು ಎದುರಿಸಬೇಕಾಯಿತು. ಈಗ ಬೀಜ ಬಿತ್ತಿ ಬೆಳೆ ತೆಗೆಯಬೇಕೆಂಬ ಹೇಳಿಕೆ ನಮ್ಮಲ್ಲಿ ಸಾಮಾನ್ಯವಾಗಿದೆ. ಪ್ರಾಚೀನ ಮನುಷ್ಯ ಬಿತ್ತುವುದನ್ನು ಕಲಿವ ಮುನ್ನವೇ ಬೆಳೆತೆಗೆಯುತ್ತಿದ್ದನು. ಆ ಕಾಲದಲ್ಲಿ ಮೆಡಿಟರೇನಿಯನ್ ಪ್ರದೇಶದಲ್ಲಿ ಗೋಧಿ ತನ್ನಷ್ಟಕ್ಕೇ ತಾನೇ ಬೆಳೆಯುತ್ತಿತ್ತು. ಅದನ್ನು ಕೊಯ್ಲು ಮಾಡಿ, ಕುಟ್ಟಿ ಅರೆದು ಆಹಾರವಾಗಿ ಉಪಯೋಗಿಸುವುದನ್ನು ಅವನು ಆದನ್ನು ಸಾಗುವಳಿ ಮಾಡುವುದನ್ನು ಕಲಿಯುವುದನ್ನು ಬಹಳ ಮುಂಚೆಯೇ ತಿಳಿದುಕೊಂಡಿದ್ದಿರಬೇಕು.

ನಮ್ಮ ಈ ಭೂಮಿಯಲ್ಲಿ ಕೃಷಿ ನಡೆಯುವಲ್ಲೆಲ್ಲಾ ಬೀಜ ಬಿತ್ತನೆಯ ಸಮಯದಲ್ಲಿ ರಕ್ತ ಬಲಿ, ಅದರಲ್ಲೂ ನರಬಲಿ ಕೊಡಬೇಕೆಂಬ ಪುರಾತನ ಭಾವನೆಯ ಕುರುಹುಗಳು ಇನ್ನೂ ಕಾಣಬರುತ್ತವೆ. ಇದು ಬಹಳ ಗಮನಾರ್ಹ ಸಂಗತಿ. ಬೀಜಬಿತ್ತುವಿಕೆ ಮತ್ತು ನರಬಲಿ ಒಂದಕ್ಕೊಂದು ಹೇಗೆ ಗಂಟು ಬಿದ್ದುವು ಎಂದು ತಿಳಿದುಕೊಳ್ಳಲು ಕುತೂಹಲ ಸ್ವಭಾವದವರಿಗೆ ಆಳವಾದ ಆಸಕ್ತಿ ಉಂಟಾಗುವುದು ಸಹಜ. ಸರ್ ಜೆ. ಜಿ. ಫ್ರೇಸರ್‌ರವರು, ತಮ್ಮ ಘನಕೃತಿ "ಸ್ವರ್ಣವೃಕ್ಷದಲ್ಲಿ" (The Golden Bough) ಈ ಸಂಗತಿಯನ್ನು ಬಹು ವಿವರವಾಗಿ ಚರ್ಚಿಸಿದ್ದಾರೆ. ಈ ಭಾವನೆ ಹುಟ್ಟಿದ್ದು ಹುಡುಗುಬುದ್ಧಿಯ ಸ್ವಪ್ನಜೀವಿ, ಪುರಾತನ ಮನುಷ್ಯನ ಮನಸ್ಸಿನಲ್ಲಿ ಎಂದು ನಾವು ಮರೆಯಬಾರದು. ಈ ಭಾವನೆ ಹುಟ್ಟಿದ್ದು ಹೇಗೆಂದು ನಮ್ಮ ಮನಸ್ಸಿಗೆ ಸರಿಯೆನಿಸುವ ತರ್ಕಸರಣಿ ವಿವರಿಸಲಾರದು. ಅದೇನೇ ಇರಲಿ, ಈಗ 12000 ವರ್ಷಗಳಿಂದ 20,000 ವರ್ಷಗಳ ಹಿಂದಿನ ಕಾಲದಲ್ಲಿ ನೂತನ ಶಿಲಾಯುಗದ ಮಾನವರು ಬಿತ್ತನೆ ಕಾಲ ಬಂದಾಗಲೆಲ್ಲಾ ನರಬಲಿ ಕೊಡುತ್ತಿದ್ದಂತೆ ಕಾಣುತ್ತದೆ. ಹೀಗೆ ಬಲಿ ಕೊಡಲು ಅವರು ಅಂಥಿಂಥವರನ್ನು ಆರಿಸುತ್ತಿರಲಿಲ್ಲ. ಬಹು ಎಚ್ಚರಿಕೆಯಿಂದ ಒಬ್ಬ ತರುಣ ಅಥವಾ ತರುಣಿ—ಹೆಚ್ಚಾಗಿ ತರುಣ—ನನ್ನು ಆರಿಸಿ ಅವನನ್ನು ಬಲಿಕೊಡುವವರೆಗೂ ಪೂಜ್ಯ

ಭಾವದಿಂದ ಗೌರವಿಸುತ್ತಿದ್ದರು. ಏಕೆ ಅವನನ್ನೇ ಬಹುಶಃ ಪೂಜಿಸುತ್ತಲೂ ಇದ್ದರು. ಆ ವ್ಯಕ್ತಿಗೆ ಒಂದು ಬಗೆಯ ದೈವಿಕವಾದ(God-King)ನ ಸ್ಥಾನ ದೊರಕುತ್ತಿತ್ತು. ಬಹು ಹಿಂದಿನಿಂದಲೂ ಬಂದ ಪದ್ಧತಿಗನುಸಾರವಾಗಿ ತಂಡದ ಹಿರಿಯರ ಮೇಲ್ವಿಚಾರಣೆಯಲ್ಲಿ ಅವನನ್ನು ಕೊಲ್ಲಲಾಗುತ್ತಿತ್ತು.

ಋತುಮಾನಗಳ ಅರಿವಿಲ್ಲದಿದ್ದ ಈ ಮನುಷ್ಯರಿಗೆ ಬಿತ್ತನೆಗೆ ಸೂಕ್ತ ಸಮಯ ಯಾವಾಗ ಎಂದು ತಿಳಿದುಕೊಳ್ಳಲು ಮೊದಲು ಕಷ್ಟವಾಗಿರಬೇಕು. "ವರ್ಷ" ಎಂದರೇನು ಎಂಬ ಅರಿವೇ ಮಾನವನಿಗಿಲ್ಲದಿದ್ದ ಕಾಲವೂ ಒಂದಿದ್ದಿರಬೇಕೆನಿಸುತ್ತದೆ. ಇದಕ್ಕೆ ಕೆಲವು ಕಾರಣಗಳಿವೆ. "ಕಾಲಗಣನ ಶಾಸ್ತ್ರ" (Chronology)ದ ಮೊದಲ ಆಕರಗಳೆಲ್ಲ ಚಾಂದ್ರಮಾಸ (lunar months)ಗಳಲ್ಲಿವೆ. ಹಳೆಯ ಟೆಸ್ಟಮೆಂಟ್‌ನ "ಕುಲಪತಿಗಳು"(patriarchs) ವಿಭಾಗದಲ್ಲಿ ಹೇಳಿರುವ ವರ್ಷಗಳು ನಿಜವಾಗಿಯೂ ಚಾಂದ್ರಮಾನ ಮಾಸಗಳೆಂದು ಊಹಿಸಿದ್ದಾರೆ. ಒಂದು ಬಾರಿ ಬಿತ್ತನೆ ನಡೆದ ಬಳಿಕ ಮತ್ತೊಮ್ಮೆ ಬೀಜ ಬಿತ್ತಲು ಹದಿಮೂರು ಚಾಂದ್ರಮಾಸಗಳು ಕಳೆಯಬೇಕೆಂದು ನಿರ್ಧರಿಸಿದ ಕುರುಹುಗಳು ಬೇಬಿಲಾನಿನಲ್ಲಿ ಕಂಡು ಬಂದಿವೆ. ಕಾಲಗಣನೆಯಲ್ಲಿ ಚಾಂದ್ರಮಾನದ ಪ್ರಭಾವ ಇನ್ನೂವರೆಗೂ ಇದೆ. ಕ್ರೈಸ್ತರು ಗುಡ್ ಫ್ರೈಡೆ ಮತ್ತು ಈಸ್ಟರ್ ಅಂದರೆ ಕ್ರಿಸ್ತನನ್ನು ಶಿಲುಬೆಗೆ ಹಾಕಿದ ದಿನ ಮತ್ತು ಆತನು ತಿರುಗಿ ಎದ್ದ ದಿನಗಳನ್ನು ಸೌರಮಾನ ರೀತಿಯಾಗಿ ಆಚರಿಸುವ ಬದಲು ಚಾಂದ್ರಮಾನ ರೀತಿಯಲ್ಲಿ ಪ್ರತಿವರ್ಷ ಬೇರೆ ಬೇರೆ ತಾರೀಖುಗಳಲ್ಲಿ ಆಚರಿಸುತ್ತಾರೆ. ಇದು ನಮಗೆ ಅಭ್ಯಾಸವಾಗಿ ಹೋಗಿರುವುದರಿಂದ ಆಶ್ಚರ್ಯಕರವಾಗಿ ತೋರುತ್ತಿಲ್ಲ, ಅಷ್ಟೆ.

ಈ ಮೊದಲ ರೈತರು ನಕ್ಷತ್ರಗಳ ಕಡೆ ಗಮನ ಕೊಟ್ಟರೋ ಇಲ್ಲವೋ ಗೊತ್ತಿಲ್ಲ. ದನಗಳ ಮುಂದೆ ಮೇಯಿಸುತ್ತಾ ಸ್ಥಳದಿಂದ ಸ್ಥಳಕ್ಕೆ ಅಲೆಯುತ್ತಿದ್ದ ದನಕುರಿ ಕಾಯುವವರು ಇವರಿಗಿಂತ ಮುಂಚೆ ದಿಕ್ಕು ಗೊತ್ತಾಗುವುದಕ್ಕೋಸ್ಕರ ನಕ್ಷತ್ರಗಳನ್ನು ವೀಕ್ಷಿಸತೊಡಗಿರಬೇಕು. ಇವುಗಳಿಂದ ಋತುಮಾನಗಳನ್ನೂ ತಿಳಿಯಬಹುದೆಂದು ಗೊತ್ತಾದಮೇಲೆ ಇವುಗಳಿಗೆ ಕೃಷಿ ಕ್ಷೇತ್ರದಲ್ಲಿ ಪ್ರಾಮುಖ್ಯ ಹೆಚ್ಚಾಯಿತು. ಬಿತ್ತನೆ ಕಾಲದ ಬಲಿ ಸಾಮಾನ್ಯವಾಗಿ ಯಾವುದಾದರೊಂದು ಪ್ರಮುಖ ನಕ್ಷತ್ರ ಉತ್ತರಕ್ಕೋ ದಕ್ಷಿಣಕ್ಕೋ ತನ್ನ ಗತಿಯನ್ನು ಬದಲಾಯಿಸುವ ಸಮಯಕ್ಕೆ ಸರಿಯಾಗಿ ನಡೆಯುತ್ತಿತ್ತು. ಸಹಜವಾಗಿಯೇ ಪುರಾತನ ಮಾನವನು ಈ ನಕ್ಷತ್ರದ ಮೇಲೆ ಕಥೆ ಕಟ್ಟಿ ಪೂಜಿಸುತ್ತಿದ್ದನು.

ಈ ಬಲಿ ಕೊಡುವ ಸಮಾರಂಭದ ವಿಧ್ಯುಕ್ತ ಆಚರಣೆ, ನಕ್ಷತ್ರಗಳ ಚಲನೆ ಇವೆಲ್ಲವನ್ನೂ ತಿಳಿದುಕೊಂಡಿದ್ದ ವ್ಯಕ್ತಿ ನೂತನ ಶಿಲಾಯುಗದ ಸಮಾಜದಲ್ಲಿ ಅದೆಷ್ಟು ಪ್ರಮುಖ ಸ್ಥಾನ ಪಡೆದಿದ್ದನೆಂದು ಊಹಿಸುವುದು ಏನೂ ಕಷ್ಟವಾಗಲಿಕ್ಕಿಲ್ಲ.

ಅಶುಚಿ ಮತ್ತು ಮೈಲಿಗೆ, ಸರಿಯಾದ ರೀತಿಯಲ್ಲಿ ಇವುಗಳಿಂದ ಶುದ್ಧಿ ಹೊಂದುವಬಗೆ ಇವೆಲ್ಲ ಸಹ ಆ ಸಮಾಜದಲ್ಲಿ ಮುಖ್ಯವಾಗಿದ್ದುವು. ಇವುಗಳನ್ನು ತಿಳಿದಿದ್ದ ಗಂಡಸರಿಗೆ ಮತ್ತು ಹೆಂಗಸರಿಗೆ ಪ್ರಮುಖ ಸ್ಥಾನವಿರುತ್ತಿತ್ತು. ಮಂತ್ರವಾದಿಗಳಂತೆ ಮಂತ್ರ

ವಾದಿನಿಯರೂ, ಪೂಜಾರಿಗಳಂತೆ ಪೂಜಾರಿಣಿಯರೂ ಆ ಕಾಲದಲ್ಲಿ ಸಹ ಇರುತ್ತಿದ್ದರು. ಆ ದಿನಗಳ ಪುರೋಹಿತನಿಗೆ ಧಾರ್ಮಿಕ ಮನುಷ್ಯ ಎನ್ನುವುದಕ್ಕಿಂತ "ವ್ಯಾವಹಾರಿಕ ವಿಜ್ಞಾನಿ" (applied Scientist) ಎನ್ನಬಹುದು. ಅವನಿಗಿದ್ದ ಜ್ಞಾನ ಶಾಸ್ತ್ರಬದ್ಧವಾದುದಲ್ಲ; ಬರಿಯ ಅನುಭವದಿಂದ ಬಂದದ್ದು. ಎಷ್ಟೋ ವೇಳೆ ಅದು ತಪ್ಪು ತಪ್ಪಾಗಿಯೂ ಇರುತ್ತಿತ್ತು. ಇದನ್ನು ಅವನು ಬಹಳ ಎಚ್ಚರಿಕೆಯಿಂದ ಗುಟ್ಟಾಗಿಟ್ಟಿರುತ್ತಿದ್ದನು. ಇಷ್ಟಾದರೂ ಜ್ಞಾನಸಂಗ್ರಹಣೆಯೇ ಅವನ ಪ್ರಧಾನ ಕರ್ತವ್ಯವಾಗಿತ್ತೆಂದೂ ಈ ಜ್ಞಾನ ಸಾಮಾನ್ಯವಾಗಿ ನಿತ್ಯ ವ್ಯವಹಾರದಲ್ಲಿ ಉಪಯೋಗವಾಗುತ್ತಿತ್ತೆಂಬುದನ್ನು ಮರೆಯಬಾರದು.

ಈಗ್ಗೆ ಹನ್ನೆರಡು ಅಥವಾ ಹದಿನೈದು ಸಾವಿರದ ವರ್ಷಗಳ ಹಿಂದೆ ಪೂರ್ವಾರ್ಧಗೋಳದಲ್ಲಿ ಬೆಚ್ಚನೆ ವಾಯುಗುಣವಿದ್ದು ನೀರಿನ ಆಸರೆ ಇದ್ದಲ್ಲೆಲ್ಲಾ ಇಂತಹ ನೂತನ ಶಿಲಾಯುಗದ ಮಾನವರ ಗುಂಪುಗಳು ಹರಡಿದುವು. ಇಂತಹ ಜನ ಸಮುದಾಯಗಳಲ್ಲಿ ಪೂಜಾರಿ ಪೂಜಾರಿಣಿಯರಿರುತ್ತಿದ್ದರು. ಸಾಗುವಳಿ ಮಾಡಿದ ಹೊಲಗದ್ದೆಗಳು, ಹಳ್ಳಿಗಳು, ಗೋಡೆಗಳಿಂದ ಸುತ್ತುವರಿಯಲ್ಪಟ್ಟ ಸಣ್ಣ ನಗರಗಳು ಇರುತ್ತಿದ್ದುವು. ಕಾಲ ಮುನ್ನಡೆದಂತೆ ಇಂತಹ ಗುಂಪುಗಳ ನಡುವೆ ಭಾವನೆಗಳು ಒಂದರಿಂದೊಂದಕ್ಕೆ ಹರಡಿದುವು. ಈ ಸಂಸ್ಕೃತಿಗೆ ಎಲಿಯಟ್ ಸ್ಮಿತ್ ಮತ್ತು ರಿವರ್ಸ್, ಇವರುಗಳು ಹೆಲಿಯೋಲಿಥಿಕ್ ಸಂಸ್ಕೃತಿ ಎಂದು ಹೆಸರಿಟ್ಟಿದ್ದಾರೆ. "ಸೂರ್ಯಶಿಲಾ ಸಂಸ್ಕೃತಿ" ಎಂಬ ಈ ಹೆಸರು ಅಷ್ಟೇನೂ ಸಮಂಜಸವೆನಿಸದಿದ್ದರೂ ಬೇರೆ ಇದಕ್ಕಿಂತ ಉತ್ತಮವಾದ ಹೆಸರನ್ನು ವಿಜ್ಞಾನಿಗಳು ಹುಡುಕುವವರೆಗೂ ಇದನ್ನೇ ಉಪಯೋಗಿಸಬೇಕು. ಮೆಡಿಟರೇನಿಯನ್ ಮತ್ತು ಪಶ್ಚಿಮ ಏಷ್ಯಾ ಪ್ರದೇಶಗಳಲ್ಲೆಲ್ಲೋ ಮೊದಲು ಹುಟ್ಟಿ ಯುಗಯುಗಗಳು ಕಳೆದಂತೆ ಪೂರ್ವದಿಕ್ಕಿಗೆ ಹರಡಿದ ಈ ಸಂಸ್ಕೃತಿ ದ್ವೀಪದಿಂದ ದ್ವೀಪಕ್ಕೆ ವ್ಯಾಪಿಸುತ್ತಾ ಪ್ಯಾಸಿಫಿಕ್ ಸಾಗರವನ್ನು ಸಹಾ ದಾಟಿ ಅಮೆರಿಕವನ್ನೂ ಸೇರಿರಬಹುದೆನಿಸುತ್ತದೆ. ಅಲ್ಲಿ ಇವರಷ್ಟು ಮುಂದುವರಿದಿಲ್ಲದ ಉತ್ತರದಿಂದ ವಲಸೆ ಬಂದಿದ್ದ ಮಂಗೋಲಾಯಿಡ್ ಜನರ ಸಂಸ್ಕೃತಿಯೊಡನೆ ಇದು ಬೆರೆತು ಹೋಗಿರಬೇಕು.

ಸೂರ್ಯಶಿಲಾ ಸಂಸ್ಕೃತಿಯ ಈ ಕಂದುಬಣ್ಣದ ಜನರು ತಾವು ಹೋದಲ್ಲೆಲ್ಲಾ ವಿಚಿತ್ರವಾದ ಭಾವನೆಗಳನ್ನೂ, ಪದ್ಧತಿಗಳನ್ನೂ ಕೊಂಡೊಯ್ದರು. ಇವುಗಳಲ್ಲಿ ಕೆಲವನ್ನು ವಿವರಿಸಲು ಮನಶ್ಶಾಸ್ತ್ರಜ್ಞ (mental experts) ರಿಗೆ ಮಾತ್ರ ಸಾಧ್ಯ. ಇವರು ದೊಡ್ಡ ದೊಡ್ಡ ಪಿರಮಿಡ್ಡುಗಳನ್ನು ದಿಬ್ಬಗಳನ್ನೂ ರಚಿಸಿದರು. ಬಹುಶಃ ಗ್ರಹ ನಕ್ಷತ್ರಗಳ ಅವೇಕ್ಷಣೆಗಾಗಿ ದೊಡ್ಡ ದೊಡ್ಡ ಕಲ್ಲುಗಳನ್ನು ನಿಲ್ಲಿಸಿ ದೊಡ್ಡ ದೊಡ್ಡ ವೃತ್ತಾಕಾರದ ರಚನೆಗಳನ್ನು ಮಾಡಿದರು. ಹೆಣಗಳನ್ನು ಮಮ್ಮಿಗಳನ್ನಾಗಿ ಮಾಡಿ ಕಾದಿಡುವ ಪದ್ಧತಿಯು ಇವರಲ್ಲಿತ್ತು. ಹಚ್ಚೆ ಚುಚ್ಚುವುದು, ಸುನತಿ ಮಾಡುವುದು (circumcision) ಇವರಲ್ಲಿ ಆಚರಣೆಯಲ್ಲಿತ್ತು. ಮಗು ಹುಟ್ಟುವಾಗ ಅದರ ತಂದೆ ಸಹ ಮಲಗಿ

ವಿಶ್ರಾಂತಿ ಪಡೆಯುವ ಪದ್ಧತಿ ಇವರಲ್ಲಿತ್ತು. ಈ ಪದ್ಧತಿಗೆ "ಕೂವಾಡ್" (Couvade) ಎನ್ನುತ್ತಾರೆ. ಸ್ವಸ್ತಿಕ ಚಿಹ್ನೆಯನ್ನು ಇವರು ಅದೃಷ್ಟ ಚಿಹ್ನೆಯೆಂದು ಗಣಿಸಿದ್ದರು.

ಪ್ರಪಂಚದ ಭೂಪಟವೊಂದನ್ನು ತೆಗೆದುಕೊಂಡು ಈ ಬಗೆಯ ಪದ್ಧತಿಗಳ ಕುರುಹುಗಳು ಕಾಣಬರುವಲ್ಲೆಲ್ಲಾ ಚುಕ್ಕಿಯಿಡುತ್ತಾ ಹೋದಲ್ಲಿ ಇಂಗ್ಲೆಂಡಿನ ಸ್ಟೋನ್ ಹೆಂಜ್ ಮತ್ತು ಸ್ಪೇನ್ ದೇಶಗಳಿಂದ ಮೆಕ್ಸಿಕೋ ಮತ್ತು ಪೆರುವಿನವರೆಗೂ ಸಮಶೀತೋಷ್ಣವಲಯದ ಮತ್ತು ಅತಿ ಉಷ್ಣ ವಾಯುಗುಣವಿಲ್ಲದ ಉಷ್ಣವಲಯ ಪ್ರದೇಶಗಳ ತೀರ ಪ್ರದೇಶಗಳಲ್ಲಿ ಈ ಚುಕ್ಕಿಗಳ ಒಂದು ಪಟ್ಟಿ ಕಾಣಿಸಿಕೊಳ್ಳುತ್ತದೆ. ಸಮಭಾಜಕ ವೃತ್ತದ ದಕ್ಷಿಣ ಭಾಗದ ಆಫ್ರಿಕ, ಮಧ್ಯ ಯೂರೋಪಿನ ಉತ್ತರ ಭಾಗ ಮತ್ತು ಉತ್ತರ ಏಷ್ಯಾದಲ್ಲಿ ಇಂತಹ ಒಂದು ಚುಕ್ಕಿಯೂ ಇರುವುದಿಲ್ಲ. ಅಲ್ಲೆಲ್ಲಾ ಸಂಪೂರ್ಣವಾಗಿ ಬೇರೆ ವಿಧದ ಜನರು ವಾಸಿಸುತ್ತಿದ್ದು ತಮ್ಮದೇ ರೀತಿಯಲ್ಲಿ ಅಭಿವೃದ್ಧಿ ಹೊಂದುತ್ತಿದ್ದರು.

14. ನೂತನ ಶಿಲಾಯುಗದ ಮೊದಲ ನಾಗರಿಕತೆಗಳು

ಕ್ರಿ.ಪೂ. 10,000 ದ ಹೊತ್ತಿಗೆ ಪ್ರಪಂಚದ ಮೇಲ್ಮೈಲಕ್ಷಣಗಳು ಬಹುಮಟ್ಟಿಗೆ ಈಗಿರುವಂತೆಯೇ ಇದ್ದುವು. ಈಗ ಜಿಬ್ರಾಲ್ಟರ್ ಜಲಸಂಧಿ ಇರುವಲ್ಲಿ ಮುಂಚೆ ಇದ್ದ ಭೂಸಂಧಿ ಅಷ್ಟು ಹೊತ್ತಿಗಾಗಲೇ ಕೊರೆದು ಹೋಗಿ ಅಟ್ಲಾಂಟಿಕ್ ಸಾಗರದ ಕಡೆಯಿಂದ ಬಂದ ನೀರು ಮೆಡಿಟರೇನಿಯನ್ ಕಣಿವೆಯನ್ನು ತುಂಬಿದ್ದರಿಂದ ಮೆಡಿಟರೇನಿಯನ್ ಸಮುದ್ರ ಈಗಿದ್ದಂತೆಯೇ ಇತ್ತೆಂದು ತೋರುತ್ತದೆ. ಕ್ಯಾಸ್ಪಿಯನ್ ಸಮುದ್ರ ಈಗಿರುವುದಕ್ಕಿಂತಲೂ ವಿಶಾಲವಾಗಿದ್ದಿರಬೇಕು. ಕಾಕಸಸ್ ಪರ್ವತಗಳ ಉತ್ತರ ಭಾಗದಲ್ಲಿ ಕಪ್ಪು ಸಮುದ್ರ ಮತ್ತು ಕ್ಯಾಸ್ಪಿಯನ್ ಸಮುದ್ರಗಳೆರಡೂ ಬಹುಶಃ ಕೂಡಿಕೊಂಡಿದ್ದುವು. ಇವೆರಡೂ ಸೇರಿ ಆದ ಮಧ್ಯ ಏಷ್ಯಾದ ದೊಡ್ಡ ಸಮುದ್ರದ ಹತ್ತಿರ ಈಗ ಸ್ಟೆಪ್ಪಿಗಳು ಮತ್ತು ಮರಳು ಕಾಡುಗಳು ಇರುವಲ್ಲಿ ಭೂಮಿ ಆಗ ಫಲವತ್ತಾಗಿಯೂ ಮನುಷ್ಯರು ನೆಲಸಲು ತಕ್ಕುದಾಗಿಯೂ ಇತ್ತು. ಒಟ್ಟಿನಲ್ಲಿ ಭೂಮಿ ಎಲ್ಲೆಡೆಯಲ್ಲೂ ಈಗಿರುವುದಕ್ಕಿಂತ ಫಲವತ್ತಾಗಿಯೂ ತೇವದಿಂದ ಕೂಡಿಯೂ ಇತ್ತು. ಯೂರೋಪಿನ ರಷ್ಯಾದಲ್ಲಿ ಇಂದಿರುವುದಕ್ಕಿಂತಲೂ ಹೆಚ್ಚು ಜೌಗು ಪ್ರದೇಶಗಳೂ ಸರೋವರಗಳೂ ಇದ್ದುವು. ಏಷ್ಯಾ ಅಮೆರಿಕಾಗಳ ನಡುವೆ ಬೇರಿಂಗ್ ಜಲಸಂಧಿ ಇರುವಲ್ಲಿ ಇನ್ನೂ ಭೂಸಂಧಿ ಇತ್ತೆಂದು ತೋರುತ್ತದೆ.

ಅಷ್ಟು ಹೊತ್ತಿಗಾಗಲೇ ಮಾನವ ಜನಾಂಗದಲ್ಲಿ ಈಗ ಇರುವ ಬುಡಕಟ್ಟುಗಳನ್ನು ಗುರ್ತಿಸಲು ಸಾಧ್ಯವಿತ್ತು. ಈಗಿರುವುದಕ್ಕಿಂತ ಬೆಚ್ಚಗಿದ್ದು ಸಸ್ಯವರ್ಗದಿಂದ ತುಂಬಿದ್ದ ಅಂದಿನ ಭೂಮಿಯಲ್ಲಿ ಸಮಶೀತೋಷ್ಣವಲಯದ ಬೆಚ್ಚನೆಯ ಭಾಗಗಳಲ್ಲಿ ಮತ್ತು ಸಮುದ್ರ ತೀರ ಪ್ರದೇಶಗಳಲ್ಲಿ ಹೆಲಿಯೋಲಿಥಿಕ್ ಸಂಸ್ಕೃತಿಯ ಕಂದು ಬಣ್ಣದ ಜನರು ವಾಸಿಸುತ್ತಿದ್ದರು. ಈಗಿನ ಮೆಡಿಟರೇನಿಯನ್ ಪ್ರದೇಶದ ಜನರು, ಬರ್ಬರರು, ಈಜಿಪ್ಟಿ

ನವರು, ದಕ್ಷಿಣ ಮತ್ತು ಪೂರ್ವ ಏಷ್ಯಾದ ಜನರಲ್ಲಿನ ಹೆಚ್ಚು ಭಾಗದವರೆಲ್ಲರ ಪೂರ್ವಜರು ಇವರೇ. ಅಂದರೆ ಈ ಬುಡಕಟ್ಟಿನಲ್ಲೂ ವಿವಿಧ ಜಾತಿಗಳಿದ್ದುವೆಂದಿಟ್ಟುಕೊಳ್ಳೋಣ. ಅಟ್ಲಾಂಟಿಕ್ ಮತ್ತು ಮೆಡಿಟರೇನಿಯನ್ ತೀರದ ಕಪ್ಪು-ಬಿಳಿ[12] ವರ್ಣದ ಐಬಿರಿಯನ್ ಮತ್ತು ಮೆಡಿಟರೇನಿಯನ್ ಜನರು, ಹ್ಯಾಮಿಟಿಕ್ ಜನರೆಂದು ಹೆಸರುಳ್ಳ ಬರ್ಬರರು ಮತ್ತು ಈಜಿಪ್ಷಿಯನ್ನರು, ಇಂಡಿಯಾ ದೇಶದವರಲ್ಲಿ ಕಪ್ಪಗಿರುವವರು, ದ್ರಾವಿಡರು, ಈಸ್ಟ್ ಇಂಡಿಯನ್ನರು[13] ಪಾಲಿನೇಷಿಯನ್ನರಲ್ಲಿ ಅನೇಕರು, ಮೆಯೋರಿಗಳು, ಇವರೆಲ್ಲಾ ಈ ಪ್ರಮುಖ ಮಾನವ ಬುಡಕಟ್ಟಿಗೆ ಸೇರಿದವರೇ. ಇವರಲ್ಲಿ ಪಶ್ಚಿಮದವರು ಪೂರ್ವದವರಿಗಿಂತ ತಿಳಿಬಣ್ಣದವರು. ಇದೇ ಸಮುದಾಯದಲ್ಲಿ ಮಧ್ಯ ಮತ್ತು ಉತ್ತರ ಯೂರೋಪಿನ ಕಾಡುಗಳಲ್ಲಿ ಹೊಂಬಣ್ಣದ ಕೂದಲು ಮತ್ತು ನೀಲಿಕಣ್ಣುಳ್ಳ "ಬ್ಲಾಂಡ್" ಜನರು ಕಾಣಿಸಿಕೊಂಡರು. ಕಂದುವರ್ಣದ ಮೂಲ ಸಂಗಡದಿಂದಲೇ ಹುಟ್ಟಿ ಬೇರೆಯಾದ ಈ ಸಂಗಡಕ್ಕೆ ನಾರ್ಡಿಕ್ ಕುಲವೆನ್ನುತ್ತಾರೆ. ಈಶಾನ್ಯ ಏಷ್ಯಾದ ಬಯಲು ಪ್ರದೇಶಗಳಲ್ಲಿ ಇದೇ ಬುಡಕಟ್ಟಿನ ಮತ್ತೊಂದು ಸಂಗಡ ವಾಸಿಸುತ್ತಿತ್ತು. ಓರೆಯಾದ ಕಣ್ಣುಗಳು, ಉಬ್ಬಿಕೊಂಡ ಗಲ್ಲದ ಮೂಳೆಗಳು ಹಳದಿ ಚರ್ಮ ನೆಟ್ಟನೆಯ ಕಪ್ಪು ಕೂದಲುಗಳನ್ನುಳ್ಳ ಇವರೇ ಮಂಗೋಲ್ ಕುಲದವರು. ದಕ್ಷಿಣ ಆಫ್ರಿಕ, ಆಸ್ಟ್ರೇಲಿಯ ಮತ್ತು ದಕ್ಷಿಣ ಏಷ್ಯಾಕ್ಕೆ ಸೇರಿದ ಉಷ್ಣವಲಯದ ದ್ವೀಪಗಳಲ್ಲಿ ಮುಂಚಿನ ನೆಗ್ರಾಯಿಡ್ ಜನರ ವಂಶೀಯರು ವಾಸಿಸುತ್ತಿದ್ದರು. ಮಧ್ಯ ಆಫ್ರಿಕದಲ್ಲಿ ಆಗಲೇ ಇವೆಲ್ಲ ಕುಲಗಳೂ ಬೆರೆತು ಹೋಗಿದ್ದುವು. ಆಫ್ರಿಕಾದಲ್ಲಿರುವ ಜನರಲ್ಲಿ ಬಿಳಿಯರ ಹೊರತು ಉಳಿದವರೆಲ್ಲಾ ಉತ್ತರದ ಕಂದುಬಣ್ಣದ ಜನ ಮತ್ತು ದಕ್ಷಿಣದ ನೀಗ್ರೋಗಳು ಇವರ ಮಿಶ್ರಣದಿಂದ ಆದವರೆನಿಸುತ್ತದೆ.

ಮಾನವ ಕುಲಗಳೆಲ್ಲ ಒಂದರೊಡನೊಂದು ಯಾವ ತೊಡಕೂ ಇಲ್ಲದೆ ಬೆರೆಯಬಹುದೆಂದು ನೆನಪಿನಲ್ಲಿಡಬೇಕು. ಆಕಾಶದಲ್ಲಿನ ಮೋಡಗಳಂತೆ ಈ ಕುಲಗಳೂ ಒಂದರೊಡನೊಂದು ಬೆರೆತು ತಿರುಗಿ ಬೇರೆ ಬೇರೆಯಾಗುತ್ತವೆ. ಕಾಂಡದಿಂದ ಬೇರೆ ಬೇರೆಯಾದ ಮೇಲೆ ಒಂದರೊಡನೊಂದು ತಿರುಗಿ ಸೇರಿಕೊಳ್ಳಲು ಆಗದ ಸಾಮಾನ್ಯ ಮರಗಳಂತಲ್ಲ ಮಾನವ ವಂಶ ವೃಕ್ಷ. ಒಟ್ಟಿನಲ್ಲಿ ಅವಕಾಶವಿದ್ದಲ್ಲೆಲ್ಲಾ ಮಾನವ ಕುಲಗಳು ಸ್ವಚ್ಛಂದವಾಗಿ ಬೆರಕೆಯಾಗಿವೆಯೆಂದು ಎಲ್ಲರೂ ಜ್ಞಾಪಕದಲ್ಲಿಟ್ಟುಕೊಂಡರೆ ಅನೇಕ ಹುಚ್ಚು ಭ್ರಾಂತಿ, ಹಾನಿಕರ ಅಭಿಪ್ರಾಯಗಳನ್ನು ತಪ್ಪಿಸಬಹುದು. ಕುಲ (race) ಎಂಬ ಪದಕ್ಕೆ ಸರಿಯಾದ ಅರ್ಥವನ್ನು ತಿಳಿದುಕೊಳ್ಳದೆ ಎಷ್ಟೋ ಜನ ಈ ಪದವನ್ನು ತಮ್ಮ ಮನಸ್ಸಿಗೆ ಬಂದಂತೆ ಪ್ರಯೋಗಿಸಿ ಅದರಿಂದ ಅಸಂಬದ್ಧ ಭಾವನೆಗಳನ್ನು ತೋರ್ಪಡಿಸಿಕೊಳ್ಳುತ್ತಾರೆ. ಯೂರೋಪಿನ ಜನಾಂಗಗಳೆಲ್ಲಾ ಕಂದು, ಕಪ್ಪು-ಬಿಳಿ, ಮತ್ತು ಮಂಗೋಲ್ ಇವೆಲ್ಲ ಕುಲಗಳ ಮಿಶ್ರಣದಿಂದ ಹುಟ್ಟಿದ್ದರೂ, ಇಂತಹ ಜನರು, ಬ್ರಿಟಿಷರದ್ದೇ ಬೇರೆ ಕುಲವೊಂದಿದೆ. ಯೂರೋಪಿಯನ್ನರದ್ದೇ ಒಂದು ಕುಲ ಎಂಬಂತೆ ಮಾತಾಡುತ್ತಾರೆ.

ಮೊದಲು ಅಮೆರಿಕಾ ಖಂಡವನ್ನು ಪ್ರವೇಶಿಸಿದ ಮಂಗೋಲ್ ಸಂತತಿಯ ಜನರು ನೂತನ ಶಿಲಾಯುಗದ ಮಟ್ಟದಲ್ಲಿದ್ದರು. ಇವರು ಬೇರಿಂಗ್ ಜಲಸಂಧಿಯ ಮಾರ್ಗವಾಗಿ ಬಂದು ದಕ್ಷಿಣಕ್ಕೆ ಹರಡಿರಬೇಕು. ಅಮೆರಿಕದ ಉತ್ತರ ಭಾಗದಲ್ಲಿ ಕ್ಯಾರಿಬು ಮತ್ತು ಹಿಮಸಾರಂಗ, ದಕ್ಷಿಣದಲ್ಲಿ ದೊಡ್ಡ ದೊಡ್ಡ ಕಾಡುಕೋಣಗಳ ಹಿಂಡುಗಳು ಇವರಿಗೆ ಕಂಡುಬಂದುವು. ಇವರು ದಕ್ಷಿಣದ ಅಮೆರಿಕವನ್ನು ಸೇರಿದಾಗಲೆಲ್ಲ ಗ್ಲಿಪ್ಟೊಡೋನ್ ಎಂಬ ಭಾರಿ ಗಾತ್ರದ ಅರ್ಮಡಿಲ್ಲೊ ಮತ್ತು ಮೆಗಾಥೀರಿಯಂ ಎಂಬ ಆನೆಯಷ್ಟು ಎತ್ತರವಿರುತ್ತಿದ್ದ ಪೆಡಂಭೂತದಂತಹ ಸ್ಲೋತ್ (Sloth) ಒಂದು ಜಾತಿಯ ಕರಡಿ ಇನ್ನೂ ಜೀವಿಸುತ್ತಿದ್ದುವು. ಗಾತ್ರದಲ್ಲಿ ದೊಡ್ಡದಿದ್ದರೂ ಕೈಲೇನೂ ಸಾಗದಿದ್ದ ಈ ಬೃಹತ್ಪ್ರಾಣಿಗಳು ನಶಿಸುವುದಕ್ಕೆ ಈ ಮನುಷ್ಯರೇ ಕಾರಣರಾಗಿರಬೇಕು.

ಅಮೆರಿಕದ ಈ ಜನರಲ್ಲನೇಕರು ನೂತನ ಶಿಲಾಯುಗದ ಮಟ್ಟಕ್ಕಿಂತ ಮುಂದುವರಿಯಲೇ ಇಲ್ಲ. ಇದುವರೆಗೂ ಇವರು ಬೇಟೆಯಾಡಿಯೋ ಮಂದೆ ಮೇಯಿಸಿಯೋ ಜೀವಿಸುತ್ತಿದ್ದರು. ಕಬ್ಬಿಣದ ಉಪಯೋಗವನ್ನು ಇವರು ತಿಳಿದುಕೊಳ್ಳಲೇ ಇಲ್ಲ. ಇವರು ಉಪಯೋಗಿಸುತ್ತಿದ್ದ ಮುಖ್ಯ ಲೋಹಗಳೆಂದರೆ ಅಲ್ಲಿ ಸಿಗುತ್ತಿದ್ದ ಚಿನ್ನ ಮತ್ತು ತಾಮ್ರ. ಜನ ನೆಲೆಯಾಗಿ ನಿಂತು ಕೃಷಿ ಮಾಡಲು ತಕ್ಕ ಪರಿಸ್ಥಿತಿ ಇದ್ದ ಮೆಕ್ಸಿಕೊ, ಯುಕಟಾನ್ ಮತ್ತು ಪೆರುಗಳಲ್ಲಿ ಮಾತ್ರ ಕ್ರಿ.ಪೂ. 1000ದ ಹೊತ್ತಿಗೆ ಒಂದು ಬಗೆಯ ನಾಗರಿಕತೆ ಹುಟ್ಟಿಕೊಂಡಿತು. ಪೂರ್ವಾರ್ಧ ಗೋಳದ ಹಳೆಯ ನಾಗರಿಕತೆಗಳಿಗಿರುವ ಸ್ಥಾನವೇ ಇದಕ್ಕೆ ಸಲ್ಲಬೇಕಾದರೂ ಈ ನಾಗರಿಕತೆ ಅವುಗಳಂತಿರಲಿಲ್ಲ. ಪೂರ್ವದೇಶಗಳ ನಾಗರಿಕತೆಗಳಲ್ಲಿ ಬಿತ್ತನೆ ಮತ್ತು ಸುಗ್ಗಿ ಸಮಯಗಳಲ್ಲಿ ನರಬಲಿ ಕೊಡುವ ಪದ್ಧತಿ ಮೊದಲಿಗೆ ಇರುತ್ತಿದ್ದರೂ ಬರಬರುತ್ತ ಈ ಪದ್ಧತಿಗಳು ಬದಲಾವಣೆ ಹೊಂದಿ ಬೇರೆ ಪದ್ಧತಿಗಳಿಗೆಡೆ ಕೊಟ್ಟುವು. ಅಮೆರಿಕದ ನಾಗರಿಕತೆಗಳಲ್ಲಿ ಈ ಹಳೆಯ ಪದ್ಧತಿಗಳು ಅಳಿದು ಹೋಗುವುದರ ಬದಲು ಬರಬರುತ್ತಾ ಹೆಚ್ಚು ಪ್ರಾಮುಖ್ಯ ಪಡೆದು ಕಡೆಗೆ ಜನ ಅವುಗಳನ್ನು ತೀವ್ರ ಶ್ರದ್ಧೆಯಿಂದ ಆಚರಿಸತೊಡಗಿದರು. ಈ ದೇಶಗಳಲ್ಲಿ ಎಲ್ಲರಿಗಿಂತ ಪ್ರಬಲರೆಂದರೆ ಪುರೋಹಿತರು. ಮತ ಶ್ರದ್ಧೆಗೆ ಬಹಳ ಮುಖ್ಯ ಸ್ಥಾನವಿತ್ತು. ಸೈನ್ಯ ನಾಯಕರು, ರಾಜರು ಎಲ್ಲರೂ ಶಕುನಗಳು, ಸಂಪ್ರದಾಯಗಳು ಇವುಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕಾಗಿತ್ತು.

ಖಗೋಳ ಶಾಸ್ತ್ರ ಜ್ಞಾನ ಇವರಲ್ಲಿ ಬಹಳ ನಿಖರತೆಯನ್ನು ಪಡೆಯಿತು. ಬೇಬಿಲೋನಿಯನ್ನರಿಗಿಂತಲೂ ಚೆನ್ನಾಗಿ ಈ ಪುರೋಹಿತರು ತಿಥಿ ನಕ್ಷತ್ರಗಳನ್ನು ಗುಣಿಸುತ್ತಿದ್ದರು. ಇಂದಿನ ಯುಕಟಾನಿನಲ್ಲಿ ವಿಚಿತ್ರವಾದ ಆದರೆ ಬಹು ವಿವರಪೂರ್ಣವಾದ ಮಾಯಾ ಬರವಣಿಗೆ ಆ ಕಾಲದಲ್ಲಿ ಹುಟ್ಟಿಕೊಂಡಿತು. ಈಗ ತಿಳಿದಿರುವ ಮಟ್ಟಿಗೆ ಈ ಲಿಪಿ ಮುಖ್ಯವಾಗಿ ಅಂದಿನ ಪುರೋಹಿತರು ತಮ್ಮ ಬುದ್ಧಿಯನ್ನೆಲ್ಲಾ ಉಪಯೋಗಿಸಿ ಗುಣಿಸುತ್ತಿದ್ದ ನಿಖರ ಪಂಚಾಂಗವನ್ನು ಬರೆದಿಡಲು ಉಪಯೋಗವಾಗುತ್ತಿತ್ತೆಂದು ತೋರುತ್ತದೆ. ಕ್ರಿ.ಶ. 700 ಅಥವಾ 800ರ ಹೊತ್ತಿಗೆ ಮಾಯಾ ನಾಗರಿಕತೆ ಅತ್ಯು

ನ್ನತ ಸ್ಥಿತಿಯನ್ನು ಮುಟ್ಟಿತ್ತು. ಹೇಗೆಂದರೆ ಹಾಗೆ ರೂಪಿಸಲು ಸಾಧ್ಯವಾದ ಮೇಣವೋ ಎಂಬಂತೆ ಕಲ್ಲಿನಲ್ಲಿ ಇವರು ಕೆತ್ತಿರುವ ಶಿಲ್ಪಗಳು, ಅವುಗಳಲ್ಲಿ ಮತ್ತೆ ಮತ್ತೆ ಕಾಣಬರುವ ಸೌಂದರ್ಯ ನಮ್ಮನ್ನು ಮುಗ್ಧಗೊಳಿಸಿದರೆ ಇವರ ಕೆತ್ತನೆ ಕೆಲಸದಲ್ಲಿ ತೋರಿಬರುವ ಒಂದು ವಿಕೃತ ರೂಪ ನಮಗೆ ಅರ್ಥವಾಗಲು ಸಾಧ್ಯವಿಲ್ಲದ ಒಂದು ಬಗೆಯ ಉನ್ಮಾದಪೂರ್ವಕ ಸಂಪ್ರದಾಯ ಬದ್ಧತೆ ಮತ್ತು ಜಟಿಲತೆ ನಮ್ಮನ್ನು ತಬ್ಬಿಬ್ಬು ಮಾಡುತ್ತದೆ. ಈ ಕೆತ್ತನೆಗಳಲ್ಲಿ ಎಲ್ಲೆಲ್ಲಿಯೂ ಹೆಣೆದುಕೊಂಡಿರುವ ಗರಿಗಳು, ಒಂದಕ್ಕೊಂದು ಸುತ್ತಿಕೊಂಡಿರುವ ಸರ್ಪಗಳು ಕಂಡುಬರುತ್ತವೆ. ಪೂರ್ವಾರ್ಧ ಗೋಳದಲ್ಲಿ ಪೂರ್ತಿ ಇವುಗಳಂತಿರುವ ಶಿಲ್ಪ ಇಲ್ಲವೇ ಇಲ್ಲ. ಇದ್ದಿದ್ದರೆ ಎಲ್ಲೋ ಸ್ವಲ್ಪ ಮಟ್ಟಿಗಾದರೂ ಇವುಗಳನ್ನು ಹೋಲುವುವೆಂದರೆ ಇಂಡಿಯಾ ದೇಶದ ಬಹು ಹಳೆಯ ಕೆತ್ತನೆಗಳು. ಆದರೆ ಯೂರೋಪಿನ ಹುಚ್ಚಾಸ್ಪತ್ರೆಗಳಲ್ಲಿ ರೋಗಿಗಳು ಬಹು ವಿವರವಾಗಿ ಬರೆದ ಚಿತ್ರಗಳನ್ನು ಇವು ಹೆಚ್ಚಾಗಿ ಹೋಲುತ್ತವೆ. ಇವನ್ನು ನೋಡಿದರೆ ಮಾಯಾ ಜನರ ಮನಸ್ಸು ಏನೋ ಒಂದು ವಿಧವಾಗಿ ವಕ್ರವಾಗಿ ಬೆಳೆದಿತ್ತೆನ್ನಿಸುತ್ತದೆ. ನಮ್ಮ — ಅಂದರೆ ಪೂರ್ವಾರ್ಧಗೋಳದ ಜನರ ದೃಷ್ಟಿಯಿಂದ ನೋಡಿದರೆ ಅವರ ಬುದ್ಧಿ ಮನಸ್ಸು ನೆಟ್ಟಗಿರಲಿಲ್ಲವೆಂದೇ ಎನ್ನಬಹುದು.

ನಮ್ಮ ದೃಷ್ಟಿಯಲ್ಲಿ ಈ ಅಮೆರಿಕದ ಜನರ ಮನಸ್ಸು ಬುದ್ಧಿ ವಕ್ರವಾಗಿತ್ತೆನಿಸಲು ಮತ್ತೊಂದು ಆಧಾರವಿದೆ. ಅದೇ ಈ ಜನರ ವಿಚಿತ್ರ ರಕ್ತದಾಹ; ಮೆಕ್ಸಿಕೋ ಜನಜೀವನವಂತೂ ಮನುಷ್ಯ ರಕ್ತದಲ್ಲಿ ಮುಳುಗಿದಂತಿತ್ತು. ಪ್ರತಿ ವರ್ಷ ಅಲ್ಲಿ ಸಾವಿರಾರು ಜನರನ್ನು ಬಲಿ ಕೊಡುತ್ತಿದ್ದರು. ಜೀವಂತ ವ್ಯಕ್ತಿಗಳನ್ನು ಕತ್ತರಿಸಿ, ಇನ್ನೂ ಬಡಿದುಕೊಳ್ಳುತ್ತಿರುವ ಹೃದಯವನ್ನು ಹೊರಗೆ ಎಳೆದು ಕೀಳುವುದು ಈ ವಿಚಿತ್ರ ಜನರ ಪುರೋಹಿತರ ಜೀವನದಲ್ಲಿ ಪ್ರಮುಖ ಸ್ಥಾನ ಪಡೆದಿತ್ತು. ಸಾರ್ವಜನಿಕ ಸಮಾರಂಭಗಳು, ರಾಷ್ಟ್ರೀಯ ಹಬ್ಬಗಳು ಎಲ್ಲದರಲ್ಲೂ ಈ ಕರಾಳ ಕೃತ್ಯಕ್ಕೆ ಉನ್ನತ ಸ್ಥಾನವಿತ್ತು.

ಅಲ್ಲಿನ ಸಾಮಾನ್ಯಜನ ಬಹುಮಟ್ಟಿಗೆ ಬೇರೆ ಅದೇ ಮಟ್ಟದ ನಾಗರಿಕತೆಗಳ ಕೃಷಿಕ ಜನರಂತೆ ಜೀವಿಸುತ್ತಿದ್ದರು. ಇವರು ಮಾಡುತ್ತಿದ್ದ ಮಡಿಕೆಗಳು, ನೆಯ್ದು ಬಣ್ಣ ಕಟ್ಟುತ್ತಿದ್ದ ಬಟ್ಟೆಗಳು ಬಹಳ ಚೆನ್ನಾಗಿರುತ್ತಿದ್ದುವು. ಮಾಯಾ ಲಿಪಿಯನ್ನು ಕಲ್ಲಿನ ಮೇಲೆ ಕೆತ್ತುವುದಷ್ಟೇ ಅಲ್ಲದೆ ಚರ್ಮ ಮುಂತಾದುವುಗಳ ಮೇಲೆ ಬರೆದು ಬಣ್ಣ ಹಾಕುತ್ತಲೂ ಇದ್ದರು. ಯೂರೋಪ್ ಅಮೆರಿಕಗಳ ಮ್ಯೂಸಿಯಂಗಳಲ್ಲಿ ಇಂತಹ ಎಷ್ಟೋ ಕೈಬರಹದ ವಸ್ತುಗಳಿವೆ. ಆದರೆ ಇವುಗಳು ಬರೆಯಲ್ಪಟ್ಟ ಕಾಲ ಬಿಟ್ಟರೆ ಮತ್ತೇನನ್ನೂ ಹೆಚ್ಚಿಗೆ ತಿಳಿದುಕೊಳ್ಳಲಾಗಿಲ್ಲ.[14] ಪೆರುವಿನಲ್ಲೂ ಇಂತಹವೇ ಬರವಣಿಗೆ ಹುಟ್ಟಿಕೊಂಡಿತ್ತು. ಆದರೆ ಅಲ್ಲಿ ದಾರಗಳನ್ನು ಗಂಟು ಹಾಕಿ ದಾಖಲೆಗಳನ್ನು ಮಾಡಿಡುವ ಪದ್ಧತಿ ಬಂದು ಈ ಬರವಣಿಗೆ ಹಿಂದೆ ಬಿದ್ದು ಹೋಯಿತು. ಸಾವಿರಾರು ವರ್ಷಗಳ ಹಿಂದೆ ಚೀನಾ ದೇಶದಲ್ಲೂ ಇಂತಹದ್ದೇ ದಾರಗಳ ಗಂಟುಗಳ ಸಹಾಯದಿಂದ ಸಂಗತಿಗಳನ್ನು ನೆನಪಿನಲ್ಲಿಡುವ ಪದ್ಧತಿ ಉಪಯೋಗದಲ್ಲಿತ್ತು. ಕ್ರಿ.ಪೂ. 4000 ಅಥವಾ

5000 ಕ್ಕೂ ಹಿಂದೆ ಅಂದರೆ ಅಮೆರಿಕನ್ ನಾಗರಿಕತೆಗಳಿಗೆ 3-4 ಸಾವಿರ ವರ್ಷಗಳ ಹಿಂದೆ ಇವುಗಳನ್ನು ಹೋಲುತ್ತಿದ್ದ ನಾಗರಿಕತೆಗಳು ಪೂರ್ವಾರ್ಧ ಗೋಳದಲ್ಲಿಯೂ ಇದ್ದುವು. ಎಲ್ಲಾ ಚಟುವಟಿಕೆಗಳಿಗೂ ಕೇಂದ್ರವಾದೊಂದು ದೇವಸ್ಥಾನ, ಭಾರಿ ಪ್ರಮಾಣದಲ್ಲಿ ರಕ್ತಬಲಿ ಕೊಡುವುದು, ಖಗೋಳ ಶಾಸ್ತ್ರವನ್ನು ಅತ್ಯಾಸಕ್ತಿಯಿಂದ ಅಭ್ಯಸಿಸುತ್ತಿದ್ದ ಪುರೋಹಿತ ವರ್ಗ ಇವೆಲ್ಲ ಈ ನಾಗರಿಕತೆಗಳಲ್ಲಿ ಕಾಣುತ್ತಿದ್ದುವು. ಆದರೆ ಈ ನಾಗರಿಕತೆಗಳು ಒಂದರೊಡನೊಂದು ಬೆರೆತು,ಒಂದರ ಮೇಲೊಂದು ಪ್ರಭಾವ ಬೀರಿ ಇಂದಿನ ನಮ್ಮ ನಾಗರಿಕತೆಗೆ ಜನ್ಮ ಕೊಟ್ಟುವು. ಅಮೆರಿಕದಲ್ಲಿಯಾದರೋ ಮೊದಲ ನಾಗರಿಕತೆಗಳು ಕೇವಲ ಪ್ರಥಮಾವಸ್ಥೆಯಲ್ಲೇ ನಿಂತುಬಿಟ್ಟುವು. ಇವುಗಳಲ್ಲಿ ಒಂದ ಕ್ಕೊಂದಕ್ಕೆ ಸಂಪರ್ಕವೇ ಇರಲಿಲ್ಲ. ಅವು ಒಂದೊಂದು ಪುಟ್ಟ ಪ್ರಪಂಚಗಳಂತೆ ಇದ್ದು ಬಿಟ್ಟಿದ್ದುವು. ಯೂರೋಪಿಯನ್ನರು ಅಮೆರಿಕವನ್ನು ಪ್ರವೇಶಿಸುವವರೆಗೂ ಮೆಕ್ಸಿಕೋ ಜನಕ್ಕೆ ಪೆರುವಿನ ವಿಷಯ ಗೊತ್ತಿರಲಿಲ್ಲ. ಪೆರುವಿನ ಮುಖ್ಯ ಆಹಾರವಾಗಿದ್ದ ಆಲೂಗೆಡ್ಡೆ ಮೆಕ್ಸಿಕೋವಿನಲ್ಲಿ ಯಾರಿಗೂ ಗೊತ್ತೇ ಇರಲಿಲ್ಲ.

ಇದೇ ರೀತಿಯಲ್ಲಿ ಈ ಜನ ಅನೇಕ ಯುಗಗಳು ಬಾಳಿದರು. ತಮ್ಮ ದೇವತೆ ಗಳನ್ನು ಪೂಜಿಸುವುದು, ಅವುಗಳಿಗೆ ಬಲಿ ಒಪ್ಪಿಸುವುದು ಇವರ ಪ್ರಮುಖ ಕಾರ್ಯ ವಾಗಿತ್ತು. ಮಾಯಾ ಕಲೆ ಅತ್ಯುಚ್ಚಮಟ್ಟದ ಅಲಂಕಾರಿಕ ಸೌಂದರ್ಯ (decorative beauty)ವನ್ನೂ ಪಡೆಯಿತು. ಮನುಷ್ಯರ ನಿತ್ಯ ಜೀವನ ಎಲ್ಲಿಡೆಯಲ್ಲೂ ಹೇಗೋ ಹಾಗೆ ನಡೆಯುತ್ತಿತ್ತು. ಸಾಧಾರಣ ಮನುಷ್ಯನ ಪ್ರಣಯ ಜೀವನ, ಸಂಗಡಗಳ ನಡುವೆ ಜಗಳಗಳು ನಡೆಯುತ್ತಲೇ ಇದ್ದುವು, ಸುಭಿಕ್ಷ, ದುರ್ಭಿಕ್ಷ, ಆರೋಗ್ಯ, ಅನಾರೋಗ್ಯ ಒಂದಾಗುತ್ತಲೊಂದು ಕಾಣಿಸಿಕೊಳ್ಳುತ್ತಿದ್ದುವು, ಶತಮಾನಗಳು ಉರುಳಿದಂತೆ ಇವರ ಪಂಚಾಂಗ ಮತ್ತು ಯಜ್ಞ ವಿಧಿಗಳು ಬಹು ವಿಸ್ತರಿಸಲ್ಪಟ್ಟುವು. ಬೇರಾವುದರಲ್ಲೂ ಈ ಜನ ಮುಂದುವರಿಯಲೇ ಇಲ್ಲ.

15 ಸುಮೇರಿಯಾ, ಈಜಿಪ್ಟಿನ ಮೊದಲ ದಿನಗಳು ಮತ್ತು ಬರವಣಿಗೆ

"ಹಳೆಯ ಪ್ರಪಂಚ" ವೆಂದು ಕರೆಯುವ ಪೂರ್ವಾರ್ಧ ಗೋಳದ ಭೂಪ್ರದೇಶ "ಹೊಸ ಪ್ರಪಂಚ" (New world) ಎನ್ನುವ ಉತ್ತರ ಮತ್ತು ದಕ್ಷಿಣ ಅಮೆರಿಕಗಳಿ ಗಿಂತ ವಿಸ್ತಾರವಾದುದು ಮತ್ತು ವೈವಿಧ್ಯಪೂರ್ಣವಾದುದು. ಕ್ರಿ.ಪೂ. 6000 ಅಥವಾ 7000ದ ಹೊತ್ತಿಗಾಗಲೇ ಏಷ್ಯದ ಫಲವತ್ತಾದ ಪ್ರದೇಶಗಳಲ್ಲಿ ಮತ್ತು ನೈಲ್‌ನದಿ ಪ್ರದೇಶಗಳಲ್ಲಿ ಪೆರುವಿನ ಇಂಕಾ ನಾಗರಿಕತೆಯ ಮಟ್ಟದ ಮಾನವರು ವಾಸಿಸುತ್ತಿದ್ದರು. ಆಗ ಉತ್ತರ ಪರ್ಷಿಯ, ಪಶ್ಚಿಮ, ತುರ್ಕಿಸ್ಥಾನ. ದಕ್ಷಿಣ ಅರೇಬಿಯಗಳು ಈಗ ಇರುವುದ ಕ್ಕಿಂತ ಬಹಳ ಫಲವತ್ತಾಗಿದ್ದುವು. ಬಹು ಹಿಂದಿನಿಂದಲೂ ಅಲ್ಲಲ್ಲಾ ಮಾನವರ ತಂಡ ಗಳು ನೆಲಸಿದ್ದವೆಂಬ ಕುರುಹುಗಳಿವೆ. ಆದರೆ ನಗರಗಳು, ದೇವಸ್ಥಾನಗಳು, ನೀರಾವರಿ ವ್ಯವಸ್ಥೆಗಳೆಲ್ಲವೂ ಇರುವ, ಬರಿ ಅಸಂಸ್ಕೃತ ಹಳ್ಳಿಯೊಂದರ ಮಟ್ಟವನ್ನು ಮೀರಿದ

ಸಾಮಾಜಿಕ ಜೀವನವನ್ನು ನಾವು ಮೊದಲು ಕಾಣುವುದು ದಕ್ಷಿಣ ಮೆಸಪೊಟೇಮಿಯ ಮತ್ತು ಈಜಿಪ್ಟಿನಲ್ಲಿ. ಆಗ ಯೂಫ್ರೆಟಿಸ್ ಮತ್ತು ಟೈಗ್ರಿಸ್ ನದಿಗಳು ಸಂಗಮಿಸುತ್ತಿರಲಿಲ್ಲ. ಬೇರೆ ಬೇರೆಯಾಗಿ ಪರ್ಷಿಯನ್ ಖಾರಿಯನ್ನು ಸೇರುತ್ತಿದ್ದುವು. ಇವುಗಳ ನಡುವಿನ ಪ್ರದೇಶದಲ್ಲಿ ಸುಮೇರಿಯನ್ನರು ಮೊದಲು ತಮ್ಮ ನಗರಗಳನ್ನು ಕಟ್ಟಿದರು. ಹೆಚ್ಚು ಕಡಿಮೆ ಇದೇ ಸಮಯದಲ್ಲಿಯೇ ಈಜಿಪ್ಟಿನ ಚರಿತ್ರೆಯು ಮೊದಲಾಗಿರಬೇಕು. ಆದರೆ ಇವರ ಕಾಲ ಇನ್ನೂ ಸರಿಯಾಗಿ ನಿರ್ಣಯವಾಗಿಲ್ಲ.

ಸುಮೇರಿಯನ್ನರು ಕಂದು ವರ್ಣದವರು ; ಇವರಿಗೆ ಎತ್ತಿ ಕಾಣುವಂತಹ ದೊಡ್ಡ ಮೂಗು ಇರುತ್ತಿತ್ತು ಎನಿಸುತ್ತದೆ. ಇವರು ಬರೆಯುತ್ತಿದ್ದ ಲಿಪಿಯನ್ನು ಓದಲು ಇವರ ಭಾಷೆಯನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವಾಗಿದೆ. ಇವರಿಗೆ ಕಂಚಿನ ಉಪಯೋಗ ತಿಳಿದಿತ್ತು. ಬಿಸಿಲಿನಲ್ಲಿ ಒಣಗಿಸಿದ ಇಟ್ಟಿಗೆಗಳಿಂದ ಇವರು ದೊಡ್ಡ ದೊಡ್ಡ ಗೋಪುರಾಕಾರದ ದೇವಸ್ಥಾನಗಳನ್ನು ಕಟ್ಟುತ್ತಿದ್ದರು. ಇಲ್ಲಿ ಬಹು ಸಮೃದ್ಧವಾದ ಜೇಡಿ ಮಣ್ಣು ಸಿಗುತ್ತದೆ. ಇವರು ತಾವು ಬರೆಯಬೇಕಾದುದನ್ನೆಲ್ಲಾ ಈ ಜೇಡಿ ಮಣ್ಣಿನ ಹಲಗೆಗಳ ಮೇಲೆಯೇ ಬರೆದಿಡುತ್ತಿದ್ದುದರಿಂದ ಅವು ಇದುವರೆಗೂ ಅಳಿಯದೆ ಇವೆ. ಇವರು ಹಸು, ಕುರಿ, ಮೇಕೆ ಮತ್ತು ಕತ್ತೆಗಳನ್ನು ಸಾಕುತ್ತಿದ್ದರು. ಆದರೆ ಕುದುರೆ ಸಾಕುವುದು ಇವರಿಗೆ ತಿಳಿದಿರಲಿಲ್ಲ. ಒತ್ತಾದ ವ್ಯೂಹ ರಚಿಸಿಕೊಂಡು ಈಟಿ ಮತ್ತು ಚರ್ಮದ ಗುರಾಣಿಗಳನ್ನುಪಯೋಗಿಸಿ ಕಾಲ್ನಡೆಯಲ್ಲಿ ಇವರು ಯುದ್ಧ ಮಾಡುತ್ತಿದ್ದರು. ಇವರು ಧರಿಸುತ್ತಿದ್ದುದು ಉಣ್ಣೆಯ ಬಟ್ಟೆಗಳು, ತಲೆಯನ್ನು ಬೋಳಿಸಿಕೊಳ್ಳುತ್ತಿದ್ದರು.

ಮೊದ ಮೊದಲು ಸಾಮಾನ್ಯವಾಗಿ ಈ ಎಲ್ಲ ನಗರಗಳೂ ತಮ್ಮದೇ ದೇವತೆಗಳು, ತಮ್ಮದೇ ಪುರೋಹಿತ ವರ್ಗವನ್ನುಳ್ಳ ಸ್ವತಂತ್ರ ರಾಜ್ಯಗಳಾಗಿದ್ದುವು. ಆದರೆ ಒಂದೊಂದು ಸಲ ಒಂದು ನಗರ ಬೇರೆ ಬೇರೆ ನಗರಗಳ ಮೇಲೆ ತನ್ನ ಅಧಿಕಾರವನ್ನು ಸ್ಥಾಪಿಸಿ ಅಲ್ಲಿಂದ ಕಪ್ಪ ಕಾಣಿಕೆಗಳನ್ನು ವಸೂಲು ಮಾಡುತ್ತಿತ್ತು. ನಿಪ್ಪೂರ್ ಎಂಬಲ್ಲಿಯ ಬಹು ಹಳೆಯ ಬರಹವೊಂದರಲ್ಲಿ ಇಂತಹ ಒಂದು ಚಕ್ರಾಧಿಪತ್ಯ — ಸುಮೇರಿಯನ್ನರ ನಗರ ಎರೆಕ್‌ನ ಚಕ್ರಾಧಿಪತ್ಯ — ದ ಉಲ್ಲೇಖವಿದೆ. ಮೊದಲ ಬಾರಿ ಮಾನವ ಚರಿತ್ರೆಯಲ್ಲಿ ಚಕ್ರಾಧಿಪತ್ಯವೆಂಬ ದಾಖಲೆ ಕಂಡು ಬರುವುದು ಇಲ್ಲಿಯೇ. ಈ ನಗರದ ದೇವತೆ ಮತ್ತು ಪುರೋಹಿತ — ರಾಜ ಇವರ ಆಡಳಿತ ಪರ್ಷಿಯನ್ ಖಾರಿಯಿಂದ ಕೆಂಪು ಸಮುದ್ರದವರೆಗೂ ನಡೆಯುತ್ತಿತ್ತು.

ಮೊದಲ ಬರವಣಿಗೆ ಎಂದರೆ ಒಂದು ವಿಧದ ಚಿತ್ರಗಳ ಮೂಲಕ ಮಾಡಿದ ಸಂಕ್ಷಿಪ್ತ ದಾಖಲೆಯಾಗಿತ್ತು. ನೂತನ ಶಿಲಾಯುಗಕ್ಕೆ ಮುಂಚೆ ಸಹ ಮನುಷ್ಯರು ಇಂತಹ ಬರವಣಿಗೆಯನ್ನು ಉಪಯೋಗಿಸುತ್ತಿದ್ದರು. ಈ ಮುಂಚೆ ಹೇಳಿದ ಅಜಿಲಿಯನ್ ಬಂಡೆಗಳ ಚಿತ್ರದಲ್ಲಿ[15] ಈ ಬಗೆಯ ಬರವಣಿಗೆಯ ಆರಂಭವನ್ನು ಕಾಣಬಹುದು. ಅವುಗಳಲ್ಲಿ ಹೆಚ್ಚಾಗಿ ಬೇಟೆಯ ಮತ್ತು ಪ್ರಯಾಣಗಳ ಚಿತ್ರಗಳಿವೆ. ಇವುಗಳಲ್ಲಿ ಅನೇಕ ಚಿತ್ರಗಳಲ್ಲಿ ಮನುಷ್ಯಾಕೃತಿಯನ್ನು ಸರಿಯಾಗಿಯೇ ಬರೆದಿದ್ದಾರೆ. ಕೆಲವೆಡೆಗಳಲ್ಲಿ ಮಾತ್ರ ಚಿತ್ರ

ಕಾರನು ತಲೆ ಕೈ ಕಾಲುಗಳನ್ನು ಬರೆಯುವ ತಂಟೆಗೆ ಹೋಗಿಲ್ಲ. ಬರಿ ಒಂದು ಉದ್ದ ಗೆರೆ ಮತ್ತೊಂದೆರಡು ಅಡ್ಡಗೆರೆಗಳನ್ನು ಬರೆದು ಮನುಷ್ಯರನ್ನು ಸೂಚಿಸಿದ್ದಾನೆ.

ಈ ಹಂತದಿಂದ ಸಂಕೇತಗಳನ್ನು ಪಯೋಗಿಸುವ ಸಂಕ್ಷಿಪ್ತ ಚಿತ್ರಲಿಪಿ ಹುಟ್ಟುವುದು ಏನೂ ಕಷ್ಟವಾಗಲಿಲ್ಲ. ಸುಮೆರಿಯಾದಲ್ಲಿ ಜೇಡಿಮಣ್ಣಿನ ಮೇಲೆ ಕಡ್ಡಿಗಳಿಂದ ಕೊರೆಯುತ್ತಿದ್ದರು. ಈ ಕಾರಣಗಳಿಂದ ಸಂಕೇತಗಳಿಗೂ ಮೂಲವಸ್ತುಗಳಿಗೂ ಇದ್ದ ಹೋಲಿಕೆ ಬಹುಬೇಗ ತಪ್ಪಿಹೋಯಿತು. ಅದೇ ಗೋಡೆಗಳ ಮೇಲೂ ಪಾಪಿರಸ್ ಎಲೆಯ ಪಟ್ಟಿಗಳ ಮೇಲೂ (ಇದೇ ಮೊತ್ತಮೊದಲ ಕಾಗದ) ಬರೆಯುತ್ತಿದ್ದ ಈಜಿಪ್ಟಿನಲ್ಲಿ ಹೀಗಾಗಲಿಲ್ಲ. ಸುಮೇರಿಯಾದಲ್ಲಿ ಉಪಯೋಗಿಸುತ್ತಿದ್ದ ಮರದ ಲೇಖನಿಗಳು ಜೇಡಿಮಣ್ಣಿನ ಮೇಲೆ ಬೆಣೆಯಾಕಾರದ ಗುರ್ತುಗಳನ್ನು ಮಾಡುತ್ತಿದ್ದುವು. ಇದರಿಂದ ಈ ಲಿಪಿಗೆ ಬೆಣೆ ಲಿಪಿ (Cuneiform Script) ಎನ್ನುತ್ತಾರೆ.

ಈ ಬಗೆಯ ಸಾಂಕೇತಿಕ ಚಿತ್ರಗಳನ್ನು ಆ ಸಂಕೇತದ ಮೂಲವಸ್ತುವೊಂದನ್ನೇ ಅಲ್ಲದೆ ಅಂತಹವೇ ಬೇರೆ ವಸ್ತುಗಳನ್ನು ತಿಳಿಸಲು ಉಪಯೋಗಿಸತೊಡಗಿದರು. ಇದು ಒಂದು ಮುಖ್ಯವಾದ ಹೆಜ್ಜೆ. ಈಗಲೂ ಸಹ ಮಕ್ಕಳು ಆಡುವ ರೀಬಸ್ ಆಟ (rebus) —ಚಿತ್ರ ಶಬ್ದದ ಒಗಟಿನ ಆಟ—ಹೀಗೆಯೇ ಇರುತ್ತದೆ. ಒಂದು ಕ್ಯಾಂಪಿನ ಚಿತ್ರ ಬರೆದು ಮುಂದೆ ಗಂಟೆಯ ಚಿತ್ರ ಬರೆದರೆ ಇದರ ಅರ್ಥ ಸ್ಕಾಟ್‌ಲೆಂಡ್ ದೇಶದಲ್ಲಿ ಸಾಮಾನ್ಯವಾಗಿರುವ ಕ್ಯಾಂಪ್‌ಬೆಲ್ ಎಂಬ ಹೆಸರು ಎಂದು ಹುಡುಗರು ಊಹಿಸಿ ಹೇಳುತ್ತಾರೆ. ಸುಮೇರಿಯನ್ ಭಾಷೆ ಇಂದಿನ ಕೆಲವು ಅಮೆರಿಂಡಿಯನ್ ಭಾಷೆಗಳಂತೆ ಸ್ಪಷ್ಟ ಶಬ್ದಗಳ ಸೇರುವಿಕೆಯಿಂದ ಆಗಿತ್ತು. ಈ ಭಾಷೆಯನ್ನು ಈ ರೀತಿಯ ಬರವಣಿಗೆಯಲ್ಲಿ ಬರೆಯುವುದು ಕಷ್ಟವಾಗುತ್ತಿರಲಿಲ್ಲ. ಚಿತ್ರಗಳಿಂದ ನೇರವಾಗಿ ತಿಳಿಸಲಾಗದ ಪದಗಳನ್ನು ಅಂಥವೇ ಉಚ್ಚಾರದ ಸಂಕೇತ ಚಿತ್ರಗಳ ಸಹಾಯದಿಂದ ತಿಳಿಸುತ್ತಿದ್ದರು. ಈಜಿಪ್ಟಿನ ಬರವಣಿಗೆಯೂ ಇದೇ ರೀತಿಯಾಗಿ ಬೆಳೆಯಿತು. ಮುಂದೆ ಬೇರೆಜನರು ಸ್ಪಷ್ಟ ಉಚ್ಚಾರವಲ್ಲದ ತಮ್ಮ ಭಾಷೆಯ ಶಬ್ದಗಳಿಗೆ ಈ ಚಿತ್ರ ಲಿಪಿಗಳನ್ನು ಹೊಂದಿಸಿಕೊಂಡಾಗ ವರ್ಣಮಾಲೆಗಳು ಹುಟ್ಟಿದುವು. ಅಂತು ಹೆಚ್ಚು ಕಡಿಮೆ ಪ್ರಪಂಚದಲ್ಲಿರುವ ಲಿಪಿಗಳೆಲ್ಲಾ ಸುಮೇರಿಯಾದ "ಬೆಣೆ ಲಿಪಿ" ಮತ್ತು ಈಜಿಪ್ಟಿನ ಚಿತ್ರಲಿಪಿಗಳ ಮಿಶ್ರಣದಿಂದ ಹುಟ್ಟಿದುವು. ಮುಂದೆ ಚೈನಾದಲ್ಲಿಯೂ ಸಾಂಕೇತಿಕ ಚಿತ್ರಲಿಪಿ ಹುಟ್ಟಿತು. ಈ ಲಿಪಿ ಮಾತ್ರ ಚಿತ್ರಲಿಪಿಯ ಮಟ್ಟದಿಂದ ಮುಂದೆ ವರ್ಣಮಾಲೆಯ ಮಟ್ಟಕ್ಕೆ ಏರಲೇ ಇಲ್ಲ.

ಮಾನವ ಸಮಾಜಗಳ ಬೆಳವಣಿಗೆಯಲ್ಲಿ ಬರವಣಿಗೆಯ ಪಾತ್ರ ಬಲು ಮುಖ್ಯವಾದದ್ದು. ಒಪ್ಪಂದಗಳು, ಕಾನೂನುಗಳು, ಆಜ್ಞೆಗಳು ಈ ಎಲ್ಲವನ್ನೂ ದಾಖಲೆ ಮಾಡಿಡಲು ಇದರಿಂದ ಸಾಧ್ಯವಾಯಿತು. ಇದಾದ ಮೇಲೆ ಪುಟ್ಟ ಪುಟ್ಟ ನಗರ ರಾಜ್ಯಗಳು ದೊಡ್ಡದಾಗಿ ಬೆಳೆದುವು. ಇದಕ್ಕೆ ಕಾರಣ ಇಷ್ಟು. ಬರವಣಿಗೆ ಬರುವ ಮೊದಲು ರಾಜನ ಆಜ್ಞೆ ಬರಿಬಾಯಿ ಮಾತಿನಲ್ಲಿ ಅಷ್ಟು ದೂರ ಹರಡುವುದು ಸಾಧ್ಯವಿರಲಿಲ್ಲ. ರಾಜಮರಣ ಹೊಂದಿದ ಮೇಲಂತೂ ಇವುಗಳ ಉಳಿವಿಗೆ ಅವಕಾಶವೇ ಇರಲಿಲ್ಲ. ಈಗ ಪರಿಸ್ಥಿತಿ ಬದ

ಲಾಯಿತು. ಮನುಷ್ಯರ, ಘಟನೆಗಳ, ನೆನಹು ಜನರ ಮನಸ್ಸಿನಲ್ಲಿ ಅಖಂಡ ಧಾರಾವಾಹಿಯಾಗಿ, ಅನೂಚಾನವಾಗಿ ಹರಿಯಲು ಮೊದಲಾಗಿ ಮನುಷ್ಯರಲ್ಲಿ ಇತಿಹಾಸದ ಬಗೆಗೆ ಜಾಗೃತಿ ಉಂಟಾಯಿತು. ಸುಮೇರಿಯದಲ್ಲಿ ಮುದ್ರೆಗಳನ್ನು ಬಹಳವಾಗಿ ಉಪಯೋಗಿಸುತ್ತಿದ್ದರು. ಇದು ಆಸಕ್ತಿ ಹುಟ್ಟಿಸತಕ್ಕ ಸಂಗತಿ. ರಾಜರುಗಳು, ಶ್ರೀಮಂತವರ್ಗದವರು, ಮತ್ತು ವರ್ತಕರು ಒಬ್ಬೊಬ್ಬರೂ ತಮ್ಮದೇ ಆದ ಮುದ್ರೆಗಳನು ಬಹಳ ಕಲಾಪೂರ್ಣವಾಗಿ ಕೊರೆಸಿಟ್ಟುಕೊಂಡಿರುತ್ತಿದ್ದರು. ಜೇಡಿನ ಮಣ್ಣಿನ ದಾಖಲೆ ಯಾವುದಕ್ಕಾದರೂ ತಮ್ಮ ಸಮ್ಮತಿಯನ್ನು ವಿಧಾಯಕ ಮಾಡಬೇಕಾದಾಗ ತಮ್ಮ ಮುದ್ರೆಯನ್ನು ಅದರ ಮೇಲೆ ಒತ್ತುತ್ತಿದ್ದರು. ಆರು ಸಾವಿರ ವರ್ಷಗಳ ಹಿಂದೆಯೇ ಮಾನವ ಇನ್ನೇನು ಮುದ್ರಣವನ್ನು ಕಂಡು ಹಿಡಿದನೋ ಎಂಬ ಸ್ಥಿತಿ ಇತ್ತು. ಈ ಜೇಡಿಮಣ್ಣಿನ ದಾಖಲೆಗಳು ಒಣಗಿ ಗಟ್ಟಿಯಾದ ಮೇಲೆ ಶಾಶ್ವತವಾಗಿ ಉಳಿಯುತ್ತಿದ್ದುವು. ಮೆಸಪೊಟೇಮಿಯದಲ್ಲಿ ಅಸಂಖ್ಯಾತ ವರ್ಷಗಳ ಕಾಲ ಕಾಗದಗಳು ಲೆಕ್ಕಪತ್ರಗಳು, ಉಳಿದ ದಾಖಲೆಗಳು ಎಲ್ಲವನ್ನೂ ಇಂತಹ, ಸುಲಭವಾಗಿ ನಾಶವಾಗದಂತಹ ಜೇಡಿಮಣ್ಣಿನ ಹಲಗೆಗಳ ಮೇಲೆ ಬರೆದಿಟ್ಟಿದ್ದರೆಂಬುದನ್ನು ಮರೆಯಬಾರದು. ಅಂದಿನ ಸಂಗತಿಗಳು ಇಷ್ಟರಮಟ್ಟಿಗೆ ತಿಳಿಯಲು ಅನುಕೂಲವಾಗಿರುವುದು ಇವರಿಂದಲೇ.

ಕಂಚು, ತಾಮ್ರ, ಚಿನ್ನ ಮತ್ತು ಬೆಳ್ಳಿ, ಈಜಿಪ್ಟ ಮತ್ತು ಸುಮೆರಿಯಗಳಲ್ಲಿ ಬಹು ಹಿಂದಿನಿಂದಲೂ ತಿಳಿದಿತ್ತು. ಉಲ್ಕೆಗಳಿಂದ ಪಡೆದ ಕಬ್ಬಿಣ ಇವರಿಗೆ ಗೊತ್ತಿದ್ದರೂ (meteoric iron) ಆ ಕಾಲದಲ್ಲಿ ಅದು ಬಹು ಅಮೂಲ್ಯ, ಅಪೂರ್ವದ ವಸ್ತುವೆಂದೆನಿಸಿತ್ತು.

ಈಜಿಪ್ಟ ಸುಮೇರಿಯಗಳ ಪಟ್ಟಣಗಳಲ್ಲಿ ಸಾಮಾನ್ಯ ಮನುಷ್ಯನ ನಿತ್ಯ ಜೀವನ ಒಂದೇ ರೀತಿಯಾಗಿದ್ದಿರಬೇಕು. ಅದಕ್ಕೆ ಮೂರೋ ನಾಲ್ಕೋ ಸಾವಿರ ವರ್ಷಗಳ ಈಚಿನ, ಅಮೆರಿಕನ ಮಾಯಾಪಟ್ಟಣಗಳಲ್ಲಿನ ಜೀವನವನ್ನು ಇದು ಬಹುಮಟ್ಟಿಗೆ ಹೋಲುತ್ತಿತ್ತು. ಒಂದು ವ್ಯತ್ಯಾಸವೇನೆಂದರೆ ಮಾಯಾಜನರಿಗೆ ಕತ್ತೆಗಳು ಮತ್ತು ಹಸುಗಳನ್ನು ಸಾಕುವದು ತಿಳಿದಿರಲಿಲ್ಲವಾದುದರಿಂದ ಇವರ ಬೀದಿಗಳಲ್ಲಿ ಈ ಪ್ರಾಣಿಗಳು ಕಾಣಿಸುತ್ತಿರಲಿಲ್ಲ. ಯುದ್ಧಗಳಿಲ್ಲದಾಗ ಮುಕ್ಕಾಲು ಭಾಗ ಜನರೆಲ್ಲಾ ನೀರಾವರಿ ಕೆಲಸ ಮತ್ತು ವ್ಯವಸಾಯದಲ್ಲಿ ನಿರತರಾಗಿರುತ್ತಿದ್ದರು. ಹಬ್ಬ ಹರಿದಿನಗಳಲ್ಲಿ ಮಾತ್ರ ಈ ಕಾರ್ಯ ನಿಲ್ಲುತ್ತಿತ್ತು. ಆಗ ಹಣದ ಉಪಯೋಗ ತಿಳಿದಿರಲಿಲ್ಲ. ಅವರಿಗೆ ಅದು ಬೇಕಾಗಿಯೂ ಇರಲಿಲ್ಲ. ಆಗಾಗ್ಗೆ ಏನಾದರೂ ಸಾಮಾನು ಕೊಳ್ಳಬೇಕಾದರೆ ಅದಲಿ_ಬದಲಿ ವ್ಯಾಪಾರ ಮಾಡುತ್ತಿದ್ದರು. ಬೇಕಾದಕ್ಕಿಂತ ಹೆಚ್ಚು ವಸ್ತುಗಳನ್ನು ಪಡೆದಿರುತ್ತಿದ್ದ ಶ್ರೀಮಂತ ವರ್ಗದವರು ಮತ್ತು ರಾಜರು ಮಾತ್ರ ಯಾವಾಗಲಾದರೊಮ್ಮೆ ಚಿನ್ನ ಬೆಳ್ಳಿಗಳ ಗಟ್ಟಿಗಳನ್ನು ಮತ್ತು ರತ್ನಗಳನ್ನು ಉಪಯೋಗಿಸಿ ವ್ಯಾಪಾರ ಮಾಡುತ್ತಿದ್ದರು. ಇವರ ಜೀವನವನ್ನು ದೇವಾಲಯ ನಿಯಂತ್ರಿಸುತ್ತಿತ್ತು. ಸುಮೇರಿಯದ ದೇವಾಲಯಗಳು ಬಹಳ ಎತ್ತರವಾಗಿರುತ್ತಿದ್ದುವು. ಇದರ ಚಾವಣಿಯ ಮೇಲಿನಿಂದ ನಕ್ಷತ್ರಗಳನ್ನು

ವೀಕ್ಷಿಸುತ್ತಿದ್ದರು. ಈಜಿಪ್ಟಿನ ದೇವಸ್ಥಾನ ಭಾರಿ ಕಟ್ಟಡವಾಗಿದ್ದರೂ ಅದಕ್ಕೆ ಒಂದೇ ಒಂದು ಅಂತಸ್ತಿರುತ್ತಿತ್ತು. ಸುಮೇರಿಯಾದ ಪುರೋಹಿತ—ರಾಜ(priest-king) ಎಲ್ಲರಿಗಿಂತ ಶ್ರೇಷ್ಠನೆನಿಸಿ ಬಹು ವೈಭವದಿಂದ ಇರುತ್ತಿದ್ದನು. ಈಜಿಪ್ಟಿನಲ್ಲಿಯಾದರೋ ಪುರೋಹಿತರಿಗಿಂತಲೂ ಮೇಲ್ಪಟ್ಟದ ವ್ಯಕ್ತಿಯೊಬ್ಬನಿರುತ್ತಿದ್ದನು. ಈತನೇ ನಾಡಿನ ಪ್ರಮುಖ ದೇವತೆಯ ಜೀವಂತ ಅವತಾರನೆನಿಸಿದ ಫ್ಯಾರೋ.

ಅಂದಿನ ಜೀವನ ಹೆಚ್ಚಿಗೆ ಬದಲಾವಣೆಗಳಿಲ್ಲದೆ ಒಂದೇ ಸಮನಾಗಿ ನಡೆದುಕೊಂಡು ಹೋಗುತ್ತಿತ್ತು. ಸಾಮಾನ್ಯ ಮನುಷ್ಯನ ನಿತ್ಯ ಜೀವನ ದುಡಿತದಿಂದ ತುಂಬಿದ್ದರೂ ಉಲ್ಲಾಸ ಭರಿತವಾಗಿತ್ತು. ದೇಶಕ್ಕೆ ಹೊಸಬರು ಬರುತ್ತಿದ್ದುದೇ ಅಪರೂಪ. ಹಾಗೆ ಬಂದವರೂ ಸಹ ಇಲ್ಲಿ ಸುಖವಾಗಿರಲಾಗುತ್ತಿರಲಿಲ್ಲ. ಅದೆಷ್ಟೋ ಕಾಲದಿಂದ ನಡೆದು ಬಂದ ಕಟ್ಟಳೆಗಳಿಗನುಸಾರವಾಗಿ ಪುರೋಹಿತನು ಜನಜೀವನವನ್ನು ನಡೆಸಿಕೊಂಡು ಹೋಗುತ್ತಿದ್ದನು. ನಕ್ಷತ್ರಗಳನ್ನು ವೀಕ್ಷಿಸಿ ಬಿತ್ತನೆಯ ಕಾಲವನ್ನು ತಿಳಿಯುವುದು, ಯಜ್ಞಯಾಗಗಳಲ್ಲಿ ಶಕುನಗಳ ಫಲ ಹೇಳುವುದು, ಕನಸುಗಳ ಅರ್ಥ ತಿಳಿಸಿ ಮುನ್ನೆಚ್ಚರಿಕೆ ಕೊಡುವುದು, ಇದೆಲ್ಲವನ್ನೂ ಇವನು ಮಾಡುತ್ತಿದ್ದನು. ಜನರು ಜೀವನದಲ್ಲಿ ದುಡಿದು, ಪ್ರೇಮಿಸಿ, ಮಡಿಯುತ್ತಿದ್ದರು. ಒಟ್ಟಿನಲ್ಲಿ ಇವರ ಜೀವನ ಸುಖಕರವಾಗಿರಲಿಲ್ಲ ಎನ್ನಲಾಗುವುದಿಲ್ಲ. ತಮಗಿಂತ ಮುಂಚಿನ ಮಾನವನ ಅನಾಗರಿಕತೆಯ ನೆನಪಾಗಲೀ ಮಾನವ ವರ್ಗದ ಭವಿಷ್ಯವೇನಿರಬಹುದೆಂಬ ಯೋಚನೆಯಾಗಲೀ ಇವರಿಗಿರಲಿಲ್ಲ. ಆ ಕಾಲದಲ್ಲಿಯೂ ಕೆಲವು ರಾಜರು ದಯಾವಂತರಾಗಿರುತ್ತಿದ್ದರು. ಈಜಿಪ್ಟಿನಲ್ಲಿ ತೊಂಬತ್ತು ವರ್ಷ ರಾಜ್ಯವಾಳಿದ ಎರಡನೆಯ ಪೆಪಿ ಇಂತಹವನು. ಕೆಲವು ವೇಳೆ ರಾಜನು ಅತಿ ಆಶೆಯುಳ್ಳವನಾಗಿ ಪ್ರಜೆಗಳನ್ನೆಲ್ಲಾ ಸೇರಿಸಿ ಸೈನ್ಯ ಕಟ್ಟಿ ನೆರೆಹೊರೆಯ ರಾಜ್ಯಗಳೊಡನೆ ಯುದ್ಧ ಮಾಡಿ ಕೊಳ್ಳೆ ಹೊಡೆಯಲು ಕಳುಹಿಸುತ್ತಿದ್ದನು. ಕೆಲವು ಸಲ ಬಲಾತ್ಕಾರದಿಂದ ಅವರ ಕೈಯ್ಯಲ್ಲಿ ದೊಡ್ಡ ದೊಡ್ಡ ಕಟ್ಟಡಗಳನ್ನು ಕಟ್ಟಿಸುತ್ತಿದ್ದನು. ಖುಫು (Cheops), ಖೆಫ್ರೆನ್, (Chephren), ಮೈಸೆರ್ನಿಯಸ್ (Mycerneus) ಇವರೆಲ್ಲಾ ಶವಸಂಸ್ಕಾರಕ್ಕೋಸ್ಕರ ಭಾರಿಭಾರಿ ಗುಡ್ಡಗಳಾಕಾರದಲ್ಲಿರುವ ಪಿರಮಿಡ್ಡುಗಳನ್ನು ಕಟ್ಟಿಸಿದುದು ಹೀಗೆಯೇ. ಈ ಪಿರಮಿಡ್ಡುಗಳು ಗಿಜೆ ಎಂಬಲ್ಲಿವೆ. ಇವುಗಳಲ್ಲಿ ಎಲ್ಲಕ್ಕಿಂತ ದೊಡ್ಡದು 450 ಅಡಿ ಎತ್ತರವಿದೆ. ಇದರಲ್ಲಿನ ಕಲ್ಲುಗಳ ಒಟ್ಟು ತೂಕ 4,883000 ಟನ್ನುಗಳು. ಇವೆಲ್ಲವನ್ನೂ ನೈಲ್ ನದಿಯಲ್ಲಿ ದೋಣಿಗಳ ಮೇಲೆ ಹೇರಿಕೊಂಡು ತರಲಾಯಿತು. ಮುಖ್ಯವಾಗಿ ಮನುಷ್ಯರ ದೇಹ ಶಕ್ತಿಯನ್ನುಪಯೋಗಿಸಿ ಇಷ್ಟು ಕಲ್ಲುಗಳನ್ನೂ ಪಿರಮಿಡ್ಡಾಗಿ ರಚಿಸಿದರು. ಒಂದು ಭಾರಿ ಯುದ್ಧದಲ್ಲಿ ಹೋರಾಡಿದ್ದರೂ ಈಜಿಪ್ಟ್ ದೇಶ ಇಷ್ಟು ಬಳಲಿ ಹೋಗುತ್ತಿರಲಿಲ್ಲ.

16. ಪ್ರಾಚೀನ ಅಲೆಮಾರಿ ಜನರು

ಕ್ರಿ.ಪೂ. 6000 ದಿಂದ 3000 ದವರೆಗೆ ಈಜಿಪ್ಟ್ ಮತ್ತು ಮೆಸಪೊಟೇಮಿಯ

ಗಳಲ್ಲದೆ ಉಳಿದ ಕೆಲವೆಡೆಗಳಲ್ಲಿ ಸಹ ಮನುಷ್ಯರು ವ್ಯವಸಾಯ ಮಾಡುವುದನ್ನು ಕಲಿತು ನೆಲೆ ನಿಂತು ನಗರಗಳನ್ನು ಸ್ಥಾಪಿಸಲಾರಂಭಿಸಿದರು. ನೀರಿನ ಆಸರೆ ಇದ್ದು, ವರ್ಷ ಪೂರ್ತಿ ಒಂದೇ ಸಮನಾಗಿ ಆಹಾರ ಸಿಗುವುದೆಂಬ ಭರವಸೆ, ಇದ್ದಲ್ಲೆಲ್ಲಾ ಮಾನವನು ಕಷ್ಟದಿಂದ ತುಂಬಿದ ಬೇಟೆ ಮತ್ತು ಅಲೆದಾಟದ ಅಸ್ಥಿರ ಜೀವನವನ್ನು ಬಿಟ್ಟು ನೆಲೆಯಾಗಿ ನಿಲ್ಲಲು ಮೊದಲು ಮಾಡಿದನು. ಟೈಗ್ರಿಸ್‌ನ ಮೊದಲ ಭಾಗದಲ್ಲಿ ಅಸ್ಸೀರಿಯನ್ನರೆಂಬ ಜನರು ನಗರಗಳನ್ನು ಸ್ಥಾಪಿಸುತ್ತಿದ್ದರು. ಏಷ್ಯಾ ಮೈನರಿನ ಕಣಿವೆ ಪ್ರದೇಶಗಳ ಮತ್ತು ದ್ವೀಪಗಳಲ್ಲಿ ಮಾನವರ ಸಣ್ಣ ಸಣ್ಣ ಗುಂಪುಗಳು ನಾಗರಿಕತೆಯತ್ತ ಮುನ್ನಡೆಯುತ್ತಿದುವು. ಇಂಡಿಯ ಮತ್ತು ಚೀನಾದಲ್ಲೂ ಪರಿಸ್ಥಿತಿ ಅನುಕೂಲವಾಗಿದ್ದಲ್ಲೆಲ್ಲಾ ಹೀಗೆ ಆಗುತ್ತಿದ್ದಿರಬೇಕು. ಯೂರೋಪಿನಲ್ಲಿಯೂ ಮೀನು ಸಮೃದ್ಧಿಯಾಗಿ ಸಿಗುವ ಸರೋವರಗಳಲ್ಲಿ ನೀರಿನಲ್ಲಿ ಕಂಭಗಳನ್ನು ನಿಲ್ಲಿಸಿ ಕಟ್ಟಿದ ಮನೆಗಳಲ್ಲಿ ಜನ ವಾಸಿಸುತ್ತಾ ವ್ಯವಸಾಯ, ಮೀನುಗಾರಿಕೆ ಮತ್ತು ಬೇಟೆ ಇವು ಮೂರರಿಂದಲೂ ಜೀವನ ನಡೆಸುತ್ತಿದ್ದರು. ಆದರೂ ಅತಿ ಬೆಂಗಾಡು, ಅಥವಾ ಅತಿ ದಟ್ಟವಾದ ಕಾಡುಗಳು ಇಲ್ಲವೇ ಅತಿ ಕಠಿಣವಾದ ವಾಯುಗುಣ ಇವೆಲ್ಲಾ ಕಾರಣಗಳಿಂದ ಪೂರ್ವಾರ್ಧಗೋಳದ ಅನೇಕ ಭಾಗಗಳಲ್ಲಿ ಜನ ನೆಲಸಲು ಸಾಧ್ಯವಿರಲಿಲ್ಲ. ಮನುಷ್ಯನ ಹತ್ತಿರ ಇದ್ದ ಉಪಕರಣಗಳು, ಆತನಿಗೆ ಆಗ ಇದ್ದ ತಿಳಿವಳಿಕೆ ಅಂತಹ ಸ್ಥಳಗಳಲ್ಲಿ ನೆಲಸಲು ಸಾಕಾದಷ್ಟು ಮುಂದುವರಿದಿರಲಿಲ್ಲ.

ಆದಿಮ ಮಾನವ ಎಲ್ಲಿಯೇ ಆಗಲಿ ನೆಲೆಯಾಗಿ ನಿಲ್ಲಲು ನೀರಿನ ಸರಬರಾಜು ಮತ್ತು ಬೆಚ್ಚನೆಯ ಹವಾಗುಣ ಇರಬೇಕಾಗಿತ್ತು. ಇಷ್ಟು ಅನುಕೂಲ ಇಲ್ಲದಿದ್ದರೆ ಬೇಟೆ ಪ್ರಾಣಿಗಳ ಹಿಂದೆ ತಿರುಗುವ ಬೇಟೆಗಾರರಾಗಿಯೋ, ಹುಲ್ಲು ಬೆಳೆದಲ್ಲೆಲ್ಲಾ ತಮ್ಮ ಪ್ರಾಣಿಗಳನ್ನು ಹೊಡೆದುಕೊಂಡು ಹೋಗುವ ಮಂದೆಗಾರರಾಗಿಯೋ ಸ್ಥಳದಿಂದ ಸ್ಥಳಕ್ಕೆ ಅಲೆದಾಡುತ್ತಾ ಜೀವಿಸಬೇಕಾಗಿತ್ತು. ಬೇಟೆ ಜೀವನದಿಂದ ಮಂದೆಗಾರರ ಜೀವನಕ್ಕೆ ಮಾನವ ಪರಿವರ್ತನೆ ಹೊಂದಲು ಬಹುಕಾಲ ಹಿಡಿದಿರಬೇಕು. ಏಷ್ಯಾ ಖಂಡದಲ್ಲಿ ಕಾಡು ಹಸುಗಳನ್ನೋ ಕಾಡು ಕುದುರೆಗಳನ್ನೋ ಬೇಟೆಯಾಡುತ್ತಿದ್ದ ಮನುಷ್ಯರಿಗೆ ಯಾವಾಗಲೋ ಒಂದು ಕಾಲದಲ್ಲಿ ಅವುಗಳು ತಮ್ಮ ಸ್ವತ್ತು ಎಂಬ ಭಾವನೆ ಬಂದಿರಬೇಕು. ಅವುಗಳನ್ನು ಕಣಿವೆಗಳೊಳಕ್ಕೆ ಕೂಡಿ ಅವುಗಳ ವೈರಿಗಳಾದ ಕೋಳಿ, ಕಾಡು ನಾಯಿ ಮತ್ತಿತರ ದುಷ್ಟ ಮೃಗಗಳ ಕೈಗೆ ಸಿಗದಂತೆ ರಕ್ಷಿಸತೊಡಗಿರಬೇಕು. ಈ ರೀತಿಯಲ್ಲಿ ಮಂದೆ ಕಾಯುವವರ ಜೀವನ ಮೊದಲಾಯಿತು.

ಅಂತು ದೊಡ್ಡ ದೊಡ್ಡ ನದಿ ತೀರಗಳಲ್ಲಿ ವ್ಯವಸಾಯಗಾರರು ಪ್ರಾಚೀನ ನಾಗರಿಕತೆಗಳನ್ನು ಸ್ಥಾಪಿಸುತ್ತಿದ್ದಾಗಲೇ ಮಂದೆ ಕಾಯುವ ಜೀವನವೂ ಮೊದಲಾಯಿತು. ಚಳಿಗಾಲದಲ್ಲಿ ಹುಲ್ಲು ಬೆಳೆಯುವಲ್ಲಿಂದ ಬೇಸಿಗೆಯಲ್ಲಿ ಹುಲ್ಲು ಸಿಗುವಲ್ಲಿಗೆ, ಈ ಮಂದೆ ಗಾಯುವವರು ಹಿಂದಕ್ಕೂ ಮುಂದಕ್ಕೂ ಓಡಾಡುತ್ತಲೇ ಇರಬೇಕಾಗಿತ್ತು. ಒಟ್ಟಿನಲ್ಲಿ ಇವರು ವ್ಯವಸಾಯಗಾರರಿಗಿಂತ ಗಟ್ಟಿಮುಟ್ಟಾಗಿರುತ್ತಿದ್ದರು. ಇವರಲ್ಲಿ ಸಂತಾನಾಭಿವೃದ್ಧಿ

ಕಡಿಮೆಯಾದುದರಿಂದ ಇವರ ಸಂಖ್ಯೆಯೂ ಅಷ್ಟು ಹೆಚ್ಚಾಗಿರುತ್ತಿರಲಿಲ್ಲ. ಶಾಶ್ವತವಾದ ದೇವಸ್ಥಾನಗಳಾಗಲೀ ಪುರೋಹಿತ ವರ್ಗವಾಗಲೀ ಇವರಲ್ಲಿರಲಿಲ್ಲ. ಒಟ್ಟಿನಲ್ಲಿ ಇವರ ಬಳಿ ಹೆಚ್ಚಿಗೆ ಏನೂ ಇರುತ್ತಿರಲಿಲ್ಲ. ಅಂದ ಮಾತ್ರಕ್ಕೆ ಇವರು ವ್ಯವಸಾಯಗಾರರಷ್ಟು ಮುಂದುವರಿದವರಲ್ಲವೆಂದು ಭಾವಿಸಲಾಗದು. ಇವರ ಜೀವನ ವ್ಯವಸಾಯ ಜೀವನಕ್ಕಿಂತ ಎಷ್ಟೋ ವಿಧದಲ್ಲಿ ತುಂಬು ಜೀವನವಾಗಿತ್ತು. ಇವರಲ್ಲಿ ಮನುಷ್ಯರು ಹೆಚ್ಚು ಸ್ವಾವಲಂಬಿಗಳಾಗಿದ್ದರು. ವ್ಯವಸಾಯಗಾರರಲ್ಲಿ ಯಾವದೋ ಸಾಮಾನ್ಯ ಮನುಷ್ಯ ಕೇವಲ "ಗುಂಪಿನಲ್ಲೊಬ್ಬ"ನಾಗಿರುತ್ತಿದ್ದನು. ಮಂದೆಗಾವಲರಲ್ಲಿ ಮುಂದಾಳುವಿಗೆ ಇದ್ದ ಪ್ರಾಮುಖ್ಯತೆ ಮಂತ್ರವಾದಿಗಿರುತ್ತಿರಲಿಲ್ಲ.

ಯಾವಾಗಲೂ ಸಂಚರಿಸುತ್ತಾ ಇದ್ದ ಮಂದೆ ಮೇಯಿಸುವ ಮನುಷ್ಯರ ಜೀವನ ದೃಷ್ಟಿ ವಿಶಾಲವಾಗಿರುತ್ತಿತ್ತು. ಇವರಿಗೆ ಅನೇಕ ನಾಡುಗಳೊಡನೆ ಸಂಪರ್ಕ ಇರುತ್ತಿತ್ತು. ಅಪರಿಚಿತರೊಡನೆ ವ್ಯವಹರಿಸುವುದು ಇವರಿಗೆ ಸಾಧಾರಣವಾಗಿತ್ತು. ಹುಲ್ಲುಗಾವಲಿಗೋಸ್ಕರ ಸ್ಪರ್ಧಿಸುತ್ತಿದ್ದ ಇತರರ ತಂಡಗಳೊಡನೆ ಒಪ್ಪಂದ ಮಾಡಿಕೊಳ್ಳುವುದು, ಒಳಸಂಚು ಮಾಡುವುದು ಇವರಿಗೆ ಅನಿವಾರ್ಯವಾಗಿತ್ತು. ಕಣಿವೆಗಳು ಮತ್ತು ಬಂಡೆಗಲ್ಲಿನ ಪ್ರದೇಶಗಳಲ್ಲಿ ಸಂಚರಿಸುತ್ತಿದ್ದುದರಿಂದ ಇವರು ವ್ಯವಸಾಯಗಾರನಿಗಿಂತ ಹೆಚ್ಚಾಗಿ ಖನಿಜಗಳ ವಿಷಯ ಬಲ್ಲವರಾಗಿದ್ದರು. ಆದುದರಿಂದ ಲೋಹ ತೆಗೆಯುವ ಲೋಹಗಾರಿಕೆ ವಿದ್ಯೆಯಲ್ಲಿಯೂ ಇವರು ಹೆಚ್ಚು ಕುಶಲರಾಗಿದ್ದಿರಬೇಕು. ಏಕೆ! ಕಂಚು, ಇದಕ್ಕಿಂತ ಹೆಚ್ಚಾಗಿ ಕಬ್ಬಿಣವನ್ನು ತಯಾರು ಮಾಡುವುದನ್ನು ಕಂಡು ಹಿಡಿದಿದ್ದೂ ಇವರೇ ಇರಬಹುದು. ಆದುದರಿಂದ ತೆಗೆದ ಕಬ್ಬಿಣ (ಅಂದರೆ ಉಲ್ಕೆಯಲ್ಲಿ ಸಿಕ್ಕಿದ ಕಬ್ಬಿಣ ಅಲ್ಲ) ದಿಂದ ಮಾಡಿದ ಉಪಕರಣಗಳೆಲ್ಲೆಲ್ಲಾ ಹಳೆಯ ಉಪಕರಣಗಳು ಪ್ರಾಚೀನ ನಾಗರಿಕತೆಯ ನಾಡುಗಳಿಂದ ಬಹುದೂರದಲ್ಲಿರುವ ಮಧ್ಯ ಯೂರೋಪಿನಲ್ಲಿ ಸಿಕ್ಕಿವೆ.

ಆದರೆ ನೆಲನಿಂತ ವ್ಯವಸಾಯಗಾರರು ಬೇರೆ ಕೆಲವು ವಿಧದಲ್ಲಿ ಮುಂದುವರಿದಿದ್ದರು. ಇವರು ಬಟ್ಟೆ ನೇಯುತ್ತಿದ್ದರು, ಮಡಿಕೆಕುಡಿಕೆಗಳನ್ನು ಮಾಡುತ್ತಿದ್ದರು. ಅಲ್ಲದೆ ಇನ್ನೂ ಅನೇಕ ಉಪಯುಕ್ತ ವಸ್ತುಗಳನ್ನು ಪಡೆದಿದ್ದರು. ಅಂದ ಮೇಲೆ ಇವೆರಡೂ ವಿಧದ ಜನರ ನಡುವೆ ವ್ಯಾಪಾರ ಮತ್ತು ಲೂಟಿ ಸಹ ನಡೆಯುತ್ತಿದ್ದಿರಬೇಕು. ಅದರಲ್ಲೂ ಒಂದೆಡೆ ಮರಳು ಕಾಡುಗಳು, ಮತ್ತೊಂದೆಡೆ ಋತುಮಾನಗಳಿಗೆ ತಕ್ಕಂತೆ ಬದಲಾಗುತ್ತಿದ್ದ ಭೂಪ್ರದೇಶ ಸೇರುತ್ತಿದ್ದ ಸುಮೇರಿಯದಲ್ಲಿ ಮಂದೆ ಕಾಯುವವರು ಸಾಗುವಳಿ ಮಾಡಿದ ಜಮೀನುಗಳ ಹತ್ತಿರವೇ ಪಾಳೆಯ ಹಾಕುತ್ತಿದ್ದಿರಬೇಕು. ಜಿಪ್ಸಿಗಳು (ಕೊರಮರು) ಈಗಲೂ ಮಾಡುವಂತೆ ಇವರು ಹರುಕುಮುರುಕ ಕೆಲಸಗಳು (Tinkering), ಸಣ್ಣ ಪುಟ್ಟ ವ್ಯಾಪಾರಗಳು ಮತ್ತು ಕಳ್ಳತನಗಳನ್ನು ಮಾಡುತ್ತಿದ್ದಿರಬೇಕು. (ಆದರೆ ಇಂದಿನ ಜಿಪ್ಸಿಗಳಂತೆ ಇವರು ಕೋಳಿ ಕದಿಯುತ್ತಿರಲಿಲ್ಲ. ಆಗ ಇನ್ನೂ ಕೋಳಿ ಸಾಕುವುದು ಮನುಷ್ಯನಿಗೆ ತಿಳಿದಿರಲಿಲ್ಲ. ಇಂಡಿಯಾ ದೇಶದ ಕಾಡು

ಗಳಲ್ಲಿರುತ್ತಿದ್ದ ಕೋಳಿಯನ್ನು ಪಳಗಿಸಿದ್ದು ಮೊದಲು ಕ್ರಿ.ಪೂ. 1000ದಲ್ಲಿ) ಇವರು ಅಮೂಲ್ಯ ರತ್ನಗಳು, ಲೋಹ ಮತ್ತು ಹದ ಮಾಡಿದ ಚರ್ಮದ ಸಾಮಾನುಗಳನ್ನು ತರುತ್ತಿದ್ದರು. ಇವರಲ್ಲಿ ಬೇಟೆಯಾಡುವವರು ಮೃಗ ಚರ್ಮಗಳನ್ನು ತರುತ್ತಿದ್ದರು. ಇವುಗಳಿಗೆ ಬದಲಾಗಿ ಪಟ್ಟಣವಾಸಿಗಳಿಂದ ಮಡಿಕೆಕುಡಿಕೆಗಳು, ಮಣಿಗಳು, ಗಾಜಿನ ಸಾಮಾನುಗಳು, ಬಟ್ಟೆಗಳು ಮತ್ತಿತರ ಇಂತಹ ತಯಾರಾದ ಮಾಲುಗಳನ್ನು ಪಡೆಯುತ್ತಿದ್ದರು.

ಸುಮೇರಿಯ ಮತ್ತು ಪ್ರಾಚೀನ ಈಜಿಪ್ಟಿನ ಕಾಲದಲ್ಲಿ ಇಂತಹ ಅಲೆದಾಡುವ ಜನಾಂಗಗಳು ಮುಖ್ಯವಾಗಿ ಮೂರು ಪ್ರದೇಶಗಳಲ್ಲಿ ಇದ್ದುವು. ಮೊದಲನೆಯದಾಗಿ, ಯೂರೋಪಿನ ಕಾಡುಗಳಲ್ಲಿ ಹೊಂಬಣ್ಣದ ಕೂದಲು ಮತ್ತು ನೀಲಿಕಣ್ಣುಗಳನ್ನುಳ್ಳ ಬಿಳಿಬಣ್ಣದ ನಾರ್ಡಿಕ್ ಜನರಿದ್ದರು. ಕೆಳಮಟ್ಟದಲ್ಲಿದ್ದ ಇವರು ಬೇಟೆ ಮತ್ತು ಮಂದೆ ಸಾಕುವುದು ಎರಡನ್ನೂ ಮಾಡುತ್ತಿದ್ದರು. ಕ್ರಿ.ಪೂ. 1500ಕ್ಕೆ ಮುಂಚೆ ಇವರನ್ನು ಪ್ರಾಚೀನ ನಾಗರಿಕ ಜನರು ಕಂಡಿರಲೇ ಇಲ್ಲವೆನ್ನಬಹುದು. ಎರಡನೆಯದಾಗಿ, ಪೂರ್ವ ಏಷ್ಯದ ಸ್ಟೆಪ್ಪಿಗಳಲ್ಲಿ ಮಂಗೋಲ ಕುಲದ ಹೂಣರು ಇದ್ದರು. ಇವರು ಕುದುರೆ ಪಳಗಿಸುವುದನ್ನು ಮೊದಲು ಮಾಡಿದ್ದರು. ತಮ್ಮ ಬೇಸಿಗೆ ಮತ್ತು ಚಳಿಗಾಲದ ವಸತಿಗಳ ನಡುವೆ ಬಹು ವೇಗವಾಗಿ ಬಹುದೂರ ಚಲಿಸುವ ಅಭ್ಯಾಸ ಇವರಲ್ಲಿ ಆಗಲೇ ಪ್ರಾರಂಭವಾಗಿದ್ದು. ಕ್ಯಾಸ್ಪಿಯನ್ ಸಮುದ್ರ ಈಗ ಇರುವುದಕ್ಕಿಂತ ಆಗ ವಿಶಾಲವಾಗಿದ್ದುದೂ, ರಷ್ಯಾದಲ್ಲಿ ವಿಸ್ತಾರವಾದ ಜೌಗು ಪ್ರದೇಶಗಳಿದ್ದುದೂ ನಾರ್ಡಿಕರು ಮತ್ತು ಹೂಣರು ಒಬ್ಬರೊಡನೊಬ್ಬರು ಸಂಪರ್ಕ ಬೆಳೆಸಲು ಅಡ್ಡಿಯಾಗಿರಬೇಕು. ಅಂದಿನ ರಷ್ಯದ ಹೆಚ್ಚು ಭಾಗ ಸರೋವರಗಳು ಮತ್ತು ಜೌಗು ಪ್ರದೇಶಗಳಿಂದ ಮುಚ್ಚಿತ್ತು. ಸಿರಿಯ ಮತ್ತು ಅರೇಬಿಯಾದ ಮರಳು ಕಾಡುಗಳು ಬರಬರುತ್ತಾ ಮತ್ತೂ ಬಂಜರಾಗುತ್ತಿದ್ದುವು. ಇಲ್ಲಿ ಕಪ್ಪು-ಬಿಳಿ, ಅಥವಾ ಕಂದು ಬಣ್ಣದ ಸೆಮಿಟಿಕ್ ಜನರು ಕುರಿ, ಮೇಕೆ ಮತ್ತು ಕತ್ತೆಗಳ ಮಂದೆಗಳನ್ನು ಒಂದೆಡೆಯಿಂದ ಮತ್ತೊಂದೆಡೆಗೆ ಹೊಡೆದುಕೊಂಡು ಹೋಗುತ್ತಾ ಜೀವಿಸುತ್ತಿದ್ದರು. ಈ ಮೂವರು ಅಲೆಮಾರಿ ಕುಲದವರಲ್ಲಿ ಮೂರನೆಯವರಾದ ಸೆಮಿಟಿಕರು ಮತ್ತು ನೀಗ್ರೋಕುಲಕ್ಕೆ ಹೆಚ್ಚು ಸಂಬಂಧ ಪಡೆದ ಏಲಮೈಟ್ (Elamites) ಜನರು ಪೂರ್ವದ ನಾಗರಿಕತೆಗಳೊಡನೆ ನಿಕಟ ಸಂಪರ್ಕ ಪಡೆದರು. ಮೊದಲು ಇವರು ವ್ಯಾಪಾರ ಮತ್ತು ಕೊಳ್ಳೆ ಹೊಡೆಯುವುದರಲ್ಲಿ ತೃಪ್ತರಾಗಿದ್ದರು. ಕೊನೆಗೆ ಇವರಲ್ಲಿ ಪ್ರತಿಭಾವಂತ ಮುಂದಾಳುಗಳು ರಾಜ್ಯಗಳನ್ನು ಗೆದ್ದು ಆಳಲು ಮೊದಲಿಟ್ಟರು.

ಸುಮಾರು ಕ್ರಿ.ಪೂ. 2750ರ ಹೊತ್ತಿಗೆ ಸರ್ಗಾನ್ ಎಂಬ ಸೆಮಿಟಿಕ್ ನಾಯಕನು ಸುಮೇರಿಯ ದೇಶವನ್ನು ಸಂಪೂರ್ಣವಾಗಿ ಜಯಿಸಿ ಪರ್ಷಿಯನ್ ಖಾರಿಯಿಂದ ಮೆಡಿಟರೇನಿಯನ್ ಸಮುದ್ರದವರೆಗಿನ ಎಲ್ಲಾ ಭೂಭಾಗಗಳಿಗೂ ಅಧಿಪತಿಯಾಗಿದ್ದನು. ಇವನು ಅನಕ್ಷರಸ್ಥ, ಅನಾಗರಿಕ. ಇವನ ಅನುಯಾಯಿಗಳಾದ ಅಕ್ಕೆಡಿಯನ್ನರು ಸುಮೇರಿಯನ್ ಲಿಪಿಯನ್ನು ಕಲಿತರು. ಸುಮೇರಿಯನ್ ಭಾಷೆ, ಅಧಿಕಾರಿಗಳು, ವಿದ್ಯಾವಂತರು

ಬಳಸುವ ಭಾಷೆಯಾಯಿತು. ಈ ಚಕ್ರಾಧಿಪತ್ಯ ಎರಡು ಶತಮಾನಗಳು ಇದ್ದು ಬಳಿಕ ನಾಶವಾಯಿತು. ಅನಂತರ ಕೆಲವು ಕಾಲ ಏಲಮೈಟರ ಅಧಿಕಾರ ನಡೆಯಿತು. ಮತ್ತೆ ಅ್ಯಮೊರೈಟರೆಂಬ (Amorite) ಇನ್ನೊಂದು ಸೆಮಿಟಿಕ್ ಪಂಗಡದವರು ನಿಧಾನವಾಗಿ ಸುಮೇರಿಯದ ಮೇಲೆ ತಮ್ಮ ಅಧಿಕಾರವನ್ನು ಸ್ಥಾಪಿಸಿದರು. ಅದುವರೆಗೆ ಸಣ್ಣದಾಗಿದ್ದ ಬೇಬಿಲಾನ್ ಎಂಬ ನದೀತೀರದ ಪಟ್ಟಣ ಇವರ ರಾಜಧಾನಿಯಾಯಿತು. ಇವರ ಚಕ್ರಾಧಿಪತ್ಯಕ್ಕೆ ಮೊದಲ ಬೇಬಿಲಾನ್ ಚಕ್ರಾಧಿಪತ್ಯವೆನ್ನುತ್ತಾರೆ. ಕ್ರಿ.ಪೂ. 2100 ರ ಸುಮಾರಿನಲ್ಲಿ ಆಳುತ್ತಿದ್ದ ಹಮ್ಮುರಬಿ ಎಂಬ ಪ್ರಮುಖರಾಜ ಈ ಚಕ್ರಾಧಿಪತ್ಯವನ್ನು ಬಲಪಡಿಸಿದನು. ಚರಿತ್ರೆಯಲ್ಲಿ ಮೊಟ್ಟಮೊದಲು ಕಾಣಬರುವ ನ್ಯಾಯಸೂತ್ರ (Law Code) ವನ್ನು ತಯಾರಿಸಿದವನು ಈತನೇ.

ಈ ರೀತಿ ಸುಲಭವಾಗಿ ಬಂದು ದಾಳಿ ಮಾಡಲು ನೈಲ್ ನದಿ ಪ್ರದೇಶ ಅಲೆಮಾರಿ ಜನರಿಗೆ ಅನುಕೂಲವಾಗಿರಲಿಲ್ಲ. ಆದರೂ ಹಮ್ಮುರಬಿಯ ಕಾಲದಲ್ಲಿ ಸೆಮಿಟಿಕ್ ಜನ ಇಲ್ಲಿ ದಂಡೆತ್ತಿ ಬಂದು ವಿಜಯ ಹೊಂದಿದರು. ಹಲವು ಶತಮಾನಗಳು ಸೆಮಿಟಿಕ್ ದೊರೆಗಳೇ ಈಜಿಪ್ಟಿನ "ಫ್ಯಾರೋ"ಗಳಾಗಿದ್ದರು. ಈ ಮನೆತನದ ದೊರೆಗಳಿಗೆ ಹೈಕ್ಸಾಸ್ ಅಥವಾ ಕುರುಬ ದೊರೆಗಳು ಎನ್ನುತ್ತಾರೆ. ಈ ಸೆಮಿಟಿಕ್ ಜನ ಈಜಿಪ್ಟಿನ ಜನರೊಂದಿಗೆ ಬೆರೆಯಲಿಲ್ಲ. ಈಜಿಪ್ಟಿನ ಜನ ಇವರನ್ನು ವಿದೇಶೀಯರು ಅನಾಗರಿಕರು ಎಂದು ದ್ವೇಷ ಭಾವದಿಂದಲೇ ಕಾಣುತ್ತಿದ್ದರು. ಕೊನೆಗೆ ಕ್ರಿ.ಪೂ. 1600 ರ ಸುಮಾರಿಗೆ ದಂಗೆಯೆದ್ದು ಓಡಿಸಿಬಿಟ್ಟರು.

ಸುಮೇರಿಯದಲ್ಲಿ ಮಾತ್ರ ಸೆಮಿಟಿಕ್ ಜನ ಶಾಶ್ವತವಾಗಿ ನಿಂತು ಸುಮೇರಿಯನ್ನರೊಡನೆ ಬೆರೆತುಹೋದರು. ಬೇಬಿಲಾನಿನ ಭಾಷೆ ಸೆಮಿಟಿಕ್ ಭಾಷೆಯಾಯಿತು. ಚಕ್ರಾಧಿಪತ್ಯ ಸೆಮಿಟಿಕ್ ಗುಣಗಳನ್ನು ಪಡೆಯಿತು.

17 ಮೊದಲ ನಾವಿಕ ಜನಾಂಗಗಳು

ಈಗ ಇಪ್ಪತ್ತೈದು ಸಾವಿರ ಅಥವಾ ಮೂವತ್ತು ಸಾವಿರ ವರ್ಷಗಳ ಹಿಂದೆ ಮನುಷ್ಯ ಮೊದಲ ಬಾರಿಗೆ ದೋಣಿಗಳನ್ನು ತಯಾರು ಮಾಡಿಕೊಂಡನೆಂಬಂತೆ ತೋರುತ್ತದೆ. ನೀರಿನಲ್ಲಿ ಕಾಲು ಬಡಿಯುತ್ತಾ ಮುಂದೆ ಸಾಗುವಾಗ ಮರದ ದಿಮ್ಮಿ ಅಥವಾ ಗಾಳಿ ತುಂಬಿದ ಚರ್ಮಗಳನ್ನುಪಯೋಗಿಸುವುದನ್ನು ಕಡೆಯ ಪಕ್ಷ ನೂತನ ಶಿಲಾಯುಗದ ಮೊದಲಿನಲ್ಲೇ ಮನುಷ್ಯ ತಿಳಿದುಕೊಂಡಿದ್ದಿರಬಹುದು. ಈಜಿಪ್ಟ್ ಮತ್ತು ಸುಮೇರಿಯಗಳಲ್ಲಿ ನಮಗೆ ತಿಳಿದದಂದಿನಿಂದಲೂ ಬುಟ್ಟಿ ಹೆಣೆದಂತೆ ಹೆಣೆದು ಚರ್ಮದಿಂದ ಸಂದುಗಳನ್ನು ಸೋರದಂತೆ ಮುಚ್ಚಿ ಭದ್ರಪಡಿಸಿದ ದೋಣಿ16 ಉಪಯೋಗದಲ್ಲಿತ್ತು. ಅಂತಹ ದೋಣಿ ಅಲ್ಲಿ ಮತ್ತು ಐರ್‌ಲ್ಯಾಂಡ್, ವೇಲ್ಸ್‌ಗಳಲ್ಲಿ ಈಗಲೂ ಉಪಯೋಗದಲ್ಲಿದೆ. ಬೇರಿಂಗ್ ಜಲಸಂಧಿಯನ್ನು ದಾಟಲು ಈಗಲೂ ಸಹ ಸೀಲ್ ಚರ್ಮದಿಂದ ಮಾಡಿದ ದೋಣಿಗಳನ್ನು ಜನ ಉಪಯೋಗಿಸುತ್ತಾರೆ. ಆಯುಧ

ಸಲಕರಣೆಗಳು ಉತ್ತಮಗೊಂಡಂತೆ ಒಳಗಡೆ ಕೊರೆದು ಟೊಳ್ಳು ಮಾಡಿದ ಮರದ ದಿಮ್ಮಿ ಬಳಕೆಗೆ ಬಂದಿತು. ಇದರ ನಂತರ ದೋಣಿಗಳು ಮತ್ತು ಹಡಗುಗಳನ್ನು ಕಟ್ಟುವುದನ್ನು ಮನುಷ್ಯ ಕಲಿತುಕೊಂಡನು.

ಪ್ರಪಂಚದಲ್ಲಿ ಅನೇಕ ಕಡೆ ಪ್ರಚಾರದಲ್ಲಿರುವ ಪ್ರಳಯದ ಕಥೆ ಯಾವುದೋ ಒಂದು ಕಾಲದಲ್ಲಿ ಈಗ ಮೆಡಿಟರೇನಿಯನ್ ಸಮುದ್ರ ಇರುವಲ್ಲಿದ್ದ ತಗ್ಗಾದ ಭೂಪ್ರದೇಶ ನೀರಿನಿಂದ ತುಂಬಿದ್ದರ ಇತಿಹಾಸ ಎನ್ನುತ್ತಾರೆ. ಹೀಗೆಯೇ "ನೋವಾನ ದೋಣಿ"ಯ ಕಥೆ ಯಾವಾಗಲೋ ಬಹು ಹಿಂದೆ ಮಾನವರು ದೊಡ್ಡದಾದ ಹಡಗನ್ನು ಕಟ್ಟಿದುದರ ನೆನಪಿನಿಂದ ಬಂದಿರಬಹುದು.

ಪಿರಮಿಡ್ಡುಗಳನ್ನು ಕಟ್ಟುವುದಕ್ಕೆ ಬಹಳ ಹಿಂದೆಯೇ ಕೆಲವು ಸಮುದ್ರಗಳಲ್ಲಿ ಹಡಗುಗಳು ಕಂಡುಬರುತ್ತಿದ್ದುವು. ಕ್ರಿ.ಪೂ. 7000 ದ ಹೊತ್ತಿಗಾಗಲೇ ಮೆಡಿಟರೇನಿಯನ್ ಸಮುದ್ರ ಮತ್ತು ಪರ್ಷಿಯನ್ ಖಾರಿಯಲ್ಲಿ ಹಡಗುಗಳ ಸಂಚಾರ ಮೊದಲಾಗಿತ್ತು. ಇವು ಬಹುಶಃ ಚಿಸ್ತರ ಹಡಗುಗಳಾಗಿದ್ದಿರಬೇಕು. ಆದರೆ ಮಾನವ ಸ್ವಭಾವವನ್ನು ಪರೀಕ್ಷಿಸಿದರೆ, ಈ ಜನ ಬರೀ ಮೀನು ಹಿಡಿಯುವಷ್ಟಕ್ಕೆ ನಿಲ್ಲದೆ ಸಾಧ್ಯವಿದ್ದೆಡೆ ದರೋಡೆ, ಆದಾಗದಿದ್ದಲ್ಲಿ ವ್ಯಾಪಾರ ಮಾಡುತ್ತಿದ್ದರೆಂದು ಊಹಿಸಿಕೊಳ್ಳಬಹುದು.

ಇವರು ಹಡಗು ನಡೆಸುತ್ತಿದ್ದುದೆಲ್ಲಾ ಹೆಚ್ಚಾಗಿ ಭೂಪ್ರದೇಶದಿಂದ ಮುಕ್ಕಾಲು ಭಾಗ ಸುತ್ತುವರಿಯಲ್ಪಟ್ಟ ಜಲಭಾಗಗಳಲ್ಲಿ. ಇಂತಹ ಕಡೆ ಗಾಳಿ ಒಂದೇ ಸಮನೆ ಬೀಸುವುದಿಲ್ಲ. ಎಷ್ಟೋ ದಿನಗಳು ಗಾಳಿ ಬೀಸದೆಯೇ ಇರಬಹುದು. ಹೀಗಿದ್ದುದರಿಂದ ಪಟಗಳ ಸಹಾಯದಿಂದ ಹಡಗು ನಡೆಸುವ ವಿದ್ಯೆ ಅಷ್ಟೇನೂ ಅಭಿವೃದ್ಧಿಯಾಗಲಿಲ್ಲ. ಸಾಗರಗಳಲ್ಲಿ ಪ್ರಯಾಣ ಮಾಡಬಲ್ಲ ಅನೇಕ ಉಪಯುಕ್ತ ಸಾಧನಗಳಿಂದ ಸಜ್ಜಾದ ಹಡಗು ಕಳೆದ ನಾಲ್ಕು ನೂರು ವರ್ಷಗಳಿಂದ ಮಾತ್ರ ಉಪಯೋಗಕ್ಕೆ ಬಂದಿದೆ. ಪ್ರಾಚೀನ ಕಾಲದ ಹಡಗುಗಳನ್ನು ಹುಟ್ಟು ಹಾಕುತ್ತಾ ನಡೆಸುತ್ತಿದ್ದರು. ಇವು ತೀರದ ಹತ್ತಿರವೇ ಸಂಚರಿಸುತ್ತಿದ್ದುವು. ವಾತಾವರಣ ಸ್ವಲ್ಪ ಕೆರಳಿದರೂ ಸರಿ, ತಕ್ಷಣವೇ ಈ ಹಡಗುಗಳನ್ನು ರೇವಿನೊಳಕ್ಕೆ ಸಾಗಿಸಿಬಿಡುತ್ತಿದ್ದರು. ದೊಡ್ಡ ದೊಡ್ಡ "ಗ್ಯಾಲಿ"ಗಳನ್ನು ಕಟ್ಟತೊಡಗಿದಾಗ ಇವುಗಳನ್ನು ಹುಟ್ಟುಹಾಕಿ ನಡೆಸಲು ಬಹಳ ಜನ ಬೇಕಾದುದರಿಂದ ಯುದ್ಧ ಕೈದಿಗಳನ್ನು ಗ್ಯಾಲಿ ಗುಲಾಮರನ್ನಾಗಿ ನೇಮಿಸುವ ಪದ್ಧತಿ ಜಾರಿಗೆ ಬಂದಿತು.

ಸಿರಿಯ ಮತ್ತು ಅರೇಬಿಯಾ ಪ್ರದೇಶಗಳಲ್ಲಿ ಮೊದಲು ಮುಂದೆಗಾಯುತ್ತಿದ್ದ ಸೆಮಿಟಿಕ್ ಜನರು ಸುಮೇರಿಯವನ್ನು ಸ್ಥಾಪಿಸಿದರೆಂದು ಈ ಮೊದಲೇ ನೋಡಿದೆವು. ಇವರಲ್ಲಿ ಪಶ್ಚಿಮದಲ್ಲಿ ಜೀವಿಸುತ್ತಿದ್ದ ಜನರು ಸಮುದ್ರಯಾನದಲ್ಲಿ ನಿಪುಣರಾದರು. ಮೆಡಿಟರೇನಿಯನ್ ಸಮುದ್ರದ ಪೂರ್ವತೀರದಲ್ಲಿ ಈ ಜನ ಅನೇಕ ರೇವು ಪಟ್ಟಣಗಳನ್ನು ಕಟ್ಟಿದರು. ಇವುಗಳಲ್ಲಿ ಟೈರ್ ಮತ್ತು ಸಿಡನ್ ಮುಖ್ಯವಾದುವು. ಬೇಬಿಲಾನಿನಲ್ಲಿ ಹಮ್ಮುರಬಿ ಆಳುತ್ತಿದ್ದ ಹೊತ್ತಿಗಾಗಲೇ ಇವರು ಮೆಡಿಟರೇನಿಯನ್ ಪ್ರದೇಶದ ತುಂಬಾ ವ್ಯಾಪಾರಿಗಳಾಗಿ, ಪ್ರಯಾಣಿಕರಾಗಿ, ವಸಾಹತುಗಾರ (Colonists)

ರಾಗಿ ಹರಡಿಕೊಂಡರು. ಇವರೇ ಫಿನಿಷಿಯನ್ನರು ; ಸಮುದ್ರಯಾನ ಚತುರರಾದ ಸೆಮಿಟಿಕ್ ಜನರು, ಇವರು ಹೆಚ್ಚಾಗಿ ನೆಲಸಿದುದು ಸ್ಪೇನಿನಲ್ಲಿ ; ಅಲ್ಲಿಯ ಐಬೀರಿಯನ್ ಬಾಸ್ಕ್ ಜನರನ್ನು ಇವರು ಹಿಂದಕ್ಕೊತ್ತಿಬಿಟ್ಟರು. ಜಿಬ್ರಾಲ್ಟರ್ ಜಲಸಂಧಿಯ ಮೂಲಕ ಸಮುದ್ರತೀರ ಶೋಧನೆಗೋಸ್ಕರ ತಮ್ಮ ನೌಕಾಪಡೆಗಳನ್ನು ಕಳುಹಿಸುತ್ತಿದ್ದರು. ಆಫ್ರಿಕದ ಉತ್ತರ ತೀರದಲ್ಲಿಯೂ ಇವರು ವಸಾಹತುಗಳನ್ನು ಸ್ಥಾಪಿಸಿದರು. ಇಂತಹ ಒಂದು ವಸಾಹತಾದ ಕಾರ್ಥೇಜ್ ಮುಂದೆ ಬಹು ಪ್ರಾಮುಖ್ಯ ಪಡೆಯಿತು.

ಮೆಡಿಟರೇನಿಯನ್ ಸಮುದ್ರದಲ್ಲಿ ನೌಕಾಯಾನ ಮಾಡುತ್ತಿದ್ದವರಲ್ಲಿ ಫೀನಿಷಿಯನ್ನರೇ ಮೊದಲಿಗರಲ್ಲ. ಇವರಿಗಿಂತ ಮುಂಚೆಯೇ ಈಜಿಯನ್ ಜನರು ಈ ಸಮುದ್ರದ ತೀರ ಪ್ರದೇಶಗಳಲ್ಲಿ ಮತ್ತು ದ್ವೀಪಗಳಲ್ಲಿ ಪಟ್ಟಣಗಳನ್ನು ಕಟ್ಟಿಕೊಂಡು ವಾಸಿಸುತ್ತಿದ್ದರು. ಬಹುಶಃ ಇವರು ಪಶ್ಚಿಮದಲ್ಲಿದ್ದ ಬಾಸ್ಕ್ ಜನರು ದಕ್ಷಿಣದ ಬರ್ಬರರು ಮತ್ತು ಈಜಿಪ್ಷಿಯನ್ನರ ರಕ್ತ ಸಂಬಂಧಿಗಳು; ಇವರ ಭಾಷೆಗಳೂ ಈ ಮೇಲೆ ಹೇಳಿದ ಜನರ ಭಾಷೆಗಳಂತೆಯೇ ಇದ್ದುವು. ಇನ್ನೂ ಮುಂದೆ ಅಭಿವೃದ್ಧಿಗೆ ಬಂದ ಗ್ರೀಕರಿಗೂ ಇವರಿಗೂ ಯಾವ ಸಂಬಂಧವೂ ಇಲ್ಲ. ಆದರೆ ಗ್ರೀಸ್ ಮತ್ತು ಏಷ್ಯಾ ಮೈನರ್‌ಗಳಲ್ಲಿದ್ದ ಮೈಸಿನೇ (Mycenae) ಮತ್ತು ಟ್ರಾಯ್ ನಗರಗಳನ್ನು ಕಟ್ಟಿದವರು ಇವರೇ. ಕ್ರೀಟ್ ದ್ವೀಪದಲ್ಲಿದ್ದ ನಾಸಸ್ (nossos) ಇವರಿಗೆ ದೊಡ್ಡ ಕೇಂದ್ರವಾಗಿತ್ತು.

ಇಷ್ಟೇ ಕಳೆದ ಐವತ್ತು ವರ್ಷಗಳಲ್ಲಿ ಪ್ರಾಚ್ಯ ಸಂಶೋಧಕರು ನಡೆಸಿದ ಭೂಶೋಧನೆಗಳ ಫಲವಾಗಿ ಈಜಿಯನ್ ನಾಗರಿಕತೆ ಬೆಳಕಿಗೆ ಬಂದಿತು. ಅದರಲ್ಲಿಯೂ ನಾಸಸ್ ನಗರವನ್ನು ಸಂಪೂರ್ಣವಾಗಿ ಪರಿಶೋಧಿಸಿದ್ದಾರೆ. ಈ ನಗರ ಹಾಳಾದ ಮೇಲೆ ಅದೇ ಸ್ಥಳದಲ್ಲಿ ಹೊಸನಗರವಾವುದೂ ಅದೃಷ್ಟವಶಾತ್ ಹುಟ್ಟಿಕೊಳ್ಳಲಿಲ್ಲವಾದ್ದರಿಂದ ಇದರ ಅವಶೇಷಗಳು ಚೆನ್ನಾಗಿ ಕಾದಿರಿಸಲ್ಪಟ್ಟಿವೆ. ಮುಕ್ಕಾಲು ಪಾಲು ಹೆಸರೇ ಇಲ್ಲದೆ ಹೋಗುತ್ತಿದ್ದ ಈ ನಾಗರಿಕತೆಯ ಬಗ್ಗೆ ನಮಗೆ ತಿಳಿದಿರುವುದೆಲ್ಲಾ ನಾಸಸ್‌ನ ಅವಶೇಷಗಳಿಂದ ತಿಳಿದು ಬಂದಿದ್ದೇ ಆಗಿದೆ.

ನಾಸಸ್ ಕೂಡ ಈಜಿಪ್ಟಿನಷ್ಟೇ ಹಳೆಯದು. ಕ್ರಿ.ಪೂ. 4000 ದಲ್ಲೇ ಇವೆರಡು ಪ್ರದೇಶಗಳ ನಡುವೆ ಚುರುಕಾಗಿದ್ದ ವ್ಯಾಪಾರ ನಡೆಯುತ್ತಿತ್ತು. ಕ್ರಿ.ಪೂ. 2500ರಲ್ಲಿ ಅಂದರೆ ಒಂದನೆಯ ಸಾರ್ಗಾನ್ ಮತ್ತು ಹಮ್ಮುರಬಿ ಇವರುಗಳ ಮಧ್ಯಕಾಲದಲ್ಲಿ ಕ್ರೀಟನ್ ನಾಗರಿಕತೆ ಅತ್ಯುನ್ನತ ಮಟ್ಟದಲ್ಲಿತ್ತು.

ನಾಸಸ್ ಒಂದು ನಗರ ಎನ್ನುವುದಕ್ಕಿಂತ ಕ್ರೀಟನ್ ರಾಜ ಮತ್ತು ಪ್ರಜೆಗಳು ವಾಸಿಸುತ್ತಿದ್ದ ದೊಡ್ಡ ಅರಮನೆಯೆನ್ನಬಹುದು. ಅದರ ಸುತ್ತಲೂ ಕೋಟೆ ಸಹ ಇರಲಿಲ್ಲ. ಫಿನಿಷಿಯನ್ನರು ಶಕ್ತಿವಂತರಾದ ಮೇಲೆ ಮತ್ತು ಇವರಿಗಿಂತ ಭಯಂಕರರಾದ ಕಡಲುಗಳ್ಳರಾದ ಗ್ರೀಕರು ಉತ್ತರದಿಂದ ಬರತೊಡಗಿದ ಮೇಲೆ ಇದಕ್ಕೆ ಕೋಟೆ ಕಟ್ಟಿದರು.

ಈಜಿಪ್ಟಿನ ರಾಜನಿಗೆ ಫ್ಯಾರೋ ಎಂದು ಹೆಸರಿದ್ದಂತೆ ಇವರಿಗೆ ಮಿನಾಸ್ ಎಂದು ಹೆಸರಿತ್ತು. ಇವನ ಅರಮನೆಯಲ್ಲಿ ಹರಿಯುವ ನೀರಿನ ಸೌಕರ್ಯವಿತ್ತು. ಮತ್ತೆ ಯಾವ ಪ್ರಾಚೀನ ನಾಗರಿಕತೆಯಲ್ಲೂ ಕಂಡು ಬರದಂತಹ ನೀರಿನ ಸೌಕರ್ಯ ಸ್ನಾನದ ಮನೆಗಳು, ಮತ್ತಂತಹುದೇ ಬೇರೆ ಅನುಕೂಲತೆಗಳು ಈ ಅರಮನೆಯಲ್ಲಿದ್ದುವು. ಅಲ್ಲಿ ದೊಡ್ಡ ಉತ್ಸವಗಳು ಪ್ರದರ್ಶನಗಳು ನಡೆಯುತ್ತಿದ್ದುವು. ಸ್ಪೇನಿನಲ್ಲಿ ಈಗಲೂ ನಡೆಯುವ ಗೂಳಿಕಾಳಗದಂತೆಯೇ ಇರುತ್ತಿದ್ದ ಗೂಳಿಕಾಳಗಗಳು ಆಗಾಗ ನಡೆಯುತ್ತಿದ್ದುವು. ಇದ ರಲ್ಲಿ ಹೋರಾಡುತ್ತಿದ್ದ ಮನುಷ್ಯನ ಉಡಿಗೆತೊಡಿಗೆ ಸಹ ಈಗ ಆಧುನಿಕ ಕಾಲದ ಗೂಳಿ ಕಾಳಗದಲ್ಲಿ ಭಾಗವಹಿಸುವ ಮನುಷ್ಯನ ಉಡಿಗೆಯನ್ನು ಹೋಲುತ್ತಿತ್ತು. ಇದಲ್ಲದೆ ವ್ಯಾಯಾಮ ಪ್ರದರ್ಶನಗಳೂ ನಡೆಯುತ್ತಿದ್ದುವು. ಅಂದಿನ ಹೆಂಗಸರ ಉಡಿಗೆಗಳು ಬಹು ಮಟ್ಟಿಗೆ ಆಧುನಿಕ ಕಾಲದ ಉಡಿಗೆಗಳಂತೆ ಇರುತ್ತಿದ್ದುದು ಬಹು ಗಮನಾರ್ಹವಾಗಿದೆ. ಇವರು ಕಾಸೆಟ್ಟು17ಗಳನ್ನು ತೊಡುತ್ತಿದ್ದರು. ಬಟ್ಟೆಗಳನ್ನು ನಿರಿಪಟ್ಟಿಗಳಿಂದ (flounc-es) ಅಲಂಕರಿಸುತ್ತಿದ್ದರು. ಕುಂಬಾರ ಗೆಲಸ, ನೆಯ್ಗೆ, ಶಿಲ್ಪ, ಚಿತ್ರಕಲೆ, ಒಡವೆ ಮಾಡು ವುದು, ದಂತ ಕೊರೆಯುವುದು, ಲೋಹಗೆಲಸ, ಮತ್ತು ಇನ್ನೀ ಕೆಲಸಗಳೆಲ್ಲದರಲ್ಲೂ ಇವರು ಬಹು ಚತುರರಾಗಿದ್ದು ಆಶ್ಚರ್ಯಕರವಾದ ಸುಂದರ ಸಾಮಾನುಗಳನ್ನು ತಯಾರಿಸು ತ್ತಿದ್ದರು. ಇವರ ಲಿಪಿಯನ್ನು ಇನ್ನೂ ಓದಲು ಆಗಿಲ್ಲ.

ಈ ಜನರು ಕೆಲವು ಸಾವಿರ ವರ್ಷಗಳು ಹೀಗೆ ಸುಖ ಜೀವನ ನಡೆಸಿದರು. ಕ್ರಿ.ಪೂ. 2000 ದ ಕಾಲದಲ್ಲಿ ನಾಸಸ್ ಮತ್ತು ಬೇಬಿಲಾನ್ ಗಳೆರಡೂ ಉಚ್ಛ್ರಾಯ ಸ್ಥಿತಿಯಲ್ಲಿದ್ದುವು. ಇಲ್ಲಿ ಸುಸಂಸ್ಕೃತರಾದ ಜನರು ನೆಮ್ಮದಿಯಾಗಿ ಸಂತೋಷವಾಗಿ ಜೀವನ ನಡೆಸುತ್ತಿದ್ದರು. ಧಾರ್ಮಿಕ ಉತ್ಸವಗಳೂ ಬೇರೆ ಪ್ರದರ್ಶನಗಳೂ ಇಲ್ಲಿ ನಡೆಯುತ್ತಿದ್ದುವು. ಮನೆಗಳಲ್ಲಿ ಇವರ ಸೇವೆ ಮಾಡಲು, ಕೈಗಾರಿಕೆಯಿಂದ ಇವರಿಗೆ ಹಣ ಸಂಪಾದಿಸಿ ಕೊಡಲು ಗುಲಾಮರಿರುತ್ತಿದ್ದರು. ಯಾವಾಗಲೂ ಬಿಸಿಲು ಬೆಳಗು ತ್ತಿದ್ದ, ನೀಲಿ ಸಮುದ್ರದಿಂದ ಆವೃತವಾದ ಈ ದ್ವೀಪದ ಶ್ರೀಮಂತವರ್ಗದವರಿಗೆ ಜೀವನ ಬಹು ಭವ್ಯವಾಗಿ ತೋರುತ್ತಿದ್ದಿರಬೇಕು. ಅದು ಈಜಿಪ್ಟಿನಲ್ಲಿ ವಸತಿಯ ಕಾಲವೆಂಬಂತೆ ತೋರುತ್ತಿತ್ತು. ಈಗ ಈಜಿಪ್ಟಿನಲ್ಲಿ ಅಸಂಸ್ಕೃತರಾದ ಕುರುಬ-ದೊರೆಗಳು (ಹೈಕ್ಸಾಸ್) ರಾಜ್ಯವಾಳುತ್ತಿದ್ದರು. ರಾಜಕೀಯದ ದೃಷ್ಟಿಕೋನದಿಂದ ಅಂದಿನ ವ್ಯವಹಾರಗಳನ್ನು ಪರೀಕ್ಷಿಸಿದರೆ ಆಗ ಎಲ್ಲೆಡೆಯಲ್ಲೂ ಸೆಮಿಟಿಕ್ ಜನರೇ ಉನ್ನತ ಸ್ಥಿತಿಯಲ್ಲಿದ್ದರೆಂಬುದು ಕಾಣಬರುವುದು. ಈಜಿಪ್ಟಿನಲ್ಲಿ ಬೇಬಿಲಾನಿನಲ್ಲಿ ಅವರದ್ದೇ ರಾಜ್ಯಭಾರ ನಡೆಯುತ್ತಿತ್ತು. ಟೈಗ್ರಿಸ್ ನದೀ ತೀರದಲ್ಲಿ ನಿನೆವೇ (Nineveh)ಯನ್ನು ಕಟ್ಟುವ ಕೆಲಸ ನಡೆದಿತ್ತು. ಹರ್ಕ್ಯುಲೀಸನ ಸ್ತಂಭಗಳೆಂದು ಕರೆಯುವ ಜಿಬ್ರಾಲ್ಟರಿನವರೆಗೂ ಇವರು ಪ್ರಯಾಣ ಮಾಡಿ ಅಲ್ಲಲ್ಲಾ ತಮ್ಮ ವಸಾಹತುಗಳನ್ನು ಸ್ಥಾಪಿಸಿದ್ದರು.

ನಾಸಸ್‌ನ ಡೇಡಾಲಸ್ ಎಂಬ ಚತುರ ಕೆಲಸಗಾರನು ಹಾರುವ ಯಂತ್ರ-(ಇಂದಿನ ಗ್ಲೈಡರ್‌ನಂಥದ್ದಿರಬಹುದು)-ಮಾಡಲು ಪ್ರಯತ್ನಿಸಿದನೆಂದೂ ಅದು

ಮುರಿದು ಸಮುದ್ರದಲ್ಲಿ ಬಿದ್ದು ಹೋಯಿತೆಂದೂ ಗ್ರೀಕರಲ್ಲಿ ಒಂದು ಐತಿಹ್ಯವಿತ್ತು. ಇವನ್ನು ನೋಡಿದರೆ ನಾಸಸಿನಲ್ಲಿ ಕುತೂಹಲಿಗಳಾದ ಚುರುಕು ಬುದ್ಧಿಯ ಮನುಷ್ಯರಿದ್ದಿರಬೇಕೆನಿಸುತ್ತದೆ.

ಈಗ ನಮ್ಮ ಆಧುನಿಕ ಜೀವನ ಮತ್ತು ನಾಸಸಿನ ಜೀವನಗಳನ್ನು ಹೋಲಿಸಿ ನೋಡೋಣ. ಇದರಿಂದ ಸ್ವಾರಸ್ಯವಾದ ಸಂಗತಿಗಳು ಹೊರಬೀಳುತ್ತವೆ. ಕ್ರಿ.ಪೂ. 2500ರಲ್ಲಿ ಜೀವಿಸುತ್ತಿದ್ದ ಕ್ರೀಟನ್ ಮನುಷ್ಯನಿಗೆ ಕಬ್ಬಿಣ ಎಂದರೆ ಆಕಾಶದಿಂದ ಬೀಳುವ ಅಪರೂಪದ ವಸ್ತುವಾಗಿತ್ತು. ಆದುದರಿಂದ ಕಬ್ಬಿಣ ತೆಗೆಯುವುದನ್ನು ಇನ್ನೂ ಮನುಷ್ಯ ಕಲಿತಿರಲಿಲ್ಲವಾಗಿ ಉಲ್ಕಾಪಾತಗಳಿಂದ ಸಿಕ್ಕ ಕಬ್ಬಿಣ ಮಾತ್ರ ಅವರಿಗೆ ತಿಳಿದಿತ್ತು. ಎಲ್ಲೆಲ್ಲೂ ಕಬ್ಬಿಣದ ಬಳಕೆ ಇರುವ ನಮ್ಮ ಆಧುನಿಕ ಪ್ರಪಂಚಕ್ಕೂ ಇದಕ್ಕೂ ಎಷ್ಟು ವ್ಯತ್ಯಾಸ ? ಕಪ್ಪು ಸಮುದ್ರಕ್ಕೂ ಆಚೆಯ ಕೊರೆಯುವ ಚಳಿಯ ಉತ್ತರ ದೇಶಗಳಲ್ಲಿ ಕುದುರೆಯೆಂಬ ಉತ್ತಮ ಜಾತಿಯ ಕತ್ತೆಯೊಂದಿರುವುದೆಂದು ಅತನು ತಿಳಿದಿದ್ದನು. ಪ್ರಾಯಶಃ ತನ್ನಂತಹ ಭಾಷೆಗಳನ್ನೇ ಆಡುತ್ತಿದ್ದ ಮತ್ತು ತನ್ನಂತೆಯೇ ಜೀವಿಸುತ್ತಿದ್ದ ಲಿಡಿಯನ್ನರು, ಕ್ಯಾರಿಯನ್ನರು ಮತ್ತು ಟ್ರೋಜನ್ನರು (Lydians, Carians, and Trojans) ಇರುತ್ತಿದ್ದ ಗ್ರೀಸಿನ ಈಜಿಯನ್ ಪ್ರದೇಶ ಮತ್ತು ಏಷ್ಯಾ ಮೈನರುಗಳನ್ನು ಬಿಟ್ಟರೆ ಬೇರೆಲ್ಲೂ ನಾಗರಿಕ ಜನರು ಇಲ್ಲವೆಂದು ಅತನ ಭಾವನೆಯಾಗಿತ್ತು. ಸ್ಪೇನ್ ಮತ್ತು ಉತ್ತರ ಆಫ್ರಿಕಗಳಲ್ಲೂ ಫಿನಿಷಿಯನ್ನರು ಈಜಿಯನ್ನರು ಇದ್ದರು ನಿಜ. ಆದರೆ ಕ್ರೀಟ್ ದ್ವೀಪದ ಸಾಮಾನ್ಯ ಮನುಷ್ಯನಿಗೆ ಈ ಪ್ರದೇಶಗಳು ಊಹೆಗೆ ಮೀರಿದ ದೂರದಲ್ಲಿದ್ದುವು. ಇಟಲಿ ಇನ್ನೂ ದಟ್ಟವಾದ ಕಾಡುಗಳಿಂದ ತುಂಬಿತ್ತು. ಅಲ್ಲಿ ಜನ ನೆಲಸಿರಲಿಲ್ಲ. ಕಂದು ವರ್ಣದ ಎಟ್ರುಸ್ಕನ್ನರು ಇನ್ನೂ ಏಷ್ಯಾ ಮೈನರಿಂದ ಅಲ್ಲಿಗೆ ವಲಸೆ ಹೋಗಿರಲಿಲ್ಲ. ಎಂದಾದರೊಂದು ದಿನ ಒಬ್ಬ ಕ್ರೀಟನ್ ಗೃಹಸ್ಥ ಬಂದರಿನ ಹತ್ತಿರ ಹೋದನೆಂದುಕೊಳ್ಳೋಣ. ಅಲ್ಲಿ ಶುದ್ಧ ಗೌರವರ್ಣದ, ನೀಲಿಕಣ್ಣಿನ ಕೈದಿಯೊಬ್ಬ ಇವನ ಗಮನವನ್ನು ಸೆಳೆದಿರಬಹುದು. ಬಹುಶಃ ಈ ಕ್ರೀಟನ್ ಮನುಷ್ಯ ಕೈದಿಯನ್ನು ತನ್ನ ಭಾಷೆಯಲ್ಲಿ ಮಾತಾಡಿಸಿದಾಗ ಆತನು ಯಾವುದೋ ಇವನಿಗೆ ಅರ್ಥವಾಗದ ವಿಚಿತ್ರವಾದ ಭಾಷೆಯಲ್ಲಿ ಉತ್ತರ ಕೊಟ್ಟಿರಬಹುದು. ಈ ಹೊಸ ಮನುಷ್ಯ ಕಪ್ಪು ಸಮುದ್ರದಾಚೆಯಿಂದ ಬಂದ ಅನಾಗರಿಕನೆಂದು ಕ್ರೀಟನ್ನರಿಗೆ ತೋರಿರಬೇಕು. ಆದರೆ ಈತ ಆರ್ಯನ್ ಬುಡಕಟ್ಟಿಗೆ ಸೇರಿದವನು. ಅತನು ಆಡಿದ ವಿಚಿತ್ರ ಭಾಷೆಯೇ ಮುಂದೆ ಸಂಸ್ಕೃತ, ಪರ್ಷಿಯನ್, ಜರ್ಮನ್, ಗ್ರೀಕ್, ಲ್ಯಾಟಿನ್, ಇಂಗ್ಲಿಷ್ ಹೀಗೆ ಪ್ರಪಂಚದ ಅನೇಕ ಮುಖ್ಯ ಭಾಷೆಗಳಿಗೆ ಆಧಾರವಾಯಿತು. ಈತನ ಜನಾಂಗ, ಮತ್ತು ಸಂಸ್ಕೃತಿ ಮುಂದೆ ಮಾನವ ಚರಿತ್ರೆಯಲ್ಲಿ ಬಹು ದೊಡ್ಡ ಸ್ಥಾನ ಪಡೆಯಿತು.

ಇದು ಉಚ್ಛ್ರಾಯ ಸ್ಥಿತಿಯಲ್ಲಿದ್ದ ನಾಸಸಿನ ಚಿತ್ರ. ಇಲ್ಲಿಯ ಜನ ಬುದ್ಧಿವಂತರೂ ಸಾಹಸಿಗಳೂ ಆಗಿದ್ದರು. ಉಲ್ಲಾಸಭರಿತವಾದ ಸುಖಜೀವನ ಇವರದಾಗಿತ್ತು.

ಆದರೆ ಕ್ರಿ.ಪೂ. 1400ರ ಹೊತ್ತಿಗೆ ಇದ್ದಕ್ಕಿದ್ದಂತೆ ಇದಕ್ಕೆ ವಿಪತ್ತು ಬಂತು. ಮೈನೋಸ್‌ನ ಅರಮನೆ ಪೂರ್ತಿ ವಿನಾಶ ಹೊಂದಿತು. ಈ ಪಾಳು ಅರಮನೆಯನ್ನು ಕಟ್ಟಲು ತಿರುಗಿ ಯಾರೂ ಮುಂದೆ ಬರಲಿಲ್ಲ. ಅಂದಿನಿಂದ ಇದುವರೆಗೂ ಅಲ್ಲಿ ಯಾರೂ ಜೀವಿಸಿಯೂ ಇಲ್ಲ. ಇದು ಹೇಗೆ, ಏಕೆ ಆಯಿತೆಂದು ಇನ್ನೂ ಸರಿಯಾಗಿ ತಿಳಿದಿಲ್ಲ. ಇಲ್ಲಿ ಲೂಟಿ ಮಾಡಿದ ಗುರ್ತು ಮತ್ತು ಬೆಂಕಿ ಹಚ್ಚಿದ ಗುರ್ತು ಇವೆಯೆಂದು ಭೂಶೋಧಕರು ಹೇಳುತ್ತಾರೆ. ಅಂತೆಯೇ ಭಾರಿ ಭೂಕಂಪವೊಂದು ನಡೆದ ಕುರುಹುಗಳೂ ಇವೆ. ನಾಸಸಿನ ನಾಶಕ್ಕೆ ಪ್ರಕೃತಿಯೇ ಕಾರಣ ಇರಬಹುದು. ಅಥವಾ ಸ್ವಾಭಾವಿಕವಾಗಿ ಆದದ್ದನ್ನು ಈ ಪಟ್ಟಣದ ಹಗೆಗಳಾದ ಗ್ರೀಕರು ಮುಂದುವರಿಸಿ ಮುಗಿಸಿರಬಹುದು.

18. ಈಜಿಪ್ಟ್, ಬೇಬಿಲಾನ್ ಮತ್ತು ಅಸ್ಸಿರಿಯಾ

ತಮ್ಮನ್ನು ಜಯಿಸಿ ಆಳುತ್ತಿದ್ದ ಸೆಮಿಟಿಕ್ "ಕುರುಬ-ದೊರೆ"ಗಳ ಮೇಲೆ ಈಜಿಪ್ಟಿನ ಜನರಿಗೆ ಅಸಮಾಧಾನ ಇದ್ದೇ ಇತ್ತು. ಕ್ರಿ.ಪೂ. 1600ರ ಹೊತ್ತಿಗೆ ದೇಶಭಕ್ತರೆಲ್ಲಾ ಒಂದುಗೂಡಿ ದಂಗೆಯೆದ್ದು ಇವರನ್ನು ಓಡಿಸಿಬಿಟ್ಟರು. ಈಜಿಪ್ಟ್ ಪುನರುಜ್ಜೀವನ ಪಡೆಯಿತು. ಅಲ್ಲಿ ಒಂದು ಹೊಸ ಯುಗವೇ ಪ್ರಾರಂಭವಾಯಿತು. ಈಜಿಪ್ಟ್ ತಜ್ಞರು (ಈಜಿಪ್ಟಾಲಜಿಸ್ಟರು) ಈ ಯುಗಕ್ಕೆ "ನೂತನ ಚಕ್ರಾಧಿಪತ್ಯ"ವೆಂದು (The New Empire) ಹೆಸರಿತ್ತಿದ್ದಾರೆ. ಹೈಕ್ಸಾಸ್ ದಂಡಯಾತ್ರೆಗೆ ಮುಂಚೆ ಈಜಿಪ್ಟ್, ಒಟ್ಟುಗೂಡಿರಲಿಲ್ಲ. ಬಳಿಕ ಅವರು ಅನುಭವಿಸಿದ ಅಡಿಯಾಳುತನ, ಅದಾದನಂತರ ನಡೆಸಿದ ವಿಜಯಪ್ರದವಾದ ದಂಗೆಯ ಫಲವಾಗಿ ಈಜಿಪ್ಟ್ ಯುದ್ಧ ಮನೋಭಾವ ತುಂಬಿದ ದೇಶವಾಯಿತು. ದೇಶದಲ್ಲಿ ಒಗ್ಗಟ್ಟೂ ಬಂದಿತ್ತು. ಫ್ಯಾರೋಗಳಲ್ಲಿ ಬೇರೆ ದೇಶಗಳ ಮೇಲೆ ದಂಡೆತ್ತಿ ಹೋಗಿ ಗೆಲ್ಲಬೇಕೆಂಬ ಮನೋವೃತ್ತಿ ಬಂದಿತು. ಹೈಕ್ಸಾಸ್ ದೊರೆಗಳಿಂದ ಇವರು ಯುದ್ಧದಲ್ಲಿ ಕುದುರೆ ಮತ್ತು ರಥಗಳನ್ನು ಉಪಯೋಗಿಸುವುದನ್ನು ಕಲಿತಿದ್ದರು. ಮೂರನೆಯ ಥಾಥ್‌ಮೀಸ್ (Thothmes) ಮೂರನೆ ಆಮೆನೋಫಿಸ್ ಹೊತ್ತಿಗೆ ಈಜಿಪ್ಟ್ ಸಾಮ್ರಾಜ್ಯ ಯೂಫ್ರೆಟಿಸ್ ನದಿಯವರೆಗೆ ಹರಡಿತ್ತು.

ಒಂದಾನೊಂದು ಕಾಲದಲ್ಲಿ ಸಂಪರ್ಕವೇ ಇಲ್ಲದಿದ್ದ ಮೆಸಪೊಟೇಮಿಯ ಮತ್ತು ಈಜಿಪ್ಟ್ ದೇಶಗಳು ಈಗ ಒಂದು ಸಾವಿರ ವರ್ಷಗಳ ಕಾಲ ಒಂದರೊಡನೊಂದು ಕಾದಿದುವು. ಇದರಲ್ಲಿ ಮೊದಲು ಈಜಿಪ್ಟಿನದೇ ಮೇಲುಗೈಯಾಗಿತ್ತು. ಅಲ್ಲಿ ಆಳಿದ ರಾಜವಂಶಗಳಲ್ಲಿ ಹದಿನೇಳನೆಯ ವಂಶ ಮತ್ತು 19ನೆಯ ವಂಶ ಮುಖ್ಯವಾದುವು.18 ಇವುಗಳಲ್ಲಿ ಹದಿನೇಳನೆಯ ವಂಶದ ಮೂರನೆ ಥಾಥ್‌ಮೀಸ್ ಮೂರನೆಯ ಮತ್ತು ನಾಲ್ಕನೆಯ ಅಮೆನೋಫಿಸ್ ಮತ್ತು ಹತಾಸು ಎಂಬ ರಾಣಿ ಹತ್ತೊಂಭತ್ತನೆಯ ವಂಶದ ಅರುವತ್ತೇಳು ವರ್ಷಗಳು ರಾಜ್ಯವಾಳಿದ ಎರಡನೆ ರಾಮೆಸೆಸ್ (ಬೈಬಲ್ಲಿನ ಮೋಸೆಸ್‌ನ ಕಥೆಯಲ್ಲಿ ಬರುವ ಫ್ಯಾರೋ ಈತನೇ ಎಂದು ಕೆಲವರ ಊಹೆ) ಇವರುಗಳ ಕಾಲದಲ್ಲಿ ಈಜಿಪ್ಟ್ ಬಹಳ ಏಳಿಗೆ ಹೊಂದಿತು. ನಡುನಡುವೆ ಇಳಿಮೆಯ ಕಾಲಗಳೂ ಇದ್ದುವು.

ಒಂದು ಬಾರಿ ಸಿರಿಯನ್ನರು ಈಜಿಪ್ಟನ್ನು ಸೋಲಿಸಿದರು. ಮತ್ತೊಂದು ಸಲ ದಕ್ಷಿಣದಿಂದ ಬಂದ ಇಥಿಯೋಪಿಯನ್ನರ ಕೈಯಲ್ಲಿ ಸೋಲಾಯಿತು. ಇಷ್ಟು ಈಜಿಪ್ಟಿನ ವಿಷಯವಾಯಿತು. ಮೆಸಪೊಟೇಮಿಯದಲ್ಲಿ ಮೊದಲು ಬೇಬಿಲೋನಿಯನ್ನರ ಆಳ್ವಿಕೆ ನಡೆದಿತ್ತು ; ಬಳಿಕ ಹಿಟ್ಟೈಟರು ಮತ್ತು ದಮಾಸ್ಕಸಿನ ಸಿರಿಯನ್ನರು ಕೆಲವು ಕಾಲ ಮುಂದೆ ಬಂದರು. ಈ ಸಿರಿಯನ್ನರೇ ಈಜಿಪ್ಟನ್ನು ಸೋಲಿಸಿದ್ದು. ನಿನೆವೆಯ ಅಸ್ಸಿರಿಯನ್ನರೂ ಹೀಗೆಯೇ ಏಳು ಬೀಳುಗಳನ್ನು ಕಾಣುತ್ತಿದ್ದರು. ಕೆಲವು ಸಲ ಇವರ ನಗರ ಪರಕೀಯರ ಕೈ ಸೇರುತ್ತಿತ್ತು. ಕೆಲವು ಬಾರಿ ಇವರು ಬೇಬಿಲಾನನ್ನು ವಶಪಡಿಸಿಕೊಂಡು ಈಜಿಪ್ಟಿನ ಮೇಲೆ ಸಹ ದಂಡೆತ್ತಿ ಹೋಗುತ್ತಿದ್ದರು. ಒಟ್ಟಿನಲ್ಲಿ ಈಜಿಪ್ಟಿನವರ ಮತ್ತು ಏಷ್ಯಾ ಮೈನರ್ ಸಿರಿಯ ಮೆಸಪೊಟೇಮಿಯಗಳ ಸೆಮಿಟಿಕ್ ಜನರ ಆಗುಹೋಗುಗಳನ್ನು ಇಲ್ಲಿ ಪೂರ್ತಿ ವರ್ಣಿಸಲು ಸಾಧ್ಯವಿಲ್ಲ. ಇಷ್ಟು ಹೊತ್ತಿಗೆ ಇವರೆಲ್ಲರೂ ತಮ್ಮ ಸೈನ್ಯಗಳಲ್ಲಿ ಕುದುರೆ ಹೂಡಿದ ರಥಗಳನ್ನು ಅಧಿಕ ಸಂಖ್ಯೆಯಲ್ಲಿ ಉಪಯೋಗಿಸುತ್ತಿದ್ದರು. ಕುದುರೆಯನ್ನು ಬೇರೆ ಕೆಲಸಗಳಿಗೆ ಉಪಯೋಗಿಸುವುದು ಇವರಿಗಿನ್ನೂ ತಿಳಿದಿರಲಿಲ್ಲ. ಮಧ್ಯ ಏಷ್ಯದಿಂದ ಈ ಪ್ರಾಚೀನ ಸಾಮ್ರಾಜ್ಯಗಳಿಗೆ ಕುದುರೆಯ ಪರಿಚಯವಾಗಿತ್ತು.

ಪ್ರಾಚೀನ ಕಾಲದ ಮಸಕುಮಸಕಾದ ಆ ರಂಗಸ್ಥಳದ ಮೇಲೆ, ನಿನೆವೆಯನ್ನು ಜಯಿಸಿದ ಮಿತಾನಿಯ ರಾಜ ತುಸ್ರತ್ತ, ಬೇಬಿಲಾನನ್ನು ಗೆದ್ದ ಅಸ್ಸಿರಿಯದ ರಾಜ ಒಂದನೆಯ ಟಿಗ್ಲಾತ್ ಪಿಲೆಸರ್‌ರಂತಹ ಮಹಾದಂಡನಾಯಕರು ಕಾಣಿಸಿಕೊಂಡು ಮರೆಯಾಗುತ್ತಾರೆ. ಕೊನೆಗೆ ಸೈನ್ಯ ಬಲದಲ್ಲಿ ಅಸ್ಸಿರಿಯನ್ನರು ಎಲ್ಲರನ್ನೂ ಮೀರಿಸಿದರು. ಕ್ರಿ.ಪೂ. 745ರಲ್ಲಿ ಮೂರನೆಯ ಟಿಗ್ಲಾತ್ ಪಿಲೆಸರನು(Tiglath Pilesar) ಬೇಬಿಲಾನನ್ನು ಗೆದ್ದು ತನ್ನ ಆಧಿಪತ್ಯವನ್ನು ಸ್ಥಾಪಿಸಿದನು. ಚರಿತ್ರಕಾರರು ಇದನ್ನು ನವೀನ ಅಸ್ಸಿರಿಯನ್ ಚಕ್ರಾಧಿಪತ್ಯವೆನ್ನುತ್ತಾರೆ. ಕಬ್ಬಿಣದ ಉಪಯೋಗ ಸಹ ಇದೇ ಕಾಲದಲ್ಲಿ ಯಾವಾಗಲೋ ಉತ್ತರದ ಕಡೆಯಿಂದ ತಿಳಿದುಬಂದಿತ್ತು. ಇಂದಿನ ಆರ್ಮೇನಿಯನ್ನರ ಪೂರ್ವಿಕರಾದ ಹಿಟ್ಟೈಟರಿಗೆ ಮೊದಲು ಕಬ್ಬಿಣದ ಪರಿಚಯವಾಯಿತು. ಇವರೇ ಇದನ್ನು ಅಸ್ಸಿರಿಯನ್ನರಿಗೆ ತಿಳಿಸಿ ಕೊಟ್ಟರು. ರಾಜಪಟ್ಟವನ್ನು ಅನ್ಯಾಯದಿಂದ ಗಳಿಸಿದ ಎರಡನೆಯ ಸಾರ್ಗನ್ ಎಂಬ ಅಸ್ಸಿರಿಯಾನ್ ರಾಜನು ತನ್ನ ಸೈನ್ಯವನ್ನು ಕಬ್ಬಿಣದ ಆಯುಧಗಳಿಂದ ಸಜ್ಜುಗೊಳಿಸಿದನು. "ಕಬ್ಬಿಣ ಮತ್ತು ರಕ್ತ"[19] ಈ ತತ್ತ್ವವನ್ನು ಮೊಟ್ಟ ಮೊದಲು ಜಾರಿಗೆ ತಂದವರು ಅಸ್ಸಿರಿಯನ್ನರು. ಸಾರ್ಗನನ ಮಗ ಸೆನ್ನಾಚೆರಿಬನು ಈಜಿಪ್ಟಿನ ಗಡಿಯವರೆಗೂ ತನ್ನ ಸೈನ್ಯವನ್ನು ಕರೆದೊಯ್ದನು. ಆದರೆ ಪ್ಲೇಗಿನ ಪೀಡೆಯಿಂದ ಈ ಸೈನ್ಯ ಹಿಮ್ಮೆಟ್ಟಬೇಕಾಯಿತು. ಇವನ ಮೊಮ್ಮಗ ಅಸ್ಸುರ ಬನಿಪಾಲನು (ಸಾರ್ಡನಪಾಲಸ್ ಎಂಬ ಗ್ರೀಕ್ ಹೆಸರಿನಿಂದಲೂ ಇವನು ಪರಿಚಿತನಾಗಿದ್ದಾನೆ) ಕ್ರಿ.ಪೂ. 670 ರಲ್ಲಿ ಇಥಿಯೋಪಿಯನ್ನರ ವಶದಲ್ಲಿದ್ದ ಈಜಿಪ್ಟನ್ನು ಸೋಲಿಸಿದನು.

ಇದರಿಂದ ಈಜಿಪ್ಟಿಗೇನೂ ಅಂತಹ ವ್ಯತ್ಯಾಸವಾಗಲಿಲ್ಲ. ಒಬ್ಬ ದಣಿಯ ಬದಲು ಮತ್ತೊಬ್ಬ ಬಂದ ಅಷ್ಟೆ.

ಈ ಭೂಪ್ರದೇಶಗಳಲ್ಲಿದ್ದ ಆ ಸಾವಿರ ವರ್ಷಗಳ ರಾಜಕೀಯ ಭೂಪಟಗಳು ಸಿಗುವಂತಿದ್ದರೆ ಅವುಗಳು ನಮಗೆ ಹೀಗೆ ಕಾಣಿಸುತ್ತಿದ್ದುವು. ಮೈಕ್ರೋಸ್ಕೋಪ್ ಕೆಳಗಿನ ಅಮೀಬದಂತೆ ಈಜಿಪ್ಟ್ ಒಂದು ಬಾರಿ ಹಿಗ್ಗುವುದು, ಒಂದು ಬಾರಿ ಕುಗ್ಗುವುದು ಆಗುತ್ತಿತ್ತು. ಬೇಬಿಲಾನ್, ಅಸ್ಸಿರಿಯ, ಹಿಟ್ಟೈಟ್ ರಾಜ್ಯ ಮತ್ತು ಸಿರಿಯಗಳು ಒಂದನ್ನೊಂದು ಕಬಳಿಸುತ್ತಿದ್ದುವು. ಮತ್ತೆ ನುಂಗಿದುದನ್ನು ಹೊರಹಾಕುತ್ತಿದ್ದುವು. ಏಷ್ಯಾ ಮೈನರಿನ ಪಶ್ಚಿಮಕ್ಕೆ ಸಾರ್ಡಿಸನ್ನು ರಾಜಧಾನಿಯಾಗುಳ್ಳ ಲಿಡಿಯ, ಮತ್ತು ಕ್ಯಾರಿಯಗಳಂತಹ ಪುಟ್ಟ ಪುಟ್ಟ ಈಜಿಯನ್ ರಾಜ್ಯಗಳಿದ್ದುವು. ಕ್ರಿ.ಪೂ. 1200 ರ ಹೊತ್ತಿಗೆ ಇಲ್ಲವೇ ಬಹುಶಃ ಅದಕ್ಕೂ ಸ್ವಲ್ಪ ಮೊದಲೇ ವಾಯುವ್ಯ ಮತ್ತು ಈಶಾನ್ಯ ದಿಕ್ಕುಗಳಿಂದ ಈ ದೃಶ್ಯದೊಳಗೆ ಹೊಸ ಹೊಸ ಹೆಸರುಗಳು ತಲೆ ಹಾಕುವುದನ್ನು ನಾವು ಕಾಣಬಹುದಾಗಿತ್ತು. ಕಬ್ಬಿಣದ ಆಯುಧಗಳನ್ನು ಪಯೋಗಿಸುತ್ತಿದ್ದ ಕುದುರೆಯ ರಥಗಳನ್ನೇರಿ ಬರುತ್ತಿದ್ದ ಈ ತಂಡಗಳ ಜನರು ಈಜಿಯನ್ ಮತ್ತು ಸೆಮಿಟಿಕ್ ಪ್ರದೇಶಗಳ ಉತ್ತರ ಎಲ್ಲೆಯಲ್ಲಿದ್ದವರಿಗೆ ಭಾರಿ ಪೀಡೆಯಾಗಿ ಪರಿಣಮಿಸಿದರು. ಇವರು ಆಡುತ್ತಿದ್ದ ಭಾಷೆಗಳೆಲ್ಲಾ ಒಂದೇ ಭಾಷೆಯ ವಿವಿಧ ಸ್ವರೂಪಗಳಾಗಿದ್ದುವು. ಆ ಮೂಲ ಭಾಷೆಗೆ "ಆರ್ಯನ್" ಭಾಷೆ ಎನ್ನಬಹುದು.

ಕಪ್ಪು ಮತ್ತು ಕ್ಯಾಸ್ಪಿಯನ್ ಸಮುದ್ರದ ಈಶಾನ್ಯದಿಂದ ಮೀಡರು ಪರ್ಷಿಯನ್ನರು ಬರುತ್ತಿದ್ದರು. ಆ ಕಾಲದ ದಾಖಲೆಗಳಲ್ಲಿ ಸಿಥಿಯನ್ನರ ಮತ್ತು ಸಾರ್ಮೇಷಿಯನ್ನರ ಹೆಸರುಗಳನ್ನು ಇವರ ಹೆಸರುಗಳೊಂದಿಗೆ ಸೇರಿಸಿಬಿಟ್ಟಿದ್ದಾರೆ. ವಾಯುವ್ಯದಿಂದಲೋ ಈಶಾನ್ಯದಿಂದಲೋ ಅರ್ಮೇನಿಯನ್ನರು ಬರುತ್ತಿದ್ದರು. ವಾಯುವ್ಯದ ಕಡೆಯಿಂದ ಬಾಲ್ಕನ್ ಪರ್ಯಾಯ ದ್ವೀಪದ ಮೂಲಕ ಸಮುದ್ರವನ್ನು ದಾಟಿಕೊಂಡು ಸಿಮ್ಮೆರಿಯನ್ನರು (Cimmerians) ಮತ್ತು ಫಿಜಿಯನ್ನರು, ಈಗ ನಾವು ಗ್ರೀಕರೆಂದು ಹೇಳುವ ಹೆಲ್ಲೆನಿಕ್ ತಂಡಗಳವರು ಬಂದರು. ಈ ಆರ್ಯರೆಲ್ಲರೂ ಪೂರ್ವದಲ್ಲಿಯೇ ಆಗಲಿ ಪಶ್ಚಿಮದಲ್ಲಿಯೇ ಆಗಲಿ ಧಾಳಿ, ದರೋಡೆ, ಲೂಟಿಗಳನ್ನು ನಡೆಸಿದವರೇ. ಇವರೆಲ್ಲ ಪರಸ್ಪರ ಸಂಬಂಧವುಳ್ಳ ಒಂದೇ ರೀತಿಯವರು. ಕಷ್ಟ ಸಹಿಷ್ಣುಗಳಾಗಿದ್ದ ಇವರು ಮೊದಲು ಅಲೆಮಾರಿ ಜನಾಂಗದವರು ಆಗಿದ್ದು ಈಗ ಲೂಟಿಗೆ ತೊಡಗಿದರು. ಪೂರ್ವದಿಕ್ಕಿನಲ್ಲಿ ಇವರು ಇನ್ನೂ ಗಡಿಪ್ರದೇಶಗಳಲ್ಲಿ ವಾಸಿಸುತ್ತಾ ಬರಿಧಾಳಿ ನಡೆಸುತ್ತಿದ್ದರು. ಪಶ್ಚಿಮದಲ್ಲಿ ಮಾತ್ರ ನಗರಗಳನ್ನು ಜಯಿಸಿ ಸುಸಂಸ್ಕೃತರಾದ ಈಜಿಯನ್ನರನ್ನು ಹೊಡೆದೋಡಿಸುತ್ತಿದ್ದರು. ಇದರ ಫಲವಾಗಿ ಈಜಿಯನ್ನರು ಆರ್ಯರ ಕೈಗೆ ಸಿಗದಂತಹ ದೂರ ಪ್ರದೇಶಗಳಲ್ಲಿ ಹೊಸ ಹೊಸ ವಾಸಸ್ಥಾನಗಳನ್ನು ಹುಡುಕುತ್ತಾ ಹೊರಟರು. ಹೀಗೆ ನೈಲ್ ಮುಖಜ ಭೂಮಿಯಲ್ಲಿ ನೆಲಸಲು ಹೋದ ಕೆಲವರನ್ನು ಈಜಿಪ್ಟಿನವರು ಹಿಂದೆ ಓಡಿಸಲು ಯತ್ನಿಸುತ್ತಿದ್ದರು. ಈಜಿಪ್ಟಿಯನ್ನರ ಇನ್ನೊಂದು ತಂಡವಾದ ಎಟ್ರುಸ್ಕನ್ನರು ಏಷ್ಯಾ

ಸ್ಪೈನರಿಂದ ಸಮುದ್ರ ಮಾರ್ಗವಾಗಿ ಹೋಗಿ ಕಾಡುಗಳಿಂದ ತುಂಬಿದ್ದ ಮಧ್ಯ ಇಟಲಿಯಲ್ಲಿ ರಾಜ್ಯ ಕಟ್ಟಿದರು. ಮತ್ತೆ ಕೆಲವರು ಮೆಡಿಟೆರೇನಿಯನ್ ಸಮುದ್ರದ ಆಗ್ನೇಯ ತೀರದಲ್ಲಿ ನಗರಗಳನ್ನು ಸ್ಥಾಪಿಸಿಕೊಂಡರು. ಇವರಿಗೆ ಫಿಲಿಸ್ಟೈನರೆಂದು ಹೆಸರಾಯಿತು.

ಪ್ರಾಚೀನ ನಾಗರಿಕತೆಗಳ ಮೇಲೆ ಹೀಗೆ ನುಗ್ಗಿ ಬಂದ ಈ ಆರ್ಯನ್ನರ ವಿಷಯವನ್ನೆಲ್ಲಾ ಮುಂದೆ ವಿವರವಾಗಿ ಹೇಳಲಾಗುವುದು. ಕ್ರಿ.ಪೂ. 1600 ರಿಂದ 600ರ ವರೆಗೂ ನಿಧಾನವಾಗಿ ಆದರೆ ಎಡೆಬಿಡದೆ ಮುನ್ನುಗ್ಗುತ್ತಿದ್ದ ಈ ಅನಾಗರಿಕ ಆರ್ಯನ್ ತಂಡಗಳ ಧಾಳಿಗಳ ಫಲವಾಗಿ ಈ ಪ್ರಾಚೀನ ದೇಶಗಳಲ್ಲಿ ನಡೆದ ಕದಲಾಟಗಳು, ಈ ದೇಶಗಳ ಜನರ ವಲಸೆ ಹೋಗುವಿಕೆಗಳನ್ನು ಇಲ್ಲಿ ಸಂಕ್ಷೇಪವಾಗಿ ತಿಳಿಸಿದೆ ಅಷ್ಟೆ.

ಈ ಯುಗ ಮುಗಿಯುವ ಹೊತ್ತಿಗೆ ಫಿನಿಷಿಯನ್ ಮತ್ತು ಫಿಲಿಸ್ಟೈನ್ ತೀರ ಪ್ರದೇಶಗಳ ಹಿಂಭಾಗದ ಗುಡ್ಡ ಪ್ರದೇಶಗಳಲ್ಲಿ ವಾಸಿಸುತ್ತಿದ್ದ ಹೀಬ್ರ್ಯೂಗಳೆಂಬ ಸೆಮಿಟಿಕ್ ಜನರು ಚರಿತ್ರೆಯಲ್ಲಿ ಮುಖ್ಯ ಪಾತ್ರ ಪಡೆದರು. ಮುಂದೆ ಬಹಳ ಮಹತ್ತ್ವ ಹೊಂದಿದ ಹೀಬ್ರ್ಯೂ ಬೈಬಲ್ಲನ್ನು ಬರೆದವರು ಇವರೇ. ಇದರಲ್ಲಿ ಚಾರಿತ್ರಿಕ ಘಟನೆಗಳೂ, ಕವಿಗಳು, ಬುದ್ಧಿವಾದ, ದೈವಭಕ್ತ ಪ್ರವಾದಿಗಳ ಹೇಳಿಕೆಗಳು ಎಲ್ಲಾ ಇವೆ. ಇವರ ಚರಿತ್ರೆಯನ್ನೂ ತಿಳಿಸುವೆವು.

ಮೆಸಪೊಟೇಮಿಯ ಮತ್ತು ಈಜಿಪ್ಟಿನಲ್ಲಿ ಕ್ರಿ.ಪೂ. 600 ರವರೆಗೂ ಆರ್ಯನ್ನರ ಬರುವಿಕೆಯಿಂದ ಅಂತಹ ಆಳವಾದ ಬದಲಾವಣೆಗಳಾಗಲಿಲ್ಲ. ಗ್ರೀಕರಿಗೆ ಹೆದರಿದ ಈಜಿಯನ್ನರ ಪಲಾಯನ, ನಾಸಸಿನ ವಿನಾಶ ಇವೆಲ್ಲ ಬೇಬಿಲಾನಿಯನ್ನರಿಗೆ ಮತ್ತು ಈಜಿಪ್ಟಿನವರಿಗೆ ಎಲ್ಲೋ ಬಹುದೂರದಲ್ಲಿ ನಡೆದ ತಮಗೇನೂ ಸಂಬಂಧವಿಲ್ಲದ ಘಟನೆಗಳಾಗಿ ತೋರಿರಬೇಕು. ನಾಗರಿಕತೆಯ ತೊಟ್ಟಿಲುಗಳೆನಿಸಿದ ಈ ರಾಜ್ಯಗಳಲ್ಲಿ ರಾಜವಂಶಗಳು ಬದಲಾಗುತ್ತಿದ್ದರೂ ಸಾಮಾನ್ಯ ಪ್ರಜೆಗಳ ಜೀವನ ಸಾವಧಾನದಿಂದ ನಡೆದಿತ್ತು. ಕಾಲ ಮುನ್ನಡೆದಂತೆ ಜನ ಹೆಚ್ಚು ಹೆಚ್ಚು ಸಂಸ್ಕೃತರಾಗಿರುತ್ತಿದ್ದರು. ಜೀವನ ಮೊದಲಿನಂತೆ ಸರಳವಾಗಿರದೆ ಬರಬರುತ್ತಾ ಜಟಿಲವಾಗುತ್ತಿತ್ತು. ಇಷ್ಟು ಹೊತ್ತಿಗಾಗಲೇ ಈಜಿಪ್ಟಿನ ಪಿರಮಿಡ್ಡುಗಳು ಎರಡು ಸಾವಿರ ವರ್ಷ ಹಳೆಯದಾಗಿದ್ದುವು. ಅಷ್ಟು ಹೊತ್ತಿಗಾಗಲೇ ಅವುಗಳನ್ನು ಪ್ರಯಾಣಿಕರು ಇಂದಿನಂತೆಯೇ ಕುತೂಹಲದಿಂದ ನೋಡಲು ಹೋಗುತ್ತಿದ್ದರು. ಹಿಂದಿನ ಈ ಸ್ಮಾರಕಗಳ ಜೊತೆಗೆ ಹೊಸ ಹೊಸ ಭವ್ಯ ಕಟ್ಟಡಗಳು ಮುಖ್ಯವಾಗಿ ಹದಿನೇಳನೆಯ ಮತ್ತು ಹತ್ತೊಂಭತ್ತನೆಯ ವಂಶದ ರಾಜರ ಕಾಲದಲ್ಲಿ ಕಟ್ಟಲ್ಪಟ್ಟುವು. ಕಾರ್ನಾಕ್ ಮತ್ತು ಲಕ್ಸರನಲ್ಲಿರುವ ದೊಡ್ಡ ದೊಡ್ಡ ದೇವಸ್ಥಾನಗಳನ್ನು ಕಟ್ಟಿದುದು ಈ ಕಾಲದಲ್ಲೇ. ನಿನೆವೆಯಲ್ಲಿರುವ ಮುಖ್ಯ ಸ್ಮಾರಕಗಳು ದೇವಸ್ಥಾನಗಳು ಕ್ರಿ.ಪೂ. 1600 ರಿಂದ ಕ್ರಿ.ಪೂ. 600ರ ಮಧ್ಯ ಕಾಲದಲ್ಲಿ ಕಟ್ಟಲ್ಪಟ್ಟುವು. ಇವುಗಳಲ್ಲಿ ಮನುಷ್ಯರ ತಲೆಯುಳ್ಳ ರೆಕ್ಕೆಯಿರುವ ಗೂಳಿಗಳು, ರಾಜರು, ರಥಗಳು, ಸಿಂಹದ ಬೇಟೆಯ ಚಿತ್ರಗಳು ಎಲ್ಲವನ್ನೂ ಕಲ್ಲಿನಲ್ಲಿ ಮೇಲೆ ಕೊರೆದಿದ್ದಾರೆ. ಜೇಬಿ

ಲಾನಿನಲ್ಲಿಯೂ ಇದೇ ಕಾಲದಲ್ಲಿಯೇ ಅತ್ಯಂತ ವೈಭವಯುಕ್ತ ಕಟ್ಟಡಗಳನ್ನು ಕಟ್ಟಿದುದು.

ಮೆಸಪೊಟೇಮಿಯ ಮತ್ತು ಈಜಿಪ್ಟ್ ಇವೆರಡೂ ದೇಶಗಳ ಆ ಕಾಲದ ಸಾರ್ವಜನಿಕ ದಾಖಲೆಗಳು, ವ್ಯಾಪಾರದ ಲೆಕ್ಕಪತ್ರಗಳು, ವೈಯುಕ್ತಿಕ ಪತ್ರಗಳು ಕತೆಗಳು, ಕವನಗಳು ನಮಗೆ ಸಿಕ್ಕಿವೆ. ಬೇಬಿಲಾನ್ ಮತ್ತು ಥೀಬ್ಸ್ ನಗರಗಳಲ್ಲಿ ವಾಸಿಸುತ್ತಿದ್ದ ಶ್ರೀಮಂತರ ಜೀವನ ಇಂದಿನ ಅನುಕೂಲಸ್ಥರ ಜೀವನದಷ್ಟೇ ಸುಸ್ಥಿರವಾಗಿತ್ತು, ಸುಖಮಯವಾಗಿತ್ತು. ಸುಂದರವಾಗಿ ಅಲಂಕರಿಸಿದ ಒಳ್ಳೆಯ ಉಪಕರಣಗಳಿಂದ ಸಜ್ಜಾದ ಮನೆಗಳಲ್ಲಿ ಇವರು ಸುವ್ಯವಸ್ಥಿತ ಶಿಷ್ಟಾಚಾರದ ಜೀವನ ನಡೆಸುತ್ತಿದ್ದರು. ಅಂದವಾದ ಉಡುಗೆತೊಡಿಗೆಗಳಿಂದ ಅಲಂಕಾರ ಮಾಡಿಕೊಳ್ಳುತ್ತಿದ್ದರು. ಹಬ್ಬಹರಿದಿನಗಳಲ್ಲಿ ಸಂಗೀತ ನೃತ್ಯಗಳಿಂದ ಒಬ್ಬರನ್ನೊಬ್ಬರು ಆದರಿಸುತ್ತಿದ್ದರು. ಇವರ ಸೇವೆ ಮಾಡಲು ಚೆನ್ನಾಗಿ ತರಬೇತಾದ ಸೇವಕರು ಇರುತ್ತಿದ್ದರು. ಇವರಿಗೆ ಚಿಕಿತ್ಸೆ ಮಾಡಲು ವೈದ್ಯರು (ಹಲ್ಲಿನ ವೈದ್ಯರು ಸಹ) ಇರುತ್ತಿದ್ದರು. ಸಾಮಾನ್ಯವಾಗಿ ದೂರ ಪ್ರಯಾಣ ಮಾಡದಿದ್ದರೂ ಬೇಸಿಗೆ ಕಾಲದಲ್ಲಿ ನದಿಯ ಮೇಲೆ ದೋಣಿಯಲ್ಲಿ ವಿಹಾರ ಮಾಡುವುದು ಈಜಿಪ್ಟ ಬೇಬಿಲಾನ್‌ಗಳೆರಡರಲ್ಲೂ ಸರ್ವೇಸಾಮಾನ್ಯವಾಗಿತ್ತು. ಕುದುರೆಯನ್ನು ಯುದ್ಧದಲ್ಲಿಯೂ ಉತ್ಸವ ಸಮಾರಂಭಗಳಲ್ಲಿಯೂ ಉಪಯೋಗಿಸುತ್ತಿದ್ದರು. ಹೊರೆ ಹೊರುವುದು, ಮತ್ತಿತರ ಒರಟುಗೆಲಸಗಳಿಗೆ ಕತ್ತೆಯನ್ನು ಉಪಯೋಗಿಸುತ್ತಿದ್ದರು. ಹೇಸರ ಕತ್ತೆ ಇನ್ನೂ ಅದೇ ತಾನೇ ಇವರಿಗೆ ಪರಿಚಯವಾಗಿತ್ತು. ಮೆಸಪೊಟೇಮಿಯದವರಿಗೆ ಒಂಟೆ ಗೊತ್ತಿತ್ತು. ಈಜಿಪ್ಟಿಗೆ ಇನ್ನೂ ಈ ಪ್ರಾಣಿ ಬಂದಿರಲಿಲ್ಲ. ಕಂಚು ಮತ್ತು ತಾಮ್ರ ಮುಖ್ಯ ಬಳಕೆಯ ಲೋಹಗಳಾಗಿದ್ದುವು. ಎಲ್ಲೋ ಕೆಲವು ಕಬ್ಬಿಣದ ಉಪಕರಣಗಳಿದ್ದಿರಬಹುದು. ಉಣ್ಣೆಯ ಬಟ್ಟೆಗಳಂತೆಯೇ ನವಿರಾದ ಲಿನನ್ ಮತ್ತು ಹತ್ತಿಯ ಬಟ್ಟೆಗಳು ಇವರಿಗೆ ತಿಳಿದಿದ್ದುವು. ರೇಷ್ಮೆ ಇನ್ನೂ ಗೊತ್ತಿರಲ್ಲಿಲ್ಲ. ಇವರು ಗಾಜಿನಿಂದ ಸಣ್ಣ ಸಣ್ಣ ಸಾಮಾನುಗಳನ್ನು ಮಾಡಿ ಅಂದವಾಗಿ ಬಣ್ಣ ಕೊಡುತ್ತಿದ್ದರು. ಸ್ವಚ್ಛವಾದ ಪಾರದರ್ಶಕ ಗಾಜು ಮಾಡುವುದು ಇವರಿಗೆ ಗೊತ್ತಿರಲಿಲ್ಲ. ಆದರಿಂದಲೇ ಇವರಲ್ಲಿ ಈಗಿರುನಂತೆ ಹಲ್ಲನ್ನು ಬಂಗಾರದಿಂದ ತುಂಬುವ ಪದ್ಧತಿ ಇದ್ದರೂ ಕನ್ನಡಕಗಳು ಬಳಕೆಯಲ್ಲಿರಲಿಲ್ಲ.

ಇಂದಿನ ಮತ್ತು ಅಂದಿನ ಜೀವನಗಳಲ್ಲಿದ್ದ ಒಂದು ಬಹು ಮುಖ್ಯ ವ್ಯತ್ಯಾಸವೆಂದರೆ ಆಗ ನಾಣ್ಯಗಳ ಚಲಾವಣೆ ಜಾರಿಗೆ ಬಂದಿರಲಿಲ್ಲ. ವ್ಯಾಪಾರ ಬಹುಮಟ್ಟಿಗೆ ಅದಲು ಬದಲು ವ್ಯವಹಾರವಾಗಿತ್ತು. ಆದರೆ ಈ ವಿಷಯದಲ್ಲಿ ಬೇಬಿಲಾನು ಈಜಿಪ್ಟಿಗಿಂತ ಮುಂದುವರೆದಿತ್ತು. ಅಲ್ಲಿ ಬೆಳ್ಳಿ ಬಂಗಾರಗಳ ಗಟ್ಟಿಗಳನ್ನು ಮಾಡಿಸಿಕೊಂಡು ವ್ಯಾಪಾರಕ್ಕೆ ಉಪಯೋಗಿಸುತ್ತಿದ್ದರು. ನಾಣ್ಯ ಚಲಾವಣೆ ಜಾರಿಗೆ ಬರುವುದಕ್ಕೂ ಮುಂಚೆ ಬೇಬಿಲಾನಿನಲ್ಲಿ ವ್ಯಾಪಾರ ವಹಿವಾಟು ನಡೆಸುತ್ತಿದ್ದ ಬ್ಯಾಂಕರುಗಳು ತಮ್ಮ ಹೆಸರು ಮತ್ತು ಗಟ್ಟಿಯ ತೂಕವನ್ನು ಈ ಗಟ್ಟಿಗಳ ಮೇಲೆ ಅಚ್ಚೊತ್ತುತ್ತಿದ್ದರು.

ವ್ಯಾಪಾರಿಗಳು ಮತ್ತು ಪ್ರಯಾಣಿಕರು ತಮಗೆ ಬೇಕಾದ ವಸ್ತುಗಳನ್ನು ಕೊಳ್ಳಲು ಅಮೂಲ್ಯ ರತ್ನಗಳನ್ನು ಉಪಯೋಗಿಸುತ್ತಿದ್ದರು. ಆ ಕಾಲದಲ್ಲಿ ದುಡಿಯುತ್ತಿದ್ದ ಕೆಲಸ ಗಾರರು ಮತ್ತು ಸೇವಕರಲ್ಲಿ ಬಹುಮಂದಿ ಗುಲಾಮರಾಗಿರುತ್ತಿದ್ದುದರಿಂದ ಅವರಿಗೆ ಸಂಬಳ ಕೊಡುವ ಪ್ರಮೇಯವೇ ಇರುತ್ತಿರಲಿಲ್ಲ. ಮುಂದೆ ಹಣದ ಉಪಯೋಗ ಹೆಚ್ಚುತ್ತಾ ಬಂದಂತೆ ಗುಲಾಮಗಿರಿ ಹಿಂದೆ ಬಿದ್ದು ಹೋಯಿತು.

ಇಂದಿನ ಮನುಷ್ಯನೊಬ್ಬ ಈ ಪ್ರಾಚೀನ ಮಹಾ ನಗರಗಳಿಗೆ ಭೇಟಿ ಕೊಟ್ಟಿದ್ದರೆ ಆತನಿಗೆ ಊಟದಲ್ಲಿ ಎರಡು ಪದಾರ್ಥಗಳ ಕೊರತೆ ಕಾಣಬರುತ್ತಿತ್ತು. ಆಗ ಕೋಳಿ ಮತ್ತು ಮೊಟ್ಟೆಗಳನ್ನು ತಿನ್ನುವುದು ಗೊತ್ತಿರಲಿಲ್ಲ. ಇಂದಿನ ಫ್ರೆಂಚ್ ಅಡಿಗೆಯವನಿಗೆ ತನ್ನ ಕಲೆಯನ್ನು ಪ್ರದರ್ಶಿಸಲು ಬೇಬಿಲಾನ್ ಪಟ್ಟಣ ಏನೂ ತಕ್ಕುದಾಗಿರಲಿಲ್ಲ. ಅಸ್ಸಿರಿಯದ ಕಡೆಯ ಚಕ್ರಾಧಿಪತ್ಯದ ಹೊತ್ತಿಗೆ ಇವುಗಳನ್ನು ತಿನ್ನುವ ಅಭ್ಯಾಸ ಪೂರ್ವ ದೇಶಗಳಿಂದ ಇಲ್ಲಿಗೆ ಬಂದಿರಬೇಕು.

ಇಲ್ಲಿಯ ಮತ ಪದ್ಧತಿಗಳು ಬರಬರುತ್ತಾ ಸುಸಂಸ್ಕೃತವಾದುವು. ನರಬಲಿಯ ಪದ್ಧತಿ ಬಹು ಹಿಂದೆಯೇ ನಿಂತುಹೋಯಿತು. ಮನುಷ್ಯರ ಬದಲು ಪ್ರಾಣಿಗಳನ್ನೋ ಹಿಟ್ಟಿನಿಂದ ಮಾಡಿದ ಆಕೃತಿಗಳನ್ನೋ ಬಲಿಯಾಗಿ ಅರ್ಪಿಸುವ ಪದ್ಧತಿ ಬಂದಿತು. (ಆದರೆ ಫಿನಿಷಿಯನ್ನರಲ್ಲಿ — ಅವರಲ್ಲೂ ಆಫ್ರಿಕದಲ್ಲಿದ್ದ ಅವರ ವಸಾಹತುಗಳಲ್ಲೆಲ್ಲಾ ದೊಡ್ಡದಾದ ಕಾರ್ಥೇಜಿನಲ್ಲಿ ಬಹುದಿನಗಳ ಮೇಲೂ ನರಬಲಿ ಜಾರಿಯಲ್ಲಿತ್ತೆಂದು ಹೇಳುತ್ತಾರೆ). ಹಿಂದಿನ ಕಾಲದಲ್ಲಿದ್ದ ದೊಡ್ಡನಾಯಕರು ಯಾರಾದರೂ ಸತ್ತರೆ ಅವರ ಹೆಂಡತಿಯರನ್ನೂ ಗುಲಾಮರನ್ನು ಅವರ ಸಮಾಧಿಯ ಹತ್ತಿರ ಬಲಿಕೊಟ್ಟು ಅವರ ಬಿಲ್ಲು ಭರ್ಜಿಗಳನ್ನು ಮುರಿದು ಹಾಕುತ್ತಿದ್ದರು. ಪ್ರೇತಲೋಕದಲ್ಲಿ ಅವರಿಗೆ ಇವೆಲ್ಲ ವಸ್ತುಗಳು ಹೆಂಡತಿಯರೂ ಗುಲಾಮರೂ ಬೇಕಾಗುತ್ತದೆಂಬ ನಂಬಿಕೆಯ ಮೇಲೆ ಹೀಗೆ ಮಾಡುತ್ತಿದ್ದರು. ಈಜಿಪ್ಟಿನಲ್ಲಿ ಈ ಘೋರವಾದ ಪದ್ಧತಿ ಬಿದ್ದು ಹೋಗಿ ಶವಸಂಸ್ಕಾರ ಮಾಡುವಾಗ ಅದರೊಡನೆ ಸಣ್ಣ ಸಣ್ಣ ಮನೆಗಳು, ಅಂಗಡಿಗಳು, ಸೇವಕರು ಮತ್ತು ಹಸುಗಳ ಪುಟ್ಟ ಪುಟ್ಟ ಮಾದರಿಗಳನ್ನು ಹೂಳುವ ಒಳ್ಳೆಯ ಪದ್ಧತಿ ಬಂದಿತು. ಮೂರು ಸಾವಿರ ವರ್ಷಗಳಿಗೂ ಹಿಂದಿನ ಈ ಜನರ ಸುಸಂಸ್ಕೃತ ಸುರಕ್ಷಿತ ಜೀವನ ಹೇಗೆ ನಡೆಯುತ್ತಿತ್ತೆಂದು ನಮಗೆ ಚೆನ್ನಾಗಿ ತಿಳಿದುಬರುವುದು ಈ ಪುಟ್ಟ ಪುಟ್ಟ ಸಾಮಾನು ಗಳಿಂದಲೇ.

ಉತ್ತರದಲ್ಲಿದ್ದ ಕಾಡುಗಳು ಮತ್ತು ಮೈದಾನಗಳಿಂದ ಆರ್ಯರು ಹೊರಟು ಬರುವ ವರೆಗೂ ಪ್ರಾಚೀನ ನಾಗರಿಕ ಜೀವನ ಈ ರೀತಿ ಇತ್ತು. ಇಂಡಿಯಾ ಮತ್ತು ಚೈನಾ ಗಳಲ್ಲಿಯೂ ನಾಗರಿಕತೆ ಇದೇ ಮಾರ್ಗದಲ್ಲಿಯೇ ಬೆಳೆಯಿತು. ಈ ದೇಶಗಳ ನದೀ ತೀರ ಗಳಲ್ಲಿ ಕಂದುವರ್ಣದ ಜನರು ಸ್ಥಾಪಿಸಿದ ಕೃಷಿ ಪ್ರಧಾನವಾಗಿದ್ದ ನಗರ ರಾಷ್ಟ್ರಗಳು ಬೆಳೆಯುತ್ತಿದ್ದುವು. ಇಂಡಿಯಾದಲ್ಲಿ ಮಾತ್ರ ಇವು ಮೆಸಪೊಟೇಮಿಯಾ ಮತ್ತು ಈಜಿಪ್ಟಿನ ನಗರಗಳಂತೆ ಬೇಗ ಬೇಗ ಬೆಳೆದು ಒಂದುಗೂಡಿ ಸಾಮ್ರಾಜ್ಯಗಳಾದಂತೆ ತೋರಿಬರುವು

ದಿಲ್ಲ ; ಪ್ರಾಚೀನ ಸುಮೇರಿಯನ್ನರ ಅಥವಾ ಮಾಯಾನಾಗರಿಕತೆಯ ಮಟ್ಟದಲ್ಲಿಯೇ ಇವು ಇದ್ದಂತೆ ಕಾಣಬರುತ್ತದೆ.* ಚೈನಾದ ಚರಿತ್ರೆಯನ್ನು ಇನ್ನೂ ತಜ್ಞರು ದಂತಕಥೆಗಳು ಮತ್ತು ಐತಿಹ್ಯಗಳಿಂದ ಪರಿಶೋಧಿಸಿ ರೂಪಿಸಬೇಕಾಗಿದೆ. ಬಹುಶಃ ಚೈನಾ ಇಂಡಿಯಾಕ್ಕಿಂತ ಮುಂದುವರಿದಿತ್ತೆನಿಸುತ್ತದೆ. ಈಜಿಪ್ಟಿನ ಹದಿನೇಳನೆಯ ವಂಶದ ರಾಜರ ಕಾಲದಲ್ಲಿ ಚೈನಾದಲ್ಲಿ ಶಾಂಗ್ ಎಂಬ ವಂಶದ ರಾಜರು ಅನೇಕ ಸಣ್ಣ ಸಣ್ಣ ಸಾಮಂತರಾಜ್ಯಗಳು ಸೇರಿ ಆದ ಚಕ್ರಾಧಿಪತ್ಯವನ್ನು ಆಳುತ್ತಿದ್ದರು. ದೊರೆಗಳಷ್ಟೇ ಅಲ್ಲದೆ ಪುರೋಹಿತರೂ ಇವರೇ ಆಗಿದ್ದರು. ಕಾಲಕಾಲಕ್ಕೆ ಸರಿಯಾಗಿ ನಡೆಯಬೇಕಾದ ಯಜ್ಞಗಳನ್ನು ನಡೆಸುವುದು ಇವರ ಮುಖ್ಯ ಕರ್ತವ್ಯವಾಗಿತ್ತು. ಆಗಿನ ಕಂಚಿನ ಪಾತ್ರೆಗಳು ಇಂದಿಗೂ ಇವೆ. ಇವುಗಳ ಸೌಂದರ್ಯ ಮತ್ತು ಕಲಾಕುಶಲತೆಯನ್ನು ನೋಡಿದರೆ ಇಂತಹ ವಸ್ತುಗಳನ್ನು ತಯಾರಿಸಿದ ನಾಗರಿಕತೆ ಅನೇಕ ಶತಮಾನಗಳಿಂದ ಅಭಿವೃದ್ಧಿ ಹೊಂದಿದ್ದಿರಬೇಕೆಂದು ಯಾರಿಗಾದರೂ ಅನ್ನಿಸದಿರದು.

---

* ಈಚಿನ ಸಂಶೋಧನೆಗಳಿಂದ ಈ ಕಾಲಕ್ಕೂ ಮೊದಲೇ ಅಂದರೆ ಕ್ರಿ.ಪೂ. 3000 ವರ್ಷಗಳಷ್ಟು ಹಿಂದೆಯೇ ಇಂಡಿಯಾದಲ್ಲಿ ಮುಂದುವರೆದ ನಾಗರಿಕತೆ ಅಸ್ತಿತ್ವದಲ್ಲಿತ್ತೆಂದು ತಿಳಿದುಬಂದಿದೆ—ಸಿಂಧೂನದಿ ಬಯಲಿನ ನಾಗರಿಕತೆ, ಈಜಿಪ್ಟ್, ಮೆಸಪೊಟೆಮಿಯಗಳೊಂದಿಗೆ ವ್ಯಾಪಾರ–ಸಾಂಸ್ಕೃತಿಕ ಸಂಪರ್ಕ ಏರಿಸಿಕೊಂಡಿತ್ತು.

ಸಂಪಾದಕ

ಅಡಿ ಟಿಪ್ಪಣಿಗಳು

10 ನಿಯಾಂದರ್‌ಥಾಲರ್ ಮತ್ತು ಆದಿಶಿಲಾಯುಗದ ಜನರನ್ನು ಪ್ರಾಚೀನ ಶಿಲಾಯುಗಕ್ಕೆ ಸೇರಿಸುತ್ತಾರೆಂದು ಇಲ್ಲಿ ನೆನಪಿನಲ್ಲಿಡಬೇಕು.

11 ನಿಜ ಮಾನವರಿಗಿಂತ ಹಿಂದಿನ ಕಾಲಕ್ಕೆ ಹಳೆಯ ಪ್ರಾಚೀನ ಶಿಲಾಯುಗ ಎಂದೂ ಮೆರುಗು ಕೊಟ್ಟ ಕಲ್ಲುಗಳನ್ನುಪಯೋಗಿಸುತ್ತಿದ್ದ ನೈಜ ಮಾನವರ ಕಾಲಕ್ಕೆ ಹೊಸ ಶಿಲಾಯುಗವೆಂದೂ ಹೇಳುತ್ತಾರೆ.

12 ಅಂದರೆ ಮೈಬಣ್ಣ ಬಿಳಿ ಇದ್ದು ಕಣ್ಣು ಕೂದಲು ಕಪ್ಪಗಿರುವವರು

13 ಆಗ್ನೇಯಾ ಏಷ್ಯಾದ ಜನರು

14 ಇತ್ತೀಚೆಗೆ ಸೋವಿಯತ್ ಗಣಿತಜ್ಞರು ಆಧುನಿಕ ಎಲೆಕ್ಟ್ರಾನಿಕ್ ಕಾಂಪ್ಯೂಟರ್ ಗಳನ್ನುಪಯೋಗಿಸಿ ಈ ಲಿಪಿಯನ್ನು ಓದಿ ಅರ್ಥಮಾಡಿಕೊಂಡಿದ್ದಾರೆಂದು

ಯುನೆಸ್ಕೊವಿನಿಂದ ಪ್ರಕಟವಾಗುವ "ಯುನೆಸ್ಕೊ ಕುರಿಯರ್" ಮಾಸ ಪತ್ರಿಕೆಯಲ್ಲಿ ವರದಿಯಾಗಿದೆ.

15 11ನೇ ಅಧ್ಯಾಯ

16 ಹರಿಗೋಲು

17 ಬಿಗಿಯಾದ ಒಳಕುಪ್ಪಸ

18 ಕ್ರಿ.ಪೂ. 3000ಕ್ಕೂ ಹಿಂದಿನ ಈಜಿಪ್ಟಿನ ಚರಿತ್ರೆ ಅಷ್ಟು ಸ್ಪಷ್ಟವಾಗಿ ತಿಳಿದಿಲ್ಲ. ಆಮೇಲೆ ಆಳಿದ ರಾಜವಂಶಗಳನ್ನು ಮಾತ್ರ ಚರಿತ್ರಕಾರರು ಎಣಿಸುತ್ತಾರೆ. ಅಂತಹ ವಂಶಗಳಲ್ಲಿ ಇವು ಕ್ರಮವಾಗಿ ಹದಿನೇಳನೆಯ ಮತ್ತು ಹತ್ತೊಂಭತ್ತನೆಯ ವಂಶಗಳೆಂದು ಅರ್ಥ.

19 ಕಳೆದ ಶತಮಾನದಲ್ಲಿ ಜರ್ಮನ್ ಸೈನ್ಯಾಧಿಪತಿ ಬಿಸ್ಮಾರ್ಕನು ತನ್ನ ಒಂದು ಭಾಷಣದಲ್ಲಿ "ಇಂದಿನ ಮುಖ್ಯ ರಾಜಕೀಯ ಸಮಸ್ಯೆಗಳು ಭಾಷಣ ಮತ್ತು ಮಸೂದೆಗಳಿಂದ ನಿರ್ಧರವಾಗಲಾರವು ; ಕಬ್ಬಿಣ ಮತ್ತು ರಕ್ತಗಳಿಂದ ಅವುಗಳನ್ನು ಇತ್ಯರ್ಥ ಮಾಡಬೇಕು" ಎಂದು ಹೇಳಿದನು. ಅಂದಿನಿಂದ ಕ್ರೂರ ಬಲ ಪ್ರಯೋಗಕ್ಕೆ "ರಕ್ತ ಮತ್ತು ಕಬ್ಬಿಣ"ದ ತತ್ತ್ವವೆನ್ನುತ್ತಾರೆ.

ಮುಂದುವರೆಯುವುದು

ಪುಸ್ತಕ ವಿಮರ್ಶೆ

ಭಾರತೀಯ ಸಾರ್ವಜನಿಕ ಹಣಕಾಸು

ಲೇ : ಡಾ|| ಎಸ್. ಆರ್. ರಾವ್, ಪ್ರ : ಕನ್ನಡ ಅಧ್ಯಯನ ಪೀಠ, ಪಠ್ಯಪುಸ್ತಕ ನಿರ್ದೇಶನಾಲಯ, ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ, 1981.
ಪುಟಗಳು : xviii + 362

ಕನ್ನಡ ಭಾಷೆಯಲ್ಲಿಯೇ ಎಲ್ಲ ಹಂತಗಳ ತರಗತಿಗಳಿಗೂ ಅವಶ್ಯಕವಾದ ಪಠ್ಯ ಪುಸ್ತಕಗಳನ್ನು ಕನ್ನಡದಲ್ಲಿ ಇದೀಗ ರಚಿಸುತ್ತಿರುವುದು ಸಂತೋಷದ ಸಂಗತಿ. ಈ ದೃಷ್ಟಿಯಿಂದ 'ಭಾರತೀಯ ಸಾರ್ವಜನಿಕ ಹಣಕಾಸು' ಗ್ರಂಥವು ಸ್ವಾಗತಾರ್ಹ. ಇದನ್ನು ಪದವೀ ವರ್ಗಕ್ಕೆ ಪಠ್ಯಪುಸ್ತಕವೆಂದು ರಚಿಸಲಾಗಿದೆ. ಸಂಯುಕ್ತ ರಾಜ್ಯ ಮತ್ತು ಸಂಯುಕ್ತ ಹಣಕಾಸು (Federal State and Federal Finance) ಇವುಗಳಿಗೆ ಸಂಬಂಧಿಸಿದಂತೆ ಮೂಲತತ್ವಗಳು ; ಭಾರತದಲ್ಲಿ ಸಂಯುಕ್ತ ಹಣಕಾಸಿನ ಆರಂಭ ಮತ್ತು ಬೆಳವಣಿಗೆಯ ಇತಿಹಾಸ ; ಭಾರತೀಯ ಸಂವಿಧಾನದಲ್ಲಿ ಅಧಿಕಾರ ಕ್ಷೇತ್ರ ಹಾಗೂ ಕೇಂದ್ರ ಮತ್ತು ರಾಜ್ಯಗಳ ಸಂಪನ್ಮೂಲಗಳ ವಿಭಜನೆ ಹಾಗು ವಿಶ್ಲೇಷಣೆ ; ಇಬ್ಬಗೆಯ ರಾಜ್ಯಗಳಲ್ಲಿ ಆರ್ಥಿಕ ಸಂಬಂಧಗಳು— ಹಣಕಾಸಿನ ಆಯೋಗಗಳು (Finance Commissions) ತೆರಿಗೆಗಳು — ತೆರಿಗೆಗಳ ವಿಧಾನ, ಕೃಷಿ ಹಣಕಾಸುಗಳು : ಸಾರ್ವಜನಿಕ ಸೇವೋದ್ದಿಮೆಗಳು ; ರಾಜ್ಯಗಳ ಹಣ ಕಾಸು ಹಾಗೂ ತೆರಿಗೆಗಳು; ಸಾರ್ವಜನಿಕ ಸಾಲ, ಸ್ಥಾನಿಕ (ಸ್ಥಳೀಯ) ಸರ್ಕಾರಗಳ (Local self Governments) ಹಣಕಾಸು ವ್ಯವಹಾರ, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಮುಂಗಡ ಪತ್ರ ರಚನೆ (Budget) ಹಾಗೂ ಆಯವ್ಯಯಗಳ ಅಂದಾಜುಪತ್ರಿಕೆ, ಸಂವಿಧಾನದಲ್ಲಿ ಕಂಟ್ರೋಲರ್ ಮತ್ತು ಆಡಿಟರ್ ಜನರಲರ (Controller and Auditor General) ಅಧಿಕಾರ ಮತ್ತು ಕರ್ತವ್ಯಗಳು, ಪಂಚವಾರ್ಷಿಕ ಯೋಜನೆಗಳು ಹಾಗೂ ಧನವಿನಿಯೋಗ ಇತ್ಯಾದಿಗಳಿಗೆ ಸಂಬಂಧಿಸಿದಂತೆ ಗ್ರಂಥದಲ್ಲಿ 17 ಅಧ್ಯಾಯಗಳಿವೆ. ಅಲ್ಲಲ್ಲಿ ಉಪಯುಕ್ತವಾದ ಸಾಂಖ್ಯಿಕ ವಿವರಣೆಗಳು ಮತ್ತು ಅನುಬಂಧಗಳೂ ಇವೆ. ಇವೆಲ್ಲವೂ ಅಧ್ಯಯನಕ್ಕೆ ಯೋಗ್ಯವಾಗಿವೆ. ಇಂಗ್ಲಿಷ್ ಭಾಷೆಯಲ್ಲಿ ಡಾ|| ಬಿ.ಪಿ. ಅದರ್ಕರ್ ಅವರ 'Principles and Problems of Federal Finance' ನಿವೃತ್ತ ಕಂಟ್ರೋಲರ್ ಮತ್ತು ಆಡಿಟರ್ ಜನರಲ್ ಶ್ರೀ ಅಶೋಕ ಕುಮಾರ ಚಂದ

ಆನೆರ 'Federalism in India' ಮುಂತಾದ ಅನೇಕ ಒಳ್ಳೆಯ ಉತ್ತಮ ಗ್ರಂಥಗಳಿವೆ. ಕನ್ನಡಕ್ಕೆ ಅಂತಹ ಅಮೌಲ್ಯ ಪುಸ್ತಕಗಳು ಇನ್ನೂ ಬರಬೇಕಾಗಿದೆ.

ಪ್ರಸ್ತುತ ಪುಸ್ತಕ 'ಭಾರತೀಯ ಸಾರ್ವಜನಿಕ ಹಣಕಾಸು' ಸಂಯುಕ್ತ ರಾಜ್ಯ ಹಾಗೂ ಸಂಯುಕ್ತ ಹಣಕಾಸಿನ ಪರಿಚಯವನ್ನು ಸ್ಥೂಲವಾಗಿ ಮಾಡಿಕೊಡುತ್ತದೆ. 1935ರಲ್ಲಿ ಬ್ರಿಟಿಷ್ ಸರ್ಕಾರವು ರಚಿಸಿದ ಪ್ರಾಂತೀಯ ಸ್ವಾಯತ್ತತೆಯ ಶಾಸನ (Provinicial Autonomy) ದಲ್ಲಿಯ ಕೆಲವು ಅಂಶಗಳನ್ನು ಈಗಿನ ಭಾರತ ಸರ್ಕಾರ ತನ್ನ ಸಂವಿಧಾನದಲ್ಲಿ ಯಥಾವತ್ತಾಗಿ ತೆಗೆದುಕೊಂಡು ಜನತೆಗಿಂತ ಆಡಳಿತಾಧಿಕಾರಕ್ಕೆ ಹೆಚ್ಚು ಬೆಲೆ ಕೊಟ್ಟದ್ದರಿಂದ ತಾನೇ ಹೇಳುವ ಸಾರ್ವಜನಿಕ ಕ್ಷೇಮಸಾಧನೆಗೆ (Public welfare or Social welfare) ದೂರವಾಗಬೇಕಾಗಿವೆ. ಇಂತಹ ಮೂಲಭೂತ ತೊಡಕುಗಳತ್ತ ಇಲ್ಲಿ ವಿಶ್ಲೇಷಣೆ ಇಲ್ಲ. ಬೆಲೆ (Hike in prices) ಮತ್ತು ಹಣದುಬ್ಬರ (Inflation) ಇವುಗಳ ಅರ್ಥವು ಪುಸ್ತಕದಲ್ಲಿ ಸರಿಯಾಗಿ ಬಂದಿಲ್ಲ. (ಪು. 344) ಹೀಗೆಯೇ 'ಸಾಂವಿಧಾನಿಕ (=ಸಂವಿಧಾತ್ಮಕ) 'ವೈಧಿಕ' (=ವಿಧೇಯಕ/ವಿಧಿಸತ್ತಾದ) ಮುಂತಾದ ಕೆಲ ಶ್ರುತಿ-ದುಷ್ಟ ಶಬ್ದಗಳನ್ನು ಮುಂದಿನ ಆವೃತ್ತಿಯಲ್ಲಿ ಸರಿಪಡಿಸಿಕೊಳ್ಳಬಹುದೆಂದೂ ಮತ್ತು ನಿರೂಪಣೆಯು ಇನ್ನಷ್ಟು ಸರಳ ಹಾಗೂ ನೇರವಾದ ರೀತಿಯಲ್ಲಿ ಬರಬಹುದೆಂದು ಆಶಿಸುವೆ. 'ವೈಧಿಕ' ಶಬ್ದದಲ್ಲಿಯ 'ಧಿ' ಅಲ್ಪಪ್ರಾಣ(ದಿ) ಆದರೆ ಎಷ್ಟು ಅನರ್ಥಕಾರಿಯಾಗುತ್ತದೆಂಬುದನ್ನು ಲೇಖಕರೇ ಊಹಿಸಲಿ. ಅಂತೆಯೆ ಮುಂದಿನ ಮುದ್ರಣವು ಪರಿಷ್ಕೃತ ರೂಪದಲ್ಲಿ ಬಂದರೆ ಚೆನ್ನಾಗಿರುತ್ತದೆ.

ಮಾಧವರಾವ್ ಮುಧೋಳ್

"ಪ್ರೌಢರ ಜಗತ್ತಿನಲ್ಲಿ ಮಕ್ಕಳು"

ಕೆ. ಜಿ. ಗುರುಮೂರ್ತಿ, 323, ಉಪನ್ಯಾಸ ಗ್ರಂಥಮಾಲೆ, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ, ಮಾರ್ಚ್ 1982.

1979ರ ಸೆಪ್ಟೆಂಬರ್ 20 ರಂದು ಧಾರವಾಡ ಜಿಲ್ಲೆಯ ಹಿರೇಕೆರೂರಿನ ಕಿರಿಯರ ಕಾಲೇಜಿನ ಆಶ್ರಯದಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಪ್ರಸಾರಾಂಗ ಏರ್ಪಡಿಸಿದ್ದ ಸಭೆಯಲ್ಲಿ ಶ್ರೀ ಕೆ. ಜಿ. ಗುರುಮೂರ್ತಿಯವರು ಮಾಡಿದ ಭಾಷಣದ ಲಿಖಿತ ರೂಪಾಂತರವೇ ಈ ಕಿರುಹೊತ್ತಿಗೆ. 1979 ನೇ ವರ್ಷವನ್ನು ವಿಶ್ವಸಂಸ್ಥೆಯು ಅಂತರರಾಷ್ಟ್ರೀಯ ಮಕ್ಕಳ ವರ್ಷವನ್ನಾಗಿ ಸಾರಿದ ಪ್ರಯುಕ್ತ ಆ ದಿಶೆಯಲ್ಲಿ ಕೈಗೊಳ್ಳುವ ಹಲವಾರು ಕಾರ್ಯಕ್ರಮಗಳಲ್ಲಿ ಒಂದಾದ ಪ್ರಸಾರ ಭಾಷಣದಲ್ಲಿಯೂ ಮಕ್ಕಳಿಗೆ ಸಂಬಂಧಿಸಿದ

ವಿಷಯವೇ ಕೇಂದ್ರಬಿಂದುವಾಗಿತ್ತು. ಅಂತೆಯೇ ಈ ಪ್ರಸಾರ ಭಾಷಣದ ಮೂಲಕ ಸಮಾಜದಲ್ಲಿ ಮಕ್ಕಳ ಸ್ಥಾನಮಾನವೇನು ? ಅವರ ಮೂಲಭೂತ ಅವಶ್ಯಕತೆಗಳೇನು ? ಮಕ್ಕಳ ಪೋಷಕರಾದ ಪ್ರೌಢರೇ ಯಾವ ರೀತಿಯಲ್ಲಿ, ಯಾವ ಯಾವ ವಿಷಯಗಳಲ್ಲಿ ಮಕ್ಕಳ ಸಮಸ್ಯೆಗಳಿಗೆ ಕಾರಣೀಭೂತರಾಗುತ್ತಾರೆ ಮತ್ತು ಅವುಗಳನ್ನು ಹೇಗೆ ನಿವಾರಿಸಬಹುದೆಂಬುವುದರ ಬಗೆಗೆ ಬೆಳಕು ಚೆಲ್ಲುವ ಪ್ರಯತ್ನದಲ್ಲಿ ಲೇಖಕರು ಯಶಸ್ವಿಯಾಗಿದ್ದಾರೆ ಎಂಬುದನ್ನು ಈ ಕಿರುಹೊತ್ತಿಗೆ ಸ್ಪಷ್ಟಪಡಿಸುತ್ತದೆ. ಜನಸಾಮಾನ್ಯರಿಗೆ ತಿಳುವಳಿಕೆಯನ್ನುಂಟು ಮಾಡುವುದೇ ಉದ್ದೇಶವಾಗಿರುವ ಈ ಲೇಖನದಲ್ಲಿ ಹೇಳಬೇಕಾದ ವಿಷಯವನ್ನು ನೇರವಾಗಿ, ಸ್ಪಷ್ಟವಾಗಿ, ಸರಳವಾಗಿ ನಿರೂಪಿಸುತ್ತಾ ಓದುಗರನ್ನು ತಮ್ಮ ಜೊತೆಯಲ್ಲಿಯೇ ಕೊಂಡೊಯ್ಯುವ ಶೈಲಿ ಗಮನಾರ್ಹವಾಗಿದೆ.

ಪ್ರಾರಂಭದಲ್ಲಿ 1979 ನೇ ವರ್ಷವನ್ನು ವಿಶ್ವಸಂಸ್ಥೆಯು ಅಂತರರಾಷ್ಟ್ರೀಯ ಮಕ್ಕಳ ವರ್ಷವನ್ನಾಗಿ ಸಾರಲು ಕಾರಣಗಳನ್ನು, ಅಂತರರಾಷ್ಟ್ರೀಯ ಮಕ್ಕಳ ವರ್ಷದ ಉದ್ದೇಶಗಳನ್ನು ಸ್ಪಷ್ಟಪಡಿಸಿ ಮಕ್ಕಳಿಗಾಗಿ ರಾಷ್ಟ್ರೀಯ ಧೋರಣೆಗಳನ್ನು ಹೊಂದಿರುವ ಕೆಲವೇ ದೇಶಗಳಲ್ಲಿ ಭಾರತವೂ ಒಂದಾಗಿದೆ. ವಿಶ್ವಸಂಸ್ಥೆಯ ಇಚ್ಛೆಯಂತೆ ಅಂತರರಾಷ್ಟ್ರೀಯ ಮಕ್ಕಳ ವರ್ಷದ ಕಾರ್ಯಕ್ರಮಗಳನ್ನು ಕೈಗೊಂಡಿದೆ ಎಂದು ತಿಳಿಯಪಡಿಸಿದ್ದಾರೆ. ಹಿಂದಿನಿಂದ ಇಂದಿನವರೆಗೂ ಸಮಾಜದಲ್ಲಿ ಮಗುವಿಗೆ ಗಣನೀಯ ಸ್ಥಾನ ಮೀಸಲಾಗಿದ್ದು "ಇಂದಿನ ಮಕ್ಕಳೇ ಮುಂದಿನ ಪ್ರಜೆಗಳು" ಎಂದು ತಿಳಿದಿರುವ ನಾಗರಿಕ ಸಮಾಜದಲ್ಲಿಯೂ ಮಗು ತಾಯಿಯ ಗರ್ಭದಲ್ಲಿರುವಾಗಿನಿಂದಲೇ ಅದರ ಪೋಷಣೆಯನ್ನು ಪ್ರಾರಂಭಿಸಿ ಅದರ ಸರ್ವತೋಮುಖ ಬೆಳವಣಿಗೆಗೆ ಶ್ರಮಿಸುವ ಪ್ರಯತ್ನ ನಡೆದಿದೆ. ಆದರೂ ಇತ್ತೀಚೆಗೆ ಮಕ್ಕಳ ಸಮಸ್ಯೆಗಳು ಬೃಹತ್ ಪ್ರಮಾಣದಲ್ಲಿ ಬೆಳೆಯುತ್ತಿವೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ಮಕ್ಕಳು ಮಾನಸಿಕವಾಗಿ, ಸಾಮಾಜಿಕವಾಗಿ, ಸಂವೇಗಾತ್ಮಕವಾಗಿ ಹಿರಿಯರಿಂದ ಭಿನ್ನವಾಗಿದ್ದು ತಮ್ಮದೇ ಆದ ವ್ಯಕ್ತಿತ್ವವನ್ನು ಹೊಂದಿದವರಾಗಿರುತ್ತಾರೆ ; ತಮ್ಮದೇ ಆದ ಅವಶ್ಯಕತೆ, ಆದ್ಯತೆ, ಭಾವನೆ ಹಾಗೂ ಆಸೆ ಆಕಾಂಕ್ಷೆಗಳನ್ನುಳ್ಳವರಾಗಿರುತ್ತಾರೆ. ಇವನ್ನು ಅರಿಯದ ಪ್ರೌಢರು ಮಕ್ಕಳು ಚಿಕ್ಕವರು, ಅಬಲರು, ಅವಲಂಬಿಗಳು ಎಂದು ಪರಿಗಣಿಸಿ ತಮ್ಮ ಅನಿಸಿಕೆ, ಬೇಕು ಬೇಡಗಳು, ಘನತೆ ಗೌರವಗಳಿಗೆ ಅನುಗುಣವಾಗಿ ಮಕ್ಕಳನ್ನು ಪೋಷಿಸುತ್ತಾರೆ ; ತಮ್ಮ ಅಭಿರುಚಿ, ಅಭಿವೃತ್ತಿಗಳನ್ನೇ ಮಕ್ಕಳಲ್ಲಿಯೂ ಕಾಣಲು ಪ್ರಯತ್ನಿಸುತ್ತಾರೆ ; ತಮ್ಮ ಸಾಮಾಜಿಕ ಹಾಗೂ ಆರ್ಥಿಕ ಸ್ಥಾನಮಾನಗಳ ಹಿನ್ನೆಲೆಯಲ್ಲಿ ಮಕ್ಕಳಿಗೆ ಸಹಜವಾಗಿ ದೊರೆಯಬೇಕಾದ ಸ್ವಾತಂತ್ರ್ಯ ಸೌಲಭ್ಯವನ್ನು ಮೊಟಕುಗೊಳಿಸುತ್ತಾರೆ. ಈ ಎಲ್ಲಾ ಕಾರಣಗಳಿಂದ ಪ್ರೌಢರ ಜಗತ್ತಿನಲ್ಲಿ ಮಕ್ಕಳು ಹಲವಾರು ಸಮಸ್ಯೆಗಳನ್ನು ಎದುರಿಸುವಂತಾಗಿವೆ ಎಂದು ವಿವರಿಸುತ್ತಾ ಮಕ್ಕಳ ಪ್ರಮುಖ ಸಮಸ್ಯೆಗಳ ಬಗೆಗೆ ದೀರ್ಘ ಚರ್ಚೆ ನಡೆಸಿದ್ದಾರೆ. ಲೇಖಕರು ಚರ್ಚಿಸಿ

ರುವ ಸಮಸ್ಯೆಗಳು ಕೆಳಕಂಡ ಶೀರ್ಷಿಕೆಗಳಲ್ಲಿವೆ — ವಿದ್ಯಾಭ್ಯಾಸ, ಔಷಧೋಪಚಾರ, ಮಕ್ಕಳು ಮತ್ತು ಆಹಾರ, ಮಾನಸಿಕ ಅವಶ್ಯಕತೆಗಳು, ಮನೋರಂಜನೆ, ಮಕ್ಕಳ ಸಾಹಿತ್ಯ ಮತ್ತು ಪುಸ್ತಕ ಭಂಡಾರ, ಮಕ್ಕಳ ಆಟದ ಸಾಮಾನುಗಳು, ಸಾಮಾಜಿಕ ಭದ್ರತೆ ಹಾಗೂ ಆರ್ಥಿಕ ರಂಗದಲ್ಲಿ ಮಕ್ಕಳು.

ಈ ಎಲ್ಲ ಸಮಸ್ಯೆಗಳು ಬಹುತೇಕ ಮಕ್ಕಳಲ್ಲಿ ಪ್ರೌಢರಾದ ತಮ್ಮ ತಂದೆತಾಯಿಯರ ಇಲ್ಲವೇ ಇತರ ಪೋಷಕರ ಅಜ್ಞಾನ, ಮೂಢನಂಬಿಕೆ, ಕೆಳದರ್ಜೆಯ ಸಾಮಾಜಿಕ ಹಾಗೂ ಆರ್ಥಿಕ ಪರಿಸ್ಥಿತಿಯ ಒತ್ತಡದಿಂದಾಗಿ ಉದ್ಭವಿಸಿದರೆ, ಮತ್ತೆ ಕೆಲವು ಮಕ್ಕಳಲ್ಲಿ ತಿಳುವಳಿಕೆಯಿರುವ, ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಸುಧಾರಿಸಿರುವ ಪ್ರೌಢರ ಘನತೆ, ಗೌರವ, ಹೆಮ್ಮೆ ಇತ್ಯಾದಿ ಕಾರಣಗಳಿಂದಾಗಿ ತಲೆದೋರುವ ಸಾಧ್ಯತೆಗಳೂ ಇವೆ ಎಂಬುದನ್ನು ವಿವರಿಸುತ್ತಾ ಈ ಮೇಲೆ ಪಟ್ಟಿ ಮಾಡಿರುವ ಎಲ್ಲಾ ಅಂಶಗಳಿಗೆ ಸಂಬಂಧಿಸಿದಂತೆ ಯಾವ ಯಾವ ಕಾರಣಗಳಿಂದ ಯಾವ ಯಾವ ರೀತಿಯ ಸಮಸ್ಯೆಗಳು ಉಂಟಾಗುತ್ತವೆ ಮತ್ತು ಆ ಸಮಸ್ಯೆಗಳನ್ನು ಪರಿಹರಿಸಲು ಪ್ರೌಢರು ಹೇಗೆ ಪ್ರಯತ್ನಿಸಬಹುದು, ಜೊತೆಗೆ ಸರಕಾರವು ಸಹ ಈ ದಿಸೆಯಲ್ಲಿ ಯಾವ ಯಾವ ಕಾರ್ಯಕ್ರಮಗಳನ್ನು ಕೈಗೊಳ್ಳಬಹುದು ಎಂಬುದನ್ನು ಸ್ಪಷ್ಟವಾಗಿ ನಿರೂಪಿಸಿದ್ದಾರೆ. ಈ ನಿರೂಪಣೆಯಲ್ಲಿ ಲೇಖಕರು ವಾಸ್ತವತೆಯಿಂದ ದೂರ ಸರಿದಿಲ್ಲದಿರುವುದು ಗಮನಾರ್ಹವಾಗಿದೆ.

ಪ್ರೌಢರಿಂದುಂಟಾಗುವ ಸಮಸ್ಯೆಗಳಿಂದಾಗಿ ಅನೇಕ ಬಾರಿ ಮಕ್ಕಳು ಬಾಲಾಪರಾಧ, ವ್ಯಭಿಚಾರ ಇತ್ಯಾದಿ ನ್ಯಾಯಬಾಹಿರ ಹಾಗೂ ಸಮಾಜಬಾಹಿರ ಚಟುವಟಿಕೆಗಳಲ್ಲಿ ಉದ್ಯುಕ್ತರಾಗುವುದಲ್ಲದೆ ಕ್ರಮೇಣ ತೀವ್ರ ಮಾನಸಿಕ ತೊಂದರೆಗೀಡಾಗಿ ಮಾದಕ ವಸ್ತುಗಳಿಗೆ ಹೆಚ್ಚು ಹೆಚ್ಚಾಗಿ ಮೊರೆ ಹೋಗುವ ಇಲ್ಲವೇ ಆತ್ಮಹತ್ಯೆಗೆ ಪ್ರಯತ್ನಿಸುವ ಮಟ್ಟಕ್ಕೂ ತಲುಪುವ ಸಾಧ್ಯತೆಯಿದೆ ಎನ್ನುತ್ತಾರೆ. ಇನ್ನು ಜೀವನವನ್ನೇ ಪ್ರವೇಶಿಸದ ಮಕ್ಕಳು ಜೀವನದ ಬಗೆಗೆ ಜುಗುಪ್ಸೆಪಡುವಂತಾಗುತ್ತದೆ.

ಒಟ್ಟಿನಲ್ಲಿ, ಮಕ್ಕಳು ಅನುಭವಿಸುತ್ತಿರುವ ಸಮಸ್ಯೆಗಳನ್ನು ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಹಾಗೂ ಮಾನಸಿಕ ತೊಂದರೆಗಳೆಂದು ವಿಭಾಗಿಸಬಹುದಾಗಿದೆ. ಇವುಗಳ ನಿವಾರಣ ಕ್ರಮದ ದಿಸೆಯಲ್ಲಿ ಮೊದಲಿಗೆ ಪ್ರೌಢರು ಮಗುವನ್ನು ಕೇವಲ ಅವಲಂಬಿ ಎಂದು ತಿಳಿಯದೆ ಜೀವಂತ, ಚೇತನ ಪೂರ್ಣ ವ್ಯಕ್ತಿ ಎಂದು ತಿಳಿಯಬೇಕು. ಮಗುವಿನ ಮನಸ್ಸು ಸೂಜಿಗಲ್ಲಿನಂತೆ ತನ್ನತ್ತ ಬಂದುದನ್ನೆಲ್ಲಾ ಆಕರ್ಷಿಸಿ ತನ್ನಲ್ಲಿ ಅಳವಡಿಸಿಕೊಳ್ಳುತ್ತದೆ, ಅದಕ್ಕೆ ಸೂಕ್ತವಾದ ಮಾರ್ಗದರ್ಶನ ಅಗತ್ಯ ಎಂಬುದನ್ನು ಮನಗಾಣಬೇಕು. ಪ್ರೌಢರು ತಮ್ಮ ಅಜ್ಞಾನ, ಮೂಢನಂಬಿಕೆಗಳನ್ನು ತೊಡೆದು ಹಾಕಿ ತಮ್ಮಂತೆಯೇ ಮಕ್ಕಳಿಗೂ ತಮ್ಮದೇ ಆದ ಪ್ರಪಂಚವಿದೆ, ತಮ್ಮದೇ ಆದ ವ್ಯಕ್ತಿತ್ವವಿದೆ ಎಂಬುದನ್ನು ತಿಳಿದು ಅವರ ಅಗತ್ಯತೆ, ಆದ್ಯತೆ, ಅಭಿರುಚಿ, ಅಭಿವೃತ್ತಿ ಹಾಗೂ ಅಭಿಸಾಮರ್ಥ್ಯಗಳಿಗನುಗುಣವಾಗಿ ಉಪಯುಕ್ತವಾದ ಪರಿಸರ ಮತ್ತು ಅವಕಾಶಗಳನ್ನು ಒದಗಿಸಿಕೊಡುವುದರ ಮೂಲಕ ಅವರ ಸರ್ವತೋಮುಖ ಬೆಳವಣಿಗೆಗೆ ಸಹಾ

ಯಕರಾಗಬೇಕು, ಪೋಷಕರಾಗಬೇಕು. ಅಲ್ಲದೆ ಸರಕಾರವೂ ದಿಸೆಯಲ್ಲಿ ಕ್ರಿಯಾಶೀಲವಾಗುವಂತೆ ಮಾಡಬೇಕು ಎಂದು ತಿಳಿಯಪಡಿಸುತ್ತಾರೆ. ಒಟ್ಟಿನಲ್ಲಿ, ಪ್ರೌಢರು ಸಾಧ್ಯವಾದ ಕಡೆಗಳಲ್ಲೆಲ್ಲಾ ತಮಗೆ ಸಾಧ್ಯವಾದಷ್ಟು ಮಟ್ಟಿಗೆ ಮಕ್ಕಳ ಸಮಸ್ಯೆಗಳ್ನು ನಿವಾರಿಸಲು ಪ್ರಯತ್ನಪಟ್ಟಿದ್ದೇ ಆದರೆ ಮಕ್ಕಳ ಸಮಸ್ಯೆಗಳ ಹಾಗೂ ಸಮಸ್ಯಾಪೂರ್ಣ ಮಕ್ಕಳ ಸಂಖ್ಯೆಯನ್ನು ಕಡಿಮೆ ಮಾಡುವುದಲ್ಲದೆ ಮಕ್ಕಳನ್ನು ಉತ್ತಮ ವ್ಯಕ್ತಿಗಳನ್ನಾಗಿ ರೂಪಿಸುವ ದಿಸೆಯಲ್ಲಿ ಸಹಾಯಕರಾಗಬಹುದು ಎಂಬ ಲೇಖಕರ ನಂಬಿಕಾಪೂರ್ವ ಉಪಸಂಹಾರ ಪರಿಗಣಿಸಲರ್ಹವಾಗಿದೆ. ಅಂತೆಯೇ ಈ ಕಿರುಹೊತ್ತಿಗೆಯು ಮಕ್ಕಳ ಅನೇಕ ಸಮಸ್ಯೆಗಳಲ್ಲಿ ಕೆಲವನ್ನಾದರೂ ನಿವಾರಿಸಲು ನೆರವಾಗಬಹುದು ಎಂಬುದರಲ್ಲಿ ಸಂಶಯವಿಲ್ಲ.

ಕೆ. ಯಶೋಧರ

ಮೈಸೂರು ವಿಶ್ವವಿದ್ಯಾನಿಲಯದ ತ್ರೈಮಾಸಿಕಗಳು

—o—

ಮಾನವಿಕ ಕರ್ಣಾಟಕ

ವಿಜ್ಞಾನ ಕರ್ಣಾಟಕ

ಪ್ರಬುದ್ಧ ಕರ್ಣಾಟಕ

ವಾರ್ಷಿಕ ಚಂದಾ

(ಪ್ರತಿಯೊಂದಕ್ಕೂ ಅಂಚೆ ವೆಚ್ಚ ಸೇರಿ)

ವಿದ್ಯಾರ್ಥಿಗಳಿಗೆ	....	ನಾಲ್ಕು ರೂಪಾಯಿ
ಇತರರಿಗೆ	....	ಆರು ರೂಪಾಯಿ
ಸಂಸ್ಥೆಗಳಿಗೆ	....	ಎಂಟು ರೂಪಾಯಿ

(ಅಜೀವ ಸದಸ್ಯತ್ವ : ನೂರು ರೂಪಾಯಿಗಳು)
(ಪ್ರತಿಯೊಂದಕ್ಕೂ)

ಡೈರೆಕ್ಟರ್
'ಪ್ರಸಾರಾಂಗ'
ಮಾನಸಗಂಗೋತ್ರಿ, ಮೈಸೂರು–೫೭೦ ೦೦೬